ಗುರುವಾರ, ಡಿಸೆಂಬರ್ 25, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ರಿಸ್‌ಮಸ್ ಸಂಭ್ರಮ

ನಾಗ್ಪುರದ ಚರ್ಚ್‌ವೊಂದರಲ್ಲಿ ಬಿಷಪ್‌ವೊಬ್ಬರು ಬಾಲ ಯೇಸುವಿನ ಪ್ರತಿಮೆಯನ್ನು ಹಿಡಿದುಕೊಂಡಿದ್ದ ದೃಶ್ಯ



ಪ್ರತಿಭಟನೆ

'ವಿಬಿ ಜಿ ರಾಮ್ ಜಿ' ಕಾಯ್ದೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಸಿದರು

ಅಜಾತಶತ್ರು ಅಜರಾಮರ

ಕಾಯಕ ಧರ್ಮ ಅಪಾರ, ಮಾನವ ಸೇವೆ ನಿರಂತರ.....

ಮಾಜಿ ಮುಖ್ಯಮಂತ್ರಿಗಳು (2004 - 2006)

ದಿ॥ ಎನ್. ಧರ್ಮಸಿಂಗ್ ಅವರಿಗೆ

ಜನುಮ ದಿನದ ಗೌರವ ನಮನಗಳು.

(ಡಿಸೆಂಬರ್ 25, 1936 - ಜುಲೈ 27, 2017)

Dharam Singh FOUNDATION

ಧರ್ಮಸಿಂಗ್ ಫೌಂಡೇಶನ್‌ನ ಪ್ರಮುಖ ಸಮಾಜಮುಖಿ ಸೇವೆಗಳು:

ಸಾಮಾಜಿಕ ಬದ್ಧತೆ

ಜನರು ಮದುವೆಗಾಗಿ ಮಾಡುವ ದುಂದುವೆಚ್ಚ ತಪ್ಪಿಸಲು ಉಚಿತ, ಸುಸಜ್ಜಿತ ಕಲ್ಯಾಣ ಮಂಟಪ.

ವೈದ್ಯಕೀಯ ನೆರವು

ಜನರ ಆರೋಗ್ಯ ರಕ್ಷಣೆಗಾಗಿ ಉಚಿತ ಆರೋಗ್ಯ ಶಿಬಿರಗಳು ಮತ್ತು ರೋಗಿಗಳಿಗೆ ತುರ್ತು ವೈದ್ಯಕೀಯ ಬೆಂಬಲ ಸೇವೆಗಳು.

ಆಂಬುಲೆನ್ಸ್ ಸೇವೆ

ಜನರ ಆರೋಗ್ಯದ ತುರ್ತು ಪರಿಸ್ಥಿತಿಯ ಸೇವೆಗಾಗಿ ಉಚಿತ ಆಂಬುಲೆನ್ಸ್ ಸೇವೆ.

ಕೊನೆ ಪಯಣದ ಗೌರವ

ಬದುಕಿನ ಕೊನೆಯ ಗೌರವಯುತ ಪಯಣಕ್ಕೆ ಉಚಿತ ಮುಕ್ತಿ ವಾಹನ ಸೇವೆ.

ಧರ್ಮಸಿಂಗ್ ಫೌಂಡೇಶನ್ - ಸೇವೆ ನಿರಂತರ

ಧರ್ಮದ ದಾರಿಯಲ್ಲಿ, ಜನರ ಸೇವೆಯಲ್ಲಿ ಜೀವನ ಸವೆಸಿದ ಮಮತೆ ತುಂಬಿದ ಕರುಣಾಮಯಿ.
ಅಭಿಮಾನಕೆ ಯಜಮಾನ, ಅಜಾತ ಶತ್ರು - ಶ್ರೀ ಧರ್ಮಸಿಂಗ್ ರವರ ಅಭಿಮಾನಿ ಬಳಗ.

ಕಕ್ಷೆಗೆ ಸೇರಿದ ಬ್ಲೂಬರ್ಡ್ ಬ್ಲಾಕ್

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಎಲ್‌ವಿಎಂ3–ಎಂ6 ರಾಕೆಟ್ ಬುಧವಾರ ನಭಕ್ಕೆ ಚಿಮ್ಮಿತು —ಎಎಫ್‌ಪಿ ಚಿತ್ರ

ಭಾರವಾದ ಉಪಗ್ರಹ ಹೊತ್ತು ಆಗಸಕ್ಕೆ ಚಿಮ್ಮಿದ 'ಬಾಹುಬಲಿ' ಎಲ್‌ವಿಎಂ3–ಎಂ6 ರಾಕೆಟ್

ಶ್ರೀಹರಿಕೋಟಾ (ಪಿಟಿಐ): ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹವನ್ನು ಇಸ್ರೊ ಯಶಸ್ವಿಯಾಗಿ ನಿಗದಿತ ಕಕ್ಷೆಗೆ ಬುಧವಾರ ಸೇರಿಸಿತು. ಈ ಮೂಲಕ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.

6,100 ಕೆ.ಜಿ ತೂಕದ ಬ್ಲೂಬರ್ಡ್ ಬ್ಲಾಕ್ -2 ಸಂವಹನ ಉಪಗ್ರಹವನ್ನು ಹೊತ್ತ ಎಲ್‌ವಿಎಂ3–ಎಂ6 ರಾಕೆಟ್, ಆಂಧ್ರ ಪ್ರದೇಶದ ಶ್ರೀಹರಿಕೋಟಾ ಬಾಹ್ಯಾಕಾಶ ಉಡ್ಡಯನ ಕೇಂದ್ರದ ಎರಡನೇ ಲಾಂಚ್‌ಪ್ಯಾಡ್‌ನಿಂದ ಬೆಳಿಗ್ಗೆ 8.55ಕ್ಕೆ ಸರಿಯಾಗಿ ನಭಕ್ಕೆ ಚಿಮ್ಮಿತು. ಭಾರತದ ಮಣ್ಣಿನಿಂದ ಉಡಾವಣೆಯಾದ ಅತಿ ಹೆಚ್ಚು ತೂಕದ ಉಪಗ್ರಹ ಇದಾಗಿದೆ ಎಂದು ಇಸ್ರೊ ತಿಳಿಸಿದೆ.

ಅತ್ಯಂತ ಭಾರವಾದ ಸಲಕರಣೆಗಳನ್ನು ಹೊತ್ತೊಯ್ಯುತ್ತಿರುವ ಕಾರಣ ಎಲ್‌ವಿಎಂ3–ಎಂ6 ರಾಕೆಟ್‌ಗೆ 'ಬಾಹುಬಲಿ' ಎಂದೇ ಕರೆಯಲಾಗುತ್ತಿದೆ ಎಂದು ಅದು ತಿಳಿಸಿದೆ.

ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮತ್ತು ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್ ನಡುವೆ ನಡೆದ ಒಪ್ಪಂದದ ಭಾಗವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್, ಇಸ್ರೊ ಅಡಿಯಲ್ಲಿ ಕಾರ್ಯನಿರ್ವಹಿಸುವ ವಾಣಿಜ್ಯ ಸಂಸ್ಥೆಯಾಗಿದೆ.

ಬಾಹ್ಯಾಕಾಶ ನೌಕೆಯು ಉಡಾವಣೆಯಾದ 15 ನಿಮಿಷಗಳ ಬಳಿಕ ಉಡಾವಣಾ ವಾಹಕದಿಂದ ಪ್ರತ್ಯೇಕಗೊಂಡಿತು. ಬಳಿಕ ಯಶಸ್ವಿಯಾಗಿ ಉಪಗ್ರಹವನ್ನು ಕಕ್ಷೆಗೆ ಸೇರಿಸಿತು ಎಂದು ಇಸ್ರೊ ಹೇಳಿದೆ.

ಬಳಿಕ ಮಾತನಾಡಿದ ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು, 'ಉಪಗ್ರಹವನ್ನು ಬಾಹುಬಲಿ ರಾಕೆಟ್ ಯಶಸ್ವಿಯಾಗಿ ನಿಗದಿತ ಕಕ್ಷೆಗೆ ಸೇರಿಸಿದೆ. ನ್ಯೂಸ್ಪೇಸ್ ಇಂಡಿಯಾ ಮತ್ತು ಎಎಸ್‌ಟಿ ಸ್ಪೇಸ್ ಮೊಬೈಲ್‌ಗೆ ಅಭಿನಂದನೆಗಳು' ಎಂದು ಹೇಳಿದರು.

ಇದರೊಂದಿಗೆ ಇಸ್ರೊ 52 ದಿನಗಳ ಒಳಗಾಗಿ ಎರಡು ಎಲ್‌ವಿಎಂ3 ರಾಕೆಟ್‌ಗಳನ್ನು ಉಡಾವಣೆ ಮಾಡಿದಂತಾಗಿದೆ. ಇದಕ್ಕೂ ಮುನ್ನ ನವೆಂಬರ್ 2ರಂದು 4,400 ಕೆ.ಜಿ ತೂಕದ ಉಪಗ್ರಹವನ್ನು ಆಗಸಕ್ಕೆ ಕೊಂಡೊಯ್ದಿತ್ತು ಎಂದು ಹೇಳಿದರು.

'ಪರಿಶ್ರಮಕ್ಕೆ ಪ್ರತಿಫಲ ಎಂದರೆ ಮತ್ತಷ್ಟು ಕೆಲಸ. ನಮ್ಮ ಕೈಯಲ್ಲಿ ಹಲವು ಮಹತ್ವದ ಯೋಜನೆಗಳಿವೆ' ಎಂದು ಅವರು ಹೇಳಿದರು.

> **ಭಾರತದ ಬಾಹ್ಯಾಕಾಶ ಪಯಣದಲ್ಲಿ ಇದು ಮಹತ್ವದ ಮೈಲುಗಲ್ಲಾಗಿದೆ. ಗಗನಯಾನದಂತಹ ಭವಿಷ್ಯದ ಯೋಜನೆಗಳಿಗೆ ಬಲವಾದ ಅಡಿಪಾಯವನ್ನು ಒದಗಿಸಿದೆ**
> **ನರೇಂದ್ರ ಮೋದಿ,** ಪ್ರಧಾನಿ

> **ಬ್ಲೂಬರ್ಡ್ ಬ್ಲಾಕ್–2 ಉಪಗ್ರಹ ಉಡಾವಣೆಯ ಮೂಲಕ ಭಾರತಕ್ಕೆ ಇಸ್ರೊ ಹೊಸ ವರ್ಷ ಮತ್ತು ಕ್ರಿಸ್‌ಮಸ್ ಉಡುಗೊರೆ ನೀಡಿದೆ**
> **ವಿ.ನಾರಾಯಣನ್,** ಇಸ್ರೊ ಅಧ್ಯಕ್ಷ

'ಗಗನಯಾನ ಯೋಜನೆಗೆ ಮತ್ತಷ್ಟು ಬಲ'

ಬ್ಲೂಬರ್ಡ್ ಬ್ಲಾಕ್–2 ಉಪಗ್ರಹದ ಯಶಸ್ವಿ ಉಡ್ಡಯನವು ಮಾನವ ಸಹಿತ ಗಗನಯಾನ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ನಡೆಸುವ ಭಾರತದ ಮಹತ್ವಾಕಾಂಕ್ಷೆಗೆ ಮತ್ತಷ್ಟು ಆತ್ಮವಿಶ್ವಾಸವನ್ನು ತುಂಬಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಮೆರಿಕದ ಬಾಹ್ಯಾಕಾಶ ನೌಕೆಯನ್ನು ಕಕ್ಷೆಗೆ ಸೇರಿಸುವ ಈ ಕಾರ್ಯಕ್ರಮವು ಬಹಳ ಮಹತ್ವದ್ದಾಗಿತ್ತು. ಏಕೆಂದರೆ ಭಾರತದ ಗಗನಯಾನ ಯೋಜನೆಯಲ್ಲಿಯೂ ಎಲ್‌ವಿಎಂ3 ಬಾಹ್ಯಾಕಾಶ ನೌಕೆಯು ನಿರ್ಣಾಯಕ ಪಾತ್ರ ವಹಿಸಲಿದೆ. ಭಾರತದ ಗಗನಯಾನಿಗಳನ್ನು ಕಕ್ಷೆಗೆ ಕೊಂಡೊಯ್ಯಲಿದೆ ಮತ್ತು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆತರಲಿದೆ' ಎಂದು ಹೇಳಿದರು.

ಈ ಎಲ್‌ವಿಎಂ3 ನೌಕೆಯು ಬ್ಲೂಬರ್ಡ್ ಬ್ಲಾಕ್–2 ಉಪಗ್ರಹವನ್ನು ನಿಗದಿತ ಕಕ್ಷೆಗೆ ನಿಖರವಾಗಿ ಸೇರಿಸಿದೆ. ಈ ನೌಕೆಯು ಶೇ 100ರಷ್ಟು ವಿಶ್ವಾಸಾರ್ಹವಾಗಿದೆ ಎಂದು ತಿಳಿಸಿದರು.

'520 ಕಿ.ಮೀ ದೂರದ ಸೆಲ್ಯುಲಾರ್ ಕಕ್ಷೆಗೆ ಉಪಗ್ರಹವನ್ನು ಸೇರಿಸುವ ಗುರಿ ಹೊಂದಲಾಗಿತ್ತು. ಸದ್ಯ 518.8 ಕಿ.ಮೀ ದೂರದ ಕಕ್ಷೆಗೆ ಸೇರಿಸಲಾಗಿದೆ. ಜಗತ್ತಿನ ಅತ್ಯುತ್ತಮ ಉಪಗ್ರಹ ಉಡಾವಣೆಗಳಲ್ಲಿ ಇದೂ ಒಂದು' ಎಂದು ಅವರು ಬಣ್ಣಿಸಿದರು.

ಉಪಗ್ರಹದ ವೈಶಿಷ್ಟ್ಯ

- ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಹೈ ಸ್ಪೀಡ್ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಪೂರೈಸುವ ಸಾಮರ್ಥ್ಯ ಹೊಂದಿದೆ
- ಈ ಬಾಹ್ಯಾಕಾಶ ಕಾರ್ಯಕ್ರಮವು ಉಪಗ್ರಹದ ಮೂಲಕ ನೇರವಾಗಿ ಮೊಬೈಲ್ ಸಂಪರ್ಕ ಒದಗಿಸುತ್ತದೆ. ಇದರಿಂದ ಪ್ರತಿಯೊಬ್ಬರಿಗೂ ಎಲ್ಲ ಸಮಯದಲ್ಲಿಯೂ 4ಜಿ, 5ಜಿ ಧ್ವನಿ, ವಿಡಿಯೊ ಕರೆ, ಟೆಕ್ಸ್ಟ್, ಸ್ಟ್ರೀಮಿಂಗ್ ಮತ್ತು ಡೇಟಾ ಸೌಲಭ್ಯ ದೊರೆಯಲಿದೆ
- ಎಎಸ್‌ಟಿ ಸ್ಪೇಸ್‌ಮೊಬೈಲ್ ಕಂಪನಿಯು ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ನಿರ್ಮಿಸುತ್ತಿದೆ. ಇದನ್ನು ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಳಕೆ ಮಾಡಬಹುದು. ಇದನ್ನು ಸರ್ಕಾರಿ ಮತ್ತು ವಾಣಿಜ್ಯ ಸೇವೆಗಳ ಅಪ್ಲಿಕೇಷನ್‌ಗಳಿಗಾಗಿ ವಿನ್ಯಾಸಗೊಳಿಸಲಾಗಿದೆ

'ಪಕ್ಷದ ಕಾರ್ಯಕರ್ತನಾಗಿ ಉಳಿಯಲು ಬಯಸುವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಧಿಕಾರ, ಹುದ್ದೆಗಿಂತ ಪಕ್ಷದ ಕಾರ್ಯಕರ್ತನಾಗಿರಲು ನಾನು ಬಯಸುತ್ತೇನೆ. ನನಗೆ ಅದೇ ಶಾಶ್ವತ. 1980ರಿಂದ ನಾನು ಪಕ್ಷದ ಕಾರ್ಯಕರ್ತನಾಗಿದ್ದು, 45 ವರ್ಷಗಳಿಂದ ಇಲ್ಲಿಯವರೆಗೂ ಪಕ್ಷಕ್ಕಾಗಿ ದುಡಿಯುತ್ತಿರುವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬುಧವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು 'ನೀವು ಐದು ವರ್ಷ ಉಪಮುಖ್ಯಮಂತ್ರಿಯಾಗಿರಲು ಬಯಸುತ್ತೀರಾ' ಎಂದು ಕೇಳಿದಾಗ ಶಿವಕುಮಾರ್ ಈ ರೀತಿ ಪ್ರತಿಕ್ರಿಯಿಸಿದರು.

'ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆಯ ಒಪ್ಪಂದ ನಡೆದಿತ್ತೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನಮ್ಮ ನಡುವೆ ಏನೆಲ್ಲಾ ಚರ್ಚೆಯಾಗಿತ್ತು ಎಂಬುದನ್ನು ನಾನು ಬಹಿರಂಗಪಡಿಸಲು ಸಾಧ್ಯವಿಲ್ಲ. ನಾವು ಒಟ್ಟಾಗಿ ಸೇರಿ ಕೆಲಸ ಮಾಡಿ, ಸರ್ಕಾರ ರಚಿಸಿದ್ದೇವೆ. ಪ್ರತಿ ಕಾರ್ಯಕರ್ತ ಪಕ್ಷಕ್ಕಾಗಿ ಬೆವರು ಹರಿಸಿ ದುಡಿದಿದ್ದಾನೆ. ನಮಗೆ ಸ್ಪಷ್ಟ ಬಹುಮತ ನೀಡಿದ ರಾಜ್ಯದ ಜನರಿಗೆ ನಾವು ಚಿರಋಣಿಯಾಗಿರುತ್ತೇವೆ. ಅವರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿದ್ದು, ಇದನ್ನು ಮುಂದುವರಿಸುತ್ತೇವೆ. ಹೈಕಮಾಂಡ್ ಕೂಡ ನಮಗೆ ಸ್ವಾತಂತ್ರ್ಯ ನೀಡಿದ್ದು, ನಮ್ಮ ಸರ್ಕಾರ ಒಂದು ತಂಡವಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಮಾತ್ರವಲ್ಲ, ಎಲ್ಲ ಶಾಸಕರು, ಕಾರ್ಯಕರ್ತರು ತ್ಯಾಗ ಮಾಡಿ ಅಧಿಕಾರಕ್ಕೆ ತಂದಿದ್ದಾರೆ' ಎಂದರು.

ಉಪಾಹಾರಕೂಟದ ಕುರಿತು ಪ್ರತಿಕ್ರಿಯಿಸಿದ ಅವರು, 'ನಾವು, ಸಿಎಂ, ಸಚಿವರು, ಜನರು, ಉದ್ಯಮಿಗಳು, ಅಧಿಕಾರಿಗಳು ಆಗಾಗ್ಗೆ ಭೇಟಿ ಮಾಡುತ್ತಲೇ ಇರುತ್ತೇವೆ. ಇದರಲ್ಲಿ ಯಾವುದೇ ವಿಶೇಷವಿಲ್ಲ' ಎಂದರು.

ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತೀರಾ ಎಂದು ಕೇಳಿದಾಗ, 'ಈ ಬಾರಿಯ ಪ್ರವಾಸದಲ್ಲಿ ನಾನು ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿಲ್ಲ. ರಾಹುಲ್ ಗಾಂಧಿ ಅವರು ನಿನ್ನೆಯಷ್ಟೇ ವಿದೇಶದಿಂದ ಮರಳಿದ್ದಾರೆ. ಅವರಿಗೆ ತೊಂದರೆ ಕೊಡಲು ಬಯಸುವುದಿಲ್ಲ' ಎಂದು ತಿಳಿಸಿದರು.

ಪ್ರಿಯಾಂಕಾ ಗಾಂಧಿ ವಾದ್ರಾ ಪ್ರಧಾನಿಯಾಗಬೇಕು ಎಂದು ಕೆಲವು ಮುಖಂಡರು ಒತ್ತಾಯಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನನಗೆ ಈ ವಿಚಾರಗಳ ಬಗ್ಗೆ ಮಾಹಿತಿ ಇಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋನಿಯಾ ಗಾಂಧಿ ಮಾರ್ಗದರ್ಶನದಲ್ಲಿ ಪಕ್ಷ ಮುನ್ನಡೆಸುತ್ತಿದ್ದಾರೆ. ಅವರು ತೆಗೆದುಕೊಳ್ಳುವ ತೀರ್ಮಾನವನ್ನು ಎಲ್ಲರೂ ಪಾಲಿಸುತ್ತೇವೆ. ಪಕ್ಷದಲ್ಲಿ ಇಂತಹ ಗೊಂದಲಗಳಿಗೆ ಅವಕಾಶ ಮಾಡಿಕೊಡಬಾರದು. ಪಕ್ಷದಲ್ಲಿ ಶಿಸ್ತು ಮುಖ್ಯವಾಗಿರಬೇಕು. ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಮಾಡಿ ಇಡೀ ದೇಶಕ್ಕೆ ಶಕ್ತಿ ತುಂಬಿದ್ದಾರೆ. ಪಕ್ಷ ಸಂಕಷ್ಟದ ಪರಿಸ್ಥಿತಿಯಲ್ಲಿ ನಾಯಕತ್ವ ವಹಿಸಿದ್ದಾರೆ. ರಾಹುಲ್ ಗಾಂಧಿ ಅವರನ್ನು ಪ್ರಧಾನಮಂತ್ರಿ ಮಾಡಬೇಕು ಎಂಬುದು ಪ್ರಿಯಾಂಕಾ ಗಾಂಧಿ ಅವರ ಗುರಿಯಾಗಿದೆ. ಅದಕ್ಕೆ ಅವರು ಶ್ರಮಿಸುತ್ತಿದ್ದಾರೆ' ಎಂದು ತಿಳಿಸಿದರು.

ರಾಜಣ್ಣಗೆ ತಿರುಗೇಟು

'ಮತಪಟ್ಟಿಯಲ್ಲಿದ್ದ ಲೋಪಗಳ ಬಗ್ಗೆ ಡಿ.ಕೆ. ಶಿವಕುಮಾರ್ ಸರಿಯಾಗಿ ಗಮನಹರಿಸಿದ್ದರೆ, ರಾಜ್ಯದಲ್ಲಿ ಇನ್ನೂ 8ರಿಂದ 10 ಕ್ಷೇತ್ರಗಳಲ್ಲಿ ಗೆಲ್ಲಬಹುದಿತ್ತು' ಎಂದು ಶಾಸಕ ಕೆ.ಎನ್.ರಾಜಣ್ಣ ಅವರು ರಾಹುಲ್ ಗಾಂಧಿಗೆ ಬರೆದ ಪತ್ರದ ಬಗ್ಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ ಅವರು, 'ನನಗೆ ಅನುಭವ ಕಡಿಮೆ ಇದೆ. ತರಬೇತಿ ತೆಗೆದುಕೊಂಡು ಬರುತ್ತೇನೆ' ಎಂದು ತಿರುಗೇಟು ನೀಡಿದರು.

'ನನ್ನನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡಿದ್ದು ಎಸ್.ಎಂ ಕೃಷ್ಣ' ಎಂದು ರಾಜಣ್ಣ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಬಹಳ ಸಂತೋಷ. ಕೃಷ್ಣ ಅವರು ಈಗ ನಮ್ಮೊಂದಿಗಿಲ್ಲ. ದೇವರ ಬಳಿ ಕೇಳಿಕೊಳ್ಳಬೇಕಷ್ಟೆ' ಎಂದರು.

ಕೆಎಫ್‌ಡಿ: ಶಿರಸಿಯಲ್ಲಿ ಶೀಘ್ರವೇ ಪ್ರಯೋಗಾಲಯ

ಬೆಂಗಳೂರು: ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ಶೀಘ್ರವೇ ಮಂಗನಕಾಯಿಲೆ (ಕೆಎಫ್‌ಡಿ) ಪರೀಕ್ಷಾ ಪ್ರಯೋಗಾಲಯವನ್ನು ಆರಂಭಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮಂಗನ ಕಾಯಿಲೆ ತಡೆ ಮತ್ತು ಮುನ್ನೆಚ್ಚರಿಕೆ ಕುರಿತು ಬುಧವಾರ ವಿಕಾಸಸೌಧದಲ್ಲಿ ಇಲಾಖಾ ಅಧಿಕಾರಿಗಳ ಜತೆ ಸಭೆ ನಡೆಸಿ ಅವರು ಮಾತನಾಡಿದರು. ಶಿವಮೊಗ್ಗದಲ್ಲಿ ಈಗ ಒಂದು ಪ್ರಯೋಗಾಲಯವಿದೆ. ಅದರ ಮೇಲೆ ಒತ್ತಡ ಹೆಚ್ಚಾಗಿರುವುದರಿಂದ ಶಿರಸಿಯಲ್ಲಿ ಹೊಸ ಪ್ರಯೋಗಾಲಯ ಆರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಅಗತ್ಯ ಉಪಕರಣಗಳನ್ನು ಖರೀದಿಸಲಾಗಿದೆ. ಇದರಿಂದ ಶಿರಸಿ ಮತ್ತು ಸಿದ್ದಾಪುರ ಭಾಗದ ಜನರಿಗೆ ಹೆಚ್ಚು ಉಪಯೋಗ ಆಗಲಿದೆ. ಬೇಗ ರೋಗವನ್ನು ಗುರುತಿಸಿ, ಚಿಕಿತ್ಸೆ ನೀಡಿ ಸಾವಿನ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ಇದು ಸಹಕಾರಿ ಆಗಲಿದೆ ಎಂದು ಹೇಳಿದರು.

ಈವರೆಗೆ ಶಿವಮೊಗ್ಗದಲ್ಲಿ 1,163, ಚಿಕ್ಕಮಗಳೂರು 124, ಉತ್ತರಕನ್ನಡ 368, ಉಡುಪಿ 12 ಜನ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. 13 ಜನರಲ್ಲಿ ಕಾಯಿಲೆ ಪತ್ತೆಯಾಗಿದ್ದು, ಅವರೆಲ್ಲರೂ ಗುಣಮುಖರಾಗಿದ್ದಾರೆ ಎಂದರು.

ಕ್ರೆಸ್ಟ್‌ಗೇಟ್ ಅಳವಡಿಸುವ ಕಾರ್ಯ ಆರಂಭ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಗೆ ಹೊಸ ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸುವ ಕೆಲಸ ಬುಧವಾರ ಬೆಳಿಗ್ಗೆ ಆರಂಭವಾಯಿತು.

ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ, ಅಧೀಕ್ಷಕ ಎಂಜಿನಿಯರ್, ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ಉಪಸ್ಥಿತಿಯಲ್ಲಿ ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮೆಷಿನರಿ ಪ್ರೊಜೆಕ್ಟ್ ಕಂಪನಿಯ ತಜ್ಞರು ಗೇಟ್ ಅಳವಡಿಸುವ ಕೆಲಸ ಆರಂಭಿಸಿದರು.

ಮೊದಲಿಗೆ 18ನೇ ಗೇಟ್‌ಗೆ ಅಳವಡಿಸುವ ಕೆಲಸ ಆರಂಭವಾಗಿದ್ದು, ಕ್ರೇನ್ ಮೂಲಕ ಎಂಡ್ ಗೇಟ್‌ಗಳನ್ನು ತರಲಾಗಿದೆ. ಡಿ.5ರಿಂದ ಇದುವರೆಗೂ ಏಳು ಹಳೆ ಗೇಟ್‌ಗಳ ಅರ್ಧ ಭಾಗವನ್ನು ಕತ್ತರಿಸಿ ತೆಗೆಯಲಾಗಿದೆ.

ಜಲಾಶಯದಲ್ಲಿ ನೀರಿನ ಸಂಗ್ರಹ ಪ್ರಸ್ತುತ 43 ಟಿಎಂಸಿ ಅಡಿ ಹಾಗೂ ಅಣೆಕಟ್ಟೆಯ ನೀರಿನ ಮಟ್ಟ 1,612.62 ಅಡಿಗೆ (ಗರಿಷ್ಠ 1,633) ಕುಸಿದಿದೆ. ಗೇಟ್ ಅಳವಡಿಕೆಗೆ ಇದ್ದ ತೊಡಕು ಬಗೆಹರಿದಿದೆ. ನೀರಿನ ಮಟ್ಟ ತಗ್ಗಿರುವ ಕಾರಣ ನದಿಗೆ ನೀರು ಹರಿಸುವುದನ್ನು ನಿಲ್ಲಿಸಿದ್ದು, ಕಾಲುವೆಗಳಿಗಷ್ಟೇ ಹರಿಸಲಾಗುತ್ತಿದೆ.

'ಇಳಿ ವಯಸ್ಸಿನಲ್ಲಿ ನಾನು ಕೋರ್ಟ್‌ಗೆ ಅಲೆಯಬೇಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಸಂಬಂಧ ಈಚೆಗೆ ಸುಪ್ರೀಂಕೋರ್ಟ್‌ನಲ್ಲಿ ನನ್ನನ್ನು ಪ್ರತಿವಾದಿಯನ್ನಾಗಿಸಿ ಅರ್ಜಿ ಸಲ್ಲಿಸಿದ್ದಾರೆ. ಈ ಇಳಿವಯಸ್ಸಿನಲ್ಲಿ ನಾನು ನ್ಯಾಯಾಲಯಕ್ಕೆ ಅಲೆದಾಡಬೇಕೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಪ್ರಶ್ನಿಸಿದರು.



ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಅರ್ಜಿಯಲ್ಲಿ ರಾಜ್ಯ ಸರ್ಕಾರ, ಕೆಲವು ರೈತರು ಮತ್ತು ನನ್ನನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಈ ಯೋಜನೆ ಆರಂಭಿಸಿದಾಗ ನಾನು ಮುಖ್ಯಮಂತ್ರಿ, ಸಿದ್ದರಾಮಯ್ಯ ಹಣಕಾಸು ಸಚಿವ ಆಗಿದ್ದರು. ಯೋಜನೆಯ ಮಾಹಿತಿ ಸಿದ್ದರಾಮಯ್ಯಗೆ ಇದೆ' ಎಂದರು.

'ಇಷ್ಟು ವರ್ಷ ಇಲ್ಲದ ಅರ್ಜಿಯನ್ನು ಈಗ ಸಲ್ಲಿಸಲಾಗಿದೆ. ಅಡ್ವೊಕೇಟ್ ಜನರಲ್ ಮತ್ತು ಕಾನೂನು ಸಲಹೆಗಾರರು ಇದ್ದರೂ ರಾಜ್ಯ ಸರ್ಕಾರವು ಈ ಪ್ರಕರಣಕ್ಕೆಂದೇ ಪ್ರತ್ಯೇಕ ಕಾನೂನು ಸಲಹೆಗಾರರನ್ನು ₹50 ಲಕ್ಷ ಕೊಟ್ಟು ನೇಮಕ ಮಾಡಿದೆ. ಆದರೆ ನಾನು ಈ ವಯಸ್ಸಿನಲ್ಲಿ ಹಣ ಕೊಟ್ಟು ವಕೀಲರನ್ನು ಇಡಬೇಕಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ನರೇಗಾ ಯೋಜನೆಯಿಂದ ಮಹಾತ್ಮ ಗಾಂಧಿ ಅವರ ಹೆಸರು ಕೈಬಿಟ್ಟಿದ್ದನ್ನು ಕಾಂಗ್ರೆಸ್ ಅನಗತ್ಯವಾಗಿ ದೊಡ್ಡ ವಿಚಾರ ಮಾಡುತ್ತಿದೆ. ಕಾಂಗ್ರೆಸ್‌ನ ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರು ಪ್ರಧಾನಿ ಆಗಿದ್ದಾಗ ಯಾವೆಲ್ಲಾ ಯೋಜನೆಗಳಿಗೆ ಗಾಂಧೀಜಿ ಅವರ ಹೆಸರಿಟ್ಟಿದ್ದರು ಎಂಬುದು ಗೊತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ಜನವರಿ 23–25ರ ನಡುವೆ ಹಾಸನ ಮತ್ತು ಬಾಗಲಕೋಟೆಯಲ್ಲಿ ಪಕ್ಷದ ಸಮಾವೇಶ ನಡೆಸುತ್ತೇವೆ. ರಾಜ್ಯ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ತೆರೆದಿಡುತ್ತೇವೆ**
> **ಎಚ್.ಡಿ.ದೇವೇಗೌಡ,** ಜೆಡಿಎಸ್ ವರಿಷ್ಠ

'ಕೇಂದ್ರವನ್ನು ದೂರಿದರೆ ಪ್ರಯೋಜನವೇನು?'

'ರಾಜ್ಯ ಸರ್ಕಾರವು ಪ್ರತಿ ವಿಷಯಕ್ಕೂ ಕೇಂದ್ರ ಸರ್ಕಾರವನ್ನು ದೂಷಿಸಿದರೆ ಆಗದು. ಮುಖ್ಯಮಂತ್ರಿ ಆದವರು ಕೇಂದ್ರ ಸರ್ಕಾರದ ಸಭೆಗಳಿಗೆ ಹೋಗಿ, ರಾಜ್ಯಕ್ಕೆ ಅಗತ್ಯವಿರುವ ಕೆಲಸಗಳನ್ನು ಮಾಡಿಸಿಕೊಳ್ಳಬೇಕು' ಎಂದು ಎಚ್.ಡಿ.ದೇವೇಗೌಡ ಹೇಳಿದರು. 'ನಾನು ಮುಖ್ಯಮಂತ್ರಿ ಆಗಿದ್ದಾಗ, ಸಿದ್ದರಾಮಯ್ಯ ಹಣಕಾಸು ಸಚಿವರಾಗಿದ್ದರು. ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿ ಮನ್ನಾ ಮಾಡುವಂತೆ ಆಗಿನ ಕೇಂದ್ರ ಹಣಕಾಸು ಸಚಿವ ಮನಮೋಹನ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು. ಅದಕ್ಕೆ ಅವರು ಒಪ್ಪಿರಲಿಲ್ಲ. ಅದನ್ನು ದೂರುತ್ತಾ ಕೂರಲು ಸಾಧ್ಯವೇ' ಎಂದು ಪ್ರಶ್ನಿಸಿದರು.

ವಿಶ್ವಕರ್ಮ: ಪುನರ್ ವರ್ಗೀಕರಣಕ್ಕೆ ಶಿಫಾರಸು

• ಎಂ.ಮಹೇಶ್

ಮೈಸೂರು: 'ವಿಶ್ವಕರ್ಮ ಸಮುದಾಯದಲ್ಲಿ ಬುಡಕಟ್ಟು ಗುಣಲಕ್ಷಣ ಕಂಡುಬಂದಿಲ್ಲ. ಆದರೆ ಸಮುದಾಯದ ಉಪ ಜಾತಿಗಳ ಪುನರ್ ವರ್ಗೀಕರಣ ಮಾಡಬೇಕು. ವಿಶ್ವಕರ್ಮ ವೃತ್ತಿಗೆ ಕೈಗಾರಿಕೆ ಸ್ಥಾನಮಾನ ಕೊಡಬೇಕು' ಎಂದು ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರವು (ಸಿಎಸ್‌ಎಸ್‌ಐ) ಶಿಫಾರಸು ಮಾಡಿದೆ.

'ವಿಶ್ವಕರ್ಮ ಮತ್ತು ಅದರ 41 ಉಪಜಾತಿಗಳನ್ನು ಪ್ರಸ್ತುತ 'ಹಿಂದುಳಿದ ವರ್ಗ 2ಎ' ಅಡಿ ವರ್ಗೀಕರಿಸಲಾಗಿದೆ. ಆದರೆ, ಹಾಗೆ ಗುರುತಿಸಲಾಗಿರುವ ಕಮ್ಮಾರ, ಗೆಜ್ಜೆಗಾರ, ಬೈಲುಕಮ್ಮಾರ, ದೈವಜ್ಞ ಬ್ರಾಹ್ಮಣ, ಬೈಲುಪತ್ತಾರ (ಬೈಲು ಅಕ್ಕಸಾಲಿ) ಸಮುದಾಯದಲ್ಲಿ ಒಂದೇ ವೃತ್ತಿ ಇದ್ದರೂ ಸಾಮಾಜಿಕ-ಸಾಂಸ್ಕೃತಿಕ ಆಚರಣೆಗಳು, ವಿವಾಹ ಪದ್ಧತಿಗಳಲ್ಲಿ ಭಿನ್ನತೆ ಇದ್ದು, ಪುನರ್ ವರ್ಗೀಕರಣ ಅಗತ್ಯ' ಎಂದು ಕೇಂದ್ರವು ಪ್ರತಿಪಾದಿಸಿದೆ.

ವಿಶ್ವಕರ್ಮರನ್ನು 'ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು' ಎಂಬ ಆಗ್ರಹ ಕೇಳಿಬಂದಿದ್ದರಿಂದ ಈ ಕುರಿತ ಅಧ್ಯಯನಕ್ಕೆ ಸರ್ಕಾರ ಆದೇಶಿಸಿತ್ತು. ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ ₹ 18.75 ಲಕ್ಷ ಅನುದಾನ ನೀಡಿತ್ತು. ಕೇಂದ್ರದ ಸಹ ಪ್ರಾಧ್ಯಾಪಕ ಡಿ.ಸಿ. ನಂಜುಂಡ ನೇತೃತ್ವದಲ್ಲಿ ಮಹದೇವಯ್ಯ, ಕೃಷ್ಣಮೂರ್ತಿ ಮತ್ತು ಶುಭಮಂಗಳಾ ಪಿ. ಒಳಗೊಂಡ ತಂಡ ಅಧ್ಯಯನ ನಡೆಸಿ 900 ಪುಟಗಳ ವರದಿಯನ್ನು ಸಲ್ಲಿಸಿದೆ.

ಪರಸ್ಪರ ವಿಭಿನ್ನ: 'ನಮ್ಮನ್ನು ವಿಶ್ವಕರ್ಮ ಪಟ್ಟಿಯಲ್ಲಿ ಸೇರಿಸಿರುವುದು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಸೂಕ್ತವಲ್ಲ' ಎಂದು ಕಮ್ಮಾರ, ಬೈಲುಕಮ್ಮಾರ ಮತ್ತು ಬೈಲುಪತ್ತಾರ ಸಮುದಾಯವು ಬಲವಾಗಿ ಪ್ರತಿಪಾದಿಸಿದೆ. ಹೀಗಾಗಿ, ಈ ಉಪಜಾತಿಗಳನ್ನು ವಿಶ್ವಕರ್ಮ ಉಪ ಜಾತಿ ಪಟ್ಟಿಯಿಂದ ಕೈಬಿಡುವಂತೆ ಶಿಫಾರಸು ಮಾಡಲಾಗಿದೆ.

'ಕಮ್ಮಾರ, ಗೆಜ್ಜೆಗಾರ ಸಮುದಾಯಗಳು 'ಸಾಂಸ್ಕೃತಿಕವಾಗಿ ಪರಸ್ಪರ ವಿಭಿನ್ನ' ಎಂದು ದಾಖಲಿಸಲಾಗಿದೆ. ಕಂಸನ್, ಕಂಸಾಳ, ಕಂಚೋರ, ಕಂಚೋರಿ, ಕಂಸಾರ್, ಕಸಾರ್, ಕಂಚಗಾರ ಉಪಜಾತಿಗಳು ಕಂಚುಗಾರ (ಬ್ರಾಸ್ಸ್ಮಿತ್) ಜಾತಿಯಿಂದ ಬಂದಿದ್ದು ಇವೆಲ್ಲಾ ಒಂದೇ ಜಾತಿ (ಕಂಚುಗಾರ)' ಎಂದು ತಿಳಿಸಲಾಗಿದೆ.

'ಔಸಾಲ, ಬಡಿವಾಡ್ಲ, ತಸೆಹಾನ್, ಅಕ್ಸಾಲಿ ಉಪಜಾತಿಗಳು ರಾಜ್ಯದಲ್ಲಿ ಕಂಡುಬಂದಿಲ್ಲ. ವಿಶ್ವಕರ್ಮರ ಇನ್ನೆರಡು ಉಪಜಾತಿಗಳಾದ ಚಾರೋಡಿ, ಮೇಸ್ತ ಮತ್ತು ಕೊಂಕಣಿ ಆಚಾರಿ ಒಂದೇ ಆಗಿದ್ದು '2ಎ' ಪಟ್ಟಿಯಲ್ಲಿ ಇವೆರಡಕ್ಕೂ ಪ್ರತ್ಯೇಕ ಕ್ರಮ ಸಂಖ್ಯೆ ನೀಡಲಾಗಿದೆ. ಈ ಬಗ್ಗೆ ಪುನರ್ ಪರಿಶೀಲನೆ ಅಗತ್ಯ' ಎಂದು ಹೇಳಲಾಗಿದೆ.

ವಿಸ್ತರಿಸಲು ಸಾಧ್ಯವಿಲ್ಲ: 'ಕಮ್ಮಾರರಿಗೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಮತ್ತು ದಕ್ಷಿಣ ಕನ್ನಡದ ಕೆಲವೆಡೆ ಎಸ್.ಟಿ. (ಪರಿಶಿಷ್ಟ ಪಂಗಡ) ಸ್ಥಾನಮಾನ ನೀಡಿದ್ದು, ರಾಜ್ಯದಾದ್ಯಂತ ಇದನ್ನು ವಿಸ್ತರಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ನೀಡಲಾಗಿದೆ' ಎಂದು ನಂಜುಂಡ 'ಪ್ರಜಾವಾಣಿ'ಗೆ ಬುಧವಾರ ತಿಳಿಸಿದರು.

'ಆರ್ಥಿಕ ಅಸ್ಥಿರತೆ, ಕೈಗಾರಿಕಾ ಮಾನ್ಯತೆ ಮತ್ತು ಮಾರುಕಟ್ಟೆ ಒಗ್ಗೂಡಿಸುವಿಕೆಯ ಸಮಸ್ಯೆಗಳಿಂದ ವಿಶ್ವಕರ್ಮ ಕುಶಲಕರ್ಮಿಗಳು ಸಂಕಷ್ಟದಲ್ಲಿದ್ದಾರೆ. ಕಬ್ಬಿಣ, ಆಭರಣ ತಯಾರಿಕೆ ಕ್ಷೇತ್ರಗಳ ದೀರ್ಘಕಾಲೀನ ಬೆಳವಣಿಗೆಯನ್ನು ಉತ್ತೇಜಿಸಲು ವಿಶ್ವಕರ್ಮ ಕರಕುಶಲ ವೃತ್ತಿಯನ್ನು ಕೈಗಾರಿಕೀಕರಣಗೊಳಿಸಬೇಕು. ಅದಕ್ಕಾಗಿ ಕಾನೂನು ಮಾನ್ಯತೆ, ಬ್ರ್ಯಾಂಡಿಂಗ್ ಸೌಕರ್ಯ ವೃದ್ಧಿ, ಆಧುನಿಕತೆ ಮತ್ತು ಮಾರುಕಟ್ಟೆ ಹೆಚ್ಚಿಸುವ ಹೊಸ ನೀತಿ ಅವಶ್ಯ ಎಂದು ಶಿಫಾರಸು ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

'ಪಿಎಂ–ವಿಶ್ವಕರ್ಮ ಯೋಜನೆಯಡಿ ಸಂಕೀರ್ಣ ನಿಯಮಗಳ ಕಾರಣದಿಂದಾಗಿ ಕಮ್ಮಾರ ಸೇರಿದಂತೆ ಕೆಲವು ಉಪ ಜಾತಿಗಳಿಗೆ ಅವರ ವೃತ್ತಿಯ ಹೆಸರಿನ ಕಾರಣದಿಂದಾಗಿ ಲಾಭ ಸಿಗುತ್ತಿಲ್ಲ. ಕೆಲ ಜಿಲ್ಲೆಗಳಲ್ಲಿ ಸಮರ್ಪಕವಾಗಿ ಜಾರಿಯಾಗಿಲ್ಲ. ಸದ್ಯ ಯೋಜನೆಯಡಿ ಗುರುತಿಸಿರುವ 18 ಕೌಶಲ ತರಬೇತಿ ಪೈಕಿ ಕೇವಲ 6ಕ್ಕೆ ಮಾತ್ರ ತರಬೇತಿ ಸಿಗುತ್ತಿದೆ ಎಂಬುದು ಅಧ್ಯಯನದ ವೇಳೆ ತಿಳಿದುಬಂದಿದೆ' ಎಂದು ನಂಜುಂಡ ತಿಳಿಸಿದರು.

ಮುಖ್ಯಾಂಶಗಳು

- 900 ಪುಟಗಳ ವರದಿ ಸಿದ್ಧ
- ಸರ್ಕಾರಕ್ಕೆ ಸಲ್ಲಿಸಿದ ಕೇಂದ್ರ
- ಅಧ್ಯಯನದಲ್ಲಿ ಹಲವು ವಿಷಯ ಅನಾವರಣ

> **ವಿಶ್ವಕರ್ಮ-ಅಕ್ಕಸಾಲಿಗರಿಗೆ ಚಿನ್ನದ ಬಗ್ಗೆ ಉತ್ತಮ ಜ್ಞಾನವಿದೆ. ಹೀಗಾಗಿಯೇ ದೊಡ್ಡ ಚಿನ್ನಾಭರಣ ಅಂಗಡಿಗಳಲ್ಲಿ ಅವರಿಗೆ ಕೆಲಸ ಕೊಡಲು ಹಿಂಜರಿಯುತ್ತಾರೆ**
> **ಡಿ.ಸಿ. ನಂಜುಂಡ** ಸಹ ಪ್ರಾಧ್ಯಾಪಕ, ಸಿಎಸ್‌ಎಸ್‌ಐ, ಮೈಸೂರು ವಿ.ವಿ.

ವಿಶ್ವಕರ್ಮ ಪಟ್ಟಿಗೆ 'ಗುಡಿಗಾರ' ಸೇರಿಸಿ

ಶಿವಮೊಗ್ಗ ಮತ್ತು ಉತ್ತರಕನ್ನಡದಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡುಬರುವ 'ಗುಡಿಗಾರ' ಸಮುದಾಯವನ್ನು ವಿಶ್ವಕರ್ಮರ ಉಪ ಜಾತಿಯಾಗಿ ಸೇರಿಸುವಂತೆ ಶಿಫಾರಸು ಮಾಡಲಾಗಿದೆ.

ಅವರು ಬಡಿಗರಂತೆ ದೇವಸ್ಥಾನದ ಗರ್ಭಗುಡಿಗಳು ಮತ್ತಿತರ ಮರಗೆಲಸವನ್ನು ಮಾಡುತ್ತಾರೆ ಮತ್ತು ವಿಶ್ವಕರ್ಮರೊಂದಿಗೆ ಸಾಂಸ್ಕೃತಿಕ ಇತಿಹಾಸ ಹೊಂದಿದ್ದಾರೆ. ಪಟ್ಟಿಗೆ ಸೇರಿಸುವಂತೆ ಸಮುದಾಯ ಹತ್ತು ವರ್ಷಗಳಿಂದ ಹೋರಾಡುತ್ತಿದೆ. ಉತ್ತರ ಕರ್ನಾಟಕದ ಪೋತೆದಾರ್ ಸಮುದಾಯವನ್ನೂ ವಿಶ್ವಕರ್ಮ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಲಾಗಿದೆ.

ಬುಡಕಟ್ಟು ಗುಣಲಕ್ಷಣವಿಲ್ಲ...

'ಯಾವುದೇ ಸಮುದಾಯವನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸಲು ಸಂವಿಧಾನದ 342ನೇ ಪರಿಚ್ಛೇದದಲ್ಲಿ ನಮೂದಿಸಿರುವ ಮಾನದಂಡಗಳು ಮತ್ತು ಲೋಕೂರು ಸಮಿತಿ(1965) ನಿಗದಿಪಡಿಸಿರುವ ನಿರ್ದಿಷ್ಟ ಗುಣಲಕ್ಷಣಗಳು ವಿಶ್ವಕರ್ಮ ಮತ್ತು ಉಪಜಾತಿಗಳಲ್ಲಿ ಕಂಡುಬಂದಿಲ್ಲ' ಎಂದು ವರದಿ ತಿಳಿಸಿದೆ.

ದಾಖಲೆಗಳ ಪ್ರಕಾರ, ವಿಶ್ವಕರ್ಮದ ಪಂಚವೃತ್ತಿಗಳಾದ ಕಮ್ಮಾರ, ಬಡಗಿ, ಅಕ್ಕಸಾಲಿಗ, ಕಂಚುಗಾರ ಮತ್ತು ಶಿಲ್ಪಿ ಕರಕುಶಲ ಕೆಲಸಗಳಲ್ಲಿ ಆರಂಭದಿಂದಲೂ ತೊಡಗಿದ್ದವರು ಮತ್ತು ಪಾರಂಪರಿಕವಾಗಿ ಗ್ರಾಮ ಮತ್ತು ನಗರ ಆರ್ಥಿಕ ವ್ಯವಸ್ಥೆಯ ಭಾಗವಾಗಿದ್ದರು ಎಂಬುದು ಕಂಡುಬಂದಿದೆ.

'ವಿಶ್ವಕರ್ಮ ಹಿಂದೂ ಜಾತಿ ವ್ಯವಸ್ಥೆಯ ಒಳಗೆ ಸ್ಥಾನ ಪಡೆದ ಸಮುದಾಯವಾಗಿದ್ದು, ಸಾಮಾಜಿಕ ಅಥವಾ ಭೌಗೋಳಿಕ ಪ್ರತ್ಯೇಕತೆ ಕಂಡುಬಂದಿಲ್ಲ. ಆರ್ಥಿಕವಾಗಿ ಹಿಂದುಳಿದಿರುವ ಕಾರಣವಷ್ಟೆ ಬುಡಕಟ್ಟು ವರ್ಗಕ್ಕೆ ಸೇರಲು ಮಾನದಂಡವಲ್ಲ ಎಂದು ನ್ಯಾಯಾಲಯಗಳೂ ಸ್ಪಷ್ಟಪಡಿಸಿವೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಶರಾವತಿ ಪಂಪ್ಡ್ ಸ್ಟೋರೇಜ್: ಸುರಂಗ ರಸ್ತೆಗಿಂತ ರಸ್ತೆ ವಿಸ್ತರಣೆಯೇ ವಿವೇಕಯುತ'

ಕೇಂದ್ರದ ನಿರ್ದೇಶನ ಒಪ್ಪದ ರಾಜ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಅರಣ್ಯ ನಾಶ ಕಡಿಮೆ ಮಾಡಲು ಸುರಂಗ ರಸ್ತೆ ನಿರ್ಮಿಸಬೇಕು ಎಂದು ಕೇಂದ್ರ ಅರಣ್ಯ ಸಚಿವಾಲಯದ ಸಲಹಾ ಸಮಿತಿ ಮಾಡಿದ್ದ ಸೂಚನೆಯನ್ನು ಕರ್ನಾಟಕ ಅರಣ್ಯ ಇಲಾಖೆ ಒಪ್ಪಿಲ್ಲ. ಸುರಂಗ ರಸ್ತೆ ನಿರ್ಮಾಣದಿಂದ ಅಧಿಕ ಪ್ರಮಾಣದ ಅರಣ್ಯ ನಾಶವಾಗಲಿದೆ ಎಂದೂ ಸ್ಪಷ್ಟಪಡಿಸಿದೆ.

'ಯೋಜನೆಯ ಕಾಮಗಾರಿಗಾಗಿ ಈಗಿರುವ 9.2 ಕಿ.ಮೀ. ರಸ್ತೆಯನ್ನು 3.5 ಮೀ. ನಿಂದ 5.5 ಮೀ.ಗೆ ಅಗಲ ಮಾಡಲಾಗುತ್ತದೆ. ಈ ರಸ್ತೆಯು ಮೂರು ಗ್ರಾಮಗಳ ಮೂಲಕ ಹಾದು ಹೋಗುತ್ತದೆ. ರಸ್ತೆ ನಿರ್ಮಾಣಕ್ಕೆ ಅಡ್ಡಿಯಾಗಿರುವ ಮರಗಳನ್ನಷ್ಟೇ ಕಡಿಯಬೇಕು ಎಂದು ರಾಜ್ಯ ವನ್ಯಜೀವಿ ಮಂಡಳಿ ನಿರ್ದೇಶನ ನೀಡಿದೆ. ಆದರೂ, ರಾಜ್ಯ ಸರ್ಕಾರವು ಪರ್ಯಾಯ ರಸ್ತೆ ನಿರ್ಮಾಣದ ಸಾಧ್ಯತೆಗಳನ್ನು ಅನ್ವೇಷಿಸಬೇಕು ಹಾಗೂ ಸ್ಪಷ್ಟ ಶಿಫಾರಸುಗಳೊಂದಿಗೆ ಸಮಗ್ರ ಉತ್ತರ ಸಲ್ಲಿಸಬೇಕು ಎಂದು ಅರಣ್ಯ ಸಲಹಾ ಸಮಿತಿಯು ರಾಜ್ಯ ಸರ್ಕಾರಕ್ಕೆ ಅಕ್ಟೋಬರ್ 27ರಂದು ನಿರ್ದೇಶನ ನೀಡಿತ್ತು.

ಇದಕ್ಕೆ ಇದೇ 23ರಂದು 'ಸಮಗ್ರ' ಉತ್ತರ ನೀಡಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), 'ಸುರಂಗ ಮಾರ್ಗಕ್ಕಿಂತ ಈಗಿರುವ ರಸ್ತೆಯನ್ನು ಅಗಲ ಮಾಡುವುದೇ ವಿವೇಕಯುತ. ಅರಣ್ಯ ಮತ್ತು ಪರಿಸರದ ಮೇಲೆ ಕನಿಷ್ಠ ಪರಿಣಾಮ ಬೀರುವ ಅತ್ಯಂತ ಸೂಕ್ತವಾದ ಆಯ್ಕೆಯೆಂಬುದನ್ನು ಪರಿಗಣಿಸಿ, ನಾಗರಬಸ್ತಿಕೆರೆಯಿಂದ ಬೇಗೋಡಿಯವರೆಗಿನ ರಸ್ತೆಯನ್ನು ಅಗಲಗೊಳಿಸುವುದೇ ಸೂಕ್ತ. ಇದಕ್ಕೆ ಅರಣ್ಯ ಸಲಹಾ ಸಮಿತಿ ಅನುಮೋದನೆ ನೀಡಬೇಕು' ಎಂದು ಕೋರಿದ್ದಾರೆ.

'ಸಲಹಾ ಸಮಿತಿಯ ನಿರ್ದೇಶನದ ಬಳಿಕ ಇಂಧನ ಇಲಾಖೆಯು ಸುರಂಗ ರಸ್ತೆ ನಿರ್ಮಾಣದ ಪ್ರಸ್ತಾವ ಸಿದ್ಧಪಡಿಸಿತ್ತು. ಇದರ ಪರಾಮರ್ಶೆಗೆ ತಜ್ಞರ ಸಮಿತಿ ರಚಿಸಲಾಗಿತ್ತು. ಇಂಧನ ಇಲಾಖೆ ಶಿಫಾರಸು ಮಾಡಿರುವ ಸುರಂಗ ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಪ್ರಮಾಣದ ಅರಣ್ಯ ಬೇಕು. ಜತೆಗೆ, ಕನಿಷ್ಠ 2 ವರ್ಷ ಹೆಚ್ಚುವರಿ ಸಮಯಾವಕಾಶ ಬೇಕಾಗುತ್ತದೆ. ಇದರಿಂದ ಯೋಜನೆ ಅನುಷ್ಠಾನ ಮತ್ತಷ್ಟು ವಿಳಂಬ ಆಗುತ್ತದೆ. ಆ ಬಳಿಕ ತಜ್ಞರ ಸಮಿತಿಯು ಪರ್ಯಾಯವಾಗಿ 2 ಸುರಂಗ ಮಾರ್ಗಗಳ ಶಿಫಾರಸು ಮಾಡಿತ್ತು. ಇದಕ್ಕೂ ಹೆಚ್ಚುವರಿ ಅರಣ್ಯ ಬೇಕಾಗುತ್ತದೆ' ಎಂದು ಪಿಸಿಸಿಎಫ್ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈಗಿರುವ ರಸ್ತೆಯ ಅಗಲೀಕರಣಕ್ಕೆ ಕನಿಷ್ಠ ಪ್ರಮಾಣದ ಅರಣ್ಯ ಪ್ರದೇಶ ಸಾಕು. ರಸ್ತೆಗೆ ಅಡ್ಡಿಯಾಗಿರುವ ಮರಗಳನ್ನಷ್ಟೇ ಕಡಿದರೆ ಸಾಕು. ಆದರೆ, ಪ್ರಸ್ತಾಪಿಸಿರುವ ಮೂರು ಸುರಂಗಗಳು ದಟ್ಟ ಕಾಡಿನ ಮೂಲಕ ಹಾದು ಹೋಗುತ್ತದೆ. ಇದು ಕಾರ್ಯಸಾಧು ಅಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಸುರಂಗ ರಸ್ತೆ ಪ್ರಸ್ತಾವಗಳು

ವಿನ್ಯಾಸ	ಗ್ರಾಮ ರಸ್ತೆ/ ಸುರಂಗಕ್ಕೆ ಬೇಕಾದ ಜಾಗ	ಅರಣ್ಯ ನಾಶ	ಒಟ್ಟು ಅರಣ್ಯ ಪ್ರದೇಶ
	(ಹೆಕ್ಟೇರ್)		
ರಸ್ತೆ ವಿಸ್ತರಣೆ	3.22	6.32	9.64
ಕೆಪಿಸಿಎಲ್ ಪ್ರಸ್ತಾಪಿಸಿದ ಸುರಂಗ ರಸ್ತೆ	4.15	11.2	15.35
ತಜ್ಞರ ಸಮಿತಿ ಶಿಫಾರಸು ಮಾಡಿದ ಸುರಂಗ ರಸ್ತೆ	8.2	13.08	21.28
ತಜ್ಞರ ಸಮಿತಿ ಶಿಫಾರಸು ಮಾಡಿದ ಸುರಂಗ ರಸ್ತೆ	11.28	7.02	18.30



ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಗೂಗಲ್ ನಕ್ಷೆ

ಜಮೀರ್ ಆಪ್ತ ₹14 ಕೋಟಿ ಆಸ್ತಿ ಒಡೆಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿಗಳಿಸಿದ ಆರೋಪದಲ್ಲಿ, ಸರ್ದಾರ್ ಸರ್ಫ್‌ರಾಜ್ ಖಾನ್ ಅವರಿಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹14.38 ಕೋಟಿ ಮೌಲ್ಯದ ಸ್ವತ್ತುಗಳನ್ನು ಪತ್ತೆ ಮಾಡಿದ್ದಾರೆ.

ಸರ್ಫ್‌ರಾಜ್ ಖಾನ್

ಸರ್ಫ್‌ರಾಜ್ ಖಾನ್ ಅವರು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವಿಭಾಗದ ನಿರ್ದೇಶಕರಾಗಿರುವ ಸರ್ಫ್‌ರಾಜ್, ಬಹಳಷ್ಟು ವರ್ಷ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಈಗಿನ ಜಿಬಿಎ) ಕಾರ್ಯನಿರ್ವಹಿಸುತ್ತಿದ್ದರು. ನಿಯೋಜನೆ ಮೇರೆಗೆ ಸಚಿವಾಲಯದಲ್ಲಿದ್ದಾರೆ. ಅವರ ನಿವೃತ್ತಿಗೆ ಕೆಲವೇ ದಿನಗಳು ಉಳಿದಿವೆ. ಅವರ ವಿರುದ್ಧ ಬಾಗಲಕೋಟೆಯ ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆ ದೂರಿನ ಅನ್ವಯ ಬೆಂಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಬೆಂಗಳೂರು, ಕೊಡಗು ಸೇರಿ ಸರ್ಫ್‌ರಾಜ್ ಖಾನ್ ಅವರಿಗೆ ಸೇರಿದ ಒಟ್ಟು 13 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಬುಧವಾರ ಬೆಳಿಗ್ಗೆ ದಾಳಿ ನಡೆಸಿದರು. ನಗರದ ಹಲಸೂರಿನಲ್ಲಿರುವ ಸರ್ಫ್‌ರಾಜ್ ಅವರ ಮನೆ, ಅವರ ಆಪ್ತರ ಮನೆ ಮತ್ತು ಕಚೇರಿಗಳು, ಅವರಿಗೆ ಸೇರಿದ ಕೊಡಗಿನ ತೋಟದ ಮನೆಗಳಲ್ಲಿ ಶೋಧ ನಡೆಸಲಾಗಿತ್ತು.

ಈ ವೇಳೆ ಅಂದಾಜು ₹8.44 ಕೋಟಿ ಮೌಲ್ಯದ 37 ಎಕರೆ ಜಮೀನು, 4 ಮನೆಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳು ಪತ್ತೆಯಾಗಿವೆ. ಇವು ಸರ್ಫ್‌ರಾಜ್ ಮತ್ತು ಕುಟುಂಬದವರ ಹೆಸರಿನಲ್ಲಿವೆ. ಆರೋಪಿ ಅಧಿಕಾರಿಯು ಬೇನಾಮಿ ಹೆಸರಿನಲ್ಲಿ ಆಸ್ತಿ ಹೊಂದಿದ್ದಾರೆಯೇ ಎಂಬುದರ ಬಗ್ಗೆ ಶೋಧ ನಡೆಯುತ್ತಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ದಾಳಿ ವೇಳೆ ಒಟ್ಟು ₹2.99 ಕೋಟಿ ಮೌಲ್ಯದಷ್ಟು ಚಿನ್ನಾಭರಣಗಳು, ₹66,500 ನಗದು ಮತ್ತು ₹1.64 ಕೋಟಿ ಮೌಲ್ಯದ ವಾಹನಗಳು ಪತ್ತೆಯಾಗಿವೆ. ಅಧಿಕಾರಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗಳಲ್ಲಿ ಒಟ್ಟು ₹1.29 ಕೋಟಿ ಠೇವಣಿ ಇವೆ. ಇವೆಲ್ಲವುಗಳ ಮೌಲ್ಯವು ಅಧಿಕಾರಿ ಅವರ ಅಧಿಕೃತ ಮೂಲದ ಆದಾಯಕ್ಕಿಂತ ಹಲವು ಪಟ್ಟು ಹೆಚ್ಚು. ಈ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿವೆ.

₹8.44 ಕೋಟಿ ಸರ್ಫ್‌ರಾಜ್ ಅವರ ಮನೆಯ ಮೇಲಿನ ದಾಳಿ ವೇಳೆ ಪತ್ತೆಯಾದ 37 ಎಕರೆ ಕೃಷಿ ಜಮೀನು, 4 ಮನೆಗಳ ಮೌಲ್ಯ

₹2.99 ಕೋಟಿ ಅಧಿಕಾರಿಯ ಮನೆಗಳಲ್ಲಿ ಪತ್ತೆಯಾದ ಚಿನ್ನಾಭರಣದ ಮೌಲ್ಯ

₹1.64 ಕೋಟಿ ಸರ್ಫ್‌ರಾಜ್ ಅವರಿಗೆ ಸೇರಿದ ವಾಹನಗಳ ಮಾರುಕಟ್ಟೆ ಬೆಲೆ

₹30ಸಾವಿರ ಲಂಚ: ಎಸಿಪಿ ಬಂಧನ

ತಡರಾತ್ರಿಯವರೆಗೂ ಹೋಟೆಲ್ ವಹಿವಾಟು ನಡೆಸಲು ಅನುಮತಿ ನೀಡುವ ಸಲುವಾಗಿ ₹30ಸಾವಿರ ಲಂಚ ಪಡೆಯುವಾಗ ಮಲ್ಲೇಶ್ವರ ಉಪವಿಭಾಗದ ಎಸಿಪಿ ಕೃಷ್ಣಮೂರ್ತಿ ಅವರು ಲೋಕಾಯುಕ್ತ ಪೊಲೀಸ್ ಬಲೆಗೆ ಬಿದ್ದಿದ್ದಾರೆ.

ನಗರದ ರಾಜಾಜಿನಗರದಲ್ಲಿ ಇರುವ 'ಹೋಟೆಲ್ ಸಾಗರ್'ನ ವ್ಯವಸ್ಥಾಪಕ ಸಂಜಯ್ ಕುಮಾರ್ ಅವರು ತಡರಾತ್ರಿಯವರೆಗೂ ವಹಿವಾಟು ನಡೆಸುವ ಸಂಬಂಧ ಎಸಿಪಿ ಕೃಷ್ಣಮೂರ್ತಿ ಅವರಿಗೆ ಮನವಿ ಸಲ್ಲಿಸಿದ್ದರು. ಅನುಮತಿ ನೀಡಲು ₹50,000 ಲಂಚ ನೀಡುವಂತೆ ಎಸಿಪಿ ಬೇಡಿಕೆ ಇಟ್ಟಿದ್ದರು ಮತ್ತು ₹30,000ಕ್ಕೆ ಒಪ್ಪಿಕೊಂಡಿದ್ದರು. ಈ ಹಣ ಪಡೆಯುವಾಗ ಬಂಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಲಾಗಿದೆ.

₹2 ಲಕ್ಷ ಲಂಚ: ಪಿಎಸ್‌ಐ ಬಂಧನ

ಅಪರಾಧ ಪ್ರಕರಣವೊಂದರಲ್ಲಿ ಆರೋಪಿಯ ಪರವಾಗಿ 'ಬಿ' ರಿಪೋರ್ಟ್ ಸಲ್ಲಿಸಲು ₹2 ಲಕ್ಷ ಲಂಚ ಪಡೆಯುವಾಗ ಚಿಕ್ಕಜಾಲ ಪೊಲೀಸ್ ಠಾಣೆಯ ಪಿಎಸ್‌ಐ ಶಿವಣ್ಣ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರವಿಕುಮಾರ್ ಎಂಬುವವರ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ, ಅವರ ಪರವಾಗಿ 'ಬಿ' ರಿಪೋರ್ಟ್ ಸಲ್ಲಿಸಲು ಪಿಎಸ್‌ಐ ಶಿವಣ್ಣ ಅವರು ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಕಡೆಗೆ, ₹2 ಲಕ್ಷ ಲಂಚಕ್ಕೆ ಒಪ್ಪಿಕೊಂಡಿದ್ದರು. ಈ ಸಂಬಂಧ ರವಿಕುಮಾರ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಿ, ಆರೋಪಿ ಪಿಎಸ್‌ಐಗೆ ಹಣ ನೀಡುವಂತೆ ದೂರುದಾರರಿಗೆ ಸೂಚಿಸಲಾಗಿತ್ತು. ಅದರಂತೆ ದೂರುದಾರರಿಂದ ಲಂಚ ಪಡೆಯುವಾಗ ಪಿಎಸ್‌ಐ ಶಿವಣ್ಣ ಅವರನ್ನು ಬಂಧಿಸಲಾಯಿತು. ಬಂಧಿತರಿಂದ ಹಣ ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

prajavani.net prajavani
ಗುರುವಾರ, ಡಿಸೆಂಬರ್ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 355 | ಪುಟ 18
www.prajavani.net
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ರಿಸ್‌ಮಸ್ ಶುಭಾಶಯಗಳು | ಸೆನ್ಸೆಕ್ಸ್ 85,408 | ನಿಫ್ಟಿ 26,142 | $/₹ 89.71 | ಚಿನ್ನ (Std. 10g) ₹1,43,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,33,300 (ಬೆಂಗಳೂರು)

ಕೃಷಿ ಭೂಮಿ ಪರಿವರ್ತನೆ ಸಲೀಸು

ಕ್ರಮಕ್ಕೆ 30 ದಿನಗಳ ಗಡುವು • ಇಲ್ಲದಿದ್ದರೆ ಸ್ವಯಂ ಚಾಲಿತವಾಗಿ ಪರಿವರ್ತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ಟರ್ ಪ್ಲಾನ್ ಹೊರತಾದ, ಪರಿಭಾವಿತ (ಡೀಮ್ಡ್) ಭೂ ಪರಿವರ್ತನೆಗೂ 30 ದಿನಗಳ ಗಡುವು ನಿಗದಿ ಮಾಡಲಾಗಿದ್ದು, ನವೀಕರಿಸ ಬಹುದಾದ ಇಂಧನ ಘಟಕ ಸ್ಥಾಪನೆಗೆ ಭೂ ಪರಿವರ್ತನೆಯಿಂದ ವಿನಾಯಿತಿ ನೀಡಲಾಗಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ-1964ಕ್ಕೆ ಕಳೆದ ಮೂರು ವರ್ಷಗಳಲ್ಲಿ ತರಲಾದ ತಿದ್ದುಪಡಿಗಳ ಅನ್ವಯ ಹೊಸ ನಿಯಮಗಳನ್ನು ರಚಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಹೊಸ ನಿಯಮಗಳ ಪ್ರಕಾರ, ಕೃಷಿ ಭೂಮಿ ಖರೀದಿ ಸರಳೀಕರಣ ಮತ್ತು ಕೆಲವು ಉದ್ದೇಶಗಳಿಗೆ ಭೂಮಿ ಪರಿವರ್ತನೆ ನಿಯಮ ಸಡಿಲಿಸಲಾಗಿದೆ. ಭೂ ಪರಿವರ್ತನೆಗೆ ಆನ್‌ಲೈನ್ ಮೂಲಕ ಸಲ್ಲಿಕೆಯಾದ ಅರ್ಜಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು 30 ದಿನಗಳ ಒಳಗಾಗಿ ಅನುಮತಿ ನೀಡಬೇಕು. ದಾಖಲೆಗಳು ಸರಿ ಇಲ್ಲದಿದ್ದರೆ ಸಕಾರಣ ನೀಡಿ, ಅರ್ಜಿಗಳನ್ನು ತಿರಸ್ಕರಿಸಬಹುದು.

ಕಾಯ್ದೆ ಜಾರಿಯಾದ ಬಳಿಕ ಸಮಗ್ರ ತಿದ್ದುಪಡಿ ತಂದಿರುವುದು ಇದೇ ಮೊದಲು. ಹೊಸ ನಿಯಮಗಳು ಆಡಳಿತ ಸರಳೀಕರಣಕ್ಕೆ ದಾರಿ ಮಾಡಿಕೊಡಲಿವೆ
ಕೃಷ್ಣಬೈರೇಗೌಡ, ಕಂದಾಯ ಸಚಿವ

ನಿಗದಿತ ಅವಧಿಯ ಒಳಗೆ ಜಿಲ್ಲಾಧಿಕಾರಿಗಳು ನಿರ್ಧಾರ ತೆಗೆದುಕೊಳ್ಳದಿದ್ದರೆ ಸ್ವಯಂ ಚಾಲಿತವಾಗಿ ಭೂ ಪರಿವರ್ತನೆ ಯಾಗುತ್ತದೆ. ಮಾಸ್ಟರ್ ಪ್ಲಾನ್ ಇರುವ ಜಮೀನುಗಳಿಗೂ ಭೂ ಪರಿವರ್ತನೆಯಿಂದ ವಿನಾಯಿತಿ ನೀಡಲಾಗಿದ್ದು, ಅಂಥವರು ನೇರವಾಗಿ ಯೋಜನಾ ಅನುಮೋದನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ನವೀಕರಿಸಬಹುದಾದ ಇಂಧನದ ಯೋಜನಾ ಘಟಕ ಸ್ಥಾಪನೆಗೆ ಭೂ ಪರಿವರ್ತನೆಯಿಂದ ವಿನಾಯಿತಿ ಪಡೆಯಬೇಕಾದರೆ ಇಂಧನ ಇಲಾಖೆಯ ಅನುಮತಿ ಪಡೆಯುವುದು ಕಡ್ಡಾಯ. ಹೊಸ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಆಶಯದಿಂದ ಎರಡು ಎಕರೆವರೆಗಿನ ಕೃಷಿ ಭೂಮಿಯನ್ನು ಭೂಪರಿವರ್ತನೆ ಇಲ್ಲದೇ ಕೈಗಾರಿಕಾ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ.

ಕಂದಾಯ ನ್ಯಾಯಾಲಯಗಳನ್ನು ನಡೆಸುವ ಕುರಿತು ಸ್ಪಷ್ಟ ನಿಯಮ ರೂಪಿಸಲಾಗಿದೆ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಆದೇಶಗಳನ್ನು ಹೊರಡಿಸದಂತೆ, ಕಾನೂನು ಮೀರಿ ಆದೇಶಗಳನ್ನು ನೀಡದಂತೆ ನಿರ್ಬಂಧಗಳನ್ನು ವಿಧಿಸಲಾಗಿದೆ. ಹೊಸ ಸುಧಾರಣೆಗಳಿಂದಾಗಿ ಸಾರ್ವಜನಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆಯುವುದು ತಪ್ಪಲಿದೆ.

ಪ್ರಮುಖ ನಿಯಮಗಳು

- ಎಲ್ಲ ಜಮೀನುಗಳ ಪರಿವರ್ತನೆಗಳ ಸರಳೀಕರಣ
- ಆನ್‌ಲೈನ್ ಮೂಲಕ ಕಂದಾಯ ನ್ಯಾಯಾಲಯಗಳ ಕಾರ್ಯನಿರ್ವಹಣೆ
- ಆನ್‌ಲೈನ್ ಮೂಲಕವೇ ಕಲಾಪದಲ್ಲಿ ಭಾಗವಹಿಸಲು ಜನರಿಗೆ ಅವಕಾಶ
- ಕಂದಾಯ ವಿವಾದದ ತೀರ್ಪುಗಳ ಡಿಜಿಟಲ್ ಆದೇಶ ಕಡ್ಡಾಯ
- ಸಣ್ಣ ಕೈಗಾರಿಕೆಗಳ ಸ್ಥಾಪನೆಗೂ (ಎರಡು ಎಕರೆ) ಭೂ ಪರಿವರ್ತನೆ ವಿನಾಯಿತಿ
- ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಭೂ ಪರಿವರ್ತನೆ ಬೇಕಿಲ್ಲ
- ಭೂ ಸುರಕ್ಷಾ ಮೋಜಣಿಗೂ ಕಾನೂನಿನ ಬಲ

ಫೆಬ್ರುವರಿಗೆ 1.10 ಲಕ್ಷ ಹಕ್ಕು ಪತ್ರ

ತಾಂಡಾ, ಹಟ್ಟಿ, ಗೊಲ್ಲರಹಟ್ಟಿಗಳಲ್ಲಿ ವಾಸಿಸುತ್ತಿರುವ ಜನರಿಗೆ 2026ನೇ ಫೆಬ್ರುವರಿಯಲ್ಲಿ 1.10 ಲಕ್ಷ ಹಕ್ಕುಪತ್ರಗಳನ್ನು ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಗಳ ತಿಂಗಳ ಪ್ರಗತಿ ಪರಿಶೀಲನಾ ಸಭೆಯ ನಂತರ ಮಾತನಾಡಿದ ಅವರು, 2017ರಲ್ಲಿ ಕಂದಾಯ ಗ್ರಾಮ ಕಾನೂನಿಗೆ ತಿದ್ದುಪಡಿ ತಂದ ನಂತರ ಆರು ವರ್ಷಗಳಲ್ಲಿ 1.08 ಲಕ್ಷ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿತ್ತು. 2023ರಿಂದ 2025ರ ವರೆಗೆ 1.11 ಲಕ್ಷ ಹಕ್ಕುಪತ್ರಗಳನ್ನು ನೀಡಲಾಗಿದೆ ಎಂದರು.

ದಾಖಲೆ ರಹಿತ ವಸತಿ ಪ್ರದೇಶ ಮತ್ತು ಮನೆಗಳನ್ನು ಗುರುತಿಸಲಾಗಿದೆ. ಸರ್ವೇ ಕಾರ್ಯ ಪೂರ್ಣಗೊಳಿಸಿ, ದಾಖಲೆಗಳನ್ನು ತಯಾರಿಸಲಾಗಿದೆ. ಹಕ್ಕುಪತ್ರ ನೀಡಿ, ಕ್ರಯಪತ್ರದಂತೆ ನೋಂದಣಿ ಮಾಡಲಾಗುತ್ತಿದೆ. ಸ್ಥಳೀಯ ಸಂಸ್ಥೆಯಲ್ಲಿ ಪಕ್ಕಾ ಖಾತೆ ಮಾಡುವುದರ ಮುಖಾಂತರ ಸಂಪೂರ್ಣ ಮಾಲೀಕತ್ವ ನೀಡಲಾಗಿದೆ. ಅರ್ಜಿ ಸಲ್ಲಿಕೆಗೂ ಕಾಯದೆ ಕಂದಾಯ ಇಲಾಖೆಯ ಅಧಿಕಾರಿಗಳೇ ಸ್ವತಃ ಜನರ ಮನೆ ಬಾಗಿಲಿಗೆ ತೆರಳಿ ದಾಖಲೆ ಸಂಗ್ರಹಿಸಿ, ಹಕ್ಕುಪತ್ರ ಸಿದ್ಧಪಡಿಸಿದ್ದಾರೆ ಎಂದು ಶ್ಲಾಘಿಸಿದರು.

ಶತಕ, ದಾಖಲೆಗಳ ಭರಾಟೆ

ಕ್ರಿಸ್‌ಮಸ್ ಮುನ್ನಾದಿನವಾದ ಬುಧವಾರ ಆರಂಭವಾದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ರನ್‌ಗಳ ಹೊಳೆ ಹರಿಯಿತು. ದೇಶಿ ಕ್ರಿಕೆಟ್ ಇತಿಹಾಸದ ಪುಟದಲ್ಲಿ ದಾಖಲೆಗಳು ಸೇರಿದವು. 14ರ ಪೋರ ವೈಭವ್ ಸೂರ್ಯವಂಶಿ, ದಿಗ್ಗಜರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಅನುಭವಿ ಇಶಾನ್ ಕಿಶನ್ ಸೇರಿದಂತೆ ಹಲವರು ಶತಕ ಹೊಡೆದರು.

147(118)
ದೇವದತ್ತ ಪಡಿಕ್ಕಲ್

190(84)
ವೈಭವ ಸೂರ್ಯವಂಶಿ

128*(40)
ಸಕೀಬುಲ್ ಗನಿ

ಕರ್ನಾಟಕದ ಕಹಳೆ : ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿತು. ಅಹಮದಾಬಾದಿನಲ್ಲಿ ನಡೆದ ಎ ಗುಂಪಿನ ಮೊದಲ ಪಂದ್ಯದಲ್ಲಿ ಜಾರ್ಖಂಡ್ ತಂಡ ನೀಡಿದ್ದ 413 ರನ್‌ಗಳ ಗುರಿಯನ್ನು 15 ಎಸೆತಗಳು ಬಾಕಿಯಿರುವಾಗಲೇ ಸಾಧಿಸಿತು. ಅತಿ ದೊಡ್ಡ ಗುರಿ ಬೆನ್ನಟ್ಟಿ ಗೆದ್ದ ದಾಖಲೆ ಕರ್ನಾಟಕದ್ದಾಯಿತು. ದೇವದತ್ತ ಪಡಿಕ್ಕಲ್ ಅಮೋಘ ಶತಕ (147) ಗಳಿಸಿ ಕರ್ನಾಟಕದ ಗೆಲುವಿನ ರೂವಾರಿಯಾದರು. ಇದಕ್ಕೂ ಮುನ್ನ ಜಾರ್ಖಂಡ್ ತಂಡ ನಾಯಕ ಇಶಾನ್ (125;39ಎ) ಅವರು ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಭಾರತದ ಆಟಗಾರರ ಪೈಕಿ ಎರಡನೇ ಅತಿ ವೇಗದ ಶತಕ (33) ದಾಖಲಿಸಿದರು.

ರೋಹಿತ್ ಅಬ್ಬರ: ಮುಂಬೈ ತಂಡದ ರೋಹಿತ್ ಶರ್ಮಾ ಅವರು ದೀರ್ಘಕಾಲದ ನಂತರ ದೇಶಿ ಏಕದಿನ ಕಣಕ್ಕಿಳಿದರು. ಸಿಕ್ಕಿಂ ಎದುರು ರೋಹಿತ್ 94 ಎಸೆತಗಳಲ್ಲಿ 155 ರನ್ ಗಳಿಸಿದರು.

ದಾಖಲೆ 'ವೈಭವ': ರಾಂಚಿಯಲ್ಲಿ ನಡೆದ ಪಂದ್ಯದಲ್ಲಿ 14 ವರ್ಷದ ಪೋರ ವೈಭವ ಸೂರ್ಯವಂಶಿ 36 ಎಸೆತಗಳಲ್ಲಿ ಶತಕ ದಾಖಲಿಸಿದರು. ಅವರು 84 ಎಸೆತಗಳಲ್ಲಿ 190 ರನ್ ಹೊಡೆದರು. ಅದರಲ್ಲಿ 16 ಬೌಂಡರಿ, 15 ಸಿಕ್ಸರ್‌ಗಳು ಸೇರಿವೆ. ಬಿಹಾರದ ಆಯುಷ್ ಲೋರುಖಾ (116 ರನ್) ಮತ್ತು ಸಕೀಬುಲ್ ಗನಿ (ಔಟಾಗದೇ 128, 40ಎ) ಶತಕ ಗಳಿಸಿದರು. ಸಕೀಬುಲ್ ಅವರು 32 ಎಸೆತಗಳಲ್ಲಿ ಮೂರಂಕಿ ದಾಟುವ ಮೂಲಕ ಭಾರತದ ಆಟಗಾರರ ಪೈಕಿ ಅತಿ ವೇಗದ ಶತಕ (32ಎ) ದಾಖಲಿಸಿದರು. ಇದರಿಂದಾಗಿ ತಂಡವು 6 ವಿಕೆಟ್‌ಗಳಿಗೆ 574 ರನ್ ಗಳಿಸಿತು. ವಿಜಯ್ ಹಜಾರೆ ಟೂರ್ನಿ ಇತಿಹಾಸದಲ್ಲಿಯೇ ಇದು ಗರಿಷ್ಠ ಮೊತ್ತವಾಗಿದೆ. ಪಂದ್ಯದಲ್ಲಿ ಬಿಹಾರವು 397 ರನ್‌ಗಳಿಂದ ಜಯಿಸಿದ್ದು ದಾಖಲೆ.

ಸಮಲ್ ದ್ವಿಶತಕ: ಬೆಂಗಳೂರು ಹೊರವಲಯದ ಆಲೂರಿನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಒಡಿಶಾ ತಂಡದ ಆರಂಭ ಆಟಗಾರ ಸ್ವಸ್ತಿಕ್ ಸಮಲ್ (212; 169ಎ, 21ಬೌಂಡರಿ, 8ಸಿಕ್ಸರ್) ದ್ವಿಶತಕ ಹೊಡೆದರು.

ಒಂದೇ ದಿನ 22 ಶತಕ

155(94)
ರೋಹಿತ್ ಶರ್ಮಾ

131 (101)
4x14, 6x3
ವಿರಾಟ್ ಕೊಹ್ಲಿ

ದೆಹಲಿ ಗೆಲುವಿನಲ್ಲಿ ಮಿಂಚಿದ ಕೊಹ್ಲಿ

ದೆಹಲಿ ತಂಡದ ಪರ ಕಣಕ್ಕಿಳಿದ 'ಚೇಸಿಂಗ್ ಮಾಸ್ಟರ್' ವಿರಾಟ್ ಕೊಹ್ಲಿ ಏಳು ತಿಂಗಳುಗಳ ನಂತರ ಬೆಂಗಳೂರಿನಲ್ಲಿ ಆಟವಾಡಿದರು. ಆಂಧ್ರ ಎದುರು ಭರ್ಜರಿ ಶತಕ ದಾಖಲಿಸಿದರು. ದೆಹಲಿ ತಂಡವು 4 ವಿಕೆಟ್‌ಗಳಿಂದ ಗೆದ್ದಿತು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ನದಿ ಜೋಡಣೆ ಡಿಪಿಆರ್: ರಾಜ್ಯ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಪರಿಸರಾಸಕ್ತರ ವ್ಯಾಪಕ ವಿರೋಧದ ನಡುವೆಯೂ ಬೇಡ್ತಿ-ವರದಾ ನದಿಗಳ ಜೋಡಣೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ನದಿ ಜೋಡಣೆಯ ವಿಶೇಷ ಸಮಿತಿ ಸಭೆಯಲ್ಲಿ ಬೇಡ್ತಿ-ವರದಾ ಜೋಡಣೆ ಬಗ್ಗೆ ಚರ್ಚೆಯಾಗಲಿದೆ. ಈ ನದಿಗಳ ಜೋಡಣೆಗೆ ಜಲಶಕ್ತಿ ಸಚಿವಾಲಯ ಡಿಪಿಆರ್ ತಯಾರಿಸಲಿದೆ. ಈ ಯೋಜನೆಗೆ ₹10 ಸಾವಿರ ಕೋಟಿ ವೆಚ್ಚ ಆಗಲಿದ್ದು, ಕೇಂದ್ರ ಸರ್ಕಾರ ₹9 ಸಾವಿರ ಕೋಟಿ ಭರಿಸಲಿದೆ' ಎಂದು ಮಾಹಿತಿ ನೀಡಿದರು.

8

ಮೇಕೆದಾಟು: ಎರಡು ತಿಂಗಳಲ್ಲಿ ಎಲ್ಲ ದಾಖಲೆ ಸಲ್ಲಿಕೆ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ಕೇಂದ್ರ ಜಲ ಆಯೋಗಕ್ಕೆ ಎರಡು ತಿಂಗಳಲ್ಲಿ ಸಲ್ಲಿಸಲಾಗುವುದು ಎಂದು ಶಿವಕುಮಾರ್ ತಿಳಿಸಿದರು. 'ಮೇಕೆದಾಟು ಯೋಜನೆಯ ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತಿದ್ದೇವೆ. ರಾಮನಗರದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭಿಸಲಾಗುತ್ತಿದೆ. ಅರಣ್ಯ ಇಲಾಖೆಯ ಎಷ್ಟು ಭೂಮಿ ಬೇಕಾಗುತ್ತದೆ, ಅದಕ್ಕೆ ಎಷ್ಟು ಪರ್ಯಾಯ ಭೂಮಿ ನೀಡಬೇಕು ಎಂದೆಲ್ಲಾ ತೀರ್ಮಾನ ಆಗಬೇಕಿದೆ. ಪರ್ಯಾಯ ಭೂಮಿಯನ್ನು ಈಗಾಗಲೇ ಗುರುತಿಸಲಾಗಿದೆ. ಅದೆಲ್ಲವನ್ನು ಮುಗಿಸಿಕೊಂಡು ಹಂತ ಹಂತವಾಗಿ ಮುಂದುವರಿಯುತ್ತೇವೆ. ಈ ವಿಷಯದಲ್ಲಿ ಮಂಡ್ಯ ಅಥವಾ ಬೆಂಗಳೂರು ದಕ್ಷಿಣದ ಜಿಲ್ಲಾಧಿಕಾರಿಗೆ ಜವಾಬ್ದಾರಿ ನೀಡುತ್ತೇವೆ' ಎಂದರು.

Pure Since 1925 | ಭೀಮ

BHIMA
BRILLIANCE.
DIAMOND JEWELLERY FESTIVAL.
ಡಿಸೆಂಬರ್ 8 ರಿಂದ ಜನವರಿ 11, 2026

ಓನ್ ದಿ ಲೈಟ್

ಉಚಿತ
24kt ಚಿನ್ನದ ಗಟ್ಟಿ* + ₹10,000 ಮೌಲ್ಯದ ಆಭರಣ*
ಪ್ರತಿ ಕ್ಯಾರೆಟ್‌ಗೆ

ರಿಯಾಯಿತಿ
100% ವರೆಗೆ ಮೇಕಿಂಗ್ ಶುಲ್ಕದಲ್ಲಿ*
ವಜ್ರಾಭರಣದ ಖರೀದಿಗೆ

ವಿನಿಮಯ
ಭೀಮ ಡೈಮಂಡ್ಸ್ ಮೇಲೆ ಪ್ರತಿ ಕ್ಯಾರೆಟ್‌ಗೆ
₹5,000*
ಹೆಚ್ಚುವರಿ

*ನಿಯಮ ಮತ್ತು ಷರತ್ತುಗಳು ಅನ್ವಯ.

BHIMA
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ
ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ | bhimagold.com
ಸ್ಕ್ಯಾನ್ ಮಾಡಿ
BHIMA Helpline 1800-121-9076 (10:00 a.m. to 7:00 p.m.)

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದೆ

ಸುಧಾ ಮಯೂರ ಓದಿರಿ

‘ಕುಸುಮ್ ಬಿ’: ಸೌರ ಪಂಪ್‌ಸೆಟ್‌ನತ್ತ ರೈತರ ಒಲವು

ಬೆಸ್ಕಾಂ ವ್ಯಾಪ್ತಿಯಲ್ಲಿ 20 ಸಾವಿರ ಅರ್ಜಿ ಸಲ್ಲಿಕೆ

• ಎ.ಎಂ.ಸುರೇಶ

ಬೆಂಗಳೂರು: ‘ಕುಸುಮ್ ಬಿ’ ಯೋಜನೆಯಡಿ ಕೊಳವೆ ಬಾವಿಗಳಿಗೆ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಿ ಕೊಳ್ಳಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ 20 ಸಾವಿರ ರೈತರು ಅರ್ಜಿ ಸಲ್ಲಿಸಿದ್ದು, ಅವುಗಳ ಪರಿಶೀಲನೆ ಕಾರ್ಯ ಆರಂಭವಾಗಿದೆ.

‘ಬೆಸ್ಕಾಂ ವ್ಯಾಪ್ತಿಯಲ್ಲಿ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಸೌರವಿದ್ಯುತ್ ಪಂಪ್‌ಸೆಟ್‌ಗಳನ್ನು ಪೂರೈಸುವ ಕಂಪನಿಗಳು ಮತ್ತು ಬೆಸ್ಕಾಂ ಅಧಿಕಾರಿಗಳಿಂದ ಜಂಟಿ ಸಮೀಕ್ಷೆ ಆರಂಭವಾಗಿದೆ. ಇದಾದ ಬಳಿಕ ಅರ್ಹ ಫಲಾನುಭವಿ ರೈತರಿಗೆ ತಮ್ಮ ಪಾಲಿನ ಹಣ ಪಾವತಿಸುವಂತೆ ಸೂಚಿಸಲಾಗುತ್ತದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ಸೌರ ಪಂಪ್‌ಸೆಟ್‌ಗಳಿಗೆ ಶೇ 80ರಷ್ಟು ಸಹಾಯಧನ
- ರೈತರಿಗೆ ಹಗಲಲ್ಲೇ ವಿದ್ಯುತ್ ಪೂರೈಸಲು ಅನುಕೂಲ
- ಬೇರೆ ಇಂಧನ ಮೂಲಗಳ ಮೇಲಿನ ಅವಲಂಬನೆ ತಪ್ಪಲಿದೆ

ಈ ಯೋಜನೆಯಡಿ ಕೊಳವೆಬಾವಿಗಳಿಗೆ ಸೌರ ಪಂಪ್‌ಸೆಟ್ ಅಳವಡಿಸಿ ಕೊಳ್ಳಲು ತಗಲುವ ಒಟ್ಟು ವೆಚ್ಚದಲ್ಲಿ ರಾಜ್ಯ ಸರ್ಕಾರದಿಂದ ಶೇ 50ರಷ್ಟು ಮತ್ತು ಕೇಂದ್ರ ಸರ್ಕಾರದಿಂದ ಶೇ 30ರಷ್ಟು ಸಬ್ಸಿಡಿ ಸಿಗಲಿದೆ. ಉಳಿದ ಶೇ 20ರಷ್ಟು ಹಣವನ್ನು ರೈತರು ಭರಿಸಬೇಕು. ಆರಂಭದಲ್ಲಿ ರೈತರು ಸೌರ ಪಂಪ್‌ಸೆಟ್ ಅಳವಡಿಸಿಕೊಳ್ಳಲು ಅಷ್ಟಾಗಿ ಆಸಕ್ತಿ ತೋರಿಸಲಿಲ್ಲ. ಆದರೆ, ಈ ಬಗ್ಗೆ ಹೆಚ್ಚು ಅರಿವು ಮೂಡಿಸಿದ ನಂತರ ಅರ್ಜಿ ಸಲ್ಲಿಸಲು ಮುಂದೆ ಬರುತ್ತಿದ್ದಾರೆ.

ರಾಜ್ಯದಲ್ಲಿ ಒಟ್ಟು 25 ಸಾವಿರ ಕೊಳವೆಬಾವಿಗಳಿಗೆ ‘ಕುಸುಮ್ -ಬಿ ಯೋಜನೆಯಡಿ ಸೌರಶಕ್ತಿ ಆಧಾರಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಗುರಿ ನಿಗದಿಪಡಿಸಲಾಗಿದೆ.ಈಗಾಗಲೇ ಸುಮಾರು 3,500 ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳಿಗೆ ಹೋಲಿಸಿದರೆ ಬೆಸ್ಕಾಂ ವ್ಯಾಪ್ತಿಯಲ್ಲೇ ಹೆಚ್ಚಾಗಿ ಅರ್ಜಿಗಳು ಬರುತ್ತಿವೆ. ಆದರೆ, ಎಷ್ಟು ಮಂದಿ ರೈತರು ಅರ್ಹರಾಗುತ್ತಾರೆ ಎಂಬುದು ಪರಿಶೀಲನೆ ಬಳಿಕ ಗೊತ್ತಾಗಲಿದೆ.

ಕೊಳವೆ ಬಾವಿಯಲ್ಲಿ 400 ಅಡಿ ಒಳಗೆ ನೀರು ಲಭ್ಯವಾಗುತ್ತಿದ್ದರೆ ಮಾತ್ರ ಸೌರಶಕ್ತಿ ಆಧಾರಿತ ಕೃಷಿ ಪಂಪ್‌ಸೆಟ್ ಅಳವಡಿಸಬಹುದು. ಅದಕ್ಕಿಂತ ಹೆಚ್ಚಿನ ಆಳದಲ್ಲಿ ನೀರು ಇದ್ದರೆ, ಇದು ಉಪಯೋಗವಾಗುವುದಿಲ್ಲ. ಈಗಿನ ಲೆಕ್ಕಾಚಾರದ ಪ್ರಕಾರ ಬೆಸ್ಕಾಂ ವ್ಯಾಪ್ತಿಯ ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ರೈತರಿಗೆ ಇದರ ಪ್ರಯೋಜನವಾಗಲಿದೆ.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮೊದಲಾದ ಜಿಲ್ಲೆಗಳಲ್ಲಿ ಒಂದು ಸಾವಿರ ಅಡಿಗೂ ಅಧಿಕ ಆಳದಷ್ಟು ಕೊಳವೆಬಾವಿಗಳು ಇರುತ್ತವೆ. ಅವುಗಳಿಗೆ ಸೌರ ಪಂಪ್‌ಸೆಟ್‌ಗಳ ಉಪಯೋಗವಾಗುವುದಿಲ್ಲ. ಹೀಗಾಗಿ ಈಗ ಬಂದಿರುವ 20 ಸಾವಿರ ಅರ್ಜಿಗಳ ಪೈಕಿ ಶೇ 50ರಿಂದ 60ರಷ್ಟು ಅರ್ಜಿದಾರರಿಗೆ ಮಾತ್ರ ಈ ಸೌಲಭ್ಯ ಸಿಗಲಿದೆ ಎಂದು ಶಿವಶಂಕರ್ ವಿವರಿಸಿದರು.

ಆರಂಭದಲ್ಲಿ 40 ಸಾವಿರ ಕೊಳವೆ ಬಾವಿಗಳಿಗೆ ಸೌರ ಪಂಪ್‌ಸೆಟ್ ಅಳವಡಿಸುವ ಗುರಿ ಇತ್ತು. ಬಳಿಕ ಅದನ್ನು 25 ಸಾವಿರಕ್ಕೆ ಇಳಿಸಲಾಗಿದೆ. ಇದರ ಸಾಧಕ–ಬಾಧಕಗಳನ್ನು ನೋಡಿಕೊಂಡು ಮುಂದಿನ ದಿನಗಳಲ್ಲಿ ಇನ್ನಷ್ಟು ಕೊಳವೆ ಬಾವಿಗಳಿಗೆ ಇದನ್ನು ವಿಸ್ತರಿಸುವ ಸಾಧ್ಯತೆ ಇದೆ.

ಒಂದು ಪಂಪ್‌ಸೆಟ್‌ಗೆ 3 ಲಕ್ಷದಿಂದ 3.50 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಅರ್ಜಿಗಳ ಪರಿಶೀಲನೆ ಬಳಿಕ ರೈತರು ತಮ್ಮ ಪಾಲಿನ ಕಂತು ಪಾವತಿಸಬೇಕು. ಇದಾದ ನಂತರ ಸಬ್ಸಿಡಿ ಹಣವನ್ನು ಸಂಬಂಧಪಟ್ಟ ಕಂಪನಿಗೆ ವರ್ಗಾಹಿಸಲಾಗುತ್ತದೆ. ಅವರು ರೈತರ ಕೊಳವೆಬಾವಿಗೆ ಸೌರ ಪಂಪ್‌ಸೆಟ್ ಅಳವಡಿಸುತ್ತಾರೆ.



‘ಕುಸುಮ್ ಸಿ’ ಯೋಜನೆ

ಕುಸುಮ್ ಸಿ ಯೋಜನೆಯಡಿ ಬೆಸ್ಕಾಂ ವ್ಯಾಪ್ತಿಯಲ್ಲಿ 1,055 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಈಗಾಗಲೇ 200 ಮೆಗಾವಾಟ್ ಉತ್ಪಾದನೆ ಶುರುವಾಗಿದೆ. 600 ಮೆಗಾವಾಟ್ ವಿದ್ಯುತ್ ಉತ್ಪಾದನೆ ಶುರುವಾಗುವ ಹಂತದಲ್ಲಿದೆ. ಇನ್ನುಳಿದ 255 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಕೆಲಸ ಶುರು ಮಾಡಬೇಕಾಗಿದೆ ಎಂದು ಶಿವಶಂಕರ್ ತಿಳಿಸಿದರು.

ಶಿವಶಂಕರ್

ಬೇಸಿಗೆಗೆ ಈಗಲೇ ಸಿದ್ಧತೆ

ಮುಂಬರುವ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಪ್ರಮಾಣ 18,500 ಮೆಗಾವಾಟ್‌ಗೆ ಹೆಚ್ಚಲಿದೆ ಎಂದು ನಿರೀಕ್ಷಿಸಲಾಗಿದೆ. ರೈತರು ಬೆಳೆಗಳಿಗೆ ಹೆಚ್ಚಿನ ನೀರು ಬಳಸುವುದರಿಂದ ಬೇಡಿಕೆ ಹೆಚ್ಚಾಗಲಿದೆ. ಅಗತ್ಯವಿರುವ ವಿದ್ಯುತ್ ಲಭ್ಯವಿದೆ. ಆದರೆ, ಪೂರೈಕೆಯಲ್ಲಿ ಕೆಲವೊಂದು ವ್ಯತ್ಯಾಸಗಳು ಆಗುತ್ತವೆ. ಇವುಗಳನ್ನು ಸರಿಪಡಿಸಿಕೊಳ್ಳುವಂತೆ ಕೆಪಿಟಿಸಿಎಲ್ ಹಾಗೂ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಶಿವಶಂಕರ್ ತಿಳಿಸಿದರು.

ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ದೇಶದಲ್ಲಿ ಪ್ರತಿ ವರ್ಷ 2.74 ಲಕ್ಷ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿದ್ದು, ಅದರಲ್ಲಿ 52 ಸಾವಿರ ಕ್ಯಾನ್ಸರ್ ರೋಗಿಗಳು ಮೃತಪಡುತ್ತಿದ್ದಾರೆ’ ಎಂದು ಯೆನೆಪೋಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ವಿಜಯಕುಮಾರ್ ಹೇಳಿದರು.

ಹಾವನೂರು ಬಡಾವಣೆಯಲ್ಲಿರುವ ಸೌಂದರ್ಯ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನಶೈಲಿಯನ್ನು ಉತ್ತಮ ರೀತಿಯಲ್ಲಿ ಬೆಳಸಿಕೊಂಡು ತಂಬಾಕು, ಮದ್ಯ, ಪ್ಲಾಸ್ಟಿಕ್ ಬಳಕೆ ಮುಂತಾದವುಗಳನ್ನು ತ್ಯಜಿಸಿ ಹಣ್ಣು, ತರಕಾರಿಗಳಂತಹ ಉತ್ತಮ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂದರು.

ರಾಷ್ಟ್ರ ಮಟ್ಟದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪದಕ ಮತ್ತು ಪ್ರಮಾಣ ಪತ್ರ ನೀಡಲಾಯಿತು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಡಾ.ನಾದಿಮುಲ್ ಹೂಡಾ ಅವರು ಜಾಗೃತಿ ಉಪನ್ಯಾಸ ನೀಡಿದರು. ಡಾ.ಸೋಮನಾಥ, ಕಾರ್ಯನಿರ್ವಾಹಣಾಧಿಕಾರಿ ಎಂ.ಕೀರ್ತನ್ ಕುಮಾರ್, ಟ್ರಸ್ಟಿ ಎಂ.ವರುಣ್ ಕುಮಾರ್, ಪ್ರಾಂಶುಪಾಲ ಮಹಾಬಲೇಶ್ವರ ತುಂಗಾ, ಉಪ ಪ್ರಾಂಶುಪಾಲೆ ಕೃಪಾ ಆರ್. ದೇವ್ ಉಪಸ್ಥಿತರಿದ್ದರು.

‘ಮಕ್ಕಳ ಮೇಲೆ ನಿಗಾ ವಹಿಸಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಪೋಷಕರು ಮಕ್ಕಳ ಚಲನಚಲನಗಳ ಬಗ್ಗೆ ನಿಗಾ ವಹಿಸಬೇಕು. ಯಾವ ರೀತಿಯ ಸ್ನೇಹಿತರಿದ್ದಾರೆ, ಮಾದಕವಸ್ತುಗಳ ವ್ಯಸನಕ್ಕೊಳಗಾಗಿದ್ದಾರೆಯೇ, ಅಕ್ರಮ ಚಟುವಟಿಕೆಗಳ ಕಡೆ ಆಸಕ್ತಿ ವಹಿಸುತ್ತಿದ್ದಾರೆಯೆ ಎಂದು ಗಮನಹರಿಸಿ ಸಣ್ಣ ವಯಸ್ಸಿನಲ್ಲೇ ತಿದ್ದಬೇಕು’ ಎಂದು ಡಿಐಜಿ ಎಂ.ಎನ್.ಅನುಚೇತ್ ಹೇಳಿದರು.

ಹರ್ಷ ಸಮೂಹ ಸಂಸ್ಥೆಗಳ ವಾರ್ಷಿಕೋತ್ಸವದಲ್ಲಿ ಪ್ರತಿಭಾನ್ವಿತರಿಗೆ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು.

‘ಮಕ್ಕಳು ಅಗತ್ಯವಿರುವಷ್ಟು ಮಾತ್ರ ಸಾಮಾಜಿಕ ಜಾಲತಾಣವನ್ನು ಬಳಸಬೇಕು. ಡಿಜಿಟಲ್ ಅರೆಸ್ಟ್, ಸೈಬರ್ ಅಪರಾಧಗಳಿಗೆ ಒಳಗಾಗುವ ಮೊದಲು ತಡೆಯಬೇಕು’ ಎಂದರು.

ಹರ್ಷ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಶಿವಕುಮಾರ್ ಮಾತನಾಡಿ, ‘ವಿದ್ಯಾರ್ಥಿಗಳ ಆಸಕ್ತಿಗಳಿಗನುಗುಣವಾಗಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದರು.

ನಿರ್ದೇಶಕ ಯಶಸ್ ವಾರ್ಷಿಕ ವರದಿ ವಾಚಿಸಿದರು. ಉಪಾಧ್ಯಕ್ಷೆ ಗಿರಿಜಾ, ನಿರ್ದೇಶಕ ಹರ್ಷ, ಪಿಯು ಪ್ರಾಂಶುಪಾಲೆ ಜ್ಯೋತಿ ಕಾಮತ್, ಮುಖ್ಯ ಶಿಕ್ಷಕರಾದ ಬಿಂದು ಶರ್ಮ, ಪ್ರೀತಿ.ಕೆ.ಚೌಧರಿ, ಪೂರ್ಣಿಮಾ ಉಪಸ್ಥಿತರಿದ್ದರು. ಯಕ್ಷಗಾನ, ನಾಟಕ ಸೇರಿದಂತೆ ವಿವಿಧ ಜಾನಪದ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟರು.

ಅನುಚೇತ್ ಅವರನ್ನು ಎಸ್.ಶಿವಕುಮಾರ್ ಪುರಸ್ಕರಿಸಿದರು. ಜ್ಯೋತಿ ಕಾಮತ್, ಬಿಂದು ಶರ್ಮ, ಹರ್ಷ, ಯಶಸ್, ಗಿರಿಜಾ, ಪೂರ್ಣಿಮಾ, ಪ್ರೀತಿ.ಕೆ.ಚೌಧರಿ ಉಪಸ್ಥಿತರಿದ್ದರು

‘ಪ್ರಶಸ್ತಿ ವಿಳಂಬ ಸಿಐಐಎಲ್‌ನಿಂದ ಅನ್ಯಾಯ’

ಬೆಂಗಳೂರು: ‘ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನವು (ಸಿಐಐಎಲ್) ಕನ್ನಡ ವಿದ್ವಾಂಸರಿಗೆ ಪ್ರಶಸ್ತಿ ನೀಡಲು ವಿಳಂಬ ಮಾಡುತ್ತಿದ್ದು, ಇದು ಕೇಂದ್ರ ಸರ್ಕಾರವು ಕನ್ನಡಿಗರಿಗೆ ಮಾಡುತ್ತಿರುವ ಅನ್ಯಾಯ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕನ್ನಡ ಭಾಷೆಯ ಅಧ್ಯಯನ, ಸಂಶೋಧನೆ ಮತ್ತು ಪ್ರಚಾರಕ್ಕಾಗಿ ಪ್ರತಿ ವರ್ಷ ನೀಡಬೇಕಾದ ಪ್ರಶಸ್ತಿಗಳನ್ನು ನಿಯಮಿತವಾಗಿ ನೀಡದೆ, ಕನ್ನಡ ಭಾಷೆಗೆ ನಿರಂತರ ಅನ್ಯಾಯ ಎಸಗುತ್ತಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಕಳೆದ ವರ್ಷ ಭೇಟಿ ಮಾಡಿದ ಸಂದರ್ಭದಲ್ಲಿ ಈ ವಿಷಯ ಚರ್ಚಿಸಲಾಗಿತ್ತು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದರೂ, ಈವರೆಗೂ ಯಾವುದೇ ಫಲಿತಾಂಶ ದೊರಕದಿರುವುದು ಕೇಂದ್ರದ ನಿಷ್ಕ್ರಿಯತೆಗೆ ಉದಾಹರಣೆ’ ಎಂದು ಹೇಳಿದ್ದಾರೆ.

ಬಿಬಿಎಂಪಿ ತೆರಿಗೆ ಸಂಗ್ರಹ ಕುಸಿತಕ್ಕೆ ಇ -ಖಾತಾ ಅನುಷ್ಠಾನದ ಲೋಪದೋಷಗಳು ಕಾರಣವೇ?

ಹೌದು | ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸಾಂಸ್ಕೃತಿಕ ಮುನ್ನೋಟ

ಶಾಸ್ತ್ರೀಯ ನೃತ್ಯೋತ್ಸವ 26ರಿಂದ

ಬೆಂಗಳೂರು: ಶಾಂತಲಾ ಆರ್ಟ್ಸ್ ಟ್ರಸ್ಟ್ ಮತ್ತು ಸೂರ್ಯ ಪರ್ಫಾರ್ಮಿಂಗ್ ಆರ್ಟ್ಸ್‌ನಿಂದ ಇದೇ 26ರಿಂದ 28ರವರೆಗೆ ಮಲ್ಲೇಶ್ವರದ ಸೇವಾ ಸದನದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಶಾಸ್ತ್ರೀಯ ನೃತ್ಯೋತ್ಸವ ಜರುಗಲಿದೆ.

ಶುಭಾ ಧನಂಜಯ್

26ರಂದು ಸಂಜೆ 6ಕ್ಕೆ ಐಸಿಸಿಆರ್ ವಲಯ ನಿರ್ದೇಶಕ ಪ್ರದೀಪ್ ಕುಮಾರ್ ನೃತ್ಯೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಆದಿತ್ಯ ಸುಬ್ರಮಣ್ಯಂ, ಶ್ರೀಲಾ ಶ್ರೀನಿವಾಸ್, ಮೀರಾ ರತ್ನಗಿರಿ ಅವರು ಭರತನಾಟ್ಯ ಪ್ರಸ್ತುಪಡಿಸಲಿದ್ದಾರೆ. 27ರಂದು ಬೆಳಿಗ್ಗೆ 10ಕ್ಕೆ ಇಂದ್ರಾಣಿ ಪಾರ್ಥಸಾರಥಿ, ಸಹನಾ ಬಾಲಸುಬ್ರಮಣ್ಯ, ನಿಹಾರಿಕಾ ರಾಜೀವ್, ಶ್ರೀನಿಧಿ ಗಣೇಶ್ ಅವರು ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. 28ರಂದು ನಡೆಯುವ ಸಮಾರಂಭದಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭಾ ಧನಂಜಯ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಸ್ವರ ಸಂಜೆ’ ಸಂಗೀತ ಕಛೇರಿ 27ಕ್ಕೆ

ಬೆಂಗಳೂರು: ಸಪ್ತಕ್‌ದಿಂದ ಡಿ.27ರಂದು ಸಂಜೆ 5.30ಕ್ಕೆ ಬಸವನಗುಡಿಯ ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ‘ಸ್ವರ ಸಂಜೆ’ ಸಂಗೀತ ಕಛೇರಿ ನಡೆಯಲಿದೆ.


ಶ್ರೀಮತಿ ದೇವಿ

ಗಾಯಕಿ ಶ್ರೀಮತಿ ದೇವಿ ಅವರಿಗೆ ಸುಮಿತ್ ನಾಯಕ್ (ತಬಲಾ), ಮಧುಸೂದನ್ ಭಟ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ. ಇದಲ್ಲದೆ ಗಾಯಕ ವಿನೋದ್ ದಿಗ್ರಾಜಕರ್ ಅವರಿಗೆ, ಶ್ರೀವತ್ಸ ಕೌಲಗಿ (ತಬಲಾ), ವಿಘ್ನೇಶ್ ಭಾಗವತ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಬಾಯ್ಬಡ್ಕಿ’ ನಾಟಕ ಪ್ರದರ್ಶನ 27ಕ್ಕೆ

ಬೆಂಗಳೂರು: ಅಂತರಂಗ ಬಹಿರಂಗ ತಂಡದಿಂದ ಡಿ. 27ಕ್ಕೆ ಸಂಜೆ 6.30ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ‘ಬಾಯ್ಬಡ್ಕಿ’ ನಾಟಕ ಪ್ರದರ್ಶನವಾಗಲಿದೆ. ಭೀಷ್ಮರಾಮಯ್ಯ ಅವರು ನಾಟಕದ ರಚನೆ ಹಾಗೂ ನಿರ್ದೇಶನ ಮಾಡಿದ್ದಾರೆ. ನಾಟಕವನ್ನು ಕಲ್ಪವೃಕ್ಷ ಟ್ರಸ್ಟ್ ಪ್ರಸ್ತುತಪಡಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ ಪ್ರದರ್ಶನ 29ರಿಂದ

ಬೆಂಗಳೂರು: ಕಡಲೆಕಾಯಿ ಪರಿಷೆಗೆ ಸಂಬಂಧಿಸಿದಂತೆ ಕೆ. ವೆಂಕಟೇಶ್ ಅವರು ತೆಗೆದಿರುವ ಛಾಯಾಚಿತ್ರಗಳ ಪ್ರದರ್ಶನವನ್ನು ಡಿ. 29 ರಿಂದ 31ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ‘ಮಾಣಿ ವೃತ್ತಾಂತಗಳು’ ಎಂಬ ಶೀರ್ಷಿಕೆ ಅಡಿ ಆಯೋಜಿಸಲಾಗಿದೆ.

ಮಾಹಿತಿಗೆ: 98440 25525.

ನಾಟಕ ಸಂಭ್ರಮ 28ರಿಂದ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ, ಯಕ್ಷರಂಗಾಯಣ, ಗಾಂಧಿ ಪಾರ್ಕ್ ನಡಿಗೆದಾರರ ಕೂಟದಿಂದ ಇದೇ 28 ಹಾಗೂ 29ರಂದು ಭಾರತ್‌ನಗರದ ಮಹಾತ್ಮ ಗಾಂಧಿ ಉದ್ಯಾನದ ಕಸ್ತೂರಬಾ ಆಪ್ತ ರಂಗಮಂದಿರದಲ್ಲಿ ಬೆಂಗಳೂರು ಜಿಲ್ಲಾ ನಾಟಕ ಸಂಭ್ರಮ ಆಯೋಜಿಸಲಾಗಿದೆ.

28ರಂದು ಸಂಜೆ 7ಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಬೆಂಗಳೂರು ಜಿಲ್ಲಾ ನಾಟಕ ಸಂಭ್ರಮಕ್ಕೆ ಚಾಲನೆ ನೀಡಲಿದ್ದಾರೆ. ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಹಾಗೂ ಶಾಸಕ ಎಸ್.ಟಿ. ಸೋಮಶೇಖರ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ‘ಮಹಾತ್ಮರ ಬರವಿಗಾಗಿ’ ನಾಟಕ ಪ್ರದರ್ಶನ ಇರಲಿದೆ. 29ರಂದು ಸಂಜೆ 7ಕ್ಕೆ ‘ಗುಲಾಮನ ಸ್ವಾತಂತ್ರ್ಯ ಯಾತ್ರೆ’ ನಾಟಕ ಪ್ರದರ್ಶಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

‘ಮಹಾತ್ಮರ ಬರವಿಗಾಗಿ’ ನಾಟಕದ ದೃಶ್ಯ

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಇಂದು ರಂಗನಾಥಸ್ವಾಮಿ ಕೋಲು ಬೇಟೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಹುಲಿಕುಂಟೆಯಲ್ಲಿನ ವರದಪ್ರದ ಬೇಟೆ ರಂಗನಾಥಸ್ವಾಮಿ ಕೋಲು ಬೇಟೆ ಜಾತ್ರೆ ಡಿ.25 ರಂದು ನಡೆಯಲಿದೆ.

ಹುಲಿಕುಂಟೆಯಲ್ಲಿನ ಬೇಟೆ ರಂಗನಾಥಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಮಧ್ಯಾಹ್ನ 12 ಗಂಟೆ ಸುಮಾರಿಗೆ ಆರಂಭವಾಗುವ ಉತ್ಸವ ಹುಲಿಕುಂಟೆ ದಿನ್ನೆಯ ಬೇಟೆ ಕೂಡುವ ಸ್ಥಳದಲ್ಲಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಮುಕ್ತಾಯವಾಗಲಿದೆ.

₹1.28 ಕೋಟಿ ವೆಚ್ಚದಲ್ಲಿ ದಕ್ಷಿಣ ನಗರ ಪಾಲಿಕೆಯಿಂದ ಖರೀದಿ; ಮೂರು ವರ್ಷ ನಿರ್ವಹಣೆ

ಮಡಿವಾಳ ಕೆರೆ: ಕಳೆ ತೆಗೆಯಲು ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಮಡಿವಾಳ ಕೆರೆಯಲ್ಲಿ ಕಳೆ ತೆಗೆಯಲು ಆಧುನಿಕ ತಂತ್ರಜ್ಞಾನದ ಯಂತ್ರವನ್ನು ಬಳಸುವ ಕಾರ್ಯಕ್ಕೆ ಚಾಲನೆ ದೊರೆತಿದೆ.

ಬಿಬಿಎಂಪಿ ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ ಅನುಮೋದನೆ ಆಗಿದ್ದ ಯೋಜನೆಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಮಂಗಳವಾರ ಚಾಲನೆ ನೀಡಿದರು.

ಕೆರೆಗಳಲ್ಲಿ ಜಲಕಳೆ ತೆರವುಗೊಳಿಸುವ ಉದ್ದೇಶದಿಂದ ಹೊಸದಾಗಿ ಅತ್ಯಾಧುನಿಕ ಕಳೆ ತೆಗೆಯುವ ಯಂತ್ರವನ್ನು ಖರೀದಿಸಲಾಗಿದೆ. ಮಡಿವಾಳ ಕೆರೆಯಲ್ಲಿ ಕಳೆ ತೆಗೆಯುವ ಯಂತ್ರದ ಬಳಕೆಗೆ ಪ್ರಾಯೋಗಿಕವಾಗಿ ಚಾಲನೆ ನೀಡಿದ್ದು, ಅಗತ್ಯಕ್ಕೆ ಅನುಗುಣವಾಗಿ ಇತರೆ ಕೆರೆಗಳಲ್ಲಿಯೂ ಬಳಸಿಕೊಳ್ಳಬೇಕು ಎಂದು ಸೂಚಿಸಿದರು.

ಮುಖ್ಯಾಂಶಗಳು

- ಪ್ರತಿ ನಿತ್ಯ (ಎಂಟು ಗಂಟೆ) ಒಂದು ಎಕರೆಯಲ್ಲಿ ಕಳೆ ತೆಗೆಯುವ ಸಾಮರ್ಥ್ಯ
- ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ, ಸುರಕ್ಷತಾ ಸೆನ್ಸರ್, ಕ್ಯಾಮೆರಾ
- ಕೆರೆಯ ಅಂಗಳದಲ್ಲೇ ಕಳೆಯಿಂದ ಗೊಬ್ಬರ

ಮಡಿವಾಳ ಕೆರೆಯನ್ನು ₹15 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುತ್ತಿದ್ದು, ವಾಯು ವಿಹಾರ ಮಾರ್ಗ ಅಭಿವೃದ್ಧಿ, ತೂಬುಗಳ ನಿರ್ಮಾಣ, ಮಕ್ಕಳ ಆಟದ ಪ್ರದೇಶ, ಬೀದಿ ದೀಪಗಳ ಅಳವಡಿಕೆ, ಶೌಚಾಲಯ, ಬ್ರಿಡ್ಜ್ ಕಾಮಗಾರಿ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ. ಕಾಮಗಾರಿಗಳಿಗೆ ವೇಗ ನೀಡುವ ಮೂಲಕ ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಡಿವಾಳ ಕೆರೆಯಲ್ಲಿ ಈ ಹಿಂದೆ ಬೋಟಿಂಗ್ ವ್ಯವಸ್ಥೆ ಇತ್ತು. ಅದನ್ನು ಮತ್ತೆ ಪ್ರಾರಂಭಿಸುವುದು ಹಾಗೂ ಮಡಿವಾಳ ಕೆರೆಯನ್ನು ಪ್ರವಾಸೋದ್ಯಮ ಸ್ಥಳವನ್ನಾಗಿ ಅಭಿವೃದ್ಧಿಪಡಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಹೇಳಿದರು.

ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.

ಮಡಿವಾಳ ಕೆರೆಯಲ್ಲಿ ಕಳೆ ತೆಗೆಯಲು ಬಳಸುತ್ತಿರುವ ಯಂತ್ರ

ನಿತ್ಯ 10 ಲೀಟರ್ ಡೀಸೆಲ್

ರುದ್ರ ಆಕ್ವಾ ಮ್ಯಾಕ್ಸ್ ಎಂಬ ಅತ್ಯಾಧುನಿಕ ಕಳೆ ತೆಗೆಯುವ ಯಂತ್ರವನ್ನು ₹1.28 ಕೋಟಿ ವೆಚ್ಚದಲ್ಲಿ ಪಾಲಿಕೆಯು ಖರೀದಿಸಿದೆ. ಈ ಯಂತ್ರವು ಒಂದು ಬಾರಿ 5 ಟನ್‌ಗಳವರೆಗೆ ಕಳೆ ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಇದರೊಂದಿಗೆ ಲೈವ್ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ, ಸುರಕ್ಷತಾ ಸೆನ್ಸರ್‌ಗಳು, ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಯಂತ್ರ ಎಲ್ಲಿ ಮತ್ತು ಎಷ್ಟು ಸಮಯ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ನಿಯಂತ್ರಣ ಕೊಠಡಿಯಿಂದ ಮೇಲ್ವಿಚಾರಣೆ ಮಾಡಬಹುದು ಎಂದು ಕಾರ್ಯಪಾಲಕ ಎಂಜಿನಿಯರ್ ನಿತ್ಯಾ ಮಾಹಿತಿ ನೀಡಿದರು.

ಈ ಯಂತ್ರವನ್ನು ಆಟೋಕ್ರಸಿ ಮಿಷಿನರಿ ಸಂಸ್ಥೆಯ ವತಿಯಿಂದ ಮೂರು ವರ್ಷ ನಿರ್ವಹಿಸಲಾಗುತ್ತದೆ. ಈ ಅವಧಿಯಲ್ಲಿ ಯಂತ್ರದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆ ಎದುರಾದರೂ ಸಂಸ್ಥೆಯೇ ಸಂಪೂರ್ಣ ನಿರ್ವಹಣೆ ವಹಿಸಿಕೊಂಡಿದೆ. ಪ್ರತಿನಿತ್ಯ ಸುಮಾರು 10 ಲೀಟರ್ ಡೀಸೆಲ್ ಹಾಗೂ ಚಾಲಕನ ವೇತನವನ್ನು ಪಾಲಿಕೆ ನೀಡಲಿದೆ ಎಂದರು.

ಚನ್ನಪಟ್ಟಣ ಯೋಜನಾ ಪ್ರಾಧಿಕಾರ

ನಂ. 2850. ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ–562160

ಸಂಖ್ಯೆ: ಚಯೋಪ್ರಾ/ಭೂಉಬ/05/2025–26 ದಿನಾಂಕ: 24.12.2025

ಸಾರ್ವಜನಿಕ ಪ್ರಕಟಣೆ

ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಧ್ಯಂತರ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ: 24.10.2013 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗದಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಠಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4)ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಚನ್ನಪಟ್ಟಣ ಯೋಜನಾ ಪ್ರಾಧಿಕಾರ, ಚನ್ನಪಟ್ಟಣ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕೋಷ್ಟಕ–1

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಕೀರ್ತಿ ಇನ್ಫಿನಿಟಿ ಇದರ ಪಾಲುದಾರರಾದ ಶ್ರೀ ಕೆ.ಎಂ. ಮಂಜುನಾಥ್ ಮತ್ತು ಮೆ॥ ಎಲ್.ಪಿ. ಎಂಟರ್‌ಪ್ರೈಸಸ್ ಇವರ ಮಾಲೀಕರಾದ ಶ್ರೀ ಎಲ್.ಪಿ. ಉಮೇಶ	ಚನ್ನಪಟ್ಟಣ	ಕಸಬಾ	ತಟ್ಟೆಕೆರೆ	58/1	0–17.04	ಉದ್ಯಾನವನ ಮತ್ತು ಬಯಲುಜಾಗ	ವಸತಿ
					60/2	0–12.04		
					60/6	0–12.04		
					60/5	0–07.12		
					ಒಟ್ಟು	01–09.08		

ಮೇಲ್ಕಂಡ ಕೋಷ್ಟಕ–1ರಲ್ಲಿ ವಿವರಿಸಿರುವ ವಿಸ್ತೀರ್ಣದ ಜೊತೆಗೆ **ತಟ್ಟೆಕೆರೆ** ಗ್ರಾಮದ ಈ ಕೆಳಕಂಡ ಕೋಷ್ಟಕ–02ರ ಸರ್ವೆ ನಂಬರ್ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ, ಸದರಿ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕ–2ರಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಚನ್ನಪಟ್ಟಣ ಯೋಜನಾ ಪ್ರಾಧಿಕಾರ ಚನ್ನಪಟ್ಟಣ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕೋಷ್ಟಕ–2

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಕೀರ್ತಿ ಇನ್ಫಿನಿಟಿ ಇದರ ಪಾಲುದಾರರಾದ ಶ್ರೀ ಕೆ.ಎಂ. ಮಂಜುನಾಥ್ ಮತ್ತು ಮೆ॥ ಎಲ್.ಪಿ. ಎಂಟರ್‌ಪ್ರೈಸಸ್ ಇವರ ಮಾಲೀಕರಾದ ಶ್ರೀ ಎಲ್.ಪಿ. ಉಮೇಶ	ಚನ್ನಪಟ್ಟಣ	ಕಸಬಾ	ತಟ್ಟೆಕೆರೆ	56/2	0–06	ಕೈಗಾರಿಕಾ	ವಸತಿ
2					58/1	0–12.12		
3					58/2	0–30		
4					58/3	0–30		
5					58/4	0–30		
6					58/5	0–30		
7					58/6	0–02		
8					60/2	1–27.12		
9					60/3	0–02		
10					60/4	0–06		
11					60/5	0–10.04		
12					60/6	0–05.12		
13					61/2	0–22		
					ಒಟ್ಟು	6–14.08		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವುದಿಲ್ಲವೆಂದೂ, ತಮ್ಮ ಜಮೀನಿನ ಸುತ್ತ ಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿ ಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗಿ, ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿ, ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಕರಿಗೆ ಅನುಕೂಲವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ ಸದರಿ ಪ್ರದೇಶವನ್ನು **‘ಕೈಗಾರಿಕಾ ವಲಯ’**ದಿಂದ **‘ವಸತಿ ವಲಯ’**ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಚನ್ನಪಟ್ಟಣ ಯೋಜನಾ ಪ್ರಾಧಿಕಾರ, ಚನ್ನಪಟ್ಟಣ.

DIPR/BSD/525/SA/2025-26

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಕಟ್ಟಿಗೇನಹಳ್ಳಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಡಿಸೆಂಬರ್ 26ರಂದು ಬೆಳಿಗ್ಗೆ 10.30ರಿಂದ ಸಂಜೆ 6.30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಸುಬ್ರಹ್ಮಣ್ಯನಗರ, ಮಿಲ್ಕ್ ಕಾಲೊನಿಯ ಎ, ಬಿ, ಸಿ, ಡಿ ಬ್ಲಾಕ್, ಗಾಯತ್ರಿನಗರ, ಕೃಷ್ಣಾನಂದ ನಗರ, ಶಂಕರನಗರ, ಶ್ರೀಕಾಂತೇಶ್ವರನಗರ, ಸೋಮೇಶ್ವರನಗರ, ಎಪಿಎಂಸಿ ಯಾರ್ಡ್, ಮಹಾಲಕ್ಷ್ಮೀ ಲೇಔಟ್, ಗಣೇಶ ಬ್ಲಾಕ್, ಆಂಜನೇಯ ದೇವಸ್ಥಾನ ರಸ್ತೆ, ಸರಸ್ವತಿಪುರ, ಎಜಿಬಿ ಲೇಔಟ್, ಪರಿಮಳನಗರ, ಶ್ರೀನಿವಾಸನಗರ, ಎ.ಎಸ್. ನಗರ, ಕುರುಬರಹಳ್ಳಿ, ರಾಜ್‌ಕುಮಾರ್ ಸಮಾಧಿ ರಸ್ತೆ, ಶ್ರೀರಾಮನಗರ, ಮುನೇಶ್ವರ ಬ್ಲಾಕ್, ಸತ್ಯನಾರಾಯಣ ಲೇಔಟ್, ಸತ್ವ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಚಂದ್ರಾ ಲೇಔಟ್ 66/11 ಕೆ.ವಿ. ಉಪಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಡಿ. 26ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಲಿಗದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಆರ್‌ಪಿಸಿ ಲೇಔಟ್, ರೆಮ್ಕೊ ಲೇಔಟ್, ಕಲ್ಯಾಣ್ ಲೇಔಟ್, ಸುಬ್ಬಣ್ಣ ಗಾರ್ಡನ್, ವಿಡಿಯಾ ಲೇಔಟ್, ಎಂಆರ್‌ಸಿಆರ್ ಲೇಔಟ್, ಚಂದ್ರಾ ಲೇಔಟ್, ಬಾಪೂಜಿ ಲೇಔಟ್, ವಿನಾಯಕ ಲೇಔಟ್, ಮೂಡಲಪಾಳ್ಯ, ಕೆನರಾ ಬ್ಯಾಂಕ್ ಕಾಲೊನಿ, ವಿದ್ಯಾಗಿರಿ ಲೇಔಟ್, ಬಿಡಿಎ 13 ಮತ್ತು 14ನೇ ಬ್ಲಾಕ್, ಭೈರವೇಶ್ವರನಗರ, ನಾಗರಬಾವಿ, ಕಾವೇರಿ ಲೇಔಟ್, ಸಂಜೀವಿನಿನಗರ, ಕಲ್ಯಾಣನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕಟ್ಟಿಗೇನಹಳ್ಳಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಡಿ. 26ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಉತ್ತರ ಗೇಟ್ 1, 2, 3, ರಾಯಭಾರಿ ಕಚೇರಿ, ಫಿಲಿಪ್ಸ್ ಕಂಪನಿ, ದ್ವಾರಕಾನಗರ, ಬಾಬಾನಗರ, ಕಟ್ಟಿಗೇನಹಳ್ಳಿ, ಬಾಗಲೂರು ಕ್ರಾಸ್, ಮಣಿಪಾಲ್ ಕಾಲೇಜು, ವಿನಾಯಕನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.



Reserved for a festive finish, these limited-period benefits make bringing home a Kia smoother than ever. Enjoy attractive benefits across select models, and start the new year behind the wheel of something truly advanced. Visit your nearest Kia dealership today.

Model	Seltos	Sonet	Syros	Carens Clavis
Range starts at	₹ 10 79 276	₹ 7 30 138	₹ 8 67 053	₹ 11 17 835
Total benefits	₹ 2 19 000	₹ 1 03 000	₹ 1 83 000	₹ 1 50 000

*Benefits available on other Kia cars as per applicability.

For more information, visit your nearest dealership or contact: 1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Ex-showroom price mentioned is for the base variant (Pan India). Benefits shown are the combination of exchange, loyalty, corporate, scrappage and special benefits, which are applicable on select models and variants, may vary from model to model and region to region. The product shown is for representation purposes only. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/ scheme/ service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details.

Bangalore: **PPS Kia:** Mysore Road, Tel: 6309990010; **JSP Kia:** Bellandur, Tel: 9513918131; Hosur Road, Tel: 9986644472; Sarjapur, Tel: 8095553636; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **Taapasi Kia:** Kalyan Nagar, Tel: 8095537777; Koramangala, Tel: 9071177333; **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; Tumkur: **PPS Kia:** Tel: 6303622210; Kolar: **Epitome Kia:** Tel: 8951903224

ರಂಗಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ

ರಂಗ ಮಂದಿರ ಕಾಮಗಾರಿಗೆ ಸಿ.ಎನ್. ಮಂಜುನಾಥ್, ಮುನಿರತ್ನ ಚಾಲನೆ ನೀಡಿದರು. ಎಂ. ಮಂಜುನಾಥ್, ಬಿ.ಜಯಶ್ರೀ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ವಿಶ್ವದಲ್ಲಿಯೇ ಭಾರತೀಯ ಸಂಸ್ಕೃತಿ, ನಾಟಕ, ಕಲೆಗಳು ಸರ್ವಶ್ರೇಷ್ಠವಾಗಿದ್ದು, ಅವುಗಳ ಉಳಿವಿಗಾಗಿ ಎಲ್ಲರೂ ಕೈ ಜೋಡಿಸಬೇಕು' ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಮಲ್ಲತ್ತಹಳ್ಳಿಯ ರಾಷ್ಟ್ರೀಯ ನಾಟಕ ಶಾಲೆ ಆವರಣದಲ್ಲಿ ₹4.50ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಂಗ ಮಂದಿರದ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಶಾಸಕ ಮುನಿರತ್ನ ಮಾತನಾಡಿ, 'ನಾಟಕ, ರಂಗಭೂಮಿ, ಸಾಹಿತ್ಯ ಮನುಷ್ಯನ ಮನೋವಿಕಾಸಕ್ಕೆ ದಾರಿದೀಪವಾಗಿವೆ. ನಮ್ಮ ಪೂರ್ವಿಕರ ಕಾಲದ ಸಂಸ್ಕೃತಿ ಉಳಿವಿಗೆ ನಾವೆಲ್ಲ ಸಂಕಲ್ಪ ಮಾಡಬೇಕಾಗಿದೆ. ಆಗ ಮಾತ್ರ ರಂಗಭೂಮಿ ಉಳಿಯುವ ಮೂಲಕ ಭಾರತೀಯ ಪರಂಪರೆ, ಇತಿಹಾಸ, ಸಂಸ್ಕೃತಿ ಮತ್ತು ನಾಟಕ ಮತ್ತಷ್ಟು ಶ್ರೀಮಂತಗೊಳ್ಳುತ್ತವೆ' ಎಂದರು.

ರಾಜ್ಯಸಭೆ ಮಾಜಿ ಸದಸ್ಯೆ ಬಿ.ಜಯಶ್ರೀ, ಬಿಜೆಪಿ ಎಸ್‌ಸಿ ಮೋರ್ಚಾ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಉಪಾಧ್ಯಕ್ಷ ಎಂ. ಮಂಜುನಾಥ್, ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ ಚಿತ್ತರಂಜನ್ ತ್ರಿಪಾಠಿ, ಅರುಣ ಕುಮಾರ್, ವೀಣಾಶರ್ಮ, ಬಿಜೆಪಿ ವಾರ್ಡ್ ಸಮಿತಿ ಅಧ್ಯಕ್ಷ ಶಿವಶಂಕರ್, ಲಿಂಗರಾಜ್ ಗೌಡ, ಸ್ಥಳೀಯ ಮುಖಂಡ ಯೋಗೇಶ್ ಉಪಸ್ಥಿತರಿದ್ದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 34/2025, ದಿನಾಂಕ: 22.12.2025

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.**

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರ ಕೊನೆಯ ದಿನಾಂಕ
1	75251045ಎ	ಫ್ಲೋರಿಂಗ್ ಶೀಟ್ ಫ್ಲೆಕ್ಸಿಬಲ್ ಪಾಲಿವಿನೈಲ್ ಕ್ಲೋರೈಡ್ ಪಿವಿಸಿ	3022 ಸಂ.	**08.01.2026**
2	80251002ಬಿ	ಆಯಿಲ್ ಮಶಿನರಿ/ಜನರಲ್ ಪರ್ಪಸ್ ಮಶಿನರಿ	132090 ಲೀ.	**20.01.2026**
3	30251529ಎ	ಬಿಜಿ ಕೋಚ್‌ಗಳಿಗೆ ಬ್ರೇಕ್ ಬೀಮ್ 16ಟಿ ಕಂಪ್ಲೀಟ್	2158 ಸಂ.	**04.02.2026**

ಸೂಚನೆ ಸಂ. 30/2025ರಲ್ಲಿ ಪ್ರಕಟಿಸಲಾದ ಟೆಂಡರು ಸಂ. 30251272ಎ ರಲ್ಲಿ ಟೆಂಡರು ತೆರೆಯುವ ಕೊನೆಯ ದಿನಾಂಕವು 23.12.2025 ರಿಂದ **05.01.2026**ಕ್ಕೆ ಬದಲಾಯಿಸಲಾಗಿದೆ

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/768/AAF/PRB/SWR/2025-26 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ.:ಮುಇಂವಿ/ರಾವಿರಕೇಂ/ಅಇಂವಿ-ಸ್ಕಾಡಾ/ಕಾನಿಇಂ(ಡಿ)/ಸಇಂವಿ-ವಿಎಸ್‌ಎಟಿ/2025-26/3614-16

ದಿನಾಂಕ: 23.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯ ಟೆಂಡರ್ ಸಂಖ್ಯೆ: **KPTCL/2025-26/SS/WORK_INDENT 2963/CALL-2** ರ ಸಂಬಂಧ **"Upgradation of KPTCL SCADA-VSAT Communication Network on percentage tender basis"** ಗಾಗಿ ಬಿಡ್ ಅನ್ನು ಆಹ್ವಾನಿಸಿದೆ.

ಕೆಪಿಪಿ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು **htpps://kppp.karnataka.gov.in** ಗೆ ದಿನಾಂಕ 29–12–2025 ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು ಮತ್ತು ಬಿಡ್‌ಗಳ ಸ್ವೀಕೃತಿಯ ಕೊನೆಯ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ.

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ಯಾವುದೇ ವಿಸ್ತರಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಯಾವುದೇ ವಿವರಗಳನ್ನು ಕಛೇರಿ ಸಮಯದಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆಯಬಹುದು.

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮೊದಲು ಬಿಡ್‌ದಾರರು ಎಲ್ಲಾ ತಿದ್ದುಪಡಿ/ಅನುಬಂಧಗಳನ್ನು ಗಮನಿಸಬೇಕು.

ಸಹಿ/-, ಮುಖ್ಯ ಇಂಜಿನಿಯರ್ (ವಿದ್ಯುತ್),
ರಾವಿರಕೇ, ಕವಿಪ್ರನಿನಿ, ನಂ.28, ರೇಸ್ ಕೋರ್ಸ್ ಕ್ರಾಸ್ ರೋಡ್,
ಆನಂದರಾವ್ ವೃತ್ತ, ಬೆಂಗಳೂರು-560 009.

ನೈಋತ್ಯ ರೈಲ್ವೆ

ಹರಾಜು ಕಾರ್ಯಕ್ರಮ ಸೂಚನೆ ಸಂ.: S/XIII/04/2025-26

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು, ನೈಋತ್ಯ ರೈಲ್ವೆಯ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಹಾಗೂ ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ ಮತ್ತು ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ ಡಿಪೋಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವಂತೆ ಆನ್‌ಲೈನ್ ಸ್ಕ್ರ್ಯಾಪ್, ಸರ್ವಿಸಬಲ್ ಲೋಕೋಮೋಟಿವ್‌ಗಳು ಮತ್ತು ಡಿಪೋ ಸ್ಕ್ರ್ಯಾಪ್‌ಗಳ ಮಾರಾಟಕ್ಕಾಗಿ ಜನವರಿ, ಫೆಬ್ರವರಿ ಮತ್ತು ಮಾರ್ಚ್ 2026 ರ ತಿಂಗಳುಗಳಲ್ಲಿ ಇ–ಹರಾಜಿನ ವೇಳಾಪಟ್ಟಿಯನ್ನು ಕೆಳಗೆ ನೀಡಲಾಗಿದೆ.

ಹರಾಜಿನ ಮಾದರಿ	ಸ್ಥಳ	ಜನವರಿ 2026			ಫೆಬ್ರವರಿ 2026			ಮಾರ್ಚ್ 2026			
ಇ-ಹರಾಜು	ಜನರಲ್ ಉಗ್ರಾಣ ಡಿಪೋ/ ಹುಬ್ಬಳ್ಳಿ	5ನೇ	12ನೇ	21ನೇ	3ನೇ	12ನೇ	20ನೇ	2ನೇ	9ನೇ	14ನೇ	28ನೇ
	ಮೆಕ್ಯಾನಿಕಲ್ ಜನರಲ್ ಉಗ್ರಾಣ ಡಿಪೋ, ಅಶೋಕಪುರಂ (ಮೈಸೂರು)	6ನೇ	13ನೇ	22ನೇ	4ನೇ	13ನೇ	23ನೇ	7ನೇ	13ನೇ	20ನೇ	27ನೇ
	ಹುಬ್ಬಳ್ಳಿ ವಿಭಾಗ	7ನೇ	16ನೇ	28ನೇ	6ನೇ	16ನೇ	24ನೇ	3ನೇ	10ನೇ	16ನೇ	24ನೇ
	ಬೆಂಗಳೂರು ವಿಭಾಗ	8ನೇ	19ನೇ	29ನೇ	9ನೇ	17ನೇ	25ನೇ	5ನೇ	11ನೇ	17ನೇ	25ನೇ
	ಮೈಸೂರು ವಿಭಾಗ	9ನೇ	20ನೇ	30ನೇ	10ನೇ	18ನೇ	26ನೇ	6ನೇ	12ನೇ	18ನೇ	26ನೇ

ಸರ್ವೀಸ್ ಮಾಡಲು ಯೋಗ್ಯವಾದ ಇಂಜಿನ್‌ಗಳ ಮಾರಾಟ: ಕೆಳಗಿನ ಹದಿನಾಲ್ಕು ನಂ. ನಾಶಗೊಳಿಸಲಾದ, ಹೆಚ್ಚುವರಿ, ಕಡಿಮೆ ವಯಸ್ಸಿನ ಮತ್ತು ಸರ್ವೀಸ್ ಮಾಡಬಹುದಾದ ಲೋಕೋಮೋಟಿವ್‌ಗಳು ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ಬೆಂಗಳೂರು ಇವರ ನೇತೃತ್ವದಲ್ಲಿ ಇ–ಹರಾಜಿನಲ್ಲಿವೆ, ಅಂದರೆ ಡಬ್ಲ್ಯೂಡಿಜಿ3ಎ–13031, 13056, 13118, 13243, 13249, 13263, 13268, 13299, 13270, 13331 & 14796, ಡಬ್ಲ್ಯೂಡಿಎಂ3ಎ–14082, 14084, 16670.

ಮೇಲೆ ತಿಳಿಸಿರುವ ಇ–ಹರಾಜಿನಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿಮ್ಮನ್ನು ವಿನಂತಿಸಲಾಗಿದೆ. ವಿವರಗಳಿಗಾಗಿ ದಯವಿಟ್ಟು ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಜನರಲ್ ಸ್ಟೋರ್‌ಗಳ ಡಿಪೋ/ಹುಬ್ಬಳ್ಳಿ (0836–2363466/ 9731668760), ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಮೆಕ್ಯಾನಿಕಲ್ ಜನರಲ್ ಉಗ್ರಾಣಗಳ ಡಿಪೋ/ಅಶೋಕ ಪುರಮ್ (0821–2480171/9731665756), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಹುಬ್ಬಳ್ಳಿ (0836–2363497/ 9731668750), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಬೆಂಗಳೂರು (080–22873081/9731666750), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಮೈಸೂರು (0821–2420817/9731667750).

ಲೋಕೋಗಳಿಗಾಗಿ ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್/ಡಿಎಸ್‌ಎಲ್/ಕೃಷ್ಣರಾಜಪುರಂ 9731666451 & ವರಿಷ್ಠ ವಿಭಾಗೀಯ ಇಂಜಿನಿಯರ್/ಡಿಎಸ್‌ಎಲ್/ಕೃಷ್ಣರಾಜಪುರಂ – 9731666482 ಇವರನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ **www.ireps.gov.in/E-auction** ಗೆ ಲಾಗ್ ಆನ್ ಆಗಿ

PUB/767/AAF/PRB/SWR/2025-26 ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ನಿರ್ಮಾಣ/ಹುಬ್ಬಳ್ಳಿ/ಪ್ರಕಾ

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನಗರಸಭೆ ಕಾರ್ಯಾಲಯ, ಚಿಕ್ಕಬಳ್ಳಾಪುರ
ಚಿಕ್ಕಬಳ್ಳಾಪುರ ಜಿಲ್ಲೆ

E-mail: ka.chikkaballapur.cmc@gmail.com, web: www.chikkaballapurcity.mrc.gov.in, ದೂ. ಸಂ. & ಫ್ಯಾಕ್ಸ್ : 08156–275557

ನಂ. ನಸಚಿ/ಆ.ಶಾ/ಸಿ.ಆರ್/42/2025–26 ದಿನಾಂಕ: 18.12.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ 2021–22ನೇ ಸಾಲಿನ 15ನೇ ಹಣಕಾಸು ಎನ್.ಎಂ.ಪಿ.ಸಿ ಮತ್ತು 2024–25ನೇ ಸಾಲಿನ ಶೇ.24.10 ಯೋಜನೆಯಡಿ ಈ ಕೆಳಕಂಡ ಸರಬರಾಜು/ಸೇವೆಯನ್ನು ಮಾಡಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ/ ಸರಬರಾಜುದಾರರಿಂದ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್–2.0) ಆಹ್ವಾನಿಸಲಾಗಿದೆ. ವೆಬ್‌ಸೈಟ್ **https:kppp.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 02.01.2026 ರಂದು ಬೆಳಿಗ್ಗೆ 11.00 ಗಂಟೆಯವರೆಗೆ,** ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 03.01.2026 ರಂದು ಸಂಜೆ 5.30 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 05.01.2026 ರಂದು ಬೆಳಿಗ್ಗೆ 11.00 ಗಂಟೆಗೆ** ಹಾಗೂ ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. ಇಂಡೆಂಟ್ ಸಂಖ್ಯೆ ವಿವರ :(1) DMA/2025-26/IND5789, (2) DMA/2025-26/IND5790 (3) DMA/2025-26/SE5794

ಸಹಿ/– ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ನಗರಸಭೆ, ಚಿಕ್ಕಬಳ್ಳಾಪುರ

ಸಹಿ/– ಪೌರಾಯುಕ್ತರು ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:327/ಕೆಎಸ್‌ಎಂಸಿಎ/2025–26

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2/–)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
C000334	500	1751	14282876 - 14283375	ಚಂದ್ರಕಾಂತ್ ವಿ ವೋರಾ

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢಿಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: ಡಿಸೆಂಬರ್ 24, 2025

ಭಾವನಾ ಅಗರವಾಲ್
ಮುಖ್ಯ ಹಣಕಾಸು ಅಧಿಕಾರಿ ಮತ್ತು ನಿರ್ದೇಶಕರು
ಡಿನ್: 10485441

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

CORRIGENDUM

Further to the advertisement of inviting application for the staff recruitment in our entity published on 24.12.2025 in **Deccan Herald daily, Classifieds Page No. 4,** the education qualification of the post shall be read as **BA / MA, B.Ed.,** & No change in the rest of matter.

Secretary/President
SOPHIA KANNADA HIGH SCHOOL, K.G.Halli,
Bangalore-560045.

PUBLIC NOTICE

BE IT KNOWN TO ALL that our client Smt. S.E.KUSUMANJALI, Aged about 65 years, W/o. N. Shivakumar No. 91, 17th Cross, 14th Main, 4th Sector, HSR Layout, Bangalore-560102 intended to acquire the under mentioned schedule Property from its owner Smt. K SUDHA, W/o. Shylendra Babu Reddy, Aged about 50 Years, R/at. No. 830, Ground Floor, 5th C Cross, HRBR Layout, Bengaluru – 560043

The public is hereby informed that any person/s having any manner of right/s, claim/s, charge/s, objection/s against the under mentioned Schedule Property or any part thereof or in any manner affecting the rights of the Schedule property may notify the undersigned within 7 (Seven) days from the date of publication of this notice along with documentary proof in support of the same failing which our client shall proceed to purchase the schedule property and our client will complete the transaction. No claim shall be entertained thereafter.

SCHEDULE PROPERTY

ALL THAT PIECE AND PARCEL OF THE Absolute owner and in possession of the Immovable residential property bearing **BDA Site No. 5C - 830,** having **BBMP PID No. 027-W0108-27, E-Khatha No. 6595662655,** Situated in the layout formed by the Bengaluru Development Authority, Bengaluru Block-I, HENNUR ROAD, Banaswadi Road, Extension (H R B R Layout), measuring East to West – 12.20 Meters and North to South – 17-80 Meters, and totally measuring 217.16 Square meters Together with building standing there on, consisting with Stilt Floor, Ground Floor, First Floor, Second Floor, in all consisting of 54.5 Squares, RCC Sheet house together with Vitrified Tiles Flooring, Doors and Windows made of Jungle Wood and Steel and Electrical, water and sanitation connections, with all the appurtenances whatsoever whether underneath or above the surface and bounded on the:- **East by :** Site bearing No. 5C-832; **West by :** Site bearing No. 5C-828; **North by :** 5th Cross Road; **South by :** Site bearing No. 4BC-827.

Dated: 25.12.2025
Bangalore-560 053.

Sd/- **M/s. Yuktha Legal,**
Bangalore: Advocates & Solicitors,
403, 4th Floor, Victory Avenue,
16, Hospital Road, Bangalore-560053.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PUBLIC NOTICE

My client is intending to purchase the property morefully described in the schedule herein below from (i) **Imran Ahmed,** (ii) **Saleha Mubeen,** (iii) **Faseeha Marium,** as they claim that they are the absolute owners in possession of the Schedule Property, and the same is free from all encumbrances, charges, claims, or demands of whatsoever nature.

Any person/s having any type of objections to the said transaction may lodge their objection/s supported by cogent documents with the undersigned within **FIFTEEN DAYS (15)** from the date of this publication. If no objection/s is/are raised within the said period, my client would go ahead with the sale transaction in respect of the Schedule Property below mentioned deeming there is/are no objection/s from whomsoever and of whatsoever nature.

SCHEDULE PROPERTY

All That Piece And Parcel of Immovable Residential House Property No.878, Binnamangala II Stage, Indiranagar, Bengaluru – 560038, measuring East to West 30' Feet and North to South 40 feet together with all rights, appurtenances whatsoever weather underneath or above the surface and bounded on:

East By: Site No.877 **West By:** Private Property, **North By:** Site No.863, **South By:** Road;

Nayan Bichali
Associate Advocate
Sreevatsa Associates
No.50, II Stage, Indiranagar,
Bengaluru - 560 038.
91-80-25252898, 25297715, 25295506

PERSONAL

Change of Name

I, C.PRASANTHA Kumar S/o late N.K. Chandra Prakash aged about 39 Years residing at Post office Road Nangali village, Byrakur Hobli, Mulbagal Taluk, Kolar District. Have changed my name to C.Prashanth Kumar vide affidavit dated 24.12.2025 before Notary B Nagaraja Mulbagal. Henceforth I shall be called as C.Prashanth Kumar only.

CHANGE OF NAME

I, **ROY ANIRBAN APARNA** residing at Ashoka Trust for Research in Ecology and the Environment, Bengaluru-560064, have changed my name to **ANIRBAN ROY** vide affidavit dated 22/12/2025, before notary Mir Zia Ulla, HBR Layout, Bengaluru. Henceforth I shall be called **ANIRBAN ROY** only.

CHANGE OF NAME

I, MANJUNATH LAXMAN VERNEKAR S/o Laxman Vernekar, R/a No. 10, Old No. 41, 1st Floor, 1st 'A' Cross, Mount Joy Extension, Hanumanthanagar, Gavipuram Extension Post, Bengaluru-560 019. have changed my name from **MANJUNATH VERNEKAR to MANJUNATH LAXMAN VERNEKAR** Vide affidavit dated 23-12-2025 Sworn before Notary H.G. Venkataramu, Bengaluru.

CHANGE OF NAME

I, **Nikita S Avadhani,** residing at No. 294, 1st Floor, 13th Cross, 2nd Stage, Sub-Registrar Office, Mahalaxmipuram Layout, Mahalaxmi Layout, Bengaluru-560086, have changed my name to **NIKITA AVADHANI** vide affidavit dated 24.12.2025 before notary Deepa M, Bengaluru. Henceforth I shall be called **NIKITA AVADHANI** only

CHANGE OF NAME

I, **ANITHA ANTHONY VIJAYA** residing at # 4, Artillery Road, Deena Bandhu Nagar, Bengaluru- 560008 have changed my name to **ANITHA** vide affidavit dated 15/12/2025, before notary S.I.Balaguru, Bengaluru. Henceforth I shall be called **ANITHA** only.

CHANGE OF NAME

I, **Ankur Kumar,** residing at No. HA502, Salarpuria Sattva Greenage Apartments, Next to Oxford College, Bommanahalli, Bengaluru-560 068, have changed my name to **ANKUR KUMAR GUPTA** vide affidavit dated 16.12.2025 before notary Dharani P, Bengaluru. Henceforth I shall be called **ANKUR KUMAR GUPTA** only

SUDHA #136, APMC Fruits Market Road, Singena Agrahara, Bengaluru-99, Have changed my name to SUDHA M Vide affidavit dated- 24/12/2025

CHANGE OF NAME

I, **Kumar Dalawai** S/o Dalawai Perumal Reddy, Resident at No. 17, Sai Krupa, 5th Main Road, Ganapathipura, Near Khoday's Lake, Konnanakunte, Doddakallasandra Post, Bengaluru-560062, have changed my name to **KUMAR DALAVAI** vide affidavit dated 24.12.2025 before notary Mamatha N.K., Bengaluru.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'ಗ್ರೇಟರ್ ಮಾಸ್ಟರ್ ಪ್ಲಾನ್' ರೂಪಿಸಲು ಟೆಂಡರ್ ಆಹ್ವಾನ

ಸ್ಥಳೀಯ ಯೋಜನಾ ಪ್ರದೇಶದಲ್ಲಿ ಜಿಐಎಸ್ ಆಧರಿತ ಯೋಜನೆ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿರುವ, ಬೆಂಗಳೂರು ಕೇಂದ್ರ ಪೇಟೆ ಪ್ರದೇಶ ಹಾಗೂ 308 ಗ್ರಾಮಗಳ ವ್ಯಾಪ್ತಿಗೆ 'ಗ್ರೇಟರ್ ಮಾಸ್ಟರ್ ಪ್ಲಾನ್' ರಚಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮುಂದಾಗಿದೆ.

ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ ಎಂದು ಗುರುತಿಸಲಾಗಿರುವ 686 ಚದರ ಕಿ.ಮೀ ವ್ಯಾಪ್ತಿಯಲ್ಲಿ ಒಂದು ವರ್ಷದಲ್ಲಿ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮೂಲಕ ಮಾಸ್ಟರ್ ಪ್ಲಾನ್ ರೂಪಿಸಲು ಜಿಬಿಎ ನಿರ್ಧರಿಸಿದೆ. ಇದಕ್ಕಾಗಿ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಾಸ್ಟರ್ ಪ್ಲಾನ್ – 2041 (ಆರ್‌ಎಂಪಿ–2041) ಸಿದ್ಧಪಡಿಸಲು 2025ರ ಆಗಸ್ಟ್‌ನಲ್ಲಿ ಜಾಗತಿಕ ಟೆಂಡರ್ ಕರೆದಿತ್ತು. ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಅಸ್ತಿತ್ವ ಕಳೆದು ಕೊಂಡು ಜಿಬಿಎ ರಚನೆಯಾದ ಬಳಿಕ, ಅದಕ್ಕೆ ಸ್ಥಳೀಯ ಯೋಜನಾ ಪ್ರಾಧಿಕಾರದ ಮಾನ್ಯತೆ ನೀಡಿ, ಬಿಡಿಎ ಅಧಿಕಾರವನ್ನು ಹಸ್ತಾಂತರಿಸಲಾಗಿತ್ತು.

ಮೂರು ತಿಂಗಳಾದ ಮೇಲೆ ಜಿಬಿಎ ಮಾಸ್ಟರ್ ಪ್ಲಾನ್ ತಯಾರಿಸುವ ಯೋಜನೆಗೆ ಚಾಲನೆ ನೀಡಿದೆ. ವಸತಿ, ವಾಣಿಜ್ಯ, ಕೈಗಾರಿಕೆ, ಕೃಷಿ, ಮನರಂಜನೆ, ಶಿಕ್ಷಣ ಹಾಗೂ ಇತರೆ ಅಗತ್ಯಗಳಿಗೆ ವಲಯ ನಿಯಮಗಳೊಂದಿಗೆ ಜಮೀನನ್ನು ನಿಗದಿಪಡಿಸುವ ಪ್ರಮುಖ ಉದ್ದೇಶವನ್ನು ಮಾಸ್ಟರ್ ಪ್ಲಾನ್ ಹೊಂದಿದೆ.

ಜನರಿಗೆ ಅಗತ್ಯವಿರುವ ಸಂಪೂರ್ಣ ರಸ್ತೆ ಮಾದರಿ, ಪ್ರಮುಖ ಹಾಗೂ ಮುಖ್ಯ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ವಾಹನ ಸಂಚಾರದ ರಚನೆ, ಪಾದಚಾರಿಗಳಿಗೆ ಅತ್ಯಧಿಕ ಗುಣಮಟ್ಟದ ಸೌಲಭ್ಯ, ಸಾರ್ವಜನಿಕ ಸಾರಿಗೆಗೆ ಮೂಲಸೌಕರ್ಯ ಸೇರಿದಂತೆ ಸಂಚಾರಯುಕ್ತ ನಗರವನ್ನಾಗಿಸುವ ಯೋಜನೆ ಇರಬೇಕು.

ಉದ್ಯಾನ, ಮೈದಾನ, ಸಾರ್ವಜನಿಕ ಬಳಕೆಯ ತೆರೆದ ಪ್ರದೇಶ, ಸಾರ್ವಜನಿಕ ಕಟ್ಟಡಗಳು ಹಾಗೂ ಹೊಸ ಕಟ್ಟಡಗಳ ಅಭಿವೃದ್ಧಿಯ ಕೇಂದ್ರೀಕೃತವಾಗಿರಲಿದೆ 'ಮಾಸ್ಟರ್ ಪ್ಲಾನ್'. ಕೇಂದ್ರ, ರಾಜ್ಯ ಸರ್ಕಾರ ಬಳಸುವ ಜಮೀನುಗಳನ್ನು ಮೀಸಲಾಗಿರಿಸುವುದು, ಕೆಲವು ಪ್ರದೇಶಗಳಲ್ಲಿ ಅಭಿವೃದ್ಧಿಯನ್ನು ನಿಯಂತ್ರಿಸುವುದು, ಕಟ್ಟಡಗಳ ಎತ್ತರವನ್ನು ನಿರ್ಬಂಧಿಸುವುದು ಸೇರಿದಂತೆ ಪಾರಂಪರಿಕ ಪ್ರದೇಶ, ಕಟ್ಟಡಗಳನ್ನು 'ಮಾಸ್ಟರ್ ಪ್ಲಾನ್'ನಲ್ಲಿ ಗುರುತಿಸಲು ಯೋಜಿಸಲಾಗಿದೆ ಎಂದು ಜಿಬಿಎ ನಗರ ಯೋಜನೆ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

540.66 ಚದರ ಕಿಮೀ ಜಿಬಿಎಗೆ?

ಗ್ರೇಟರ್ ಬೆಂಗಳೂರು ಪ್ರದೇಶದ ಸುತ್ತಮುತ್ತ 540.66 ಚದರ ಕಿಲೋ ಮೀಟರ್‌ನಲ್ಲಿ ಹಲವು ಸ್ಥಳೀಯ ಯೋಜನಾ ಪ್ರಾಧಿಕಾರಗಳಿದ್ದು, ಇವುಗಳು ಮುಂದಿನ ದಿನದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಸೇರಿಕೊಳ್ಳಲಿವೆ.

ಚುನಾಯಿತ ಪ್ರತಿನಿಧಿಗಳಿರುವ ಸ್ಥಳೀಯ ಸಂಸ್ಥೆಗಳ ಅವಧಿ ಮುಕ್ತಾಯದ ಹಂತದಲ್ಲಿದ್ದು, ಅದಾದ ನಂತರ ಆಡಳಿತಾಧಿಕಾರಿಯನ್ನು ನೇಮಿಸಿ ಜಿಬಿಎಗೆ ಸೇರಿಸಿಕೊಳ್ಳಲಾಗುತ್ತದೆ ಎನ್ನಲಾಗಿದೆ.

ಮಾದನಾಯಕನಹಳ್ಳಿ ನಗರಸಭೆ, ಹೆಬ್ಬಗೋಡಿ ನಗರಸಭೆ, ಹುಣಸಮಾರನಹಳ್ಳಿ ಪಟ್ಟಣ ಪಂಚಾಯಿತಿ, ಚಿಕ್ಕಬಾಣಾವರ ಪಟ್ಟಣ ಪಂಚಾಯಿತಿ, ಕೋನಪ್ಪನ ಅಗ್ರಹಾರ ಪಟ್ಟಣ ಪಂಚಾಯಿತಿ, ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಮತ್ತು ಎಲೆಕ್ಟ್ರಾನಿಕ್ ಸಿಟಿ ಕೈಗಾರಿಕೆ ಟೌನ್‌ಶಿಪ್ ಪ್ರಾಧಿಕಾರ (ಇಎಲ್‌ಸಿಐಟಿಎ) ಸೇರಿ ಒಟ್ಟಾರೆ 540.66 ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿವೆ. ಇವುಗಳು ಮುಂದಿನ ದಿನಗಳಲ್ಲಿ ಜಿಬಿಎ ವ್ಯಾಪ್ತಿಗೆ ಸೇರಿಕೊಂಡರೆ ಒಟ್ಟಾರೆ ಪ್ರದೇಶ 1,200 ಚದರ ಕಿ.ಮೀ ಮೀರಲಿದೆ.

1,227.48 ಚದರ ಕಿ.ಮೀ
ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರದೇಶ

686.82 ಚದರ ಕಿ.ಮೀ
ಗ್ರೇಟರ್ ಬೆಂಗಳೂರು ಪ್ರದೇಶ ಸ್ಥಳೀಯ ಪ್ರದೇಶ

ಜಿಬಿಎ

ಅಂಕಿ ಅಂಶಗಳು

1970
ಬೆಂಗಳೂರು ನಗರ ಯೋಜನಾ ಪ್ರಾಧಿಕಾರದಿಂದ 'ಔಟ್‌ಲೈನ್ ಡೆವಲಪ್‌ಮೆಂಟ್ ಪ್ಲಾನ್' (ಒಡಿಪಿ)

1976
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ)

2007
ಬಿಡಿಎಯಿಂದ ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್‌ಎಂಪಿ– 2015)

2017
ಬಿಡಿಎಯಿಂದ ಕರಡು ಮಾಸ್ಟರ್ ಪ್ಲಾನ್–2031

ಕ್ರಿಸ್‌ಮಸ್ ಸಂಭ್ರಮ

ಶಿವಾಜಿನಗರದಲ್ಲಿರುವ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್ ನಲ್ಲಿ ಕ್ರಿಸ್‌ಮಸ್ ಹಬ್ಬದ ಸಂಭ್ರಮದಲ್ಲಿ ಜನರು

ಶಿವಾಜಿನಗರದಲ್ಲಿರುವ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್ ನಲ್ಲಿ ಕ್ರಿಸ್‌ಮಸ್ ಹಬ್ಬದ ಸಂಭ್ರಮದಲ್ಲಿ ಜನರು
ಚಿತ್ರಗಳು: ರಂಜು

'ಪ್ರಜಾವಾಣಿ'ಯ ನಾಲ್ವರಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ

ಮರಿಯಪ್ಪ ಮಂಜುನಾಥ್ ಮಂಜುಶ್ರೀ ಶ್ರೀನಾಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪ್ರೆಸ್‌ಕ್ಲಬ್ ನೀಡುವ 'ವಾರ್ಷಿಕ ಪ್ರಶಸ್ತಿ'ಗೆ 'ಪ್ರಜಾವಾಣಿ'ಯ ನಾಲ್ವರು ಸೇರಿ 55 ಮಂದಿ ಆಯ್ಕೆಯಾಗಿದ್ದಾರೆ.

'ಪ್ರಜಾವಾಣಿ'ಯ ಕೆ.ಜೆ. ಮರಿಯಪ್ಪ, ಆರ್. ಮಂಜುನಾಥ್, ಶ್ರೀನಾಥ ಬಿ.ವಿ. ಹಾಗೂ ಮಂಜುಶ್ರೀ ಎಂ. ಕಡಕೋಳ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದೇ 31ರಂದು ಪ್ರೆಸ್‌ಕ್ಲಬ್ ಆವರಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್ ತಿಳಿಸಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದವರು: ಪ್ರಭುದೇವ ಶಾಸ್ತ್ರಿಮಠ, ಗುರುಮೂರ್ತಿ ಎಂ.ಎನ್., ರಮೇಶ್ ಕುಮಾರ್ ನಾಯಕ್, ರಂಗನಾಥ್ ಮರಕಿಣಿ, ನಂಜುಂಡೇಗೌಡ ಎಚ್.ಜೆ., ಆನಂದ್ ಪಿ. ಬೈದನಮನೆ, ನಂಜುಂಡಪ್ಪ ವಿ., ನವೀನ್ ಅಮ್ಮೆಂಬಳ, ಅರವಿಂದ್ ಎಸ್., ರಾಮಚಂದ್ರ ಬಿ.ಎಸ್., ಮಲ್ಲಿಕ್‌ಚರಣ್ ವಾಡಿ ಕೆ., ಮೃತ್ಯುಂಜಯ ಎನ್.ಎಚ್., ಲೋಚನೇಶ್ ಹೂಗಾರ್

ಮುರಳಿಕುಮಾರ್ ಕೆ., ಸುಭಾಶ್‌ಚಂದ್ರ ಎನ್.ಎಸ್., ಶ್ರೀನಿವಾಸಮೂರ್ತಿ ಟಿ.ಸಿ., ವಾಸು ಮೂರ್ತಿ ಸಿ., ಸಂತೋಷ್‌ಕುಮಾರ್ ಆರ್.ಬಿ., ವೆಂಕಟೇಶ್ ಎಂ. ರಾವ್, ಕೀರ್ತಿ ಪ್ರಸಾದ್ ಎಂ., ಝುಕ್ರಿಯಾ ಕೆ.ಎಂ., ಅನಿಲ್ ಕುಮಾರ್ ರಾಜೇ ಅರಸ್ ಎ.ಸಿ., ಅಂತೋನಿ ಎ. ಮೇರಿ, ಅತ್ತಿಗುಪ್ಪೆ ರವಿಕುಮಾರ್, ಮಧುಕೇಶ್ವರ್ ಜವಳಿ, ಮಾರುತಿ ಎಚ್., ಮುನಿರಾಮೇಗೌಡ (ರವಿ), ಬಸವರಾಜ್ ಬಿ., ಶಿವರುದ್ರಪ್ಪ ಡಿ.ಎಸ್.,ನಾಗರಾಜ ಎಂ. (ಗಡೇಕಲ್),ವಿಶ್ವನಾಥ್ ಬಿ.ಆರ್.

ಶಿಲ್ಪಾ ಪಡ್ನಿಸ್, ಸೋಮಶೇಖರ್ ಪಡುಕರೆ, ಅಕ್ಷಯ ಎ., ಸಿದ್ದೇಶ್ ಟಿ.ಎನ್., ಅನಿತಾ ಇ., ಪ್ರವೀಣ್ ಪಿ., ಸನತ್‌ಕುಮಾರ್ ರೈ.ಬಿ., ಸುನಿಲ್ ಕುಮಾರ್ ಆರ್., ಮಧು ಡಿ.ಎಲ್., ರಾಕೇಶ್ ಎಂ.ಆರ್., ಅನುಷಾ ರವಿ, ಬನ್ನಿ ಕಾಳಪ್ಪ, ಹರೀಶ್ ಜಿ., ಜೈಪಾಲ್ ಶರ್ಮ, ಕಿರಣ್ ಕುಮಾರ್ ಸ್ವಾಮಿ ಬಿ.ಎಸ್., ಮೋಹನ್‌ಕುಮಾರ್ ಕೆ.ಪಿ., ನಾಗಾರ್ಜುನ, ಪದ್ಮ ನಾಗರಾಜು ಜಿ.ವೈ., ತಿರುಮಲೇಶ್ ದೇಸಾಯಿ, ಅಮ್ಮದ್ ಖಾನ್ ಎಂ.

ಕಜೆ ಆಯುರ್ವೇದಿಕ್ ಚಾರಿಟೆಬಲ್ ಫೌಂಡೇಷನ್ ಆಯೋಜನೆ

ಇಂದಿನಿಂದ 'ಆಯುರ್ವೇದ ವಿಶ್ವ ಸಮ್ಮೇಳನ'

ಪ್ರಜಾವಾಣಿ ವಾರ್ತೆ

ಸಮ್ಮೇಳನದ ಆಯೋಜಕರಾದ ಡಾ.ಗಿರಿಧರ ಕಜೆ, ಡಾ. ಅಶೋಕ್, ಅಜಿತ್ ಹಾಗೂ ಅಭಿಷೇಕ್ ಅವರು ಕರಪತ್ರವನ್ನು ಬಿಡುಗಡೆ ಮಾಡಿದರು

ಬೆಂಗಳೂರು: ಕಜೆ ಆಯುರ್ವೇದಿಕ್ ಚಾರಿಟೆಬಲ್ ಫೌಂಡೇಷನ್ ಇದೇ 25ರಿಂದ 28ರವರೆಗೆ ಅರಮನೆ ಮೈದಾನದ (ಗೇಟ್ ಸಂಖ್ಯೆ 6) ರಾಯಲ್ ಸೆನೆಟ್ ಆ್ಯಂಡ್ ದಿ ಗ್ರ್ಯಾಂಡ್ ಕ್ಯಾಸಲ್‌ನಲ್ಲಿ ದ್ವಿತೀಯ ಆಯುರ್ವೇದ ವಿಶ್ವ ಸಮ್ಮೇಳನ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್‌ನ ಸಂಸ್ಥಾಪಕ ಡಾ.ಗಿರಿಧರ ಕಜೆ, 'ಆಯುಷ್ ಸಚಿವಾಲಯದ ಸಹಯೋಗದಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ. ನಾಲ್ಕು ದಿನಗಳ ಈ ಸಮ್ಮೇಳನ ಪ್ರತಿನಿತ್ಯ ಬೆಳಿಗ್ಗೆ 9ರಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿದೆ. ಆಯುರ್ವೇದದ ವೈಶಿಷ್ಟ್ಯ ಅನಾವರಣ ಮಾಡುವುದು ಈ ಸಮ್ಮೇಳನದ ಉದ್ದೇಶ. ಜಗತ್ತಿನ ವಿವಿಧೆಡೆಯಿಂದ ಆರು ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದು, 400 ಸಾಧಕರಿಗೆ ಸನ್ಮಾನ ಮಾಡಲಾಗುತ್ತದೆ. ಆಯುರ್ವೇದ ಚಿಕಿತ್ಸಾ ಪ್ರಾತ್ಯಕ್ಷಿಕೆ, ಸಂಶೋಧನಾ ಪ್ರಬಂಧಗಳ ಮಂಡನೆ, ಆಯುರ್ವೇದ ವಸ್ತು ಪ್ರದರ್ಶನ, ಪಾಕೋತ್ಸವ ಸೇರಿ ಹಲವು ವಿಶೇಷತೆಯನ್ನು ಒಳಗೊಂಡಿದೆ' ಎಂದು ತಿಳಿಸಿದರು.

'25ರಂದು ಬೆಳಿಗ್ಗೆ 9 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ತರಳಬಾಳು ಜಗದ್ಗುರು ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ, ಬಿಹಾರದ ಸ್ವಾಮಿ ವೆಂಕಟೇಶ ಪ್ರಪನ್ನಾಚಾರ್ಯ, ಸ್ವಾಮಿ ವಚನಾನಂದ ಗುರೂಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಮೊದಲಾದವರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

'ಕರಕುಶಲ ಹಾಗೂ ಗೃಹೋದ್ಯಮ ಉತ್ಪನ್ನಗಳ ಪ್ರದರ್ಶನವೂ ಇರಲಿದೆ. 200 ಸ್ವದೇಶಿ ಮಳಿಗೆಗಳನ್ನು ಸ್ಥಾಪಿಸಲಾಗುತ್ತದೆ. ಸಮ್ಮೇಳನದಲ್ಲಿ ಔಷಧೀಯ ಸಸ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಾರ್ವಜನಿಕರಿಗೆ ಪ್ರವೇಶ ಉಚಿತ' ಎಂದರು.

ನಾಡಿನ ಸಮಸ್ತ ಜನತೆಗೆ
ಘಾಟಿ ಸುಬ್ರಹ್ಮಣ್ಯ ಷಷ್ಠಿ (ಪುಷ್ಯ ಷಷ್ಠಿ)
ಜಾತ್ರೆಯ ಶುಭಾಶಯಗಳು
ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ 14 ಬಿಜೆಪಿ ಹಾಗೂ 1 ಜೆಡಿಎಸ್ ಸದಸ್ಯರು
ಮತ್ತು ದೊಡ್ಡಬಳ್ಳಾಪುರ ನಗರಸಭೆಯ ಉಪಚುನಾವಣೆಯಲ್ಲಿ ಬಿಜೆಪಿ ಸದಸ್ಯರನ್ನು ಆಯ್ಕೆಮಾಡಿದ
ದೊಡ್ಡಬಳ್ಳಾಪುರ ತಾಲ್ಲೂಕಿನ ಮತದಾರರಿಗೆ ಧನ್ಯವಾದಗಳು
ಜಯಶಾಲಿಯಾದ ಎಲ್ಲಾ
ಬಿಜೆಪಿ ಅಭ್ಯರ್ಥಿಗಳಿಗೆ
ಅಭಿನಂದನೆಗಳು
ಧೀರಜ್ ಮುನಿರಾಜ್
ಶಾಸಕರು - ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ
ಅಧ್ಯಕ್ಷರು - ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ, ಕರ್ನಾಟಕ

ಚಿಟಿಕೆ ಸುದ್ದಿ

ದೇವಾಂಗ ಸಂಘದ ಶತಮಾನೋತ್ಸವ ಜ.4ಕ್ಕೆ

ಬೆಂಗಳೂರು: ದೇವಾಂಗ ಸಂಘದ ಶತಮಾನೋತ್ಸವ ಸಮಾರಂಭವನ್ನು ಜನವರಿ 4ರಂದು ಅರಮನೆ ಮೈದಾನದ ಗಾಯಿತ್ರಿ ವಿಹಾರದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಜಿ. ರಮೇಶ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಪ್ರಲ್ಹಾದ ಜೋಶಿ, ಗಿರಿರಾಜ್ ಸಿಂಗ್, ಎಚ್.ಡಿ. ಕುಮಾರಸ್ವಾಮಿ, ಸಂಸದ ತೇಜಸ್ವಿ ಸೂರ್ಯ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಪೆರೋಲ್ ಕಾರಣ ಬದಲು: ಅರ್ಜಿ ವಜಾ

ಬೆಂಗಳೂರು: 'ಮೊದಲಿಗೆ ಮನೆಯ ದುರಸ್ತಿ ನೆಪ ಹೇಳಿದ್ದ ಸಜಾಬಂದಿ ಈಗ ಅಮ್ಮನ ಆರೋಗ್ಯ ಸರಿ ಇಲ್ಲ ಎಂಬ ಹೊಸ ರಾಗ ಹಾಡುವ ಮೂಲಕ ಪೆರೋಲ್ ಮಂಜೂರಾತಿಗೆ ನಿರ್ದೇಶನ ನೀಡಬೇಕೆಂದು ಕೇಳಿರುವುದು ಅನುಮಾನ ಹುಟ್ಟು ಹಾಕುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿರುವ ಹೈಕೋರ್ಟ್, ಕೊಲೆ ಯತ್ನದ ಆರೋಪಿಯ ಪೆರೋಲ್ ಮನವಿ ತಿರಸ್ಕರಿಸಿದೆ.

ಈ ಸಂಬಂಧ ಶಿಕ್ಷೆಗೆ ಒಳಗಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ತುಮಕೂರಿನ ಹೊಸಕೆರೆ ಗ್ರಾಮದ ಎಚ್.ಬಿ.ಹರೀಶ್ ಪತ್ನಿ ಪುಟ್ಟಮ್ಮ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮನೆ ದುರಸ್ತಿ ಮಾಡಿಸಬೇಕಿದೆ. ಪತ್ನಿ ಒಬ್ಬಳಿಂದಲೇ ಈ ಕೆಲಸ ಸಾಧ್ಯವಿಲ್ಲ. ಹಾಗಾಗಿ, 90 ದಿನಗಳ ಪೆರೋಲ್ ಮಂಜೂರು ಮಾಡಬೇಕು ಎಂದು ಕೋರಿದ್ದ ಹರೀಶ್, 2025ರ ನ. 10ರಂದು ಮೆಮೊ ಸಲ್ಲಿಸಿ, ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ತಾಯಿಯ ಆರೈಕೆಗೆ ಪೆರೋಲ್ ಮಂಜೂರು ಮಾಡುವಂತೆ ಕೋರಿದ್ದಾರೆ. ಪೆರೋಲ್ ಕಾರಣಗಳನ್ನು ಬದಲಿಸಿರುವ ಅರ್ಜಿದಾರರ ಮನವಿ ವಿಶ್ವಾಸಾರ್ಹವಾಗಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿ ತಿರಸ್ಕರಿಸಿ ಆದೇಶಿಸಿದೆ.

ಕೊಲೆಯತ್ನ ಪ್ರಕರಣದಲ್ಲಿ ಹರೀಶ್‌ಗೆ ತುಮಕೂರು 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2012ರ ಆಗಸ್ಟ್ 16ರಂದು ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಈ ಆದೇಶವನ್ನು ಹೈಕೋರ್ಟ್ 2024ರ ಜನವರಿ 22ರಂದು ಎತ್ತಿಹಿಡಿದಿದೆ.

ಪ್ರಿಯತಮೆ ತಾಯಿಗೆ ಬೆಂಕಿಹಚ್ಚಿದ ಪ್ರೇಮಿ

ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ್ದ ಗೀತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ ಯುವತಿಯ ತಾಯಿಯ ಮೇಲೆ ಯುವಕನೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿರುವ ಘಟನೆ ಸಾಣೆಗುರುವನಹಳ್ಳಿಯಲ್ಲಿ ನಡೆದಿದೆ.

ತೀವ್ರ ಸುಟ್ಟ ಗಾಯಗಳಿಂದ ಅಸ್ವಸ್ಥಗೊಂಡಿರುವ ಗೀತಾ (40) ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಪಿ ಮುತ್ತು ತಲೆ ಮರೆಸಿಕೊಂಡಿರುವುದಾಗಿ ಬಸವೇಶ್ವರನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡಿನ ಗೀತಾ, ಮಗಳ ಜತೆ ಸಾಣೆಗುರುವನಹಳ್ಳಿಯಲ್ಲಿ ವಾಸವಿದ್ದು, ಮನೆಯ ಸಮೀಪವೇ ಪ್ರಾವಿಷನ್ ಸ್ಟೋರ್ ಇಟ್ಟುಕೊಂಡಿದ್ದರೆ, ಆರೋಪಿ ಟೀ ಅಂಗಡಿ ಇಟ್ಟುಕೊಂಡಿದ್ದ. ಮಗಳು ಹಾಗೂ ಮುತ್ತುವಿನ ಪ್ರೀತಿಯ ವಿಚಾರ ತಿಳಿದಿದ್ದ ಅವರು, ಮಗಳನ್ನು ಆತನಿಗೆ ಕೊಟ್ಟು ಮದುವೆ ಮಾಡಲು ಮಾತುಕತೆ ನಡೆಸಿದ್ದರು ಎಂದು ಹೇಳಿದ್ದಾರೆ.

ಆರು ತಿಂಗಳಿನಿಂದ ಗೀತಾ ಅವರ ಮನೆಯಲ್ಲೇ ಆರೋಪಿ ವಾಸವಾಗಿದ್ದ. ಮದ್ಯವ್ಯಸನಿಯಾಗಿದ್ದ ಕಾರಣ ಆತನ ಜತೆ ಮಗಳ ಮದುವೆ ಮಾಡದಿರಲು ಇತ್ತೀಚೆಗೆ ಅವರು ನಿರ್ಧರಿಸಿದ್ದರು. ಈ ಕಾರಣಕ್ಕೆ ಕೋಪಗೊಂಡಿದ್ದ ಮುತ್ತು, ಗೀತಾ ಅವರೊಂದಿಗೆ ಆಗಾಗ್ಗೆ ಜಗಳವಾಡುತ್ತಿದ್ದ. ಸೋಮವಾರ ರಾತ್ರಿ ಸಹ ಜಗಳವಾಡಿದ್ದ. ಬಳಿಕ ಗೀತಾ ಅವರು ನಿದ್ದೆಗೆ ಜಾರಿದಾಗ ಆರೋಪಿ ಅವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಘಟನೆ ವೇಳೆ ಮನೆಯಲ್ಲೇ ಇದ್ದ ಗೀತಾ ಅವರ ಮಗಳು ನೆರೆಹೊರೆಯವರ ಸಹಾಯದಿಂದ ಬೆಂಕಿ ನಂದಿಸಿ, ತಾಯಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಶೇಕಡ 50ರಷ್ಟು ಸುಟ್ಟ ಗಾಯಗಳಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಆರೋಪಿ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿದ್ದು, ಆತನ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಹೇಳಿದ್ದಾರೆ.

ಪ್ರೀತಿಸುವಂತೆ ಪೀಡಿಸಿ, ಯುವತಿಗೆ ಹಲ್ಲೆ

ನವೀನ್ ಕುಮಾರ್

ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾದ ಯುವತಿಗೆ ಪ್ರೀತಿಸುವಂತೆ ಪೀಡಿಸಿ, ರಸ್ತೆಯಲ್ಲೇ ಆಕೆ ಮೇಲೆ ಹಲ್ಲೆ ಮಾಡಿ ಕಿರುಕುಳ ನೀಡಿರುವ ಘಟನೆ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

21 ವರ್ಷದ ಯುವತಿ ನೀಡಿದ ದೂರು ಆಧರಿಸಿ, ಯಲಹಂಕ ತಾಲ್ಲೂಕಿನ ಬಿಲ್ಲಮಾರನಹಳ್ಳಿಯ ನವೀನ್ ಕುಮಾರ್ (29) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸಂತ್ರಸ್ತ ಯುವತಿಯು ಉಲ್ಲಾಳ ಮುಖ್ಯರಸ್ತೆಯ ಜ್ಞಾನಜ್ಯೋತಿನಗರದ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಾಗಿದ್ದು, ನಾಗರಬಾವಿಯ ಡೆವಲಪರ್ಸ್ ಕಂಪನಿಯಲ್ಲಿ ಟೆಲಿ ಕಾಲರ್ ಆಗಿ ಕೆಲಸ ಮಾಡುತ್ತಾರೆ. ಆರೋಪಿ, 2024ರ ಸೆಪ್ಟೆಂಬರ್‌ನಲ್ಲಿ ಇನ್‌ಸ್ಟಾಗ್ರಾಂ ಮೂಲಕ ಯುವತಿಯ ಪರಿಚಯ ಮಾಡಿಕೊಂಡು, ಆಗಾಗ್ಗೆ ಭೇಟಿಯಾಗುತ್ತಿದ್ದ. ಅಲ್ಲದೆ, ಆಕೆಗೆ ಕರೆ ಮಾಡಿ ಮಾತನಾಡುವುದು ಮತ್ತು ವಾಟ್ಸ್ ಆ್ಯಪ್ ಸಂದೇಶ ಕಳುಹಿಸುವುದು ಮಾಡುತ್ತಿದ್ದ. ಪಿಯುಸಿ ಓದಿರುವ ಈತ ನಿರುದ್ಯೋಗಿ' ಎಂದು ಪೊಲೀಸರು ಹೇಳಿದ್ದಾರೆ.

'ಮೂರು ತಿಂಗಳ ಹಿಂದೆ ಪ್ರೇಮ ನಿವೇದನೆ ಮಾಡಿದ್ದ. ಆದರೆ, ಯುವತಿ ಪ್ರೀತಿಸಲು ನಿರಾಕರಿಸಿದ್ದರು. ಆದರೂ ಆಕೆಯ ಹಿಂದೆ ಬಿದ್ದು ಪ್ರೀತಿಸುವಂತೆ ಪೀಡಿಸುತ್ತಿದ್ದ. ಅಲ್ಲದೆ ಆಕೆಯನ್ನು ಹಿಂಬಾಲಿಸುತ್ತಾ ಅವಾಚ್ಯ ಪದಗಳಿಂದ ನಿಂದಿಸಿ, ಕಿರುಕುಳ ಕೊಡುತ್ತಿದ್ದ' ಎಂದು ತಿಳಿಸಿದ್ದಾರೆ.

ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆ: ಜ್ಞಾನಜ್ಯೋತಿ ನಗರದ ಪೇಯಿಂಗ್ ಗೆಸ್ಟ್ ಬಳಿ ಸೋಮವಾರ ಬಂದಿದ್ದ ನವೀನ್‌ಕುಮಾರ್, ಸ್ನೇಹಿತೆಯ ಜತೆ ಹೋಗುತ್ತಿದ್ದ ಯುವತಿಯ ಮೇಲೆ ಸಾರ್ವಜನಿಕವಾಗಿ ಹಲ್ಲೆ ನಡೆಸಿ, ಬಟ್ಟೆ ಹರಿಯಲು ಯತ್ನಿಸಿದ್ದ. ಸ್ನೇಹಿತೆಯ ಮುಂದೆಯೇ ಯುವತಿಯನ್ನು ಎಳೆದಾಡಿ ಅಸಭ್ಯವಾಗಿ ವರ್ತಿಸಿರುವ ದೃಶ್ಯ ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸಂತ್ರಸ್ತೆಯ ದೂರು ಆಧರಿಸಿ ಆರೋಪಿಯನ್ನು ಬಂಧಿಸಿ, ಕಾರು ಜಪ್ತಿ ಮಾಡಿದ್ದಾರೆ. ಲೈಂಗಿಕ ಕಿರುಕುಳ, ಮಹಿಳೆಯ ಗೌರವಕ್ಕೆ ಧಕ್ಕೆ, ಹಲ್ಲೆ, ಯುವತಿಯ ಇಚ್ಛೆಗೆ ವಿರುದ್ಧವಾಗಿ ಅವರನ್ನು ಸಂಪರ್ಕಿಸಲು ಯತ್ನಿಸಿದ ಹಾಗೂ ಸನ್ನೆಯ ಮೂಲಕ ಯುವತಿಯನ್ನು ಅವಮಾನಿಸಿದ ಆರೋಪದಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸುದ್ದಿ 2 ನಿಮಿಷ

ಅಶ್ಲೀಲ ಸಂದೇಶ: ದರ್ಶನ್ ಪತ್ನಿ ವಿಜಯಲಕ್ಷ್ಮೀ ದೂರು

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿಜಯಲಕ್ಷ್ಮಿ ನೀಡಿದ್ದ ದೂರು ಆಧರಿಸಿ, ಯೋಗಿ ಕಿಚ್ಚ, ಮಿ.ಅನಾಥ, ಮಹಿ ಕಿಚ್ಚ, ವಿರಾಟ್ ಕಿಚ್ಚ ಎಂಬ ಖಾತೆ ಸೇರಿ 18 ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಸಿಬಿ ಹೆಚ್ಚುವರಿ ಪೊಲೀಸ್ ಕಮಿಷನರ್ ಅಜಯ್ ಹಿಲೋರಿ ಅವರನ್ನು ಭೇಟಿಯಾಗಿ ವಿಜಯಲಕ್ಷ್ಮಿ ಚರ್ಚಿಸಿದರು. ಬಳಿಕ ನಗರ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಅಲ್ಲದೆ, ಅವಹೇಳನಕಾರಿ ಸಂದೇಶಗಳ ಸ್ಕ್ರೀನ್ ಶಾಟ್‌ಗಳ ಸಮೇತ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಕ್ರೈಂ ವಿಭಾಗದ ಪೊಲೀಸರು ಮಾಹಿತಿ ನೀಡಿದರು.

ದೂರಿನಲ್ಲೇನಿದೆ? : 'ದಾವಣಗೆರೆಯಲ್ಲಿ ಆಯೋಜಿಸಲಾಗಿದ್ದ ಡೆವಿಲ್ ಸಿನಿಮಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ನಾನು ವೇದಿಕೆಯ ಮೇಲೆ ಪತಿ ದರ್ಶನ್ ಕುರಿತು ಮಾತನಾಡಿದ್ದೆ. ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ ಎಂದು ಅಭಿಮಾನಿಗಳಿಗೆ ಹೇಳಿದ್ದೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣದಲ್ಲಿ ನನ್ನ ಹಾಗೂ ನಮ್ಮ ಕುಟುಂಬದ ಕುರಿತು ಅಶ್ಲೀಲ ಸಂದೇಶ ಹಾಕುತ್ತಿದ್ದಾರೆ. ಅಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

ವಿಜಯಲಕ್ಷ್ಮೀ ಅವರ ಹಳೆಯ ಫೋಟೊಗಳನ್ನು ಬಳಸಿಕೊಂಡಿರುವ ಕಿಡಿಗೇಡಿಗಳು, ಈ ಘಟನೆ ನಡೆದಾಗ ಯಾರ ಮನೆ ಬಾಗಿಲಿಗೆ ಹೋಗಿದ್ದೆ? ಎಂದೆಲ್ಲ ಪೋಸ್ಟ್ ಮಾಡಿ, ಅದಕ್ಕೆ ಅಶ್ಲೀಲವಾಗಿ ಕಮೆಂಟ್ ಹಾಕಿದ್ದಾರೆ.

ಜೈಲಿನಿಂದ ಬಿಡುಗಡೆ: ಕಳ್ಳತನ

ಬೆಂಗಳೂರು: ಜೈಲಿನಿಂದ ಹೊರ ಬಂದ ಬಳಿಕ ಒಟ್ಟಾಗಿ ಮನೆ ಕಳ್ಳತನ ಮಾಡುತ್ತಿದ್ದ ಮೂವರನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ.

ತಿಲಕ್‌ನಗರದ ನಿವಾಸಿಗಳಾದ ಬಾಲರಾಜ್, ಗೌರವ್, ಪ್ರವೀಣ್ ಎಂಬುವರನ್ನು ಬಂಧಿಸಿ, 257 ಗ್ರಾಂ ಚಿನ್ನಾಭರಣ, ಮೊಬೈಲ್ ಸೇರಿ ₹31.27 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಬಾಲರಾಜ್ ಆರೋಪಿಯಾಗಿದ್ದು, ವಿವಿಧ ಠಾಣೆಗಳಲ್ಲಿ ಅವರ ವಿರುದ್ಧ 21 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದರು.

ಬಾಲರಾಜ್ ಜೈಲಿನಲ್ಲಿದ್ದ ವೇಳೆ ಗೌರವ್ ಹಾಗೂ ಪ್ರವೀಣ್ ಪರಿಚಯವಾಗಿದ್ದಾರೆ. ಜೈಲಿನಿಂದ ಬಿಡುಗಡೆಯಾದ ಬಳಿಕ ಒಟ್ಟಿಗೆ ಕಳ್ಳತನ ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ನವೆಂಬರ್ 17ರಂದು ಬೈರಸಂದ್ರ 1ನೇ ಕ್ರಾಸ್ ನಿವಾಸಿಯೊಬ್ಬರು ಮನೆಯ ಸಮೀಪದ ಸ್ನೇಹಿತನ ಮನೆಗೆ ಹೋಗಿದ್ದರು. ಆಗ ಮನೆಯ ಬೀಗ ಒಡೆದು ಚಿನ್ನಾಭರಣ ಕಳ್ಳತನ ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡ ಪೊಲೀಸರು, ಹಳೆ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ಈ ಪೈಕಿ ಆರೋಪಿಯೊಬ್ಬ ಕಳ್ಳತನ ಮಾಡಿರುವುದು ಗೊತ್ತಾಯಿತು. ವಿಶೇಷ ತಂಡ ಕಾರ್ಯಾಚರಣೆ ನಡೆಸಿ, ತಿಲಕ್ ನಗರದ ಬಿಟಿಪಿ ಪ್ರದೇಶದಲ್ಲಿ ಚಿನ್ನದ ನೆಕ್ಲೇಸ್ ಸಮೇತ ಆತನನ್ನು ವಶಕ್ಕೆ ಪಡೆಯಲಾಯಿತು ಎಂದು ತಿಳಿಸಿದರು.

ಗುಂಡು ಹಾರಿಸಿ ಪತ್ನಿ ಕೊಲೆ: ವಿಚ್ಛೇದನ ನೋಟಿಸ್ ಬಳಿಕ ಪತಿ ಆಕ್ರೋಶ

ಪಿಸ್ತೂಲ್ ವಶ: ಪರವಾನಗಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಭುವನೇಶ್ವರಿ

ಬೆಂಗಳೂರು: ಪಿಸ್ತೂಲ್‌ನಿಂದ ಪತ್ನಿ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಗಡಿ ರಸ್ತೆ ಠಾಣೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಘಟನೆ ಬಳಿಕ ಆರೋಪಿ ಬಾಲಮುರುಗನ್‌ನಿಂದ ಕೃತ್ಯಕ್ಕೆ ಬಳಸಿದ್ದ ಪಿಸ್ತೂಲ್ ವಶಪಡಿಸಿಕೊಂಡಿದ್ದು, ಅದು ಪರವಾನಗಿ ಹೊಂದಿರುವುದೇ ಇಲ್ಲವೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಅಕ್ರಮವಾಗಿ ಖರೀದಿಸಲಾಗಿದೆಯೇ? ಎಲ್ಲಿ ಖರೀದಿಸಲಾಗಿದೆ? ಯಾರಾದರೂ ತಂದು ಕೊಟ್ಟಿದ್ದಾರಾ? ಎಂಬ ಮಾಹಿತಿಗಳನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ.

ಮಂಗಳವಾರ ರಾತ್ರಿಯಿಂದಲೇ ಪೊಲೀಸರು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ, ಕೆಲ ಮಾಹಿತಿ ಪಡೆದುಕೊಂಡಿದ್ದಾರೆ.

'ಕೌಟುಂಬಿಕ ಕಲಹದ ಕಾರಣಕ್ಕೆ ಪತ್ನಿ ತನ್ನಿಂದ ದೂರವಾಗಿ, ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಳು. ವಿಚ್ಛೇದನ ಕೋರಿ ನ್ಯಾಯಾಲಯದಿಂದ ನೋಟಿಸ್ ಕಳುಹಿಸಿದ್ದ ಕಾರಣಕ್ಕೆ ಪತ್ನಿಯನ್ನು ಕೊಲೆ ಮಾಡಿದೆ ಎಂದು ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಿಗ್ಗೆ ಪೊಲೀಸರು ಸ್ಥಳ ಮಹಜರು ನಡೆಸಿದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬುಧವಾರ ಭುವನೇಶ್ವರಿ ಅವರ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬ ಸದಸ್ಯರಿಗೆ ಶವ ಹಸ್ತಾಂತರಿಸಲಾಯಿತು. ಕುಟುಂಬ ಸದಸ್ಯರು ಶವವನ್ನು ತಮಿಳುನಾಡಿನ ಸೇಲಂಗೆ ಕೊಂಡೊಯ್ದರು ಎಂದು ಮಾಹಿತಿ ನೀಡಿದ್ದಾರೆ.

ತಮಿಳುನಾಡಿನ ಬಾಲಮುರುಗನ್ ಹಾಗೂ ಭುವನೇಶ್ವರಿ 14 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ 12 ವರ್ಷದ ಮಗ ಹಾಗೂ 4 ವರ್ಷದ ಮಗಳಿದ್ದಾರೆ. ಭುವನೇಶ್ವರಿ ಅವರು ಬೇರೊಬ್ಬರ ಜತೆ ಸಂಬಂಧ ಹೊಂದಿದ್ದಾರೆ ಎಂದು ಆರೋಪಿ ಶಂಕಿಸುತ್ತಿದ್ದ. ಇದೇ ವಿಚಾರಕ್ಕೆ ದಂಪತಿ ನಡುವೆ ಕೌಟುಂಬಿಕ ಕಲಹ ನಡೆಯುತ್ತಿತ್ತು. ಇದರಿಂದ ಬೇಸತ್ತ ಪತ್ನಿ, ವಿಚ್ಛೇದನ ಪಡೆಯಲು ತೀರ್ಮಾನಿಸಿದ್ದರು. ಇದಕ್ಕೆ ಆತ ಒಪ್ಪಿರಲಿಲ್ಲ. ವಾರದ ಹಿಂದೆ ಪತ್ನಿಯಿಂದ ವಿಚ್ಛೇದನ ನೋಟಿಸ್ ಪಡೆದ ಆರೋಪಿ, ಕೊಲೆ ಸಂಚು ರೂಪಿಸಿರುವ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಸವೇಶ್ವರ ನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಭುವನೇಶ್ವರಿ ಸಹಾಯಕ ವ್ಯವಸ್ಥಾಪಕರಾಗಿದ್ದರು. ಬಾಲಮುರುಗನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ವೈಟ್‌ಫೀಲ್ಡ್‌ನಲ್ಲಿ ಕಂಪನಿಯೊಂದರಲ್ಲಿ ಉದ್ಯೋಗಿ ಆಗಿದ್ದರು. ಕೆಲ ತಿಂಗಳಿನಿಂದ ಪತ್ನಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದರು. ಆರೋಪಿಗೆ ಪತ್ನಿ, ಮಕ್ಕಳು ಎಲ್ಲಿದ್ದಾರೆ ಎಂಬ ಮಾಹಿತಿಯೇ ಇರಲಿಲ್ಲ.

ಮಂಗಳವಾರ ಸಂಜೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದ ಭುವನೇಶ್ವರಿಯತ್ತ ಪಿಸ್ತೂಲ್‌ನಿಂದ 5 ಸುತ್ತು ಗುಂಡು ಹಾರಿಸಿದ್ದ. ಈ ಪೈಕಿ 3 ಗುಂಡುಗಳು ತಲೆಗೆ ಹೊಕ್ಕಿದ್ದವು. ಕೈ ಮತ್ತು ಬೆನ್ನಿಗೆ ತಲಾ ಒಂದು ಗುಂಡು ಹೊಕ್ಕಿದ್ದವು. ಗುಂಡಿನ ದಾಳಿ ಕಂಡ ಸ್ಥಳೀಯರು ತಕ್ಷಣ ಸಹಾಯಕ್ಕೆ ಧಾವಿಸಿ ಸಮೀಪದ ಆಸ್ಪತ್ರೆಗೆ ಕೊಂಡೊಯ್ದರೂ ಮಾರ್ಗಮಧ್ಯೆ ಮೃತಪಟ್ಟಿದ್ದರು.

'ಬಾಲಮುರುಗನ್ ಕೆಲಸ ಬಿಟ್ಟಿದ್ದರಿಂದ ತಂಗಿಯೇ ದುಡಿದು ಸಂಸಾರ ನಿಭಾಯಿಸುತ್ತಿದ್ದಳು. ಆಕೆ ಮಕ್ಕಳ ಜೊತೆ ಮಾತನಾಡಿದರೂ ಜಗಳ ಮಾಡುತ್ತಿದ್ದ. ಈ ಹಿಂದೆ ಚಾಕುವಿನಿಂದ ಇರಿಯಲು ಯತ್ನಿಸಿದ್ದ. ವಿಚ್ಛೇದನ ನೋಟಿಸ್ ನೀಡಿದ್ದಕ್ಕೆ ಆಕ್ರೋಶಗೊಂಡು, ಈ ಕೃತ್ಯ ಎಸಗಿದ್ದಾನೆ. ಇಬ್ಬರು ಮಕ್ಕಳು ಅನಾಥರಾಗಿದ್ದಾರೆ, ನ್ಯಾಯ ಬೇಕು' ಎಂದು ಮೃತ ಭುವನೇಶ್ವರಿ ಸಹೋದರ ಪ್ರಕಾಶ್ ಕಣ್ಣೀರಿಟ್ಟರು.

15 ದಿನ ಕಸ್ಟಡಿಗೆ

ಪತ್ನಿಯನ್ನು ಕೊಲೆ ಮಾಡಿದ ಬಳಿಕ ಠಾಣೆಗೆ ಬಂದು ಶರಣಾಗಿದ್ದ ಬಾಲಮುರುಗನ್‌ನನ್ನು ಪೊಲೀಸರು ಬಂಧಿಸಿ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ್ದರು.

ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ತನಿಖೆಗಾಗಿ 15 ದಿನ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜಲಮಂಡಳಿ ಫೋನ್ ಇನ್ ನಾಳೆ

ಜಲಮಂಡಳಿ ಸುದ್ದಿ

ಬೆಂಗಳೂರು: ಜಲಮಂಡಳಿಯು ಶುಕ್ರವಾರ (ಡಿ.26) ಬೆಳಿಗ್ಗೆ 09.30 ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮವನ್ನು ಮಂಡಳಿಯ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಆಯೋಜಿಸಿದೆ.

ಸಾರ್ವಜನಿಕರು ತಮ್ಮ ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; 080-22945119 ಮತ್ತು 080-22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರು ನೀಡಲು ಕೋರಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವು (ಯುವಿಸಿಇ) 2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ವಿವಿಧ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ.

ಅರ್ಹ ಅಭ್ಯರ್ಥಿಗಳು www.uvce.karnataka.gov.in ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆ ಪಡೆದು ಡಿ. 29ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಜೈಲಿನಲ್ಲಿ ಮೊಬೈಲ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಮಂಗಳವಾರ ನಡೆದ ತಪಾಸಣೆ ವೇಳೆ ನಾಲ್ಕು ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್, ಚಾರ್ಜರ್, ಇಯರ್ ಬಡ್ಸ್ ಮತ್ತು ಇಯರ್ ಫೋನ್ ಪತ್ತೆಯಾಗಿವೆ ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ತಿಳಿಸಿದ್ದಾರೆ.

'ಕಾರಾಗೃಹ ಸುಧಾರಣಾ ಸಂಕಲ್ಪ ಅಭಿಯಾನ' ಅಡಿ ಸಹಾಯಕ ಜೈಲರ್ ಎಸ್.ಜೆ.ಜಕಾತಿ, ಅಧೀಕ್ಷಕ ಎಚ್.ಎ.ಪರಮೇಶ್ ಹಾಗೂ ಸಹಾಯಕ ಅಧೀಕ್ಷಕ ಕರ್ಣ ಬಿ. ಕ್ಷತ್ರಿ ನೇತೃತ್ವದ ತಂಡಗಳು ತಪಾಸಣೆ ಕೈಗೊಂಡಾಗ ಕೀ ಪ್ಯಾಡ್ ಮೊಬೈಲ್, ಆ್ಯಂಡ್ರಾಯ್ಡ್ ಮೊಬೈಲ್ ಸೇರಿ ಕೆಲ ನಿಷೇಧಿತ ವಸ್ತುಗಳು ಪತ್ತೆಯಾಗಿವೆ.

ನಿಷೇಧಿತ ವಸ್ತುಗಳನ್ನು ಸಾಗಿಸಿದವರು, ಇದಕ್ಕೆ ಸಹಕರಿಸಿದವರು ಮತ್ತು ವಸ್ತುಗಳನ್ನು ಬಳಕೆ ಮಾಡಿದವರ ವಿರುದ್ಧ ಕಾರಾಗೃಹ (ತಿದ್ದುಪಡಿ) ಕಾಯ್ದೆ 2022ರ ಕಲಂ 42ರ ಅನ್ವಯ ಪ್ರಕರಣ ದಾಖಲಿಸುವಂತೆ ದೂರು ನೀಡಿದ್ದು, ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ಅವರು ಉತ್ತಮ ತಪಾಸಣೆ ಕೈಗೊಂಡ ಸಿಬ್ಬಂದಿಗೆ ₹5 ಸಾವಿರ ನಗದು ಬಹುಮಾನ ಹಾಗೂ ಎಚ್.ಎ.ಪರಮೇಶ್ ಮತ್ತು ಕರ್ಣ ಬಿ. ಕ್ಷತ್ರಿ ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಿದ್ದಾರೆ.

ನವೆಂಬರ್ 11ರಿಂದ ಈವರೆಗೆ ಒಟ್ಟು 16 ಪ್ರಕರಣಗಳು ದಾಖಲಾಗಿವೆ. ನವೆಂಬರ್ 11ರಿಂದ ಡಿಸೆಂಬರ್ 23ರ ಅವಧಿಯಲ್ಲಿ ಒಟ್ಟು 109 ಮೊಬೈಲ್, 24 ಚಾರ್ಜರ್, 88 ಸಿಮ್, 18 ಇಯರ್ ಫೋನ್, ₹64,880 ನಗದು ಪತ್ತೆಯಾಗಿದೆ.

ಬಂದೋಬಸ್ತ್

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹಾಗೂ ಹಿರಿಯ ಅಧಿಕಾರಿಗಳು ಬ್ರಿಗೇಡ್ ರಸ್ತೆಯಲ್ಲಿ ಬುಧವಾರ ಸಂಚರಿಸಿ, ಹೊಸ ವರ್ಷಾಚರಣೆಯ ಬಂದೋಬಸ್ತ್‌ಗೆ ಮಾಡಿರುವ ಸಿದ್ಧತೆ ಕುರಿತು ಪರಿಶೀಲಿಸಿದರು

ನಿರೀಕ್ಷಣಾ ಜಾಮೀನು: ಶಾಸಕ ಬೈರತಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ಎರಡನೇ ಬಾರಿಗೆ ಅರ್ಜಿ ಸಲ್ಲಿಸಿದ್ದಾರೆ.

ಪ್ರಕರಣದಲ್ಲಿ ಬಂಧನದ ಭೀತಿ ಎದುರಿಸುತ್ತಿರುವ ಬೈರತಿ ಬಸವರಾಜ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಸೆಷನ್ಸ್ ನ್ಯಾಯಾಲಯ ಮಂಗಳವಾರವಷ್ಟೇ (ಡಿ.23) ತಿರಸ್ಕರಿಸಿತ್ತು. ಈಗ ಈ ಆದೇಶವನ್ನು ಪ್ರಶ್ನಿಸಿ ಬೈರತಿ ಬುಧವಾರ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ. ಇದು ಶುಕ್ರವಾರ (ಡಿ.26) ರಜಾಕಾಲದ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿದೆ.

ಅರ್ಜಿಯಲ್ಲಿ ಏನಿದೆ?: 'ನಾನು ಅಮಾಯಕನಾಗಿದ್ದು, ದೂರಿನಲ್ಲಿ ಆರೋಪಿಸಿರುವಂತೆ ಬಿಕ್ಲು ಶಿವು ಕೊಲೆಗೆ ಸಂಬಂಧಿಸಿದ ಯಾವುದೇ ಅಪರಾಧ ಕೃತ್ಯದಲ್ಲಿ ಭಾಗಿಯಾಗಿಲ್ಲ. ನನ್ನ ವಿರುದ್ಧದ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಅಸ್ಪಷ್ಟತೆಯಿಂದ ಕೂಡಿವೆ.ಕಸ್ಟೋಡಿಯಲ್ ವಿಚಾರಣೆಗೆ ನಾನು ಅಗತ್ಯ ಎಂದು ಪ್ರತಿಪಾದಿಸುವ ಅಪರಾಧ ಕೃತ್ಯಗಳನ್ನು ನಾನು ಎಸಗಿಲ್ಲ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ರಾಜಕೀಯ ದ್ವೇಷದಿಂದ ನನ್ನನ್ನು ಬಂಧಿಸಿ ಕಿರುಕುಳ ನೀಡಲು ಸಿಐಡಿ ಪೊಲೀಸರು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ. ನಿರೀಕ್ಷಣಾ ಜಾಮೀನು ನಿರಾಕರಿಸುವುದಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿರುವ ಕಾರಣಗಳು ದೋಷಪೂರಿತವಾಗಿವೆ. ಹಾಗಾಗಿ, ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಲಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-3 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/16/2025-26 ದಿನಾಂಕ : 24.12.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ-ಪಾವತಿ ರೂಪದಲ್ಲಿ ಪ್ರತಿ ಕೆಲಸದ ಐಟಂ (ಮರುಪಾವತಿಸಲಾಗದ) ಮುಂದೆ ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್ ಸೈಟ್ (https://kppp.karnataka.gov.in) ನಿಂದ ಟೆಂಡರ್ ದಾಖಲೆಗಳನ್ನು ಡೌನ್ ಲೋಡ್ ಮಾಡಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್‌ದಾರರು ಬಿಡ್ ಅನ್ನು ಸಲ್ಲಿಸಬೇಕು.

ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಇಎಂಡಿ (ಮೊತ್ತ ರೂ.ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
ಸುಬ್ಬರಾಯನಪಾಳ್ಯ / ಕನ್ನಹಳ್ಳಿಯ ಎಂಎಸ್‌ಡಬ್ಲ್ಯೂ ಸಂಸ್ಕರಣಾ ಘಟಕದಿಂದ ಸಿಮೆಂಟ್ ಕೈಗಾರಿಕೆಗಳಿಗೆ ಎಲ್‌ವಿಪಿ / ಆರ್‌ಡಿಎಫ್ ಸಾಗಣೆ ಮಾಡುವ ಕಾಮಗಾರಿ. ಕರೆ –2.	477.80	ಈ ಕೆಳಗಿನವುಗಳ ಅಡಿಯಲ್ಲಿ ಇ-ಪಾವತಿಯ ಮೂಲಕ ರೂ. 1.00 ಲಕ್ಷ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಒಟಿಸಿ ಮತ್ತು ಬಾಕಿ ರೂ.6,16,700/– ಬ್ಯಾಂಕ್ ಗ್ಯಾರಂಟಿಯಿಂದ / ರಾಷ್ಟ್ರೀಕೃತದಿಂದ ನೀಡಲಾದ ಎಫ್‌ಡಿಆರ್ / ಷೆಡ್ಯೂಲ್ಡ್ ಬ್ಯಾಂಕ್	06 ತಿಂಗಳು

ಟೆಂಡರ್ ವೇಳಾಪಟ್ಟಿ : (1) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **30.12.2025** ರಂದು ಮಧ್ಯಾಹ್ನ **15.00** ಗಂಟೆಗೆ ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಅವರ ಕಚೇರಿಯಲ್ಲಿ. (2) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01.01.2026** ರಂದು ಸಂಜೆ **16.00** ಗಂಟೆಯ ಮುಂಚಿತವಾಗಿ. (3) ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02.01.2026** ರಂದು ಸಂಜೆ **16.30** ಗಂಟೆಯ ನಂತರ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸದ ಆಕಾಂಕ್ಷಿ ಬಿಡ್ಡರ್‌ಗಳು/ಗುತ್ತಿಗೆದಾರರು ವೆಬ್‌ಸೈಟ್ (https://kppp.karnataka.gov.in) ಮೂಲಕ ಭಾಗವಹಿಸುವ ಮೊದಲು ನೋಂದಾಯಿಸಿಕೊಳ್ಳಬೇಕು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು-3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/4672/ಎಸ್‌ಎಸ್‌ಸಿ/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-313/3572/2025-26 ದಿನಾಂಕ: 24.12.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	BIAAPA ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ.ಎಸ್.ರಾಘವೇಂದ್ರ ಮತ್ತು ಶ್ರೀ ಬಿ.ಎಸ್.ನಾಗರಾಜ್	ಯಲಹಂಕ	ಜಾಲ	ಬಂಡಿಕೊಡಿಗೆ ಹಳ್ಳಿ	84/2	0-11	ವ್ಯವಸಾಯ	ವಸತಿ
					84/3	1-02		
					85/2	0-23.50		
					108/2	0-02		
					108/8(P)	0-3.50		
					ಒಟ್ಟು	2-02		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ನಗರದಲ್ಲಿ ಇಂದು

ಕೆ.ಜಿ. ಸುಬ್ರಾಯ ಶರ್ಮಾ ಅವರ 'ಜೀವನ್ಮುಕ್ತಿ' 191ನೇ ಗ್ರಂಥದ ಬಿಡುಗಡೆ: ಆರ್.ಎನ್. ನಾಗರಾಜ್, ಅಧ್ಯಕ್ಷತೆ: ಮುರಳೀಧರ ಶರ್ಮಾ, ಗ್ರಂಥದ ಪರಿಚಯ: ಟಿ. ನಾರಾಯಣ ಮೆಹೆಂದಳೆ, ಅತಿಥಿ: ಆರ್.ಎನ್. ತ್ಯಾಗರಾಜನ್, ಆಯೋಜನೆ: ವೇದಾಂತ ಸತ್ಸಂಗ ಕೇಂದ್ರ, ಸ್ಥಳ: ಸದ್ಗುರುಗಳ ತಪೋಭೂಮಿ, ಆಧ್ಯಾತ್ಮ ಪ್ರಕಾಶ ಶಾಖಾ ಕಾರ್ಯಾಲಯ, ಎರಡನೇ ಬ್ಲಾಕ್, ತ್ಯಾಗರಾಜನಗರ, ಬೆಳಿಗ್ಗೆ 9

ಶರಣ್ ಶ್ರೀನಿವಾಸನ್ ಹಾಗೂ ಪ್ರತಿಭಾ ಶರಣ್ ಅವರ 'ನ್ಯೂರೊ ಜಸ್ಟೀಸ್' ಪುಸ್ತಕ ಬಿಡುಗಡೆ: ಅರವಿಂದ್ ಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಉಪಸ್ಥಿತಿ: ಆರ್.ವಿ. ರವೀಂದ್ರನ್, ಅತಿಥಿಗಳು: ರುದ್ರಪ್ಪ ಲಮಾಣಿ, ಎ.ವಿ. ಚಂದ್ರಶೇಖರ್, ಸೀಮಾಂತ್ ಕುಮಾರ್ ಸಿಂಗ್, ಮಾನಸ ಪಿ., ವಿ.ಡಿ. ಸಿನ್ಹಾ, ಕೆ.ವೈ. ವೆಂಕಟೇಶ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ಬಿ.ಕೆ. ಮರಿಯಪ್ಪ ವಿದ್ಯಾರ್ಥಿನಿ ನಿಲಯದ ಬೆಳ್ಳಿ ಹಬ್ಬ, ಸ್ನೇಹ ಸಮ್ಮಿಲನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಮಂಜುಳಾ ಚೆಲ್ಲೂರು, ಸ್ಮರಣ ಸಂಚಿಕೆ ಬಿಡುಗಡೆ: ತೇಜಸ್ವಿನಿ ಅನಂತಕುಮಾರ್, ಸಾಕ್ಷ್ಯಚಿತ್ರ ಬಿಡುಗಡೆ: ಹಂ.ಪ. ನಾಗರಾಜಯ್ಯ, ಅತಿಥಿ: ಸಿ. ಸೋಮಶೇಖರ್, ಅಧ್ಯಕ್ಷತೆ: ಸಿ. ರಾಜಶೇಖರ್, ಆಯೋಜನೆ: ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆ, ಸ್ಥಳ: ಶ್ರೀಶಾರದಾ ಸ್ತ್ರೀ ಸಮಾಜ, ಒಂದನೇ ಮುಖ್ಯರಸ್ತೆ, ರಾಯನ್ ವೃತ್ತದ ಹತ್ತಿರ, ಚಾಮರಾಜಪೇಟೆ, ಬೆಳಿಗ್ಗೆ 10.30

ಎಸ್‌ಎಸ್‌ಎಲ್‌ಸಿ ತರಬೇತಿ ತರಗತಿಗಳ ಸಮಾರೋಪ ಸಮಾರಂಭ: ಅತಿಥಿಗಳು: ಪ್ರಶಾಂತ್ ಕುಮಾರ್ ಠಾಕೂರ್, ರಾಜಶೇಖರ್, ಮನೋಹರ್ ಡಿ. ಚಟ್ಲಾನಿ, ಟಿ. ಪ್ರಭಾಕರ್, ಆಯೋಜನೆ: ಕಬೀರ್ ಟ್ರಸ್ಟ್, ಸ್ಥಳ: ಪಟೇಲ್ಸ್ ಇನ್, ಎರಡನೇ ಬ್ಲಾಕ್, 15ನೇ ಕ್ರಾಸ್, ಆರ್.ಟಿ. ನಗರ, ಬೆಳಿಗ್ಗೆ 10.30

ಕನಕದಾಸರ ಜಯಂತಿ: ಉದ್ಘಾಟನೆ: ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಟಿ.ಬಿ. ಬಳಗಾವಿ, ಅತಿಥಿಗಳು: ಅನಿತಾ ಬಿ. ಹದ್ದಣ್ಣನವರ್, ವಿನಯ್ ಕುಮಾರ್ ಜಿ.ಬಿ., ಆರ್. ಸುನಂದಮ್ಮ, ಆಯೋಜನೆ: ಕನಕಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಕನಕ ಭವನ, ಚಂದ್ರಾ ಲೇಔಟ್, ಬೆಳಿಗ್ಗೆ 10.30

ಸಿದ್ಧಲಿಂಗಯ್ಯ ಅವರ 89ನೇ ಜನ್ಮದಿನ, ರಾಜಾಜಿನಗರದ ಮುಖ್ಯರಸ್ತೆಗೆ 'ಸಿದ್ಧಲಿಂಗಯ್ಯ' ಹೆಸರಿನ ನಾಮಫಲಕ ಅನಾವರಣ: ಪ್ರಿಯ ಕೃಷ್ಣ, ಆಯೋಜನೆ: ವಿಜಯಶ್ರೀ ಪ್ರೊಡಕ್ಷನ್, ಸ್ಥಳ:ಸಮುದಾಯ ಭವನದ ಸಮೀಪ, ಆರನೇ ಬ್ಲಾಕ್, ಡಾ. ರಾಜ್‌ಕುಮಾರ್ ರಸ್ತೆ ಬಳಿ, ರಾಜಾಜಿನಗರ, ಬೆಳಿಗ್ಗೆ 11

ಯಕ್ಷದೇಗುಲ ಸನ್ಮಾನ-2025 'ಏಕಲವ್ಯ ಮತ್ತು ರತ್ನಾವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ನಿರ್ದೇಶನ: ಕೆ. ಮೋಹನ್, ಪ್ರಿಯಾಂಕಾ ಕೆ. ಮೋಹನ್, ಭಾಗವತರು: ಲಂಬೋದರ ಹೆಗಡೆ, ಪ್ರಸನ್ನ ಭಟ್, ಮದ್ದಳೆ: ಸಂಪತ್ ಕುಮಾರ್, ಚಂಡೆ: ಸುದೀಪ್ ಉರಾಳ, ಆಯೋಜನೆ: ಯಕ್ಷದೇಗುಲ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4

ಕಿ.ರಂ. ನಾಗರಾಜ

'ಪ್ರೊ.ಕಿ.ರಂ. ನೆನಪಿನ ಕವಿಗೋಷ್ಠಿ, ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ' ಪ್ರದಾನ: ಕವಿಗೋಷ್ಠಿಯ ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಪ್ರಶಸ್ತಿ ಪ್ರದಾನ: ಎಲ್.ಎನ್. ಮುಕುಂದರಾಜ್, ಪ್ರಶಸ್ತಿ ಸ್ವೀಕರಿಸುವವರು: ವಿಜಯಾ, ಉಪಸ್ಥಿತಿ: ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್.ಕೆ., ಆಯೋಜನೆ: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30ರಿಂದ

ಡಾ.ಜಿ.ಬಿ. ಹರೀಶ-50 ಸ್ವರ್ಣಪೂರ್ಣ ಅಭಿನಂದನಾ ಸಮಾರಂಭ: ಹರೀಶ ಅವರ ಜೀವನ-ಸಾಧನೆ, ಸಾಹಿತ್ಯ: ಆರ್.ಎಸ್. ಗಣೇಶ್ ಪ್ರಸಾದ್, ಸಂಶೋಧನೆ: ಎಸ್. ಕಾರ್ತಿಕ್, ವೈಚಾರಿಕತೆ ಸಾಹಿತ್ಯ ಮತ್ತು ಉಪನ್ಯಾಸಗಳು: ಹರ್ಷ ಸಮೃದ್ಧ, ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ್, ಬಸವರಾಜ ಕಲ್ಗುಡಿ, ಆಯೋಜನೆ: ಡಾ.ಜಿ.ಬಿ. ಹರೀಶ ಆಪ್ತ ಬಳಗ, ಸ್ಥಳ: ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ, ಬನಶಂಕರಿ, ಸಂಜೆ 4

'ಅಟಲ್ ಪುರಸ್ಕಾರ' ಪ್ರದಾನ: ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಮಧುಸೂದನ್ ಸಾಯಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಸಂಜೆ 4.30

ವಿರಳ ವಾದ್ಯ ವೈಭವ: ಖಂಜೀರಾ-ಮೋರ್ಸಿಂಗ ದ್ವಂದ್ವ: ವ್ಯಾಸ ವಿಠ್ಠಲ, ಬಿ. ರಾಜಶೇಖರ್, ಸುರಶಿಂಗಾರ್ ಗಾಯನ: ಜಯದೀಪ್ ಘೋಷ್, ತಬಲಾ: ಗುರುಮೂರ್ತಿ ವೈದ್ಯ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಅಟಲ್ ಬಿಹಾರಿ ವಾಜಪೇಯಿ ಸ್ಮಾರಕ ದತ್ತಿ ಉಪನ್ಯಾಸ: ತರುಣ್ ವಿಜಯ್, ಆಯೋಜನೆ: ಥಿಂಕರ್ಸ್ ಫೋರಂ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಸಂಜೆ 6.30

ಮಾರ್ಗಶೀರ್ಷೋತ್ಸವ: ಭರತನಾಟ್ಯ ಪ್ರದರ್ಶನ: ಪಾರ್ಶ್ವನಾಥ ಉಪಾಧ್ಯ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
NEW YEAR SALE
ಮೆಗಾ ಡಿಸ್ಕೌಂಟ್ ಸೇಲ್
ನಿಶ್ಚಿತ ಕಡಿಮೆ ಬೆಲೆಯಲ್ಲಿ
EXCHANGE BONANZA
UPTO ₹25,000
WELCOME 2026 WITH SAVINGS
UPTO 70% OFF
CASH BACK BONANZA
UPTO 20% ಕ್ಯಾಶ್ ಬ್ಯಾಕ್*
ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ ₹20000
ಫೈನಾನ್ಸ್ ಬೊನಾಂಜಾ Upto ₹15,000 ಕ್ಯಾಶ್ ಬ್ಯಾಕ್*
1 ಇ.ಎಮ್.ಐ ಉಚಿತ*
INSTANT LOAN APPROVAL UPTO ₹4,00,000*
HDFC BANK We understand your world
10% OFF INSTANT CASH BACK ON CC & DC EMI* MIN TXN ₹17,000 MAX CAP ₹2,500
*T&C
ASSURED GIFTS ON ALL LG PRODUCTS*
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
UNMATCHED AFTER SALES SERVICE
SAMSUNG 100 CLASS NEO ಕ್ಯೂಎಲ್ಇಡಿ SMART TV 100QN80F 10% CASH BACK ಇ.ಎಮ್.ಐ ₹43,528
SONY 75 4K ULTRA HD SMART ಎಲ್ಇಡಿ K-75S30 10% CASH BACK ಇ.ಎಮ್.ಐ ₹7,500
Haier 65 4K ULTRA HD SMART GOOGLE TV WITH HANDS FREE VOICE CONTROL 10% CASH BACK ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG 65 4K ಒಎಲ್ಇಡಿ 65C5ELA 20% CASH BACK ಇ.ಎಮ್.ಐ ₹6,999
NV PRIDE OF INDIA LOWEST PRICE CHALLENGE 4K ಎಲ್ಇಡಿ 52% OFF 10% CASH BACK
Model | Price | EMI
43 4K SMART | ₹17,690 | ₹1,474
55 4K SMART | ₹28,990 | ₹2,416
vivo V60E 5G 8+256 10% CASH BACK SPECIAL PRICE ₹30,600* ಇ.ಎಮ್.ಐ ₹2,550
Redmi NOTE 14/NOTE 14 Pro 5G 6+128 10% CASH BACK STARTS FROM ₹16,499* ಇ.ಎಮ್.ಐ ₹1,375
SAMSUNG S25 12+256 10% CASH BACK SPECIAL PRICE ₹80,999* ಇ.ಎಮ್.ಐ ₹6,750
iPhone 17 17 256 10% CASH BACK SPECIAL PRICE ₹81,500* ಇ.ಎಮ್.ಐ ₹6,792
realme 15 5G 8+128 SILK PINK 10% CASH BACK SPECIAL PRICE ₹25,300* ಇ.ಎಮ್.ಐ ₹2,108
oppo A6X 5G 4+128 10% CASH BACK SPECIAL PRICE ₹12,790* ಇ.ಎಮ್.ಐ ₹1,066
hp 15S 10% CASH BACK 13TH GEN i3 12GB RAM, 512 GB SSD 15.6 FHD WIN 11 MSO 24 OFFER PRICE ₹42,990 ಇ.ಎಮ್.ಐ ₹3,583
DELL INS15 10% CASH BACK CORE i3 16GB RAM,512 GB SSD 15.6" FHD WIN 11 MSO 24 OFFER PRICE ₹43,490 ಇ.ಎಮ್.ಐ ₹3,624
DELL 3530 10% CASH BACK 13TH GEN i5 16GB RAM 512GB SSD 15.6 FHD WIN 11 MSO 24 OFFER PRICE ₹52,990 ಇ.ಎಮ್.ಐ ₹4,416
Lenovo SLIM 3 10% CASH BACK 13TH GEN i7-13620H 16GB,512GB SSD 15.3" WUXGA WIN 11 MSO 24 OFFER PRICE ₹67,990 ಇ.ಎಮ್.ಐ ₹5,666
Lenovo LOQ 10% CASH BACK RYZEN 5 7235HS 24GB, 512GB SSD RTX 3050 6GB 15.6 FHD WIN 11 MSO 24 OFFER PRICE ₹69,990 ಇ.ಎಮ್.ಐ ₹5,833
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
SAMSUNG 653ಲೀ ಸೈಡ್ ಬೈ ಸೈಡ್ RS76CB81A333HL 10% CASH BACK ಇ.ಎಮ್.ಐ ₹7,750
Godrej 600 LTRS TOUGHENED GLASS DOOR ಸೈಡ್ ಬೈ ಸೈಡ್ REFRIGERATOR 10% CASH BACK ಇ.ಎಮ್.ಐ ₹2,525
DAIKIN 2.02 TON 3 STAR INVERTER SPLIT AC 10% CASH BACK ಇ.ಎಮ್.ಐ ₹5,499
BOSCH 10% CASH BACK 9 ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹3,741
IFB 10% CASH BACK DEEPCLEAN® 6.5 ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,633
LG 20% CASH BACK 14 PLACE SETTIN FREESTANDING DISHWASHER DFB532FP ಇ.ಎಮ್.ಐ ₹4,875
Panasonic 23ಲೀ ಕನ್ವೆಂಕ್ಷನ್ ಮೈಕ್ರೋವೇವ್ ಇ.ಎಮ್.ಐ ₹1,249
OFFER VALID TILL STOCK LAST | OFFER VALID TILL STOCK LAST
GEYSER UPTO 60% OFF
MIXER GRINDER UPTO 63% OFF
CHIMNEY UPTO 50% OFF
WATER PURIFIER UPTO 53% OFF
LG SOUND BAR SC9S 3.1.3CH, 400W, DOLBY ATMOS, DTS:X, AI SOUND PRO 5% CASH BACK OFFER PRICE ₹29,990 ಇ.ಎಮ್.ಐ ₹2,499 MRP ₹89,990
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
180 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org

ಹೂಡಿಕೆಯ ಉದ್ದೇಶವನ್ನು
ಅರಿಯದೇ ಹೂಡಿಕೆ ಮಾಡುವವನು,
ಗಮ್ಯ ಸ್ಥಾನ ತಿಳಿಯದ ಪ್ರಯಾಣಿಕನಿದ್ದಂತೆ
ಅನಾಮಿಕ

ದುಡ್ಡಿನಂಥಾ ಮಾತು

ಸೂಚ್ಯಂಕಗಳಲ್ಲಿ ಹೂಡಿಕೆ ತಿಳಿದಿರಲಿ ಇದರ ಪ್ರಯೋಜನ

ಕಂಪನಿಗಳ ಷೇರುಗಳಲ್ಲಿ ನೇರವಾಗಿ ಹಣ ತೊಡಗಿಸುವುದು ಕೆಲವರಿಗೆ ಬಹಳ ಸಡಗರದ ಸಂಗತಿ. ಆದರೆ ಈ ಕೆಲಸ ದೀರ್ಘಾವಧಿಯಲ್ಲಿ ಸುಲಭದ್ದೇನೂ ಅಲ್ಲ. ಸಣ್ಣ ಹೂಡಿಕೆದಾರರು ನೇರವಾಗಿ ಷೇರು ಖರೀದಿಗಿಂತ ಇಂಡೆಕ್ಸ್ ಹೂಡಿಕೆಯತ್ತ ಸಾಗುವುದು ಸೂಕ್ತ ಎನ್ನುತ್ತಾರೆ ತಜ್ಞರು

• ಚಿಂತನ್ ಹಾರಿಯಾ

ಕೋವಿಡ್ ನಂತರದ ದಿನಗಳಲ್ಲಿ ದೇಶದ ಷೇರುಪೇಟೆಗಳು ದೊಡ್ಡ ಮಟ್ಟದಲ್ಲಿ ಏರಿಕೆ ಕಂಡವು. ಆ ಹೊತ್ತಿನಲ್ಲಿ ಹಲವಾರು ಮಂದಿ ಸಣ್ಣ ಹೂಡಿಕೆದಾರರು ಮಾರುಕಟ್ಟೆಯನ್ನು ಪ್ರವೇಶಿಸಿದರು, ದೇಶದಲ್ಲಿ ಡಿಮ್ಯಾಟ್ ಖಾತೆಗಳ ಸಂಖ್ಯೆಯು ಆಗ ಸರಿಸುಮಾರು ಐದುಪಟ್ಟು ಹೆಚ್ಚಳ ಕಂಡಿತು. 2020ರಲ್ಲಿ 40 ಲಕ್ಷದಷ್ಟಿದ್ದ ಡಿಮ್ಯಾಟ್ ಖಾತೆಗಳ ಸಂಖ್ಯೆಯು 2025ರ ಮಧ್ಯಭಾಗದಲ್ಲಿ ಸರಿಸುಮಾರು 2 ಕೋಟಿಗೆ ಹೆಚ್ಚಳ ಕಂಡಿದೆ.

ನಿರ್ದಿಷ್ಟವಾದ ಕಂಪನಿಯ ಷೇರುಗಳಲ್ಲಿ ನೇರವಾಗಿ ಹಣ ತೊಡಗಿಸಿ, ಷೇರುಪೇಟೆಯು ನೀಡುವ ಸರಾಸರಿ ಲಾಭಕ್ಕಿಂತ ಹೆಚ್ಚಿನ ಲಾಭ ಪಡೆಯಲು ಹಲವು ಹೂಡಿಕೆದಾರರು ಬಯಸುತ್ತಾರೆ. ಅವರ ಬಯಕೆ, ಮನಃಸ್ಥಿತಿ ಹಿಂದೆಯೂ ಹೀಗೇ ಇತ್ತು, ಈಗಲೂ ಹೀಗೇ ಇದೆ. ಆದರೆ, ಆಯ್ದ ಕಂಪನಿಯ ಷೇರುಗಳಲ್ಲಿ ನೇರವಾಗಿ ಹಣ ತೊಡಗಿಸಿ ದೀರ್ಘಾವಧಿಯಲ್ಲಿ ಹೆಚ್ಚಿನ ಮಟ್ಟದ ಲಾಭ ಪಡೆದುಕೊಳ್ಳುವುದು ಹೊಸ ಹೂಡಿಕೆದಾರರಿಗೂ ಪರಿಣತ ಸಣ್ಣ ಹೂಡಿಕೆದಾರರಿಗೂ ಸವಾಲಿನ ಸಂಗತಿ.

ಇಂಡೆಕ್ಸ್ ಫಂಡ್‌ಗಳು ಹೂಡಿಕೆದಾರರ ನೆರವಿಗೆ ಬರುವುದು ಇಂತಹ ಹಂತದಲ್ಲಿ. ಆಯ್ದ ಕಂಪನಿಗಳ ಷೇರುಗಳನ್ನು ನೇರವಾಗಿ ಖರೀದಿಸಿ, ಹೂಡಿಕೆ ಮಾಡಿದ ಮೊತ್ತ ಕರಗುವ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಬದಲು ಸಂಪತ್ತಿನ ಸೃಷ್ಟಿಗಾಗಿ ಇಂಡೆಕ್ಸ್ ಫಂಡ್‌ನಲ್ಲಿ ಹೂಡಿಕೆ ಮಾಡಬಹುದು. ಸರಳವಾದ ವೈಶಿಷ್ಟ್ಯಗಳು, ಬಹುವಿಧದ ಫಂಡ್‌ಗಳ ಲಭ್ಯತೆ, ಖರೀದಿ ಮತ್ತು ಮಾರಾಟ ಸುಲಭವಾಗಿರುವುದು, ವೆಚ್ಚ ಕಡಿಮೆ ಇರುವುದು, ವೈವಿಧ್ಯವನ್ನು ಸಾಧಿಸುವ ಮೂಲಕ ಅಪಾಯದ ಸಾಧ್ಯತೆಯನ್ನು ಕಡಿಮೆ ಮಾಡುವುದು, ಸೂಚ್ಯಂಕ ನೀಡುವ ಲಾಭದ ಪ್ರಮಾಣಕ್ಕೆ ಅನುಗುಣವಾಗಿ ತಾವೂ ಲಾಭ ನೀಡುವುದು ಇಂಡೆಕ್ಸ್ ಫಂಡ್‌ಗಳ ಪ್ರಯೋಜನಗಳು.

ಇಂತಹ ಹೂಡಿಕೆಯು ಹೆಚ್ಚೆಚ್ಚು ಜನಪ್ರಿಯವಾಗುತ್ತಿದೆ ಎಂಬುದನ್ನು ಅಂಕಿ-ಅಂಶಗಳು ಹೇಳುತ್ತಿವೆ. 2021ರ ಅಕ್ಟೋಬರ್ ಮಟ್ಟಕ್ಕೆ ಹೋಲಿಕೆ ಮಾಡಿದರೆ ಪ್ಯಾಸಿವ್ ಫಂಡ್‌ಗಳ ಅಡಿಯಲ್ಲಿ ನಿರ್ವಹಣೆಯಲ್ಲಿರುವ ಹೂಡಿಕೆಗಳ ಮೊತ್ತವು 3.3 ಪಟ್ಟು ಹೆಚ್ಚಾಗಿದೆ. ಈಗ ಈ ಮೊತ್ತವು (2025ರ ಅಕ್ಟೋಬರ್ ವೇಳೆಯ ಅಂಕಿ-ಅಂಶ) ₹13.30 ಲಕ್ಷ ಕೋಟಿಯಷ್ಟಾಗಿದೆ. ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್‌ಐ) ಅಂಕಿ-ಅಂಶಗಳ ಪ್ರಕಾರ ಪ್ಯಾಸಿವ್ ಫಂಡ್‌ಗಳಲ್ಲಿ ಹಣ ತೊಡಗಿಸುವ ಪೋಲಿಯೊಗಳ (ಖಾತೆ) ಸಂಖ್ಯೆಯು ಕಳೆದ ಐದು ವರ್ಷಗಳಲ್ಲಿ 18 ಪಟ್ಟು ಹೆಚ್ಚಾಗಿದೆ.

ಇಂಡೆಕ್ಸ್ ಹೂಡಿಕೆಯಲ್ಲಿ ಹಲವು ಪೂರಕ ಅಂಶಗಳು ಇವೆ

ಮೊದಲನೆಯದು: ನಿರ್ದಿಷ್ಟ ಕಂಪನಿಯ ಷೇರುಗಳನ್ನು ಆಯ್ಕೆ ಮಾಡುವಾಗ ಹಲವು ಕೆಲಸಗಳನ್ನು ಮಾಡಬೇಕಾಗುತ್ತದೆ. ಷೇರು ಮೌಲ್ಯದ ಬಗ್ಗೆ ಅಧ್ಯಯನ ಮಾಡಬೇಕು, ಕಂಪನಿಯ ಬೆಳವಣಿಗೆಯ ಸಾಧ್ಯತೆಗಳ ಬಗ್ಗೆ, ಆ ಕಂಪನಿಯು ಕಾರ್ಯ ನಿರ್ವಹಿಸುತ್ತಿರುವ ವಲಯದ ಬಗ್ಗೆ, ಅರ್ಥ ವ್ಯವಸ್ಥೆಯ ಬಗ್ಗೆ ಪರಿಶೀಲಿಸಬೇಕು. ಇವುಗಳಲ್ಲದೆ, ಆ ಕಂಪನಿಯ ಷೇರುಗಳ ಮೇಲೆ ಎಷ್ಟು ಪ್ರಮಾಣದಲ್ಲಿ ಹಣ ತೊಡಗಿಸುವುದು ಸರಿಯಾದ ಹೆಜ್ಜೆ ಎಂಬುದನ್ನು ಕೂಡ ತೀರ್ಮಾನಿಸಬೇಕು. ಸೀಮಿತ ಸಮಯ, ಸೀಮಿತ ಸಂಪನ್ಮೂಲ ಹಾಗೂ ಸೀಮಿತ ಪರಿಣತಿ ಇರುವ ಸಣ್ಣ ಹೂಡಿಕೆದಾರರ ಪಾಲಿಗೆ ಇವೆಲ್ಲ ಬಹಳ ಸವಾಲಿನ ಕೆಲಸಗಳು. ಹಲವು ಆಯಾಮಗಳಿಂದ ವಿಶ್ಲೇಷಣೆ ನಡೆಸಬೇಕಿರುವ ಕಾರಣದಿಂದಾಗಿ ಷೇರು ಖರೀದಿ ಯಾವಾಗ ಮಾಡಿದರೆ ಸೂಕ್ತ, ಯಾವಾಗ ಮಾರಾಟ ಮಾಡುವುದು ಸರಿ ಎಂಬುದನ್ನು ತೀರ್ಮಾನಿಸುವುದು ಕೂಡ ಸುಲಭದ ಕೆಲಸವಲ್ಲ.

ಆದರೆ ಇಂಡೆಕ್ಸ್ ಹೂಡಿಕೆಯಲ್ಲಿ ಈ ತಲೆಬಿಸಿಗಳು ಇರುವುದಿಲ್ಲ. ಇಂಡೆಕ್ಸ್ ಹೂಡಿಕೆಯು ಮೊದಲೇ ಆಯ್ಕೆ ಮಾಡಿರುವ ಕಂಪನಿಗಳಲ್ಲಿ, ಮೊದಲೇ ತೀರ್ಮಾನವಾಗಿರುವ ಪ್ರಮಾಣಕ್ಕೆ ಅನುಗುಣವಾಗಿ ಹಣ ತೊಡಗಿಸುತ್ತದೆ. ಹೀಗಾಗಿ ಈ ಹೂಡಿಕೆಯನ್ನು ಅರ್ಥ ಮಾಡಿಕೊಳ್ಳುವುದು ಕೂಡ ಬಹಳ ಸುಲಭ. ಕಾಲಕಾಲಕ್ಕೆ ಸೂಚ್ಯಂಕಗಳಿಂದ ಕೆಲವು ಕಂಪನಿಗಳ ಹೆಸರು ಕೈಬಿಡುವ ಹಾಗೂ ಕೆಲವು ಕಂಪನಿಗಳನ್ನು ಹೊಸದಾಗಿ ಸೇರಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತ ಇರುತ್ತದೆ. ಇದರಿಂದಾಗಿ ನಿರ್ದಿಷ್ಟ ಕಂಪನಿ ಹಾಗೂ ನಿರ್ದಿಷ್ಟ ವಲಯಕ್ಕೆ ಎಷ್ಟು ಹಂಚಿಕೆ ಆಗಬೇಕು ಎಂಬುದು ಕೂಡ ತೀರ್ಮಾನ ಆಗುತ್ತಿರುತ್ತದೆ.

ಎರಡನೆಯದು: ಇಂಡೆಕ್ಸ್ ಫಂಡ್‌ಗಳು ಹಾಗೂ ಇಟಿಎಫ್‌ಗಳು ಹಲವು ಬಗೆಗಳಲ್ಲಿ ಲಭ್ಯ. ಮಾರುಕಟ್ಟೆ ಬಂಡವಾಳದ ಗಾತ್ರ (ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್) ಆಧರಿಸಿ, ಉದ್ಯಮ ವಲಯ ಆಧರಿಸಿ, ಹೆಚ್ಚಿನ ಡಿವಿಡೆಂಡ್ ನೀಡುವ ಕಂಪನಿಗಳನ್ನು ಆಧರಿಸಿ ಸೂಚ್ಯಂಕಗಳನ್ನು ರೂಪಿಸಲಾಗಿದೆ. ಇಂತಹ ಸೂಚ್ಯಂಕಗಳಲ್ಲಿ ಹೂಡಿಕೆ ಮಾಡಲು ಪ್ರತ್ಯೇಕ ಯೋಜನೆಗಳು ಇವೆ. ಹೂಡಿಕೆದಾರರ ಅಗತ್ಯ, ಅವರ ಆರ್ಥಿಕ ಗುರಿಗಳು, ಹೂಡಿಕೆಯ ಶೈಲಿ, ಹೂಡಿಕೆಯ ಒಲವು ಆಧರಿಸಿ ಯಾವುದೇ ಇಂಡೆಕ್ಸ್ ಫಂಡ್ ಆಯ್ಕೆ ಮಾಡಿಕೊಳ್ಳಬಹುದು.

ಮೂರನೆಯದು: ಇಂಡೆಕ್ಸ್ ಆಧಾರಿತ ಹೂಡಿಕೆಯಲ್ಲಿ ಒಂದಿಷ್ಟು ಅನುಕೂಲಗಳು ಇವೆ. ಒಂದೇ ಫಂಡ್‌ನಲ್ಲಿ ಹಣ ತೊಡಗಿಸುವ ಮೂಲಕ ನೂರಾರು ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ತಮ್ಮದಾಗಿಸಿ ಕೊಳ್ಳಬಹುದು. ₹100 ಅಥವಾ ₹500ರಷ್ಟು ಕಡಿಮೆ ಮೊತ್ತ ಬಳಸಿಯೂ ಹೂಡಿಕೆದಾರರು ಈ ಫಂಡ್‌ಗಳ ಯೂನಿಟ್‌ಗಳನ್ನು ತಮ್ಮದಾಗಿಸಿಕೊಳ್ಳಬಹುದು. ಮಾರುಕಟ್ಟೆಯು ಏರಿಳಿತಗಳನ್ನು ಕಾಣುವ ಹೊತ್ತಿನಲ್ಲಿಯೂ ಹೂಡಿಕೆಯನ್ನು ಮುಂದುವರಿಸುವ ಮೂಲಕ, ಯೂನಿಟ್‌ಗಳ ಖರೀದಿ ವೆಚ್ಚ ತೀರಾ ದುಬಾರಿ ಆಗಿರದಂತೆ ನೋಡಿಕೊಳ್ಳಬಹುದು. ಆದರೆ ಕಂಪನಿಗಳ ಷೇರುಗಳನ್ನು ನೇರವಾಗಿ ಖರೀದಿಸಲು ಮುಂದಾದರೆ ಈ ಬಗೆಯಲ್ಲಿ ಖರೀದಿ ವೆಚ್ಚ ದುಬಾರಿ ಆಗಿರದಂತೆ ನೋಡಿಕೊಳ್ಳುವುದು ಸುಲಭವಲ್ಲ.

ಉದಾಹರಣೆಗೆ ಹೇಳುವುದಾದರೆ, ಐದು ಅಂಕಿ ಅಥವಾ ಆರು ಅಂಕಿಗಳ ಬೆಲೆಯನ್ನು ಹೊಂದಿರುವ ಷೇರುಗಳು ಕೂಡ ಇಂದು ಮಾರುಕಟ್ಟೆಯಲ್ಲಿ ಇವೆ. ಸಣ್ಣ ಹೂಡಿಕೆದಾರರಿಗೆ ಇಂತಹ ಷೇರುಗಳನ್ನು ಸೂಕ್ತವೆನ್ನುವ ಸಂಖ್ಯೆಯಲ್ಲಿ ಖರೀದಿಸುವಷ್ಟು ಹೆಚ್ಚುವರಿ ಹಣ ಇರುವುದಿಲ್ಲ.

ನಾಲ್ಕನೆಯದು: ಇಂಡೆಕ್ಸ್ ಫಂಡ್‌ಗಳು ಹಾಗೂ ಇಟಿಎಫ್‌ಗಳು ಬಹಳ ಕಡಿಮೆ ವೆಚ್ಚದ ಹೂಡಿಕೆ ಸಾಧನಗಳು. ಇವು ಅನುಕರಣೆ ಮಾಡುವ ಸೂಚ್ಯಂಕದಲ್ಲಿ ಆದ ಬದಲಾವಣೆಗೆ ಅನುಗುಣವಾಗಿ ಫಂಡ್ ಕಂಪನಿಗಳೂ ತಮ್ಮ ಹೂಡಿಕೆಯಲ್ಲಿ ಬದಲಾವಣೆ ಮಾಡುತ್ತವೆ. ಇಂತಹ ಸಂದರ್ಭಗಳಲ್ಲಿ ಈ ಬದಲಾವಣೆಯಿಂದಾಗಿ ತೆರಿಗೆ ಸಂಬಂಧಿ ಪರಿಣಾಮವು ಹೂಡಿಕೆದಾರರ ಮೇಲೆ ಇರುವುದಿಲ್ಲ. ಆದರೆ ಷೇರುಗಳನ್ನು ನೇರವಾಗಿ ಖರೀದಿ ಮಾಡುವುದು, ಮಾರಾಟ ಮಾಡುವುದು ಇದ್ದಾಗ ಅದಕ್ಕೆ ಸಂಬಂಧಿಸಿದ ತೆರಿಗೆ, ಶುಲ್ಕಗಳನ್ನು ಹೂಡಿಕೆದಾರರು ಪಾವತಿಸಬೇಕಾಗುತ್ತದೆ. ಅಲ್ಲದೆ, ಪ್ರತಿ ಖರೀದಿ ಹಾಗೂ ಮಾರಾಟವು ಅದಕ್ಕೆ ಸಂಬಂಧಿಸಿದ ಬಂಡವಾಳ ವೃದ್ಧಿ ತೆರಿಗೆಗೆ ಒಳಪಡುತ್ತದೆ.

ಐದನೆಯದು: ಪ್ಯಾಸಿವ್ ಹೂಡಿಕೆಗಳು ಹೂಡಿಕೆದಾರರಿಗೆ ಬಹಳ ವೈವಿಧ್ಯಮಯವಾದ ಪೋರ್ಟ್‌ಫೋಲಿಯೊ ಒಂದನ್ನು ರೂಪಿಸಿಕೊಳ್ಳಲು ನೆರವಾಗುತ್ತವೆ. ಆ ಮೂಲಕ ಅವು ಮಾರುಕಟ್ಟೆಯ ಅಪಾಯಗಳನ್ನು ಕಡಿಮೆ ಮಾಡಿಕೊಡುತ್ತವೆ. ಆದರೆ, ಹೂಡಿಕೆದಾರರು ತಾವೇ ನೇರವಾಗಿ ಷೇರುಗಳನ್ನು ಖರೀದಿ ಮಾಡಿದಾಗ ರಿಸ್ಕ್‌ನ ಪ್ರಮಾಣವು ಹೆಚ್ಚಿರುವ ಸಾಧ್ಯತೆಯೂ ಇರುತ್ತದೆ.

ಲಾಭದ ದೃಷ್ಟಿಯಿಂದ ಹೇಗೆ?

ಲಾಭ ಗಳಿಕೆಯ ದೃಷ್ಟಿಯಿಂದಲೂ ಇಟಿಎಫ್ ಅಥವಾ ಇಂಡೆಕ್ಸ್ ಫಂಡ್ ಹೂಡಿಕೆಯು ಹೆಚ್ಚು ಪ್ರಯೋಜನಕಾರಿ ಎಂಬುದನ್ನು ಉದಾಹರಣೆಯೊಂದು ವಿವರಿಸುತ್ತದೆ.

'ನಿಫ್ಟಿ-100 ಟಿಆರ್‌ಐ' ಸೂಚ್ಯಂಕದ ಉದಾಹರಣೆಯನ್ನು ಪರಿಗಣಿಸೋಣ (ಇಲ್ಲಿನ ಹೂಡಿಕೆಗಳು ಈ ಸೂಚ್ಯಂಕದಲ್ಲಿನ ಕಂಪನಿಗಳು ನೀಡುವ ಲಾಭಾಂಶವನ್ನು ಕೂಡ ಮತ್ತೆ ಹೂಡಿಕೆಗೆ ಬಳಸಿಕೊಳ್ಳುತ್ತದೆ). 2020ರ ಮಾರ್ಚ್‌ನಲ್ಲಿ ಕೋವಿಡ್-19ರ ಕಾರಣದಿಂದಾಗಿ ಷೇರುಪೇಟೆಗಳು ಬಹಳ ಕುಸಿತ ಕಂಡಿದ್ದವು. ಅದಾದ ನಂತರದಲ್ಲಿ ಈ ಸೂಚ್ಯಂಕವು ಶೇ 224.4ರಷ್ಟು ಏರಿಕೆ ಕಂಡಿದೆ. ಈ ಸೂಚ್ಯಂಕದಲ್ಲಿ ಹೂಡಿಕೆ ಮಾಡುವ ಫಂಡ್ ಅಥವಾ ಇಟಿಎಫ್‌ನಲ್ಲಿ ಹಣ ತೊಡಗಿಸುವ ಮೂಲಕ ಈ ಪ್ರಮಾಣದಲ್ಲಿ ಲಾಭ ಗಳಿಸಿಕೊಳ್ಳಲು ಸಾಧ್ಯವಿತ್ತು (ಇದರಲ್ಲಿ ಎಕ್ಸ್‌ಪೆನ್ಸ್ ರೇಷ್ಯೊ ಅಥವಾ ಶುಲ್ಕವನ್ನು ಕಳೆಯಬೇಕು).

ಆದರೆ, ನೇರವಾಗಿ ಷೇರುಗಳನ್ನು ಖರೀದಿಸಲು ಮುಂದಾಗಿದ್ದರೆ, ಅದರಿಂದ ಸಿಗುವ ಲಾಭದ ಪ್ರಮಾಣವು ತೀರಾ ಭಿನ್ನವಾಗಿರುತ್ತಿತ್ತು. ಕೋವಿಡ್ ಅಪ್ಪಳಿಸಿದ್ದ ಸಂದರ್ಭದ ಆ ಅವಧಿಯಿಂದ ಇದುವರೆಗೆ ದೇಶದ ಮುಂಚೂಣಿ ಖಾಸಗಿ ಬ್ಯಾಂಕ್ ಒಂದರ ಷೇರುಗಳು ಶೇ 123ರಷ್ಟು ಲಾಭ ತಂದುಕೊಟ್ಟವೆ. ಮುಂಚೂಣಿ ಐ.ಟಿ. ಸೇವಾ ಕಂಪನಿಯೊಂದರಲ್ಲಿ ಮಾಡಿದ ಹೂಡಿಕೆಯು ಶೇ 90ರಷ್ಟು ಲಾಭ ಕೊಟ್ಟಿದೆ. ಜನಪ್ರಿಯ ಎಫ್‌ಎಂಸಿಜಿ ಕಂಪನಿಯೊಂದರ ಷೇರು ಖರೀದಿಯು ಶೇ 19.5ರಷ್ಟು ಲಾಭ ನೀಡಿದೆ. ಇಂತಹ ಹಲವು ಉದಾಹರಣೆಗಳನ್ನು ನೀಡಬಹುದು.

ಹೀಗಾಗಿ, ಸಣ್ಣ ಹೂಡಿಕೆದಾರರಿಗೆ ಇಂಡೆಕ್ಸ್ ಫಂಡ್ ಅಥವಾ ಇಟಿಎಫ್ ಮೂಲಕ ಹೂಡಿಕೆ ಮಾಡುವುದರಿಂದ ಸೂಚ್ಯಂಕವೊಂದು ನೀಡಿದ ಲಾಭಕ್ಕೆ ಸರಿಸಮನಾದ ಲಾಭವನ್ನು ತಮ್ಮದಾಗಿಸಿಕೊಳ್ಳುವ ಅವಕಾಶ ಸಿಗುತ್ತದೆ. ನಿರ್ದಿಷ್ಟ ಕಂಪನಿಯ ಷೇರುಗಳನ್ನು ಖರೀದಿಸಿ, ಅವುಗಳಿಂದ ಹೆಚ್ಚಿನ ಲಾಭ ಸಿಗುವಂತೆ ಮಾಡಿಕೊಳ್ಳುವುದು ಬಹಳ ಸವಾಲಿನ ಕೆಲಸ.

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಎಎಂಸಿ ಕಂಪನಿ ಹೂಡಿಕೆ ಕಾರ್ಯತಂತ್ರದ ಮುಖ್ಯಸ್ಥ

ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆ: ಭಾರತದಲ್ಲಿ ಕಡಿಮೆ

• ಗಂಜಿ ಆದಿಶೇಷ

ಸಾಂಪ್ರದಾಯಿಕ ಹೂಡಿಕೆಗಳನ್ನು ನೆಚ್ಚಿಕೊಂಡಿದ್ದ ಜನ ಈಗ ಮ್ಯೂಚುವಲ್ ಫಂಡ್, ಷೇರುಪೇಟೆಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಇದರಿಂದಾಗಿ ಕಳೆದ ಐದು ವರ್ಷದಲ್ಲಿ ದೇಶದ ಕುಟುಂಬಗಳ ಒಟ್ಟು ಸಂಪತ್ತಿನಲ್ಲಿ ಶೇ 13ರಷ್ಟು ಹೆಚ್ಚಳವಾಗಿದ್ದು, 2024-25ರ ಆರ್ಥಿಕ ವರ್ಷದಲ್ಲಿ ₹1,300 ಲಕ್ಷ ಕೋಟಿ-₹1,400 ಲಕ್ಷ ಕೋಟಿಯ ಮಟ್ಟದಲ್ಲಿದೆ.

ಜಗತ್ತಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಮ್ಯೂಚುವಲ್ ಫಂಡ್ ಮತ್ತು ಷೇರುಗಳಲ್ಲಿ ಹೂಡಿಕೆ ಪ್ರಮಾಣ ಶೇ 15ರಿಂದ ಶೇ 20ರಷ್ಟು ಇದೆ. ಅಮೆರಿಕದಲ್ಲಿ ಈ ಪ್ರಮಾಣ ಶೇ 50ರಿಂದ ಶೇ 60 ಮತ್ತು ಬ್ರೆಜಿಲ್‌ನಲ್ಲಿ ಶೇ 40ರಿಂದ ಶೇ 45ರಷ್ಟಿದೆ ಎಂದು ಸಲಹಾ ಸಂಸ್ಥೆ ಬೈನ್ ಆ್ಯಂಡ್ ಕಂಪನಿ ಮತ್ತು ಆನ್‌ಲೈನ್ ಹೂಡಿಕೆ ವೇದಿಕೆ 'ಗ್ರೋವ್'ನ ಹೌ ಇಂಡಿಯಾ ಇನ್ವೆಸ್ಟ್-2025 ವರದಿ ತಿಳಿಸಿದೆ.



ಹೂಡಿಕೆ ಹೆಚ್ಚಾಗಲು ಕಾರಣಗಳೇನು?

- ಹೊಸ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಹೆಚ್ಚಳ
- ಡಿಜಿಟಲ್ ಹೂಡಿಕೆ ವೇದಿಕೆಗಳಿಂದ ದೊರೆತ ಮಾಹಿತಿ
- ಸರ್ಕಾರ ಮತ್ತು ಸೆಬಿ ಕಾರ್ಯಕ್ರಮಗಳು, ಸುಧಾರಣೆಗಳು
- ಜನರಲ್ಲಿ ಹೆಚ್ಚಿದ ಆರ್ಥಿಕ ಸಾಕ್ಷರತೆ
- ಷೇರುಪೇಟೆ ಹೆಚ್ಚು ಲಾಭ ನೀಡಿದ್ದು

ವಿವಿಧ ವೇದಿಕೆ ಮೂಲಕ ಹೂಡಿಕೆ (ಶೇಕಡಾವಾರು)	
ನೇರ ಹೂಡಿಕೆ	20-22
ಫಿನ್‌ಟೆಕ್ ವೇದಿಕೆ	5-6
ಬ್ಯಾಂಕ್‌ಗಳು	19-21
ರಾಷ್ಟ್ರಮಟ್ಟದ ವಿತರಕರು/ಪ್ರಾದೇಶಿಕ ವಿತರಕರು	19-21
ಮ್ಯೂಚುವಲ್ ಫಂಡ್ ವಿತರಕರು	24-26
ಇತರೆ	6-8

2024-25ರಲ್ಲಿ ವಯಸ್ಸಿಗನುಗುಣ ಹೂಡಿಕೆದಾರರ ವರ್ಗ



ಡಿಜಿಟಲ್ ವೇದಿಕೆಗಳ ಮೂಲಕ ಹೂಡಿಕೆ ಮಾಡಿದವರಲ್ಲಿ ಜೆನ್-ಜೀ (1997ರ ನಂತರದಲ್ಲಿ 2012ಕ್ಕೆ ಮೊದಲು ಜನಿಸಿದವರು) ತಲೆಮಾರಿನವರ ಪಾಲು ಸುಮಾರು ಶೇ 44ರಷ್ಟಿದೆ.

ವಿವಿಧ ವರ್ಗಗಳಿಗೆ ಸೇರಿದ ಹೂಡಿಕೆದಾರರು



ಪ್ರದೇಶದ ಅನುಸಾರ ಹೂಡಿಕೆದಾರರು (ಶೇಕಡಾವಾರು)

50	31	18
2ನೇ ಶ್ರೇಣಿಯ ನಗರಗಳು	1ನೇ ಶ್ರೇಣಿಯ ನಗರಗಳು	ಮೆಟ್ರೊ ನಗರಗಳು

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Second Language ENGLISH

Prose- Chapter 6 :The Discovery

Share your Responses:

1. Seamen expressing their discontent even as Columbus can hear them?
Ans: The seamen had no fear about Colum-bus. They have unity and all were homesick and had no hope to get success. So they were expressing their discontentment even as Co-lumbus can hear.

2. Pepe is heard saying, "They shan't'
a. Who is meant by 'they'?
b. What does the boy mean by saying 'They shan't?
Ans: a) They meant the crew or Seamen. b) They shall not show, the mischief for the trouble maker.

3. "Santa Maria will be lighter for his carcass'. Whose words are Pepe quoting here? (Choose the right answer and complete the sentence).
a) Diego b) Francisco
c) Pedro e) Guillermo Ires
Ans: Pepe was quoting Guillermo Ires words.

4. Which statement of Francisco suggests that he too has lost his temper? Quote his words.
Ans: Francisco had lost his temper. His words were "Discipline is a thing of past, Sir. It's you or us".

Share your Responses:

1. 'Who's to put him in irons? challengers Guillerno. The person meant by 'him' in this context is:
a.Guillerno
b. The first man to move towards Columbus
c. Columbus
d. The first man who challenged Columbus
Ans: The first man to move towards Columbus.

2. 'I will perform it myself', says Columbus. What does 'it' mean here?
Ans: 'It' means that if nobody among the crew is available to put Guillermo in irons, Columbus would himself put Guillermo in irons.

3. 'Devil's track to nowhere', says Guillermo. What does this suggest about the thinking of the seamen?
Ans: Guillermo said the above words. The seamen thought that they were very clear that the track is not correct, it leads to nowhere, why should they take the risk for nothing.

4. After 'a perceptible pause', who grows more mutinous than others?
a. Name that character.
b. Quote his words.
Ans: a. After a perceptible pause, Diego grew more mutinous than others. All are kept quiet except him. So he comments that.
b. Words for Children! Froth and Scum! We are men: reason with us.

Share your Responses

1. In his some what a long speech, what does Columbus say he has discovered?
Ans: In his long speech, Columbus said that he wanted to discover the New world but during his voyage, he discovered the new experience. That was when a man is given a vision, he must follow it alone. Loyalty passes like seaweed on an outgoing tide. Friendship breaks as a mast hollowed by worms. Discipline, duty and honorable obedience are bubbles that burst at the first contact. There remains but oneself.

2. Pepe excitedly declares that he is still loyal to the leader. What effect does it have on others like Juan and Guillermo?
Ans: Pepe's declaration of loyalty on the face of mutiny from others has a dramatic effect. People like Juan, who haven't been rebellious like the other seamen, feel guilty over their behaviour and try to explain their behaviour by saying that they are simple men who go by their simple understanding of things. Guillermo, though still surlily, states that things could be put off till the next day. Thus we see that Pepe's declaration of loyalty is a turning point in the course of events.

3. Compare Francisco's words of confession with what he had said earlier in anger. How does Columbus react to his confession?
Ans: Francisco angrily said to Columbus that Desperate men do not always act up to the best in them. For this Columbus said ironically that he was thanked for reminding him. Francisco wanted to say something but he thought it was better to go and with shame faced he went away. Columbus wished him goodnight.

4. How does Pedro react to the words of Columbus that he thought he saw some flickering light?
Ans: When Don Pedro heard that there was some light, he felt excited and also he saw the light. He was very happy and with gratitude remembered God's glory or grace.

5. Do you consider the ending to be happy? Justify your answer
Ans: Yes, the ending was very happy. All their struggle came to a happy end. They got success in their adventure.

Think About The Text

1. 'Mutiny is an ugly word', says, Diego. Is mutiny an ugly word? If so, why?
Ans: No, the word is not ugly. But the feeling of Diego about mutiny is ugly. The meaning of mutiny is a rebel. He did not like the rebel action of Sea men so he said like that.

MOLECULAR BASIS OF INHERITANCE

53. What is the importance of gene regulation?
Ans:-Regulation of genes is important because –
i) All the genes are not required by all the cells.
ii) Development of an individual takes place in a number of steps, each controlled by a separate set of genes.
iii) It provides for metabolism of a particular chemical by particular cell.
iv) It helps in production of specific chemicals by specific cells, e.g., RuBP by chlorenchy,ma cells, haemoglobin by erythropoietic cells.

54 Mention the differences between the Prokaryotic DNA and Eukaryotic DNA.
Ans:- The differences between the Prokaryotic DNA and Eukaryotic DNA are –

Prokaryotic DNA	Eukaryotic DNA
They are located in the cytoplasm.	They are located in the nucleus, mito- chondria and plastids.
They are circular in shape.	They are linear in nucleus, circular in chloroplasts and mitochondria.
They are not associated with the histones.	They are associated with the histones.
They form tangled mass on degeneration.	Two chains of polynuclotide appear on degeneration.
They code for lesser number of the proteins.	They code for large number of proteins.
Extra chromo-somal DNA may be present in the form of plasmids.	Plasmids are absent.
They do not contain the Non – coding introns.	The Non – coding introns are present and with major part of DNA non-functional.

55. What is satellite DNA in a genome? Explain its role in DNA fingerprinting.
Ans:- Satellite DNA – is a DNA segment having long sequences of short repetitive DNA which is called satellite because it separates out during density gradient ultra-centrifugation. Some of these (11-60 base pairs, minisatellites) are hypervariable, being specific to the individuals, their parents and progeny because they show the same degree of polymorphism.

Satellite DNA fragments are separated with the help of restriction enzymes. Being variable, they are called restriction fragment length polymorphism (RFLP). They are matched to determine identity and relationship in DNA fingerprinting.

56. What are the applications of DNA fingerprinting?
Ans:- Applications of DNA fingerprinting are -
(1) It is being increasingly used to identify and convict criminals like murderers and rapists. DNA typing can also prevent unnecessary harassment to an innocent suspect.
(2) It can also be used for solving the cases of disputed parentage.
(3) The technique is used to identify the victims of disasters like plane crash, building collapse, fire breakouts, floods, earthquakes etc., where conventional methods of identification are not possible.
(4) DNA typing has also revolutionized anthropology.
(5) DNA studies have established a common link among all the members of the animal kingdom especially, the link between the humans and the apes.

57. What is Human Genome Project and what are its goals?
Ans:- Human Genome Project was a project of sequencing the entire human genome and find out its characteristics features.
The goals of Human Genome Project are –
(a) Sequencing – To sequence the whole human genome and find out the entire range of base pairs.
(b) Storage – To store the information in data bases.
(c) Analysis – To develop and conduct computer based analysis
(d) Genes – Identify all the genes (approximately 20,000 – 30,000)
(e)Technology – Transfer technologies developed during the project to other sectors like industry, agriculture and forestry.
(f) ELSI – To solve any ethical, legal and social issues that may arise from the project

59. What are the Prospects and Implications of Human Genome Project?
Ans:- The Prospects and Implications of Human Genome Project are – 1. Completion of first phase of human genome project has been compared to discovery of antibiotics because it has opened a vast data base of knowledge about various aspects of human genome.

(Contd…..)

₹1.25 ಕೋಟಿ ದುರ್ಬಳಕೆ: ಪ್ರಕರಣ ದಾಖಲು

ಹುಮನಾಬಾದ್ (ಬೀದರ್ ಜಿಲ್ಲೆ): ಪಟ್ಟಣದ ಎಸ್‌ಬಿಐ ಖಾತೆಯಿಂದ ₹1.25 ಕೋಟಿ ದುರ್ಬಳಕೆ ಮಾಡಿಕೊಂಡಿರುವ ಆರೋಪದ ಮೇರೆಗೆ ಬೀದರ್ ಪ್ರಾದೇಶಿಕ ಕಚೇರಿಯ ಎಟಿಎಂ ಚಾನೆಲ್ ಮ್ಯಾನೇಜರ್ ಪ್ರವೀಣ ಕುಮಾರ್ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

'ಹುಮನಾಬಾದ್ ಪಟ್ಟಣದ ಎಸ್‌ಬಿಐ ಶಾಖೆಯ ಪ್ರಭಾರ ವಹಿಸಿಕೊಂಡಾಗ ಬ್ಯಾಂಕ್ ಖಾತೆಯಿಂದ ₹1.25 ಕೋಟಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಬ್ಯಾಂಕ್ ವ್ಯವಸ್ಥಾಪಕ ರಘುನಾಥ ಕೆ.ಎಲ್. ದೂರು ನೀಡಿದ್ದರು. ತನಿಖೆ ನಡೆಸಲಾಗುತ್ತಿದೆ' ಎಂದು ಪಿಎಸ್‌ಐ ಸುರೇಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಕಾಂಗ್ರೆಸ್‌ಗೆ ಕೊಳ್ಳಿ ಇಟ್ಟ ರಾಜಣ್ಣ'

ರಾಜ್ಯ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದುರ್ಬಲ ನಾಯಕ ಎಂದು ರಾಹುಲ್‌ಗಾಂಧಿಗೆ ಪತ್ರ ಬರೆಯುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಕೆ.ಎನ್.ರಾಜಣ್ಣ ಅವರು ಕಾಂಗ್ರೆಸ್‌ಗೆ ಕೊಳ್ಳಿ ಇಟ್ಟಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಇವರ ಜಗಳದಿಂದ ಬೇಸತ್ತಿರುವ ಕಾಂಗ್ರೆಸ್ ಹೈಕಮಾಂಡ್ ನಿಮ್ಮ ಸಮಸ್ಯೆ ನೀವೇ ಬಗೆಹರಿಸಿಕೊಳ್ಳಿ ಎಂದು ಹೇಳಿ ಕೈಚೆಲ್ಲಿದೆ. ಇದರ ಅರ್ಥ ಹೈಕಮಾಂಡ್ ಕೂಡ ದುರ್ಬಲವಾಗಿದೆ. ಒಟ್ಟಾರೆ ಈ ಜಗಳದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಬೆಳಗಾವಿ ಅಧಿವೇಶನ ಕುರ್ಚಿ ಕಿತ್ತಾಟದಲ್ಲೇ ಕಳೆದು ಹೋಯಿತು. ಅಲ್ಲಿ ಉತ್ತರಕರ್ನಾಟಕದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಆದರೆ, ಆ ಭಾಗಕ್ಕೆ ಯಾವುದೇ ಹೊಸ ಯೋಜನೆಗಳನ್ನು ಘೋಷಿಸಲಿಲ್ಲ. ಇದರಿಂದ ಅಲ್ಲಿನ ಜನ ನಿರಾಸೆಗೊಂಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಹಣವನ್ನು ಏಕೆ ಪಾವತಿ ಮಾಡಿಲ್ಲ ಎಂಬುದಕ್ಕೆ ಸರ್ಕಾರ ಸರಿಯಾದ ಕಾರಣಗಳನ್ನು ನೀಡಿಲ್ಲ. ಇದರಿಂದ 1.26 ಕೋಟಿ ಮಹಿಳೆಯರಿಗೆ ಅನ್ಯಾಯವಾಗಿದೆ. ಮಹಿಳೆಯರಿಗೆ ಆ ಹಣ ಸಿಗುವವರೆಗೆ ನಾವು ಹೋರಾಟ ಮಾಡುತ್ತೇವೆ' ಎಂದರು.

ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರಾಜ್ಯ ಸರ್ಕಾರ ಮುಂದುವರಿಸುತ್ತಿಲ್ಲ. ಕೇಂದ್ರದಿಂದ ಪಡೆದ ಅನುದಾನಕ್ಕೆ ಬಿಲ್ ಕೂಡ ನೀಡಿಲ್ಲ. ಹೀಗಾಗಿ ಕೇಂದ್ರ ಅನುದಾನ ತಡೆ ಹಿಡಿದಿದೆ. ಇದರಿಂದ ರಾಜ್ಯ ಜನರಿಗೆ ಅನ್ಯಾಯವಾಗುತ್ತಿದೆ ಎಂದು ಅಶೋಕ ಹೇಳಿದರು.

ಈ ಸರ್ಕಾರದ ಅವಧಿಯಲ್ಲಿ 206 ಕ್ಕೂ ಹೆಚ್ಚು ಆನೆಗಳು ಸತ್ತಿವೆ. 61 ಚಿರತೆ, 19 ನವಿಲು, ಅರಣ್ಯ ಇಲಾಖೆಯ ಸುಪರ್ದಿಯಲ್ಲಿದ್ದ ಜಿಂಕೆಗಳು ಸತ್ತಿವೆ. ಜಿಂಕೆಗಳನ್ನು ಕೊಂದು ಮಾಂಸ ಮಾರಾಟವಾಗುತ್ತಿದೆ. ವಿದೇಶದಿಂದ ಹಾವುಗಳನ್ನು ತಂದು ಮಾರಾಟ ಮಾಡಲಾಗುತ್ತಿದೆ. ಕಳ್ಳ ದಂಧೆಯನ್ನು ತಪ್ಪಿಸಲಾಗದ ಸರ್ಕಾರ ಸಫಾರಿ ರದ್ದು ಮಾಡಿದೆ ಎಂದು ಅಶೋಕ ಟೀಕಿಸಿದರು.

ಅಶೋಕ ಹೇಳಿದ್ದು

- 'ಕಾಂಗ್ರೆಸ್ ಹೈಕಮಾಂಡ್ ಕೂಡ ದುರ್ಬಲ'
- 'ಒಳ ಜಗಳದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತ'
- 'ಬೆಳಗಾವಿ ಅಧಿವೇಶನ ಕುರ್ಚಿ ಕಿತ್ತಾಟದಲ್ಲೇ ಕಳೆದು ಹೋಯಿತು'

'ಅಧ್ಯಕ್ಷರ ಬದಲಾವಣೆ ಮಾಡಿ ಎಂದಿಲ್ಲ'

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬದಲಾವಣೆ ಮಾಡಿ ಎಂದು ಯಾರೂ ವರಿಷ್ಠರನ್ನು ಕೇಳಿಲ್ಲ' ಎಂದು ಅಶೋಕ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ವಿಜಯೇಂದ್ರ ಅವರು ಈಗ ಅಧ್ಯಕ್ಷರಾಗಿದ್ದಾರೆ. ಬದಲಾವಣೆ ಮತ್ತಿತರ ವಿಚಾರಗಳಲ್ಲಿ ವರಿಷ್ಠರು ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ. ಬಿಜೆಪಿಯಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಗೊಂದಲ ಇಲ್ಲ' ಎಂದು ಹೇಳಿದರು.


ಆರ್. ಅಶೋಕ

ಲಿಂಗಾಯತ ಧರ್ಮ ಅಧ್ಯಯನ ಶಿಬಿರ

ಹೊಸದುರ್ಗ (ಚಿತ್ರದುರ್ಗ): 'ಲಿಂಗಾಯತ ಧರ್ಮದ ಇತಿಹಾಸ, ಸಿದ್ಧಾಂತ, ನಿಜ ಆಚರಣೆಗಳು, ಶಿವಯೋಗ, ಸಂಘಟನೆ ಕುರಿತು ಅರಿವು ಮೂಡಿಸಲು ಡಿ. 27 ರಿಂದ ಮೂರು ದಿನ ಸಾಣೇಹಳ್ಳಿಯ ತರಳಬಾಳು ಶಾಖಾ ಮಠದಲ್ಲಿ ಅಧ್ಯಯನ ಶಿಬಿರ ಏರ್ಪಡಿಸಿದೆ' ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ

'35 ವರ್ಷದೊಳಗಿನ ಆಸಕ್ತರು ₹ 200 ಪ್ರವೇಶ ಶುಲ್ಕ ಪಾವತಿಸಿ ಹೆಸರು ನೋಂದಣಿ ಮಾಡಿಕೊಳ್ಳಬೇಕು. ಶಿಬಿರಾರ್ಥಿಗಳಿಗೆ ನೋಟ್ ಪುಸ್ತಕ ಸೇರಿ ಇತರ ಪರಿಕರ ಒದಗಿಸಲಾಗುವುದು. ಉಪಾಹಾರ ಹಾಗೂ ಬೇರೆ ಊರುಗಳಿಂದ ಬರುವವರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'100 ರಿಂದ 150 ಜನರಿಗೆ ಮಾತ್ರ ಪ್ರವೇಶ ಇದೆ. ಮೊದಲು ನೋಂದಣಿಯಾದವರಿಗೆ ಆದ್ಯತೆ. ಮಾಹಿತಿಗಾಗಿ ಟಿ.ಎಂ. ಮರುಳಸಿದ್ಧಯ್ಯ (ಮೊ; 9663177254) ಅವರನ್ನು ಸಂಪರ್ಕಿಸಬಹುದು' ಎಂದು ತಿಳಿಸಿದ್ದಾರೆ.

'ಎರಡು ತಿಂಗಳಲ್ಲಿ ಇಂದಿರಾ ಕಿಟ್ ವಿತರಣೆ'

ಪ್ರಜಾವಾಣಿ ವಾರ್ತೆ

ಕೆ.ಎಚ್. ಮುನಿಯಪ್ಪ

ಬೆಂಗಳೂರು: ಬಿಪಿಎಲ್ ಪಡಿತರ ಕಾರ್ಡುದಾರರಿಗೆ ಜನವರಿ ಅಥವಾ ಫೆಬ್ರುವರಿಯಲ್ಲಿ ಇಂದಿರಾ ಕಿಟ್ ವಿತರಿಸಲಾಗುವುದು ಎಂದು ಆಹಾರ ಸಚಿವ ಅವರು ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಐದು ಕೆ.ಜಿ ಅಕ್ಕಿಯ ಜತೆಗೆ ಇಂದಿರಾ ಕಿಟ್ ಮೂಲಕ ತೊಗರಿ ಬೇಳೆ, ಸಕ್ಕರೆ, ಉಪ್ಪು ವಿತರಿಸಲಾಗುವುದು. ಅಕ್ಕಿ ವಿತರಣೆ ಪ್ರಮಾಣ ಹೆಚ್ಚಾಗಿದೆ. ಅಷ್ಟು ಪ್ರಮಾಣದಲ್ಲಿ ಅಕ್ಕಿ ಬಳಸುವುದಿಲ್ಲ ಎಂಬ ಕಾರಣಕ್ಕೆ ಇಂದಿರಾ ಕಿಟ್ ಯೋಜನೆ ಆರಂಭಿಸಲಾಗಿದೆ ಎಂದರು.

ಅನರ್ಹರ ಬಿಪಿಎಲ್ ಕಾರ್ಡ್ ರದ್ದಾಗಿದ್ದರೆ ಕೂಡಲೇ ತಹಶೀಲ್ದಾರ್ ಅವರನ್ನು ಭೇಟಿ ಮಾಡಿ ಅರ್ಜಿ ಸಲ್ಲಿಸಿದರೆ 15 ದಿನಗಳ ಒಳಗೆ ಪಡಿತರ ಕಾರ್ಡ್ ವಿತರಿಸಲಾಗುತ್ತದೆ. ಆಸ್ತಿ ಹೊಂದಿರುವವರೂ ಬಿಪಿಎಲ್ ಕಾರ್ಡ್ ಹೊಂದಿದ್ದಾರೆ ಎಂಬ ಆರೋಪ ಇದ್ದು, ಅದನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಹೊರ ರಾಜ್ಯಗಳಿಗೆ ಪಡಿತರವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಸಂಬಂಧ ಸುಮಾರು 574 ಮಂದಿಯನ್ನು ಬಂಧಿಸಿ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ಮುಂದೆ ಆ ರೀತಿ ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ಟಿಟಿಡಿ: ಅತಿಥಿಗೃಹ ಶೀಘ್ರ ಪೂರ್ಣ

ಬೆಂಗಳೂರು: ಆಂಧ್ರಪ್ರದೇಶದ ತಿರುಮಲದಲ್ಲಿ ಕರ್ನಾಟಕ ಸರ್ಕಾರ ನಿರ್ಮಿಸುತ್ತಿರುವ ಅತಿಥಿ ಗೃಹ ಹಾಗೂ ಛತ್ರದ ಕಾಮಗಾರಿಗಳನ್ನು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಪರಿಶೀಲಿಸಿದರು.

ಬೆಳಗಾವಿಯಲ್ಲಿ ನಡೆದ ವಿಧಾನಸಭೆ ಅಧಿವೇಶನದಲ್ಲಿ ಬಿಜೆಪಿಯ ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಶರವಣ ಅವರು ತಿರುಮಲದಲ್ಲಿ ನಡೆಯುತ್ತಿರುವ ಕಾಮಗಾರಿಗಳಲ್ಲಿನ ನ್ಯೂನತೆಗಳನ್ನು ಪ್ರಸ್ತಾಪಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದಾಗಿ ರಾಮಲಿಂಗಾರೆಡ್ಡಿ ಅವರು ಭರವಸೆ ನೀಡಿದ್ದರು.

ತಿರುಮಲಕ್ಕೆ ಸೋಮವಾರ ಭೇಟಿ ನೀಡಿದ್ದ ರಾಮಲಿಂಗಾರೆಡ್ಡಿ, ಟಿಟಿಡಿ ಅಧಿಕಾರಿಗಳೊಂದಿಗೆ ರಾಜ್ಯ ಸರ್ಕಾರದ 3 ಅತಿಥಿ ಗೃಹಗಳು ಹಾಗೂ ಛತ್ರದ ಪರಿಶೀಲನೆ ನಡೆಸಿದರು. 2026ರ ಮಾರ್ಚ್ ಅಂತ್ಯಕ್ಕೆ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಿದರು.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಬೀದರ್, ರಾಯಚೂರಿನಲ್ಲಿ ಶೀತಗಾಳಿ

ಬೆಂಗಳೂರು: ಬೀದರ್, ರಾಯಚೂರು ಜಿಲ್ಲೆಯಲ್ಲಿ ಗುರುವಾರ (ಡಿ.25) ಶೀತಗಾಳಿ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬುಧವಾರ ಹಾಸನದಲ್ಲಿ 8.1 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ. ಬೀದರ್‌ನಲ್ಲಿ 9.5, ವಿಜಯಪುರ, ರಾಯಚೂರು, ಧಾರವಾಡದಲ್ಲಿ 10, ಗದಗದಲ್ಲಿ 11, ಬೆಳಗಾವಿಯಲ್ಲಿ 12 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಚಿಂತಾಮಣಿಯಲ್ಲಿ 10.6, ದಾವಣಗೆರೆಯಲ್ಲಿ 11.5, ಶಿವಮೊಗ್ಗದಲ್ಲಿ 12.2 , ಮಂಡ್ಯದಲ್ಲಿ 12.6 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ಇತ್ತು.

ಬೆಂಗಳೂರು ನಗರ ಹಾಗೂ ಸುತ್ತಮುತ್ತ ಮುಂದಿನ 48 ಗಂಟೆಗಳ ಅವಧಿಯಲ್ಲಿ ಶುಭ್ರ ಆಕಾಶ ಇರಲಿದೆ. ಆದರೆ, ಬೆಳಗಿನ ಜಾವ ದಟ್ಟ ಮಂಜು ಕವಿಯಲಿದೆ. ಗರಿಷ್ಠ ಹಾಗೂ ಕನಿಷ್ಠ ತಾಪಮಾನ ಕ್ರಮವಾಗಿ 27 ಹಾಗೂ 15 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಮೂಲಗಳು ತಿಳಿಸಿವೆ.



ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ (ರಿ)
ಭಾಯಾಗಡ್, ಸೂರಗೊಂಡನಕೊಪ್ಪ, ಚಿನ್ನಿಕಟ್ಟಿ ಅಂಚೆ, ನ್ಯಾಮತಿ ತಾ॥ ದಾವಣಗೆರೆ ಜಿ॥ 577225

ಸದಸ್ಯತ್ವಕ್ಕಾಗಿ ಅರ್ಜಿಗಳ ಆಹ್ವಾನ

ಸಂತ ಸೇವಾಲಾಲ್ ರವರ ಜನ್ಮಸ್ಥಳ "ಭಾಯಾಗಡ್" ಕ್ಷೇತ್ರದ ಜೀರ್ಣೋದ್ಧಾರ, ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಸ್ಥಾಪಿತವಾಗಿರುವ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಗೆ ಸದಸ್ಯರಾಗಲು ಇಚ್ಚಿಸುವ ಸಂತರ ಅನುಯಾಯಿಗಳು/ಭಕ್ತಾಧಿಗಳಿಗೆ ನಿಯಮಾನುಸಾರ ಸಂಸ್ಥೆಯಲ್ಲಿ ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಒಂದು ಅವಕಾಶವನ್ನು ಕಲ್ಪಿಸಲಾಗಿದೆ. ಸಮಿತಿಯ ಸದಸ್ಯತ್ವ ಪಡೆಯಲು ಅರ್ಹತೆ ಇರುವ ಆಸಕ್ತ ವ್ಯಕ್ತಿಗಳು ತಾವು ಸದಸ್ಯರಾಗಬಯಸುವ ವರ್ಗದ ಸದಸ್ಯತ್ವಕ್ಕೆ (ಅಂದರೆ, ಸಾಮಾನ್ಯ/ಅಜೀವ ಅಥವಾ ಸಹ ಸದಸ್ಯತ್ವಕ್ಕೆ) ನೋಂದಣಿ ಮಾಡಲು ಕೋರಿ, ಭರ್ತಿ ಮಾಡಿದ ಅರ್ಜಿಗಳನ್ನು ಕೆಳಕಂಡ ವಿಳಾಸಕ್ಕೆ **ದಿನಾಂಕ:30.01.2026** ರ ಒಳಗಾಗಿ ಸಲ್ಲಿಸುವುದು. ತಡವಾಗಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿ ಸಲ್ಲಿಸುವ ವಿಳಾಸ: ಪ್ರಧಾನ ಕಾರ್ಯದರ್ಶಿಗಳು, ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ (ರಿ.), ಭಾಯಾಗಡ್, ಸೂರಗೊಂಡನಕೊಪ್ಪ, ಚಿನ್ನಿಕಟ್ಟೆ ಅಂಚೆ, ನ್ಯಾಮತಿ ತಾಲ್ಲೂಕು ದಾವಣಗೆರೆ ಜಿಲ್ಲೆ. 577225

ಆಸಕ್ತ ವ್ಯಕ್ತಿಗಳು ಸದಸ್ಯತ್ವ ನೋಂದಣಿಯ ಅರ್ಜಿಗಳನ್ನು ನಿಗದಿತ ಶುಲ್ಕ ಪಾವತಿಸಿ ಕೆಳಗೆ ತಿಳಿಸಿರುವ ಸ್ಥಳ/ಪದಾಧಿಕಾರಿಗಳಿಂದ ಪಡೆದುಕೊಳ್ಳುವುದು.

ಸದಸ್ಯತ್ವ ಅರ್ಜಿ ದೊರೆಯುವ ಸ್ಥಳ:
1. ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಯ ಆಡಳಿತ ಕಛೇರಿಯಲ್ಲಿ.
2. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಎಲ್ಲಾ ವಲಯ ಕಛೇರಿಗಳಲ್ಲಿ.
3. ಮಹಾಮಠ ಸಮಿತಿಯ ಕಾರ್ಯಕಾರಿ ಸಮಿತಿಗೆ ಜಿಲ್ಲೆ/ತಾಲ್ಲೂಕು/ಕ್ಷೇತ್ರದಿಂದ ಪ್ರತಿನಿಧಿಸಿರುವ ಸಮಿತಿಯ ನಿರ್ದೇಶಕರು/ಸದಸ್ಯರುಗಳ ಬಳಿ.

ವಿಶೇಷ ಸೂಚನೆ:
1. ಸಮಿತಿಯ ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸುವವರು ತಾವು ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾಡಿರುವ ಸೇವೆ/ಸಾಧನೆಯ ಕುರಿತು ಸಂಕ್ಷಿಪ್ತ ಟಿಪ್ಪಣಿಯನ್ನು ಅರ್ಜಿಯಲ್ಲಿ ನಮೂದಿಸಿ ಅಥವಾ ಆಲಾಯಿದ ಬರೆದು ಅರ್ಜಿಗೆ ಲಗತ್ತಿಟ್ಟು ಸಲ್ಲಿಸುವುದು.
2. ಸದಸ್ಯತ್ವಕ್ಕೆ ಸಲ್ಲಿಕೆಯಾಗುವ ಅರ್ಜಿಗಳನ್ನು ಸಮಿತಿಯ ಆಡಳಿತ ಮಂಡಳಿಯ ಸಂಸ್ಥೆಯಲ್ಲಿನ ಸ್ಥಾಪಿತ ಮಾರ್ಗಸೂಚಿಗೆ ಅನುಗುಣವಾಗಿ ಪರಿಶೀಲಿಸಿ ಸದಸ್ಯತ್ವ ನೀಡುವ ಕುರಿತು ತೀರ್ಮಾನ ಕೈಗೊಳ್ಳುವುದು.
3. ಸಮಿತಿಯ ಸದಸ್ಯತ್ವ ಪಡೆಯದೆ ಇರುವ ತಾಂಡಾಗಳಿಂದ ಸಲ್ಲಿಕೆಯಾಗುವ ಅರ್ಜಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.
4. ಸಂಸ್ಥೆಯ ಸದಸ್ಯತ್ವಕ್ಕೆ ಪರಿಗಣಿಸುವ ಅಥವಾ ತಿರಸ್ಕರಿಸುವ ಪರಮಾಧಿಕಾರವು ಆಡಳಿತ/ಸಮಿತಿಯ ಕಾರ್ಯಕಾರಿ ಮಂಡಳಿಗೆ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಆಡಳಿತಾಧಿಕಾರಿ ಮೊ:9448639185, ಪ್ರಧಾನ ಕಾರ್ಯದರ್ಶಿ: 9844024966, ಖಜಾಂಚಿ: 9945707563.

ಸಹಿ/-	ಸಹಿ/-	ಸಹಿ/-
ಶ್ರೀ ಎನ್. ಅರುಣ್ ಕುಮಾರ	ಶ್ರೀ ಬಿ. ಹೀರಾನಾಯ್ಕ	ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ
ಪ್ರಧಾನ ಕಾರ್ಯದರ್ಶಿ	ಅಧ್ಯಕ್ಷರು, ಧರ್ಮದರ್ಶಿ ಪರಿಷತ್	ಅಧ್ಯಕ್ಷರು

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
#30/1, 1 ನೇ ಮಹಡಿ, ಃಃಒಕ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560 052. ಇಮೇಲ್: dgm3bswml@gmail.com

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/731/2025–26 ದಿನಾಂಕ: 24.12.2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಗಾಗಿ ಆಹ್ವಾನ (ಜಿಟಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಅವರು ಅರ್ಹ ಸಂಸ್ಥೆಗಳಿಂದ ಕೆಳಕಂಡ ಕಾಮಗಾರಿಗಾಗಿ ಆಸಕ್ತಿ ಅಭಿವ್ಯಕ್ತಪಡಿಸುವಿಕೆ(EOI) ಆಹ್ವಾನಿಸುತ್ತದೆ

ಕಾಮಗಾರಿಯ ಹೆಸರು
ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ LVP ಮತ್ತು RDF ನನ್ನು ಸಹ–ಸಂಸ್ಕರಣೆಗಾಗಿ ಸಿಮೆಂಟ್ ಕೈಗಾರಿಕೆಗಳೊಂದಿಗೆ ತೊಡಗಿಸಿಕೊಳ್ಳುವಿಕೆಗಾಗಿ.

1. ಅರ್ಹ ಮತ್ತು ಆಸಕ್ತಿ ಹೊಂದಿರುವ ಸಿಮೆಂಟ್ ಕೈಗಾರಿಕೆಗಳೊಂದಿಗೆ ಉತ್ತಮ ನಿಶ್ಚಿತಾರ್ಥದ ಮಾದರಿಗಳನ್ನು ಪಡೆಯಲು ಮಾತ್ರ ಈ ಆಸಕ್ತಿಗಳ ಅಭಿವ್ಯಕ್ತಿಯನ್ನು ಆಹ್ವಾನಿಸಲಾಗಿದೆ.
2. ಆಸಕ್ತಿಗಳ ಅಭಿವ್ಯಕ್ತಿಯ ವಿವರಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕರಿಂದ ಡೌನ್‌ಲೋಡ್ ಮಾಡಬಹುದು ಖರೀದಿ ಪೋರ್ಟಲ್ **https://kppp.karnataka.gov.in/.**
3. ಪೂರ್ವಭಾವಿ ಸಭೆಯ **ದಿನಾಂಕ: 31.01.2026 ರಂದು ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಕಚೇರಿಯಲ್ಲಿ ನಡೆಯಲಿದೆ ಜನರಲ್ ಮ್ಯಾನೇಜರ್ (ತಾಂತ್ರಿಕ), ಬಿಎಸ್‌ಡಬ್ಲ್ಯೂಎಂಎಲ್, #30/1, 1 ನೇ ಮಹಡಿ, ಜಿಬಿಎ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.
4. ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ (ಗಡುವು): **07.01.2026 ರಂದು ಸಂಜೆ 4.00 ಗಂಟೆಯವರೆಗೆ.**
5. ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಗಳನ್ನು ತೆರೆಯುವ ದಿನಾಂಕ: 08.01.2026 ರಂದು ಸಂಜೆ 4.30 ಗಂಟೆಯ ನಂತರ.
6. ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಯಾವುದೇ ಕಾರಣಗಳನ್ನು ನೀಡದೆ ಬಿಎಸ್‌ಡಬ್ಲ್ಯೂಎಂಎಲ್‌ನ ಉಪ ಪ್ರಧಾನ ವ್ಯವಸ್ಥಾಪಕರು–3 ಇವರಿಗೆ ಕಾಯ್ದಿರಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/4677/ಎಎಎ/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ.ನಂ.113/5023 ದಿನಾಂಕ: 24–12–2025

ಟೆಂಡರ್ ಪ್ರಕಟಣೆ (ದ್ವಿಲಕೋಟಿ ಪದ್ಧತಿಯಲ್ಲಿ)
(ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಹೊಸ ತರಗತಿಯ ಸಂಕೀರ್ಣದಲ್ಲಿ ಮೊದಲನೇ ಮಹಡಿ ಸೆಮಿನಾರ ಹಾಲ್ ಅಲಂಕಾರ ಮಾಡುವ ಕಾಮಗಾರಿ ಮೊತ್ತ ರೂ.1,66,04,441/– (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ದಿನಾಂಕ: **24–12–2025** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
ವಾಸಾಸಂಇ/ಬೆಳಗಾವಿ/1534/ಅಡ್ವರ್ಟೋರ್/2025–26

ದಾವಣಗೆರೆ ವಿಶ್ವವಿದ್ಯಾನಿಲಯ
ಕುಲಸಚಿವರು (ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ–577007, ಕರ್ನಾಟಕ. ದೂರವಾಣಿ: 6363463991

ಸಂಖ್ಯೆ:ದಾವಿ:ಪವಿ:83:2025–26:2690 ದಿನಾಂಕ:24–12–2025

ಇ–ಟೆಂಡರ್ ಪ್ರಕಟಣೆ

ಉಲ್ಲೇಖ:- Tender No:DU/2025-26/IND0031

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಲೇಖನ ಸಾಮಾಗ್ರಿ/ಮುದ್ರಿತ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ದಿನಾಂಕ: 05.01.2026 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ/ವಿವರಗಳಿಗೆ ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–ಇವರಿಂದ ಮೊಬೈಲ್‌ಸಂಖ್ಯೆ: +916363463991 ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.inನಲ್ಲಿ ಪಡೆಯಬಹುದಾಗಿದೆ.

ವಾಸಾಇ/ದಾವಣಗೆರೆ/390/ಕೆಎಸ್‌ಎಂಸಿಎ/2025–26
ಸಹಿ/–ಕುಲಸಚಿವರು (ಪರೀಕ್ಷಾಂಗ)

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು
Dr. B.R. Ambedkar School of Economics University Bengaluru

No: BASEU/39/2025 Date: 24/12/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯಕ್ಕೆ **Computer** ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: **BASE/2025-26/IND0001/CALL-2,** ಅಂದಾಜು ಮೊತ್ತ **ರೂ. 55,50,000/–** ಇ.ಎಂ.ಡಿ **ರೂ.1,11,000/–.** ಟೆಂಡರ್ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಪಡೆದು **ದಿನಾಂಕ: 31.12.2025ರ ಸಂಜೆ 5.00 ಘಂಟೆಯೊಳಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **(https://kppp.karnataka.gov.in)** ಮುಖಾಂತರ ಟೆಂಡರ್ ಸಲ್ಲಿಸಬೇಕು. ಟೆಂಡರ್ ಅನ್ನು ರದ್ದುಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿರುತ್ತದೆ.

DIPR/CP/YC/4658/2025-26
ಸಹಿ/– ಹಣಕಾಸು ಅಧಿಕಾರಿಗಳು

ಸಂಪರ್ಕಿಸಿ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು, ಕರ್ನಾಟಕ – 560072 ಸಹಾಯವಾಣಿ: 080–29557767 ಇ–ಮೇಲ್: info@base.ac.in

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ 17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು 560 001.

ಸಂ: ವಾಸಾಸಂಇ/ಛಾಚಿವಿ/ಪ.ಜಾ.ಪ.ಪಂ.ಸಾಚಿ/2025–26/9630 ದಿನಾಂಕ : 22–12–2025

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರ್ದೇಶಕರಿಂದ ಸಾಕ್ಷ್ಯಚಿತ್ರ ನಿರ್ಮಾಣಕ್ಕಾಗಿ ಅರ್ಜಿ ಆಹ್ವಾನ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಎಸ್‌ಸಿಎಸ್‌ಪಿ/ ಟಿಎಸ್‌ಪಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರ್ದೇಶಕರಿಂದ ರಾಜ್ಯದ ಕಲೆ, ಸಂಸ್ಕೃತಿ, ಜಾನಪದ ಕಲೆ, ವಿಶಿಷ್ಟ ಸಾಧನೆ ಮಾಡಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳು, ಸಾಧಕರು ಮತ್ತು ಎಸ್.ಸಿ/ಎಸ್.ಟಿ ಜನರಿಗಾಗಿ ಸರ್ಕಾರ ರೂಪಿಸಿರುವ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ನಿರ್ದೇಶಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಆಸಕ್ತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರು ನಿಗದಿತ ಅರ್ಜಿ ನಮೂನೆಯನ್ನು ದಿನಾಂಕ:29–12–2025 ರಿಂದ ದಿನಾಂಕ:12–01–2026ರ ಸಂಜೆ 4.30 ಗಂಟೆವರೆಗೆ ಛಾಯಾ ಮತ್ತು ಚಲನಚಿತ್ರ ಶಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, "ವಾರ್ತಾ ಸೌಧ", # 17, ಭಗವಾನ ಮಹಾವೀರ ರಸ್ತೆ, ಬೆಂಗಳೂರು 560 001 ಇಲ್ಲಿಂದ ಪಡೆಯಬಹುದಾಗಿದೆ. ಅರ್ಜಿದಾರರು ನಿಗದಿತ ಅರ್ಜಿಯೊಂದಿಗೆ ಅರ್ಜಿ ಶುಲ್ಕ ರೂ.1,000/–(ಒಂದು ಸಾವಿರ ರೂ.ಗಳು ಮಾತ್ರ)ಗಳ ಮೊತ್ತವನ್ನು ಕೆ2 ಚಲನ್ ಮೂಲಕ ಹಣ ಪಾವತಿಸಿ, ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 12–01–2026ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಅರ್ಹ ನಿರ್ದೇಶಕರು ಈಗಾಗಲೇ ನಿರ್ಮಿಸಿರುವ ಸಾಕ್ಷ್ಯಚಿತ್ರದ ವಿವರ. ಡಿವಿಡಿ ಪ್ರತಿ, ಕಾರ್ಯಾದೇಶದ ಪ್ರತಿ ಮತ್ತು ಇತ್ತೀಚೆಗೆ ಪಡೆದಿರುವ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಉಪ ನಿರ್ದೇಶಕರು (ಛಾಯಾ ಮತ್ತು ಚಲನಚಿತ್ರ), ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು, ಇವರಿಂದ ಪಡೆಯಬಹುದಾಗಿದೆ.

ಸಹಿ/–
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
DIPR/CP/4655/NR/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಡಿಬಿ:ಟೆಂ:2025–26: 3319 ದಿನಾಂಕ:24–12–2025

ಅಲ್ಪಾಕಾಲಾವಧಿ ಟೆಂಡರ್ ಪ್ರಕಟಣೆ

ಲೆಕ್ಕ ಶೀರ್ಷಿಕೆ: 8443–ಠೇವಣಿ ವಂತಿಕೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಸಾಂಸ್ಥಿಕ ಅಕ್ಷರ ಅವಿಷ್ಕಾರ ಎಸ್.ಸಿ.ಪಿ., ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಸಾಮಾಜಿಕ–ಸಾಮಾನ್ಯ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಎಸ್.ಸಿ.ಪಿ, ಟಿ.ಎಸ್.ಪಿ. ಮತ್ತು ಸಾಮಾನ್ಯ ಎಸ್.ಡಿ.ಪಿ, ಮತ್ತು 2059 (ಯೋಜನೇತರ) ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 10 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 27984, 29860, 28130, 28455, 0147Call-2, 0146Call-2, 0145Call-2, 17395Call-2, 22102 & 0651) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **06–01–2026** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07–01–2026** ಸಮಯ 16.30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **09–01–2026** ಸಮಯ 16.00 ಗಂಟೆ, **ಕನಿಷ್ಠ ಅಂದಾಜು ಮೊತ್ತ ರೂ.** 4.00 ಲಕ್ಷಗಳು ಹಾಗೂ **ಗರಿಷ್ಠ ಅಂದಾಜು ಮೊತ್ತ ರೂ.** 850.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಮೀಸಲಾತಿ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/557/ಕೆಎಸ್‌ಎಂಸಿಎ/2025–26

"ಟೆಂಡರ್ ಪ್ರಕಟಣೆ"

ಪ್ರಕಟಣೆ ಸಂಖ್ಯೆ : DINCD/2025.–26/IND0101 ದಿನಾಂಕ : 23/12/2025
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಚಿಕ್ಕಮಗಳೂರು ಜಿಲ್ಲೆಯಲ್ಲಿ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ,** ಸಕ್ಷಮ್ ಯೋಜನೆಯಡಿ 2024–25ನೇ ಸಾಲಿನಲ್ಲಿ ಮುಜೂರಾದ 116 ಅಂಗನವಾಡಿ ಕೇಂದ್ರಗಳಿಗೆ ಶುದ್ಧ ಶೇಖರಣಾ ಸೌಲಭ್ಯ (Clean Storage Facility) ದಡಿ ಸಾಮಾಗ್ರಿಗಳನ್ನು ಪೂರೈಸಲು **ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್** (http://kppp.karnataka.gov.in) ಮೂಲಕ ತಾಂತ್ರಿಕ/ಆರ್ಥಿಕ ಬಿಡ್‌ಗಳ (ಎರಡು ಲಕೋಟಿ ಪದ್ಧತಿ) ಇ–ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಬಿಡ್‌ದಾರರು ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮುಖಾಂತರ ಬಿಡ್‌ಗಳನ್ನು ಸಲ್ಲಿಸಬಹುದಾಗಿದೆ.

1. **ಟೆಂಡರ್ ದಸ್ತಾವೇಜನ್ನು ಆನ್‌ಲೈನ್ ಮುಖಾಂತರ ಪಡೆಯಬಹುದಾದ ದಿನಾಂಕ: 24.12.2025**
2. **ಟೆಂಡರ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ: 07.01.2026 ಸಂಜೆ 5.00 ಗಂಟೆಗೆ**

ಟೆಂಡರ್ ಪ್ರಕಟಣೆ ಮತ್ತು ಟೆಂಡರ್ ಡಾಕ್ಯುಮೆಂಟ್ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ – ನಿರೂಪಣಾಧಿಕಾರಿಗಳು, ಜಿಲ್ಲಾ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೌಸಿಂಗ್ ಬೋರ್ಡ್, ಬಾಲಕರ ಬಾಲಮಂದಿರ ಆವರಣ, ಚಿಕ್ಕಮಗಳೂರು–577102 ಇವರ ಕಛೇರಿಯಿಂದ (ದೂರವಾಣಿ ಸಂಖ್ಯೆ: 08262–295749) ಪಡೆಯಬಹುದಾಗಿದೆ.

ನಿರೂಪಣಾಧಿಕಾರಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು.

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585 102, ದೂ. (08472) - 256767, 239556, 255564, ಫ್ಯಾಕ್ಸ್ : (08472) - 227527 E-mail : hkadbgulb@gmail.com Website : kkrdb.karnataka.gov.in

ಸಂಖ್ಯೆ: KKRDB/TECH/3rd Party/2025-26/ ದಿನಾಂಕ:24.12.2025.

:: ಅಲ್ಪಾವಧಿ ಟೆಂಡರ ಪ್ರಕಟಣೆ ::

1) ಕಾಮಗಾರಿಯ ಹೆಸರು: Empanelment of Third Party Consultants for Quality Assurance Audit and Control of Development works funded by KKRDB in **Bidar, Yadgir Districts & KKRDB** : ಇ.ಎಂ.ಡಿ ಮೊತ್ತ ರೂ. **12,00,000/–,** Empanelment of Third Party Consultants for Quality Assurance Audit and Control of Development works funded by KKRDB in **Raichur & Koppal Districts** : ಇ.ಎಂ.ಡಿ ಮೊತ್ತ ರೂ. **14,00,000/-,** Empanelment of Third Party Consultants for Quality Assurance Audit and Control of Development works funded by KKRDB in **Kalaburagi District** : ಇ.ಎಂ.ಡಿ ಮೊತ್ತ ರೂ. **15,00,000/-,** 2) ಲೆಕ್ಕ ಶೀರ್ಷಿಕೆ: **KKRDB** ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: **24.12.2025,** 5) ಕ್ವಾರೀಸ್ ಸಲ್ಲಿಸುವ ದಿನಾಂಕ: **31–12–2025 ಸಾಯಂಕಾಲ 5.30ಕ್ಕೆ,** 6) ಪ್ರಿ–ಬಿಡ್ ಸಭೆ ದಿನಾಂಕ (online): **01–01–2026 ಬೆಳಿಗ್ಗೆ 11.30ಕ್ಕೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **09–01–2026 ಮಧ್ಯಾಹ್ನ 4.30ರ ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–01–2026 ಸಾಯಂಕಾಲ 4.35ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: **13–01–2026 ಸಾಯಂಕಾಲ 5.30ಕ್ಕೆ,** 10) ಟೆಂಡರ್ ಅರ್ಜಿ ಬೆಲೆ : https://kppp.karnataka.gov.in ಪೋರ್ಟಲ್‌ನಲ್ಲಿ ಇದ್ದಂತೆ, 11) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : https://kppp.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 12) ಅಂತರ್‌ಜಾಲ ತಾಣದ ವಿಳಾಸ: https://kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://kppp.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ. ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/891/ಕೆ.ಎಸ್.ಎಂ.ಸಿ.&ಎ/2025–26

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ನಗರ ಯೋಜಕರು, ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು–560002.

ಸಂ: ಮು.ನ.ಯೋ/ಗ್ರೇ.ಬೆಂ.ಪ್ರಾ/ಮ.ಯೋ/365/2025–26 ದಿನಾಂಕ: 24.12.2025

"ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ GIS ಆಧಾರಿತ ಮಹಾಯೋಜನೆ ತಯಾರಿಕೆ ಕಾರ್ಯಕ್ಕೆ" ಅರ್ಹ ಸಂಸ್ಥೆಯ ಆಯ್ಕೆ ಕುರಿತು ಗ್ಲೋಬಲ್ ಟೆಂಡರ್
(ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಮಾತ್ರ)

"ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ (ಜಿ.ಬಿ.ಎ) ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ GIS ಆಧಾರಿತ ಮಹಾಯೋಜನೆ ತಯಾರಿಕೆ" ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಿದ್ದು ಸದರಿ ಕಾರ್ಯಕ್ಕೆ ಇ–ಟೆಂಡರ್ ಮೂಲಕ ಅರ್ಹ ಸಂಸ್ಥೆಯ ಸೇವೆಯನ್ನು ಪಡೆದುಕೊಳ್ಳಲು ಉದ್ದೇಶಿಸಲಾಗಿದೆ.

ಟೆಂಡರ್ ಉಲ್ಲೇಖ ಸಂಖ್ಯೆ	GBA/2025-26/SE0022
ಟೆಂಡರ್ ದಸ್ತಾವೇಜು www.kppp.karnataka.gov.in ನಲ್ಲಿ ಲಭ್ಯವಾಗುವ ದಿನಾಂಕ	24.12.2025
ಜಿ.ಬಿ.ಎ ಕಛೇರಿಯಲ್ಲಿ ಪೂರ್ವ ಬಿಡ್ ಸಭೆ ಮತ್ತು ಸ್ಥಳ	09-01-2026 at 11:00 AM ಸ್ಥಳ: ಮುಖ್ಯ ನಗರ ಯೋಜಕರು, ರವರ ಕಛೇರಿ, ಎನ್.ಆರ್.ಚೌಕ, ಹಡ್ಸನ್ ವೃತ್ತ, ಬೆಂಗಳೂರು–560002.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	10-02-2026 at 5.30 PM
ಕೆಪಿಪಿಪಿ ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	12-02-2026 at 11:00 AM

ಅರ್ಹತೆ ಮಾನದಂಡ, ಕೆಲಸದ ವ್ಯಾಪ್ತಿ, ಇತರೆ ಷರತ್ತುಗಳು ಮತ್ತು ನಿಬಂಧನೆಗಳ ವಿವರಗಳನ್ನೊಳಗೊಂಡ ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ ಮೆಂಟ್ ಇಲಾಖೆಯ ಪೋರ್ಟಲ್ **:http:/www.kppp.karnataka.gov.in** ರಲ್ಲಿ ಪಡೆದುಕೊಳ್ಳಬಹುದಾಗಿದೆ. ಸದರಿ ಪೋರ್ಟಲ್ ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10.02.2026 ರ ಅಪರಾಹ್ನ 5.30 ಗಂಟೆ** ಆಗಿರುತ್ತದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಯಾವುದೇ/ಎಲ್ಲಾ ಪ್ರಸ್ತಾವನೆಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ಅಪರ ಮುಖ್ಯ ನಗರ ಯೋಜಕರು,
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ಸರ್ವೆ ನಂ.8, ಡಾ॥ ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ಫೋನ್ ನಂ.: 080–22024000.
ಇ–ಮೇಲ್: cekrdcl@gmail.com, ವೆಬ್‌ಸೈಟ್: http://www.krdcl.in

ಸಂಖ್ಯೆ: ಕೆಆರ್‌ಡಿಸಿಎಲ್/ಐಎಫ್‌ಬಿ/2025–26/20 ದಿನಾಂಕ: 24–12–2025

ಟೆಂಡರ್ ಆಹ್ವಾನ ಪ್ರಕಟಣೆ

(I) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು [ಕೆಆರ್‌ಡಿಸಿಎಲ್] ಕೆಳಕಂಡ ರಾಜ್ಯ ಹೆದ್ದಾರಿ ಕಾಮಗಾರಿಗಳಿಗಾಗಿ ಪ್ರತಿಷ್ಠಿತ ಅರ್ಹ ಗುತ್ತಿಗೆದಾರಾರುಗಳಿಂದ ಬಿಡ್‌ಗಳನ್ನು ಆಹ್ವಾನಿಸಲು ಪ್ರಸ್ತಾಪಿಸಲಾಗಿದೆ:

ಕಾಮಗಾರಿ ವಿವರ: **ಮಹಾರಾಜಪೇಟೆ ಬಳಿ ಹಾನಗಲ್ ತಡಸ ರಾಜ್ಯ ಹೆದ್ದಾರಿಯ ರಸ್ತೆ ಅಗಲೀಕರಣ ಮತ್ತು ಮರು ಡಾಂಬರೀಕರಣ ಕಾಮಗಾರಿ.** ಕೆಲಸದ ಅಂದಾಜು ವೆಚ್ಚ (ಜಿಎಸ್‌ಟಿ ಹೊರತುಪಡಿಸಿ): **ರೂ.365 ಲಕ್ಷ.** ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ): **ರೂ.5.50 ಲಕ್ಷ. (ಕೆಪಿಪಿ ಪೋರ್ಟಲ್ ಮೂಲಕ ರೂ.1.0 ಲಕ್ಷ ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ ಬಾಕಿ ಮೊತ್ತ).** ಪೂರ್ಣಗೊಳಿಸುವ ಅವಧಿ: **4 ತಿಂಗಳುಗಳು.**

(II) ಆಸಕ್ತ ಅರ್ಜಿದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ **https://kppp.karnataka.gov.in** ನಿಂದ ಸಂಪೂರ್ಣ ದಾಖಲೆಯನ್ನು ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು ಮತ್ತು ಅದೇ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಆನ್‌ಲೈನ್ (ಕೆಪಿಪಿ) ನಲ್ಲಿ ಸಲ್ಲಿಸಬಹುದು. (III) ತಾಂತ್ರಿಕ ಪ್ರಸ್ತಾವನೆ, ಇಎಂಡಿ ಸಹಿತ ಮತ್ತು ಆರ್ಥಿಕ ಬಿಡ್ ಜೊತೆಗೆ ಆರ್‌ಎಫ್‌ಪಿ ಪ್ರಕಾರ ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. **(IV)** ಪೂರ್ವಭಾವಿ ಬಿಡ್ ವಿಚಾರಣೆಗಳು, ಯಾವುದಾದರೂ ಇದ್ದರೆ **ದಿನಾಂಕ: 01–01–2026 ರಂದು ಸಂಜೆ 17.30 ಗಂಟೆಯ ಒಳಗೆ ಕೆಪಿಪಿ ಪೋರ್ಟಲ್** / ಇ–ಮೇಲ್: **cekrdcl@gmail.com** ಮೂಲಕ ಸಲ್ಲಿಸಬೇಕು. **(V)** ಬಿಡ್–ಪೂರ್ವಭಾವಿ ಸಭೆಯು **ದಿನಾಂಕ: 02–01–2026 ರಂದು ಮಧ್ಯಾಹ್ನ 15.30 ಗಂಟೆಗೆ ಕೆಆರ್‌ಡಿಸಿಎಲ್ ಪ್ರಧಾನ ಕಚೇರಿ, ಬೆಂಗಳೂರು ನಲ್ಲಿ ನಡೆಯಲಿದೆ. (VI)** ಬಿಡ್‌ಗಳನ್ನು **ದಿನಾಂಕ: 08–01–2026 ರಂದು ಸಂಜೆ 17:00 ಗಂಟೆಯ ಒಳಗೆ ಕೆಪಿಪಿ ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು. (VII)** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 09–01–2026 ರಂದು ಸಂಜೆ 17:15 ಗಂಟೆಗೆ ತೆರೆಯಲಾಗುತ್ತದೆ. (VIII)** ಯಾವುದೇ ಕಾರಣವನ್ನು ನೀಡದೆ ಯಾವುದೇ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ ಎಂಬುದನ್ನು ದಯವಿಟ್ಟು ಗಮನಿಸಿ.

ಇದಲ್ಲದೆ, ಬಿಡ್ ದಾಖಲೆಗಳಿಗೆ ಸಂಬಂಧಿಸಿದ ಯಾವುದೇ ಅನುಬಂಧಗಳು / ಸ್ಪಷ್ಟೀಕರಣಗಳು / ದಿನಾಂಕಗಳ ಕ್ಯಾಲೆಂಡರ್‌ನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ / ಅಪ್‌ಲೋಡ್ ಮಾಡಲಾಗುತ್ತದೆ.

ಸಹಿ/– ಮುಖ್ಯ ಅಭಿಯಂತರರು,
ಕರಅನಿನಿ, ಬೆಂಗಳೂರು
DIPR/CP/4676/AAA/2025-26

ಸ್ಥಳೀಯ ಸಂಸ್ಥೆ: ಬಿಜೆಪಿ ಜಯಭೇರಿ

ಬಜಪೆ, ಕಿನ್ನಿಗೋಳಿ, ಮಂಕಿ, ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ: ಅರಳಿದ ಕಮಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 4 ಪಟ್ಟಣಪಂಚಾಯಿತಿಗಳಿಗೆ ಮೊದಲ ಬಾರಿಗೆ ಚುನಾವಣೆ
- ಆಡಳಿತರೂಢ ಕಾಂಗ್ರೆಸ್ ಪಕ್ಷದ ನೀರಸ ಸಾಧನೆ

ಬೆಂಗಳೂರು: ರಾಜ್ಯದ ನಾಲ್ಕು ಪಟ್ಟಣ ಪಂಚಾಯಿತಿಗಳು ಮತ್ತು ಪಟ್ಟಣ ಪಂಚಾಯಿತಿ, ನಗರಸಭೆಯ ಒಂದು ತಲಾ ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ.

ಈ ಸ್ಥಳೀಯ ಸಂಸ್ಥೆಗಳ ಒಟ್ಟು 78 ಕ್ಷೇತ್ರಗಳಿಗೆ ಡಿ.21ರಂದು ಚುನಾವಣೆ ನಡೆದಿದ್ದು, ಬುಧವಾರ ಮತಎಣಿಕೆ ನಡೆಯಿತು. ಬಿಜೆಪಿ ಒಟ್ಟು 49 ಕ್ಷೇತ್ರ ಗೆದ್ದಿದೆ. 4 ಪಟ್ಟಣ ಪಂಚಾಯಿತಿಗಳಲ್ಲಿ ಬಹುಮತ ಪಡೆದುಕೊಂಡಿದೆ.

ರಾಜ್ಯದ ಆಡಳಿತರೂಢ ಕಾಂಗ್ರೆಸ್ ಪಕ್ಷವು 23 ಕ್ಷೇತ್ರಗಳಲ್ಲಿ ಜಯಗಳಿಸಿದ್ದರೆ, ಎಸ್‌ಡಿಪಿಐ 3 ಮತ್ತು ಜೆಡಿಎಸ್ 1 ಕ್ಷೇತ್ರದಲ್ಲಿ ಜಯಗಳಿಸಿದೆ. ಎರಡು ಕ್ಷೇತ್ರಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ ಹಾಗೂ ಕಿನ್ನಿಗೋಳಿ ಪಟ್ಟಣ ಪಂಚಾಯಿತಿಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಲಭಿಸಿದೆ.

ಬಜಪೆ ಪಟ್ಟಣ ಪಂಚಾಯಿತಿಯ 19 ಸ್ಥಾನಗಳಲ್ಲಿ ಬಿಜೆಪಿ 11, ಕಾಂಗ್ರೆಸ್ 4, ಎಸ್‌ಡಿಪಿಐ 3 ಹಾಗೂ ಪಕ್ಷೇತರ ಒಂದು ಸ್ಥಾನದಲ್ಲಿ ಗೆದ್ದಿದ್ದಾರೆ.

ಕಿನ್ನಿಗೋಳಿ ಪಟ್ಟಣ ಪಂಚಾಯಿತಿಯ 18 ಸ್ಥಾನಗಳಲ್ಲಿ ಬಿಜೆಪಿ 10, ಕಾಂಗ್ರೆಸ್ 8 ಸ್ಥಾನಗಳಿಸಿವೆ.

ಬಜಪೆ, ಮಳವೂರು ಗ್ರಾಮ ಪಂಚಾಯಿತಿಗಳನ್ನು ವಿಲೀನಗೊಳಿಸಿ ಬಜಪೆ ಪಟ್ಟಣ ಪಂಚಾಯಿತಿ ಹಾಗೂ ಕಿನ್ನಿಗೋಳಿ, ಮೆನ್ನಬೆಟ್ಟು, ಕಟೀಲು ಗ್ರಾಮ ಪಂಚಾಯಿತಿಗಳನ್ನು ವಿಲೀನಗೊಳಿಸಿ ಕಿನ್ನಿಗೋಳಿ ಪಟ್ಟಣ ಪಂಚಾಯಿತಿ ರಚಿಸಲಾಗಿತ್ತು. 2021ರಲ್ಲಿಯೇ ರಚನೆಯಾಗಿದ್ದು, ಮೊದಲ ಬಾರಿಗೆ ಚುನಾವಣೆ ನಡೆಯಿತು.

ಪಂಚಾಯಿತಿ ಚುನಾವಣೆ: ಯಾವ ಪಕ್ಷ, ಎಷ್ಟು?

ಸ್ಥಳೀಯ ಸಂಸ್ಥೆ	ಒಟ್ಟು	ಬಿಜೆಪಿ	ಕಾಂಗ್ರೆಸ್	ಎಸ್‌ಡಿಪಿಐ	ಜೆಡಿಎಸ್	ಪಕ್ಷೇತರ
ಬಜಪೆ	19	11	04	03	00	01
ಕಿನ್ನಿಗೋಳಿ	18	10	08	00	00	00
ಮಂಕಿ	20	12	08	00	00	00
ಬಾಶೆಟ್ಟಿಹಳ್ಳಿ	19	14	03	00	01	01
ತುರ್ವಿಹಾಳ	01	01	00	00	00	00
ದೊಡ್ಡಬಳ್ಳಾಪುರ*	01	01	00	00	00	00
ಒಟ್ಟು	78	49	23	03	01	02

*ನಗರಸಭೆ

ಬಾಶೆಟ್ಟಿಹಳ್ಳಿ- ಬಿಜೆಪಿ ಗೆಲುವು (ದೊಡ್ಡಬಳ್ಳಾಪುರ ವರದಿ): ಗ್ರಾಮ ಪಂಚಾಯಿತಿಯಿಂದ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದ ಬಳಿಕ ನಡೆದ ಮೊದಲ ಚುನಾವಣೆಯಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿದೆ.

19 ವಾರ್ಡ್‌ಗಳಲ್ಲಿ ಬಿಜೆಪಿ 14ರಲ್ಲಿ ಜಯಗಳಿಸಿ ಅಧಿಕಾರ ಹಿಡಿದಿದೆ. ಕಾಂಗ್ರೆಸ್ ಮೂರು, ಜೆಡಿಎಸ್ ಒಂದು ಹಾಗೂ ಸ್ವತಂತ್ರ ಅಭ್ಯರ್ಥಿ ಒಂದು ಕ್ಷೇತ್ರದಲ್ಲಿ ಜಯ ಸಾಧಿಸಿದ್ದಾರೆ.

ಡಿ.21ರಂದು ಪಟ್ಟಣ ಪಂಚಾಯಿತಿ ಚುನಾವಣೆ ಹಾಗೂ ದೊಡ್ಡಬಳ್ಳಾಪುರ ನಗರಸಭೆಯ 21ನೇ ಒಂದು ವಾರ್ಡ್‌ಗೆ ಉಪ ಚುನಾವಣೆಯ ಮತದಾನ ನಡೆದಿತ್ತು.

ಬಿಜೆಪಿ ಹಾಗೂ ಜೆಡಿಎಸ್ ಇಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ದೊಡ್ಡಬಳ್ಳಾಪುರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಚುನಾವಣೆ ವೇಳೆ ಮೈತ್ರಿಯಲ್ಲಿ ಉಂಟಾದ ಬಿರುಕು ಈಗಲೂ ಮುಂದುವರೆದಿದೆ.

ಮಂಕಿ ಪ.ಪಂ- ಬಿಜೆಪಿಗೆ ಬಹುಮತ (ಹೊನ್ನಾವರ ವರದಿ): ಮಂಕಿ ಪಟ್ಟಣ ಪಂಚಾಯಿತಿಯಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಲು ಸಜ್ಜಾಗಿದ್ದು, 20 ವಾರ್ಡ್‌ಗಳ ಪೈಕಿ 12 ಸ್ಥಾನ ಗೆದ್ದು, ಸ್ಪಷ್ಟ ಬಹುಮತ ಗಳಿಸಿದೆ.

2 ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದರು. ಚುನಾವಣೆಯಲ್ಲಿ 6 ಕ್ಷೇತ್ರ ಗೆದ್ದಿದ್ದು, ಕಾಂಗ್ರೆಸ್ 8 ಸ್ಥಾನ ಪಡೆದು ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಗಿದೆ.

ಬಿಜೆಪಿ ಬಹುಮತ ಪಡೆಯುವುದರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ತಮ್ಮದೇ ಕ್ಷೇತ್ರದಲ್ಲಿ ಹಿನ್ನಡೆ ಅನುಭವಿಸಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

2020ರ ನವೆಂಬರ್‌ನಲ್ಲಿ ಮಂಕಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲಾಗಿತ್ತು. ಐದು ವರ್ಷಗಳ ಬಳಿಕ ಚುನಾವಣೆ ನಡೆಯಿತು.

ತುರುವಿಹಾಳ- ಗೆದ್ದ ಬಿಜೆಪಿ: ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ತುರ್ವಿಹಾಳ ಪಟ್ಟಣ ಪಂಚಾಯಿತಿಯ ವಾರ್ಡ್ ನಂ. 4ಕ್ಕೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ದೊಡ್ಡಬಳ್ಳಾಪುರ ನಗರಸಭೆ 21ನೇ ವಾರ್ಡ್ ಉಪಚುನಾವಣೆಯಲ್ಲೂ ಬಿಜೆಪಿ ಅಭ್ಯರ್ಥಿ ಜಯಗಳಿಸಿದ್ದಾರೆ.

ಅಜಾತಶತ್ರು, ಜನನಾಯಕ

ಜೇವರ್ಗಿ ಕ್ಷೇತ್ರದ 'ಸೋಲಿಲ್ಲದ ಸರದಾರ' ಧರ್ಮಸಿಂಗ್

• ವಿಜಯಕುಮಾರ ಎಸ್. ಕಲ್ಲಾ

ಎನ್.ಧರ್ಮಸಿಂಗ್

ಇಂದು ಜಯಂತಿ ಕಾರ್ಯಕ್ರಮ

ಜೇವರ್ಗಿ (ಕಲಬುರಗಿ ಜಿಲ್ಲೆ): ಧರ್ಮ, ಜಾತಿ, ಮತ, ಪಂಗಡಗಳನ್ನು ಮೀರಿ ಸರ್ವಜನಾಂಗದ ನಾಯಕರಾಗಿ ಮೆರೆದವರು ಮಾಜಿ ಮುಖ್ಯಮಂತ್ರಿ ದಿವಂಗತ ಎನ್.ಧರ್ಮಸಿಂಗ್. ಈ ನಾಡಿಗಾಗಿ ಶಕ್ತಿ ಮೀರಿ ದುಡಿದಿರುವ ಧರ್ಮಸಿಂಗ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ ಸ್ನೇಹ ಭಾರತದ ರಾಜಕಾರಣದಲ್ಲಿಯೇ ಜಗಜ್ಜಾಹೀರಾಗಿದೆ.

ರಾಜಕೀಯ ವಲಯದಲ್ಲಿ ಪಾರದರ್ಶಕ ಹಾಗೂ ಆತ್ಮೀಯತೆಯನ್ನು ಮೆರೆದಂತಹ ಜನನಾಯಕ ಎಂಬ ಕೀರ್ತಿಗೆ ಧರ್ಮಸಿಂಗ್ ಪಾತ್ರರಾಗಿದ್ದಾರೆ. ಪದಗಳಿಗೆ ನಿಲುಕದ ಉದಾತ್ತ ವ್ಯಕ್ತಿತ್ವ ಅವರದ್ದು. ಸಾರ್ವಜನಿಕರನ್ನು ಸನಿಹ ಕರೆದು ಅಪ್ಪಿಕೊಳ್ಳುವ ಆದರ್ಶಮಯ–ಕರುಣಾಮಯಿ ಹೃದಯವುಳ್ಳವರಾಗಿದ್ದರು.

ಧರ್ಮಸಿಂಗ್ ಅವರು ಹುಟ್ಟಿದ್ದು 1936 ಡಿಸೆಂಬರ್ 25ರಂದು. ಅವರ ಹುಟ್ಟೂರು ಜೇವರ್ಗಿಯ ನೆಲೋಗಿ ಗ್ರಾಮ. ಆಂಧ್ರ ಪ್ರದೇಶದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಧರ್ಮಸಿಂಗ್ ಎಂ.ಎ ಮತ್ತು ಎಲ್.ಎಲ್.ಬಿ ಪದವಿ ವ್ಯಾಸಂಗ ಮಾಡಿದ್ದರು. 1960ರಲ್ಲಿ ಕಲಬುರಗಿ ನಗರಸಭಾ ಸದಸ್ಯರಾದ ಅವರು ಅದೇ ವರ್ಷ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು.

1972ರಲ್ಲಿ ವಿಧಾನಸಭಾ ಚುನಾವಣೆಗೆ ಜೇವರ್ಗಿ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮಹಾದೇವಪ್ಪ ರಾಂಪುರೆ ಇವರ ಎದುರಾಳಿ. ರಾಂಪುರೆ ಹೈದರಾಬಾದ್ ಕರ್ನಾಟಕ ಭಾಗದ ಪ್ರಭಾವಿ ಲಿಂಗಾಯತ ನಾಯಕ. ಅವರನ್ನು ಜನ 'ಹೈ.ಕ. ಹುಲಿ' ಎಂದೇ ಕರೆಯುತ್ತಿದ್ದರು. ಹೀಗಿದ್ದರೂ ಚುನಾವಣೆಯಲ್ಲಿ ಧರ್ಮಸಿಂಗ್ ಗೆಲುವು ಸಾಧಿಸಿದ್ದು ವಿಶೇಷವಾಗಿತ್ತು.

ಜೇವರ್ಗಿ ವಿಧಾನಸಭೆ ಕ್ಷೇತ್ರದಿಂದ ಸತತವಾಗಿ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾದ ಅಪರೂಪದ ಸಾಧನೆ ಧರ್ಮಸಿಂಗ್ ಅವರದ್ದು. ಹಿಂದುಳಿದ ವರ್ಗಗಳ ಆಯೋಗದ ಸದಸ್ಯರು, ಗೃಹ, ಲೋಕೋಪಯೋಗಿ, ಅಬಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ಧರ್ಮಸಿಂಗ್ ಕಾರ್ಯ ನಿರ್ವಹಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿಯೂ ಅವರು ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದಾರೆ. ಜೇವರ್ಗಿ ಕ್ಷೇತ್ರದ ಜನ ಎಂಟು ಬಾರಿ ವಿಧಾನಸಭೆಗೆ ಸತತವಾಗಿ ಗೆಲ್ಲಿಸಿ, ಧರ್ಮಸಿಂಗ್ ಅವರಿಗೆ 'ಸೋಲಿಲ್ಲದ ಸರದಾರ' ಎಂಬ ಕಿರೀಟ ತೊಡಿಸಿದ್ದರು.

2004ರಿಂದ 2006ರವರೆಗೆ ಕರ್ನಾಟಕದಲ್ಲಿ ರಚನೆಯಾಗಿದ್ದ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಧರ್ಮಸಿಂಗ್ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಬಳಿಕ ರಾಜ್ಯದಲ್ಲಿ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಿಂದಾಗಿ ಅವರು ಅಧಿಕಾರ ಕಳೆದುಕೊಳ್ಳುವಂತಾಯಿತು. 2006–2007ರ ಸಂದರ್ಭದಲ್ಲಿ ಧರ್ಮಸಿಂಗ್ ವಿರೋಧ ಪಕ್ಷದ ನಾಯಕರಾದರು. 2009ರ ಲೋಕಸಭಾ ಚುನಾವಣೆಯಲ್ಲಿ ಬೀದರ್ ಕ್ಷೇತ್ರಕ್ಕೆ ವಲಸೆ ಹೋಗಿ ಸಂಸದರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಮರುಜೀವ ಪಡೆದಿದ್ದರು.

'ಜಾತಿ, ಧರ್ಮ ಮೀರಿ ಬೆಳೆದ ನಾಯಕ'

ಧರ್ಮಸಿಂಗ್ ಅವರು 1980ರಲ್ಲಿ ಕಲಬುರಗಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಮುನ್ನವೇ ತಮ್ಮ ನಾಯಕಿ ಇಂದಿರಾ ಗಾಂಧಿ ಅವರ ಸೂಚನೆಯ ಮೇರೆಗೆ ರಾಜೀನಾಮೆ ನೀಡಿ, ಕೇರಳದ ಸಿ.ಎಂ. ಸ್ಟೀಫನ್ ಅವರಿಗೆ ಕ್ಷೇತ್ರವನ್ನು ಬಿಟ್ಟುಕೊಟ್ಟರು. ಧರ್ಮಸಿಂಗ್ 13 ಚುನಾವಣೆಗಳನ್ನು ಎದುರಿಸಿದ್ದಾರೆ. ಅವುಗಳಲ್ಲಿ ಒಂದು ಬಾರಿ ಕಲಬುರಗಿ ನಗರಸಭೆಯ ಸದಸ್ಯ, ಎಂಟು ಬಾರಿ ಶಾಸಕ, ಎರಡು ಬಾರಿ ಸಂಸದರಾಗಿರುವುದು ವಿಶೇಷವಾಗಿದೆ.

ಐದೂವರೆ ದಶಕಗಳಿಗಿಂತಲೂ ಹೆಚ್ಚು ಕಾಲ ಕಾಂಗ್ರೆಸ್ ಪಕ್ಷದ ಕಟ್ಟಾಳುವಾಗಿದ್ದ ಧರ್ಮಸಿಂಗ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಹೊಂದಿದ್ದ ಸ್ನೇಹ ಮತ್ತು ಒಡನಾಟ ಕೇವಲ ರಾಜ್ಯ ರಾಜಕಾರಣದಲ್ಲಷ್ಟೇ ಅಲ್ಲ; ರಾಷ್ಟ್ರ ರಾಜಕಾರಣದಲ್ಲೂ ಗಮನ ಸೆಳೆದಿತ್ತು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಂದ ಹಿಡಿದು ಅಧಿನಾಯಕರವರೆಗೆ ಎಲ್ಲರ ಪ್ರೀತಿ ಮತ್ತು ವಿಶ್ವಾಸಕ್ಕೆ ಪಾತ್ರರಾಗಿದ್ದ ಧರ್ಮಸಿಂಗ್ ಅವರನ್ನು ಪ್ರತಿಪಕ್ಷಗಳ ಎಲ್ಲಾ ನಾಯಕರೂ ಗೌರವಿಸುವ ಹಾಗೂ ಮೆಚ್ಚುವ ವ್ಯಕ್ತಿತ್ವವನ್ನು ಹೊಂದಿದ್ದರು. ಅವರು ರಾಜಕೀಯ ವಲಯದಲ್ಲಿ ಅಜಾತಶತ್ರು ಎಂದು ಗುರುತಿಸಿಕೊಂಡಿದ್ದರು.

ಆಡಳಿತ ವೈಫಲ್ಯಕ್ಕೆ ತಕ್ಕ ಪಾಠ: ಬಿವೈವಿ

ಪ್ರಜಾವಾಣಿ ವಾರ್ತೆ

ಬಿ.ವೈ. ವಿಜಯೇಂದ್ರ

ಬೆಂಗಳೂರು: 'ನಾಲ್ಕು ಪಟ್ಟಣ ಪಂಚಾಯಿತಿಗಳ ಚುನಾವಣೆಯಲ್ಲಿ ನಮ್ಮ ಪಕ್ಷ ಬಹುಮತ ಸಾಧಿಸಿದೆ. ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಕ್ಕೆ ಈ ಚುನಾವಣೆಯಲ್ಲಿ ಜನ ಪಾಠ ಕಲಿಸಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಫಲಿತಾಂಶದ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, 'ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆ ಮತ್ತು ಕಿನ್ನಿಗೋಳಿ, ಉತ್ತರ ಕನ್ನಡ ಜಿಲ್ಲೆಯ ಮಂಕಿ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದಿದೆ. ಇದು ನಮ್ಮ ಪಕ್ಷದ ಬಲವರ್ಧನೆಯ ಸ್ಪಷ್ಟ ಸಂಕೇತ' ಎಂದರು.

> **4 ಪಟ್ಟಣ ಪಂಚಾಯಿತಿಗಳ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಕಾಂಗ್ರೆಸ್‌ನ ದುರಾಡಳಿತಕ್ಕೆ ಈ ಮೂಲಕ ಜನರು ಉತ್ತರ ನೀಡಿದ್ದಾರೆ**
> **ಆರ್.ಅಶೋಕ**, ವಿರೋಧ ಪಕ್ಷದ ನಾಯಕ

> **'ಪಟ್ಟಣ ಪಂಚಾಯಿತಿ ಚುನಾವಣೆಯನ್ನು ದಿಕ್ಸೂಚಿಯಾಗಿ ತೆಗೆದುಕೊಂಡರೆ ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ**
> **ಎನ್.ರವಿಕುಮಾರ್**, ವಿರೋಧ ಪಕ್ಷದ ಮುಖ್ಯಸಚೇತಕ

'ಮತಪತ್ರ ಬಳಸಿದರೂ ಕಾಂಗ್ರೆಸ್‌ಗೆ ಸೋಲು'

ಬಿ. ಎಲ್. ಸಂತೋಷ್

ನಾಲ್ಕು ಪಟ್ಟಣ ಪಂಚಾಯಿತಿಗಳಲ್ಲಿ ಪಕ್ಷ ಬಹುಮತ ಪಡೆದಿರುವುದಕ್ಕೆ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಬಿ.ವೈ.ವಿಜಯೇಂದ್ರ ಮತ್ತು ತಂಡವನ್ನು ಅಭಿನಂದಿಸಿದ್ದಾರೆ.

'ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಮತಪತ್ರಗಳನ್ನು ಬಳಸಿ ನಡೆಸಿದ ಈ ಚುನಾವಣೆಯಲ್ಲಿ ಬಿಜೆಪಿಯು ನಾಲ್ಕು ಪಟ್ಟಣ ಪಂಚಾಯಿತಿಗಳಲ್ಲಿ ಬಹುಮತ ಪಡೆದಿದ್ದು, ಎರಡು ಉಪಚುನಾವಣೆಗಳಲ್ಲೂ ಗೆಲುವು ಸಾಧಿಸಿದೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಅಲ್ಲದೇ ರಾಯಚೂರು ಜಿಲ್ಲೆ ತುರವೀಹಾಳ ಪಟ್ಟಣ ಪಂಚಾಯಿತಿ, ದೊಡ್ಡಬಳ್ಳಾಪುರ ನಗರಸಭೆಯ ತಲಾ ಒಂದು ವಾರ್ಡ್‌ಗಳಿಗೆ ನಡೆದ ಉಪ ಚುನಾವಣೆಯಲ್ಲೂ ನಮ್ಮ ಅಭ್ಯರ್ಥಿಗಳು ಗೆದ್ದಿದ್ದಾರೆ. ಚುನಾವಣೆ ನಡೆದ ಒಟ್ಟು 78 ವಾರ್ಡ್‌ಗಳಲ್ಲಿ 50 ವಾರ್ಡ್‌ಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ' ಎಂದು ಅವರು ಹೇಳಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಎಲ್ಲ ರಂಗಗಳಲ್ಲೂ ವಿಫಲವಾಗಿದೆ. ಎಲ್ಲ ವಸ್ತುಗಳ ಬೆಲೆ ಏರಿಕೆ, ಅಭಿವೃದ್ಧಿ ಶೂನ್ಯ ಸ್ಥಿತಿ, ಅತಿಯಾದ ತುಷ್ಟೀಕರಣ, ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ, ರೈತರ ನಿರ್ಲಕ್ಷ್ಯ, ದಲಿತರಿಗೆ ಮೀಸಲಿಟ್ಟ ಎಸ್‌ಇಎಸ್‌ಪಿ ಟಿಎಸ್‌ಪಿ ಹಣವನ್ನು ದುರುಪಯೋಗ ಮಾಡಿರುವುದನ್ನು ಜನ ಗಮನಿಸಿದ್ದಾರೆ. ಇದು ಜನಾಕ್ರೋಶವಾಗಿ ಪರಿವರ್ತನೆ ಆಗಿದೆ ಎಂದು ತಿಳಿಸಿದರು.

ಚಟಕೆ ಸುದ್ದಿ

ಹುಬ್ಬಳ್ಳಿ– ಅಂಕೋಲಾ ಯೋಜನೆಗೆ ಡಿಪಿಆರ್

ವಿ.ಸೋಮಣ್ಣ

ತುಮಕೂರು: ಹುಬ್ಬಳ್ಳಿ– ಅಂಕೋಲಾ, ಹೊನ್ನಾವರ-ತಾಳಗುಪ್ಪ ರೈಲು ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಕೆಯಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎರಡು ಯೋಜನೆಗಳ ತಾಂತ್ರಿಕ ಸಮಸ್ಯೆ ಬಗೆಹರಿಸಲಾಗಿದೆ. ರಾಜ್ಯದ ಎಲ್ಲ ರೈಲ್ವೆ ಕಾಮಗಾರಿಗಳಿಗೆ ವೇಗ ನೀಡಲಾಗಿದೆ' ಎಂದರು.

ಅಂಜನಾದ್ರಿ ಸ್ವಾಮೀಜಿಗಳ ಜಗಳ

ಗಂಗಾವತಿ (ಕೊಪ್ಪಳ): ಅಂಜನಾದ್ರಿ ಬೆಟ್ಟದ ಗರ್ಭಗುಡಿಯಲ್ಲಿ ಅರ್ಚಕ ವಿದ್ಯಾದಾಸ ಬಾಬಾ ಹಾಗೂ ಹಂಪಿಯ ಭಗವಾನ್ ವ್ಯಾಸಾಶ್ರಮದ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ನಡುವೆ ವಾಗ್ವಾದ ನಡೆದಿದ್ದು, ಈ ಕುರಿತಾದ ವಿಡಿಯೊ ಸಾಮಾಜಿಕ ಜಾಲ-ತಾಣಗಳಲ್ಲಿ ಹರಿದಾಡುತ್ತಿದೆ.

ಮಂಗಳವಾರ ಬೆಳಿಗ್ಗೆ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ಅಂಜನಾದ್ರಿ ಬೆಟ್ಟ ಹತ್ತಿ ಹನುಮನ ದರ್ಶನ ಪಡೆದಿದ್ದರು. ಬಳಿಕ ಸ್ವಾಮೀಜಿ ಮತ್ತು ಅರ್ಚಕ ವಿದ್ಯಾದಾಸ ಬಾಬಾ ಅವರ ನಡುವೆ ವಾಗ್ವಾದ ನಡೆದಿದೆ.

ವಾಗ್ವಾದ ಇಬ್ಬರು ಕೈ ಕೈ ಮಿಲಾಯಿಸುವ ಹಂತ ತಲುಪಿದೆ. ಈ ವೇಳೆ ಪೊಲೀಸರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ತಿಳಿ-ಗೊಳಿಸಿದ್ದಾರೆ. ಚಕಮಕಿಗೆ ಕಾರಣ ತಿಳಿದುಬಂದಿಲ್ಲ. ಅರ್ಚಕ ವಿದ್ಯಾದಾಸ ಬಾಬಾ ಅವರು ಗೋವಿಂದಾನಂದ ಸ್ವಾಮೀಜಿ ವಿರುದ್ಧ ಆನ್‌ಲೈನ್ ಮೂಲಕ ದೂರು ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

ಚಿನ್ನ ಕಳವು 'ರೊದ್ದಂ'ನಲ್ಲಿ ಶೋಧ

ಬಳ್ಳಾರಿ: ಶಬರಿಮಲೆಯಲ್ಲಿನ ಚಿನ್ನ ಕಳವು ಪ್ರಕರಣ ಸಂಬಂಧ ಕೇರಳದ ಎಸ್‌ಐಟಿ ಅಧಿಕಾರಿಗಳು ಬಳ್ಳಾರಿಯ ರೊದ್ದಂ ಜ್ಯುವೆಲರ್ಸ್ ಮಾಲೀಕ ಗೋವರ್ಧನ್ ಅವರ ನಿವಾಸ, ಮಳಿಗೆಯಲ್ಲಿ 2 ದಿನ ಶೋಧ ನಡೆಸಿದ್ದಾರೆ.

ಪಾರ್ವತಿ ನಗರದಲ್ಲಿರುವ ಗೋವರ್ಧನ್ ಅವರ ನಿವಾಸ, ಬೆಂಗಳೂರು ರಸ್ತೆಯಲ್ಲಿರುವ ಆಭರಣ ಮಳಿಗೆಯಲ್ಲಿ ಅಧಿಕಾರಿಗಳು ಮಂಗಳವಾರವೇ ಶೋಧ ಆರಂಭಿಸಿದ್ದರು. ಬುಧವಾರ ಮಧ್ಯಾಹ್ನ 2 ಗಂಟೆ ಹೊತ್ತಿಗೆ ಪ್ರಕ್ರಿಯೆ ಪೂರ್ಣಗೊಳಿಸಿ ನಿರ್ಗಮಿಸಿದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಸ್‌ಐಟಿ ಅಧಿಕಾರಿಗಳು ಗೋವರ್ಧನ್ ಅವರನ್ನು ವಶಕ್ಕೆ ಪಡೆದಿದ್ದರು. ಅವರ ಬಂಧನವನ್ನು ಬುಧವಾರ ಖಚಿತಪಡಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮರ್ಯಾದೆಗೇಡು ಹತ್ಯೆ ಇಬ್ಬರು ಅಮಾನತು

ಹುಬ್ಬಳ್ಳಿ: ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ನಡೆದಿದ್ದ ಮರ್ಯಾದೆಗೇಡು ಹತ್ಯೆ ಪ್ರಕರಣ ಸಂಬಂಧ ಗ್ರಾಮೀಣ ಠಾಣೆಯ ಇಬ್ಬರು ಸಿಬ್ಬಂದಿಯನ್ನು ಬುಧವಾರ ಅಮಾನತು ಮಾಡಲಾಗಿದೆ.

ಠಾಣೆಯ ವಿಶೇಷ ವಿಭಾಗದ ಕಾನ್‌ಸ್ಟೆಬಲ್ ಸಂಗಮೇಶ ಸಾಗರ ಮತ್ತು ಬೀಟ್ ಕಾನ್‌ಸ್ಟೆಬಲ್ ಚಂದ್ರಕಾಂತ ರಾಥೋಡ ಅಮಾನತಾಗಿದ್ದಾರೆ.

ಘಟನೆ ಕುರಿತು ಮಾಹಿತಿ ನೀಡದ ಕಾರಣ ಆಂತರಿಕ ತನಿಖೆ ಕಾಯ್ದಿರಿಸಿ, ಅಮಾನತು ಮಾಡಿ ಆದೇಶಿಸಿರುವುದಾಗಿ ಧಾರವಾಡ ಎಸ್‌ಪಿ ಗುಂಜನ್ ಆರ್ಯ ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಮತ್ತೆ ಇಬ್ಬರನ್ನು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ ಎಂಟಕ್ಕೆ ಏರಿದೆ.

ಬೆಳಕಿನ ಮೆರುಗು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕ್ರಿಸ್‌ಮಸ್ ನಿಮಿತ್ತ ಕಲಬುರಗಿಯ ಸೇಂಟ್ ಮೇರಿ ಚರ್ಚ್ ಆವರಣ ಬುಧವಾರ ಕಂಗೊಳಿಸಿದ್ದು ಹೀಗೆ

ನದಿ ಜೋಡಣೆಗೆ ಡಿಪಿಆರ್: ರಾಜ್ಯ ಒಪ್ಪಿಗೆ

ಒಂದನೇ ಪುಟದಿಂದ...

ಈ ಯೋಜನೆಯು ಪಶ್ಚಿಮಕ್ಕೆ ಹರಿಯುವ ನದಿಗಳಿಂದ ರಾಜ್ಯದ ಪೂರ್ವ ಭಾಗದ ಬರ ಪೀಡಿತ ಭಾಗಗಳಿಗೆ ನೀರನ್ನು ಹರಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.

'ಗೋದಾವರಿ–ಕಾವೇರಿ ನದಿಗಳ ಜೋಡಣೆ ಯೋಜನೆಯ ಮೊದಲ ಹಂತದಲ್ಲಿ 148 ಟಿಎಂಸಿ ಅಡಿ ನೀರನ್ನು ತಿರುಗಿಸಲು ಪ್ರಸ್ತಾಪಿಸಲಾಗಿದೆ. ಇದರಲ್ಲಿ ಕರ್ನಾಟಕಕ್ಕೆ ಕೇವಲ 15.90 ಟಿಎಂಸಿ ಅಡಿ ಹಂಚಿಕೆ ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಇತರ ಫಲಾನುಭವಿ ರಾಜ್ಯಗಳಿಗೆ ನೀರಾವರಿ ಸೇರಿದಂತೆ ವಿವಿಧ ಉದ್ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ. ಬೇಡ್ತಿ-ವರದಾ ನದಿ ಜೋಡಣೆ ಬಳಿಕವೂ ರಾಜ್ಯಕ್ಕೆ ಸಿಗುವುದು ಕೇವಲ 34.40 ಟಿಎಂಸಿ ಅಡಿಗೆ ಮಾತ್ರ. ನದಿ ಜೋಡಣೆ ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಕನಿಷ್ಠ 40-45 ಟಿಎಂಸಿ ಅಡಿ ನೀರನ್ನು ನೀಡಬೇಕು. ಗೋದಾವರಿ- ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ಹೆಚ್ಚುವರಿ 5 ಟಿಎಂಸಿ ಅಡಿ ನೀರನ್ನು ಭೀಮಾ ನದಿ ಪ್ರದೇಶಕ್ಕೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದರು.

ಬೇಡ್ತಿ-ವರದಾ ನದಿ ಜೋಡಣೆ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಜನರಿಗೆ ಉಪಯೋಗವಾಗಲು ಕೇಂದ್ರ ಸರ್ಕಾರ ₹10 ಸಾವಿರ ಕೋಟಿ ಹಾಕಿ ರಾಜ್ಯದಿಂದ ₹1 ಸಾವಿರ ಕೋಟಿ ಕೇಳುತ್ತಿರುವಾಗ ನಾವು ಈ ಯೋಜನೆ ಬೇಡ ಎನ್ನಲು ಆಗುತ್ತದೆಯೇ? ಸಮುದ್ರಕ್ಕೆ ಹೋಗುವ ನೀರನ್ನು ಜನರ ಅನುಕೂಲಕ್ಕೆ ಬಳಸುವುದು ನಮ್ಮ ಉದ್ದೇಶ' ಎಂದರು.

ಬೆಂಗಳೂರಿನಲ್ಲಿ ಪ್ರಾದೇಶಿಕ ಕ್ಷಿಪ್ರ ಸಂಚಾರ ವ್ಯವಸ್ಥೆಗೆ ಮನವಿ ಮಾಡಲಾಗಿದೆ. ಬಿಡದಿ- ಮೈಸೂರು, ಹಾರೋಹಳ್ಳಿ- ಕನಕಪುರ, ನೆಲಮಂಗಲ- ತುಮಕೂರು, ವಿಮಾನ ನಿಲ್ದಾಣ- ಚಿಕ್ಕಬಳ್ಳಾಪುರ, ಹೊಸಕೋಟೆ- ಕೋಲಾರ ಮಧ್ಯೆ ಈ ಸಂಚಾರ ವ್ಯವಸ್ಥೆ ನಿರ್ಮಿಸಲು ಡಿಪಿಆರ್ ತಯಾರಿಸಲು ಮನವಿ ಮಾಡಿದ್ದೇವೆ. ಬೆಂಗಳೂರಿನ ದಟ್ಟಣೆ ಹಾಗೂ ಒತ್ತಡ ಕಡಿಮೆ ಮಾಡಲು ಈ ಭಾಗದಲ್ಲಿ ಸ್ಯಾಟಲೈಟ್ ಟೌನ್ ನಿರ್ಮಿಸಬೇಕು ಎಂದು ಈ ಯೋಜನೆಗೆ ಮನವಿ ಮಾಡಿದ್ದು, ಇದನ್ನು ಪರಿಗಣಿಸುವುದಾಗಿ ಕೇಂದ್ರ ನಗರಾಭಿವೃದ್ಧಿ ಸಚಿವರು ಭರವಸೆ ನೀಡಿದ್ದಾರೆ ಎಂದರು.

ಬೆಂಕಿಗೆ ಸಿಲುಕಿ ವೃದ್ಧ ಸಾವು

ನ್ಯಾಮತಿ (ದಾವಣಗೆರೆ): ತಾಲ್ಲೂಕಿನ ಕುರುವ ಗ್ರಾಮದ ತಾಳೆ ತೋಟದಲ್ಲಿ ಬುಧವಾರ ಆಕಸ್ಮಿಕ ಬೆಂಕಿ ತಗುಲಿ ರೈತ ಉಳ್ಳಲ್ಲಿ ಈಶ್ವರಪ್ಪ (82) ಸಾವಿಗೀಡಾ-ಗಿದ್ದಾರೆ.

ಇವರು ಜಮೀನಿನಲ್ಲಿ ತಾಳೆ ಬೆಳೆದಿದ್ದು, ಗಿಡದ ಗರಿಗಳಿಗೆ ಬೆಂಕಿ ತಗುಲಿತ್ತು. ನಂದಿಸಲು ಮುಂದಾಗಿದ್ದರು. ಆದರೆ ಗಾಳಿ ಇದ್ದುದರಿಂದ ಬೆಂಕಿ ವ್ಯಾಪಿಸಿದೆ. ಹೀಗಾಗಿ ಬೆಂಕಿಯಲ್ಲಿ ಸಿಲುಕಿ ಮೃತಪಟ್ಟಿದ್ದಾರೆ.

ಬಾಂಗ್ಲಾಕ್ಕೆ ಮರಳಲಿರುವ ತಾರಿಕ್ ರೆಹಮಾನ್

ಢಾಕಾ (ಪಿಟಿಐ): ಸುಮಾರು 17 ವರ್ಷಗಳಿಂದ ಸ್ವಯಂ ಗಡಿಪಾರಾಗಿ ಲಂಡನ್‌ನಲ್ಲಿ ನೆಲಸಿರುವ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಗುರುವಾರ ಬಾಂಗ್ಲಾದೇಶಕ್ಕೆ ಮರಳಲಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ತಾರಿಕ್ (60) ಅವರು ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ (80) ಅವರ ಮಗ. ಬಾಂಗ್ಲಾ ದಲ್ಲಿ ಬದಲಾದ ರಾಜಕೀಯ ಸನ್ನಿವೇಶದ ಪರಿಣಾಮ, ತಾರಿಕ್ ಅವರು ಫೆಬ್ರುವರಿಯಲ್ಲಿ ಎದುರಾಗಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಧಾನಿ ಹುದ್ದೆಯ ಆಕಾಂಕ್ಷಿಯಾಗಿದ್ದಾರೆ.

'ತಾರಿಕ್ ಅವರು ಕುಟುಂಬ ಸಮೇತ ಲಂಡನ್‌ನಿಂದ ಹೊರಟಿದ್ದು, ಗುರುವಾರ ಬಾಂಗ್ಲಾಕ್ಕೆ ಬರಲಿದ್ದಾರೆ' ಎಂದು ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ.

ಬಾಂಗ್ಲಾಗೆ ಬಂದ ಬಳಿಕ ತಾರಿಕ್ ಅವರು ಬಿಎನ್‌ಪಿ ನಾಯಕರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವ ಸಾಧ್ಯತೆಯಿದೆ. ನಂತರ ಅವರು ತಮ್ಮ ತಾಯಿಯನ್ನು ನೋಡಲು ಆಸ್ಪತ್ರೆಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗಡಿ ಭಾಗದಲ್ಲಿ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಬಾಂಗ್ಲಾದಲ್ಲಿ ನಡೆದ ಹಿಂದೂ ಯುವಕ ದೀಪು ಚಂದ್ರದಾಸ್ ಹತ್ಯೆಯನ್ನು ಖಂಡಿಸಿ ಹಿಂದೂಪರ ಸಂಘಟನೆಗಳ ಸದಸ್ಯರು ಮತ್ತು ಬಿಜೆಪಿ ಕಾರ್ಯಕರ್ತರು ಬುಧವಾರ ಪಶ್ಚಿಮ ಬಂಗಾಳ ವ್ಯಾಪ್ತಿಯಲ್ಲಿರುವ ಭಾರತ–ಬಾಂಗ್ಲಾದ ಗಡಿಯ ಪ್ರವೇಶ ಭಾಗಗಳಲ್ಲಿ ಪ್ರತಿಭಟನೆ ನಡೆಸಿದರು.

ಹೌರಾ ಸೇತುವೆ ಬಳಿ ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಮುಂದಾದಾಗ ವಾಗ್ವಾದ ನಡೆಯಿತು. ಈ ವೇಳೆ ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ತೆಗೆದು ಮುನ್ನುಗ್ಗಲು ಪ್ರಯತ್ನಿಸಿದಾಗ ಘರ್ಷಣೆ ನಡೆಯಿತು. ಪೊಲೀಸರು ಗುಂಪನ್ನು ಚದುರಿಸಿದರು.

ಸನಾತನ ಐಕ್ಯ ಪರಿಷತ್‌ನ ಸದಸ್ಯರು ಉತ್ತರ 24 ಪರಗಣ ಜಿಲ್ಲೆಯ ಪೆಟ್ರಾಪೋಲ್ ಮತ್ತು ಘೋಜದಂಗ ಗಡಿ ಪ್ರವೇಶ ಭಾಗದಲ್ಲಿ, ಮಾಲ್ಡಾದ ಮನೋಹರಪುರ್ ಮುಚಿಯಾ ಮತ್ತು ಕೂಚ್ ಬಿಹಾರ್ ಜಿಲ್ಲೆಯ ಚಂಗರಬಂಧದಲ್ಲಿ ಪ್ರತಿಭಟನೆಗಳನ್ನು ನಡೆಸಿದರು.

ಮಗು ಸಾವು: ಅಜ್ಜಿ ವಿರುದ್ಧ ಬಾಲಕಿ ದೂರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ನನ್ನ 40 ದಿನದ ಹಸುಳೆಯನ್ನು ಅಜ್ಜಿಯೇ ಕೊಲೆ ಮಾಡಿದ್ದಾಳೆ' ಎಂದು 17 ವರ್ಷದ ಬಾಲಕಿಯೊಬ್ಬಳು ದೂರು ನೀಡಿದ್ದಾಳೆ.

ದೂರಿನ ಹಿಂದೆಯೇ, ಅಂತ್ಯಸಂಸ್ಕಾರ ನಡೆದಿದ್ದ ಮಗುವಿನ ಶವವನ್ನು ಬುಧವಾರ ಚಿಕ್ಕಬಳ್ಳಾಪುರ ಅಪರಾಧ ವಿಭಾಗದ ತನಿಖಾ ತಂಡವು ತನಿಖೆಯ ಭಾಗವಾಗಿ ಸಮಾಧಿಯಿಂದ ಹೊರತೆಗೆಯಿತು.

ಚೇಳೂರು ತಹಶೀಲ್ದಾರ್ ಶ್ವೇತಾ ಹಾಗೂ ತಾಲ್ಲೂಕು ಆರೋಗ್ಯ ಆಡಳಿತಾಧಿಕಾರಿ ಸುಜಿತ್ ರೆಡ್ಡಿ, ವೈದ್ಯಾಧಿಕಾರಿ ಭಾಸ್ಕರ್ ಸಮಕ್ಷಮದಲ್ಲಿ ಪಂಚನಾಮೆ ನಡೆದಿದ್ದು, ಶವಪರೀಕ್ಷೆ ಮಾಡಲಾಯಿತು. ದೂರು ನೀಡಿದ ಬಾಲಕಿಯನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಆಕೆಯ ಪತಿಯ ವಿರುದ್ಧ ಪೋಕ್ಸೊ ಅನ್ವಯ ಪ್ರಕರಣ ದಾಖಲಾಗಿದೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಗೆ ಹೆರಿಗೆ

ಹಾಸನ: ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಖಾಸಗಿ ಶಾಲೆಯ ಬಸ್ ಚಾಲಕನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಡಿ.21 ರಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ.

ಚಾಲಕ ತಲೆಮರೆಸಿಕೊಂಡಿದ್ದು, ಆತನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಬಾಲಕಿ ಸದ್ಯ ಆಸ್ಪತ್ರೆಯಲ್ಲಿ ಆರೈಕೆಯಲ್ಲಿದ್ದಾಳೆ.

ಬಾಲಕಿಗೆ ಡಿ.21 ರಂದು ತಲೆಸುತ್ತು ಬಂದಿದ್ದು, ಪ್ರಜ್ಞೆ ತಪ್ಪಿತ್ತು. ಪೋಷಕರು ಆಸ್ಪತ್ರೆಗೆ ಕರೆತಂದಿದ್ದರು. ಅಲ್ಲಿಂದ ನಗರದ ಹಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದು, ಅಂದೇ ಹೆರಿಗೆಯಾಗಿದೆ. 'ಶ್ರವಣಬೆಳಗೊಳ ಮತ್ತು ಮೈಸೂರಿಗೆ ಪ್ರವಾಸ ಹೋಗಿದ್ದ ಸಂದರ್ಭದಲ್ಲಿ ವಾಹನ ಚಾಲಕ ಕೊಟ್ಟ ಓಆರ್‌ಎಸ್ ನೀರು ಕುಡಿದ ನಂತರ ಪ್ರಜ್ಞೆತಪ್ಪಿತ್ತು. ಎಚ್ಚರವಾದಾಗ ಬಟ್ಟೆಗಳು ಸುಕ್ಕಾಗಿದ್ದವು. ಕೆಳಭಾಗದಲ್ಲಿ ನೋವಾಗುತ್ತಿತ್ತು' ಎಂದು ಬಾಲಕಿ ಪೊಲೀಸರಿಗೆ ಹೇಳಿಕೆ ನೀಡಿದ್ದಾಳೆ.

ಬಾಲಕಿ, ಮಗುವನ್ನು ಆಸ್ಪತ್ರೆಯಲ್ಲಿ ಆರೈಕೆ ಮಾಡಿ, ಬಳಿಕ ಸಾಂತ್ವನ ಕೇಂದ್ರಕ್ಕೆ ಒಪ್ಪಿಸಲು ಅಧಿಕಾರಿಗಳು ನಿರ್ಧರಿ-ಸಿದ್ದಾರೆ. ಪ್ರಕರಣ ದಾಖಲಾಗಿದೆ. ಶಿಕ್ಷಣ ಇಲಾಖೆ, ಪೊಲೀಸ್ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದ್ದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಅವರು, 'ಶಾಲಾ ವಾಹನಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕೆಲಸ ನಿರ್ವಹಿಸುತ್ತಿಲ್ಲ. ವಾಹನಕ್ಕೆ ಜಿಪಿಎಸ್ ವ್ಯವಸ್ಥೆ ಇಲ್ಲ. ಆಯಾ ನೇಮಿಸಿಲ್ಲ. ಶಾಲೆ ವಿರುದ್ಧ ಸಾರಿಗೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚಿಸಿದರು.

ಘಟನೆ ಹಿನ್ನೆಲೆ: ಪದವಿಪೂರ್ವ ಕಾಲೇಜಿನಲ್ಲಿ ಓದುತ್ತಿದ್ದ ಬಾಲಕಿ ರಾಜೇಶ್ ಎಂಬ ಯುವಕನನ್ನು ಪ್ರೀತಿಸಿ ಮದುವೆಯಾಗಿದ್ದಳು.

ಇದೇ ನ.12ರಂದು ಬಾಲಕಿ ಆಂಧ್ರಪ್ರದೇಶದ ಆಸ್ಪತ್ರೆಯೊಂದರಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಡಿಸೆಂಬರ್‌ನಲ್ಲಿ ಮಗುವಿನೊಂದಿಗೆ ಹುಟ್ಟೂರಿಗೆ ಬಂದಿದ್ದರು.

'ಮಗುವನ್ನು ಪೋಷಿಸುವುದಾಗಿ ಅಜ್ಜಿ ತೆಗೆದುಕೊಂಡಿದ್ದರು. ಆದರೆ, ಈಗ ಮಗು ಮೃತಪಟ್ಟಿದೆ ಎನ್ನುತ್ತಿದ್ದಾರೆ. ಮಗುವನ್ನು ಅಜ್ಜಿ ಕೊಲೆ ಮಾಡಿರುವ ಶಂಕೆ ಇದೆ. ತನಿಖೆ ನಡೆಸಿ' ಎಂದು ಬಾಲಕಿ ದೂರು ನೀಡಿದ್ದಳು.

ಅರಾವಳಿ: ನಿಷೇಧಿಸಬೇಕಾದ ಹೆಚ್ಚುವರಿ ಪ್ರದೇಶ, ವಲಯ ಗುರುತಿಸಲು ನಿರ್ದೇಶನ

ಹೊಸ ಗಣಿಗಾರಿಕೆ ಗುತ್ತಿಗೆ ನಿಷೇಧ

ನವದೆಹಲಿ (ಪಿಟಿಐ): 'ಅರಾವಳಿ ಪರ್ವತ ಶ್ರೇಣಿ' ವ್ಯಾಪ್ತಿಯಲ್ಲಿ ಹೊಸದಾಗಿ ಗಣಿಗಾರಿಕೆ ಗುತ್ತಿಗೆಗಳನ್ನು ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕೇಂದ್ರ ಸರ್ಕಾರ ಬುಧವಾರ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ಅರಾವಳಿ ಭಾಗದ ಹಲವೆಡೆ ಕೇಂದ್ರ ಸರ್ಕಾರ ಈಗಾಗಲೇ ಗಣಿ-ಗಾರಿಕೆಯನ್ನು ನಿಷೇಧಿಸಿದೆ. ಅದರ ಜತೆಗೆ ಈ ಪ್ರದೇಶದಲ್ಲಿ ಗಣಿಗಾರಿಕೆ-ಯನ್ನು ನಿಷೇಧಿಸಬೇಕಾದ ಹೆಚ್ಚುವರಿ ಪ್ರದೇಶಗಳು ಮತ್ತು ವಲಯಗಳನ್ನು ಗುರುತಿಸುವಂತೆ ಪರಿಸರ ಮತ್ತು ಅರಣ್ಯ ಸಚಿವಾಲಯವು ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿಗೆ (ಐಸಿಎಫ್‌ಆರ್‌ಇ) ನಿರ್ದೇಶಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಈ ನಿಷೇಧವು ಅರಾವಳಿ ಭಾಗದಲ್ಲಿ ಏಕರೂಪವಾಗಿ ಅನ್ವಯಿಸುತ್ತದೆ. ಇಲ್ಲಿನ ಭೂರಚನೆಯ ಸಮಗ್ರತೆಯನ್ನು ಕಾಪಾಡುವ ಮತ್ತು ಅನಿಯಂತ್ರಿತ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯುವ ಗುರಿಯನ್ನು ಇದು ಹೊಂದಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈಗ ನಡೆಯುತ್ತಿರುವ ಗಣಿಗಾರಿಕೆ ಚಟುವಟಿಕೆಗಳನ್ನು ಹೆಚ್ಚುವರಿ ನಿರ್ಬಂಧಗಳೊಂದಿಗೆ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಅವರು ತಿಳಿಸಿದೆ.

ಇಡೀ ಅರಾವಳಿ ಪ್ರದೇಶಕ್ಕೆ ವೈಜ್ಞಾನಿಕ ಆಧಾರದ ಮೇಲೆ ಸಮಗ್ರ ಮತ್ತು ಸುಸ್ಥಿರ ಗಣಿಗಾರಿಕೆ ನಿರ್ವಹಣಾ ಯೋಜನೆ ರೂಪಿಸಬೇಕು. ಅದು ಸಾರ್ವಜನಿಕರ ಸಮಾಲೋಚನೆಗೆ ಲಭ್ಯವಾಗುವಂತೆ ಮಾಡಬೇಕು ಎಂದು ಸರ್ಕಾರ ಐಸಿಎಫ್‌ಆರ್‌ಇಗೆ ಹೇಳಿದೆ.

ಅರಾವಳಿ ಪರಿಸರ ವ್ಯವಸ್ಥೆಯ ದೀರ್ಘಕಾಲೀನ ರಕ್ಷಣೆಗೆ ಸರ್ಕಾರ ಪೂರ್ಣವಾಗಿ ಬದ್ಧವಾಗಿದೆ. ಮರುಭೂಮೀಕರಣ ತಡೆ, ಜೀವವೈವಿಧ್ಯ ರಕ್ಷಣೆ, ಜಲಸಂಪನ್ಮೂಲ ಮರುಪೂರಣದಂತಹ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಹೊಸ ವ್ಯಾಖ್ಯಾನಕ್ಕೆ ವಿರೋಧ

ಪರಿಸರ ಸಚಿವಾಲಯ ನೇತೃತ್ವದ ಸಮಿತಿಯು ಅರಾವಳಿ ಬೆಟ್ಟಗಳು ಮತ್ತು ಅರಾವಳಿ ಶ್ರೇಣಿಯನ್ನು ರೂಪಿಸುವ ಏಕರೂಪ ಕಾನೂನು ವ್ಯಾಖ್ಯಾನ ಕುರಿತು ಮಾಡಿದ್ದ ಶಿಫಾರಸನ್ನು ಸುಪ್ರೀಂ ಕೋರ್ಟ್ 2025 ನವೆಂಬರ್‌ನಲ್ಲಿ ಅಂಗೀಕರಿಸಿತ್ತು.

ಅದರ ಪ್ರಕಾರ, 100 ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಪ್ರದೇಶವನ್ನು 'ಅರಾವಳಿ ಬೆಟ್ಟ' ಎಂದು, ಎರಡು ಬೆಟ್ಟಗಳ ನಡುವೆ ಕನಿಷ್ಠ 500 ಮೀಟರ್ ಅಂತರವಿದ್ದರೆ ಅದನ್ನು 'ಅರಾವಳಿ ಪರ್ವತ ಶ್ರೇಣಿ' ಎಂದು ಕರೆಯಲಾಗು-ತ್ತದೆ. 'ಅರಾವಳಿ' ಕುರಿತ ಈ ಹೊಸ ವ್ಯಾಖ್ಯಾನಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದ ಬಳಿಕ ಪರಿಸರವಾದಿಗಳಿಂದ ವ್ಯಾಪಕ ವಿರೋಧ ವ್ಯಕ್ತವಾಯಿತು. ರಾಜಸ್ಥಾನ, ಹರಿಯಾಣ ಸೇರಿದಂತೆ 'ಅರಾವಳಿ ಉಳಿಸಿ' ಹೋರಾಟ ರೂಪುಗೊಂಡಿತು.

ನಿಧನ ವಾರ್ತೆ

ಪ್ರೊ.ಎಸ್.ಪ್ರಭಾಕರ್

ಉಜಿರೆ (ದಕ್ಷಿಣ ಕನ್ನಡ): ಶಿಕ್ಷಣ ತಜ್ಞ, ಉಜಿರೆ ಎಸ್‌ಡಿಎಂ ಕಾಲೇಜಿನ ಸ್ಥಾಪಕ ಪ್ರಾಂಶುಪಾಲ ಪ್ರೊ. ಎಸ್.ಪ್ರಭಾಕರ್ (90) ಉಜಿರೆಯ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು.

ಅವರಿಗೆ ಪುತ್ರಿ ಶರ್ಮಿಳಾ, ಅಳಿಯ ಡಾ.ನರೇಂದ್ರ ಇದ್ದಾರೆ. ಗುರುವಾರ ಸಂಜೆ 6ಕ್ಕೆ ಉಜಿರೆಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಡುಪಿ ಜಿಲ್ಲೆಯ ಸೂರಾಲು ಅರಮನೆಯಲ್ಲಿ ಜನಿಸಿದ್ದರು.

ಬೆಂಗಳೂರಿನ ಮಹಾರಾಣಿ ಕಾಲೇಜು, ಮಂಡ್ಯದ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್, ಎಜುಕೇಷನಲ್ ಸೊಸೈಟಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ಅಲಕಾದೇವ್‌ಗೆ ರಾಷ್ಟ್ರೀಯ ಪ್ರಶಸ್ತಿ

ಅಲಕಾದೇವ್ ಮಾರುಲ್ಕರ್

ಹರೀಶ ಹೆಗಡೆ

ನಾಗಲಿಂಗ ಮುರಗಿ

ಧಾರವಾಡ: ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಟ್ರಸ್ಟ್ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದೆ ಪುಣೆಯ ಅಲಕಾದೇವ್ ಮಾರುಲ್ಕರ್, ಯುವಪ್ರಶಸ್ತಿಗೆ ಗಾಯಕ ಹರೀಶ ಹೆಗಡೆ, ತಬಲಾ ವಾದಕ ನಾಗಲಿಂಗ ಮುರಗಿ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಪುರಸ್ಕಾರ ₹1 ಲಕ್ಷ ನಗದು ಹಾಗೂ ಯುವ ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ಡಿ.31ರಂದು ಪ್ರಶಸ್ತಿ ಪ್ರದಾನವಾಗಲಿದೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ 90083 66666

support@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಶಿಕ್ಷೆ ಅಮಾನತು: ಸಂತ್ರಸ್ತೆಗೆ ಬೆದರಿಕೆ

ದೆಹಲಿ ಹೈಕೋರ್ಟ್ ತೀರ್ಪಿನ ಬಗ್ಗೆ ಅಸಮಾಧಾನ • ಸಂತ್ರಸ್ತೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಉನ್ನಾವೊ (ಉತ್ತರ ಪ್ರದೇಶ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್ ಅನುಭವಿಸುತ್ತಿದ್ದ ಜೀವಾವಧಿ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಅಮಾನತು ಗೊಳಿಸಿರುವುದು 'ನ್ಯಾಯ ಸಮ್ಮತವಲ್ಲ' ಎಂದು ಹೇಳಿರುವ ಪ್ರಕರಣದ ಸಂತ್ರಸ್ತೆ, ತನಗೆ ಮತ್ತು ತಮ್ಮ ಕುಟುಂಬಕ್ಕೆ ಸೆಂಗರ್ ಆಪ್ತರು ಬೆದರಿಕೆವೊಡ್ಡಿದ್ದಾರೆ ಎಂದು ಆರೋಪಿಸಿದ್ದಾರೆ.

ಸೆಂಗರ್

ನ್ಯಾಯಾಲಯದ ತೀರ್ಪನ್ನು ವಿರೋಧಿಸಿ ದೆಹಲಿ ಇಂಡಿಯಾ ಗೇಟ್ ಬಳಿ ತನ್ನ ತಾಯಿ ಮತ್ತು ವಕೀಲೆ ಯೋಗಿತಾ ಭಯನಾ ಅವರ ಜೊತೆ ಪ್ರತಿಭಟನೆ ನಡೆಸಿದ ಸಂತ್ರಸ್ತೆ, 'ತೀರ್ಪಿನ ಬಳಿಕ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದೆ. ಆದರೆ ಕುಟುಂಬದ ಭಾವನೆಗಳಿಗೆ ಬೆಲೆ ಕೊಟ್ಟು ನಿರ್ಧಾರವನ್ನು ಬದಲಾಯಿಸಿದೆ' ಎಂದು ಹೇಳಿದ್ದಾರೆ.

ದೆಹಲಿ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಪ್ರಕರಣದ ಸಂತ್ರಸ್ತೆ ನಿರ್ಧರಿಸಿದ್ದಾರೆ.

'ಸೆಂಗರ್ ಶಿಕ್ಷೆ ಅಮಾನತುಗೊಳಿಸುವ ಮೂಲಕ ತನ್ನ ಕುಟುಂಬಕ್ಕೆ ಸಾವಿಗಿಂತ ಕಡಿಮೆ ಇಲ್ಲದ ಶಿಕ್ಷೆಯನ್ನು ನೀಡಲಾಗಿದೆ. ಅಂಥ ವ್ಯಕ್ತಿಗಳು ಹೊರಬಂದರೆ ನಾವು ಹೇಗೆ ಸುರಕ್ಷಿತರಾಗಿರುವುದು ಮತ್ತು ನಾವು ಈಗ ಸುರಕ್ಷಿತರಾಗಿಲ್ಲ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ನಮ್ಮನ್ನು ಜೈಲಿಗೆ ಕಳುಹಿಸಿ ನಾವು ಅಲ್ಲಿ ಸುರಕ್ಷಿತ ರಾಗಿರುತ್ತೇವೆ. ಅಪರಾಧಿಯ ಆಪ್ತರು ನಮಗೆ ಬೆದರಿಕೆ ಹಾಕುತ್ತಿದ್ದಾರೆ. ನಮಗೆ ಒಬ್ಬ ಸೋದರನಿದ್ದಾನೆ. ಅವರು ಅವನಿಗೆ ಏನು ಮಾಡುತ್ತಾರೋ ಎಂಬ ಭಯವಿದೆ' ಎಂದು ಸಂತ್ರಸ್ತೆಯ ಸಹೋದರಿ ಆತಂಕ ವ್ಯಕ್ತಪಡಿಸಿದ್ದಾರೆ.

2012ರಲ್ಲಿ ದೆಹಲಿಯಲ್ಲಿ ಅತ್ಯಾಚಾರಗೊಂಡು ಮೃತ ಪಟ್ಟಿದ್ದ ನಿರ್ಭಯ ಅವರ ತಾಯಿ ಆಶಾದೇವಿ ಅವರು ಸೆಂಗರ್ ಶಿಕ್ಷೆ ಅಮಾನತುಗೊಂಡಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. 2019ರಲ್ಲಿ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಸೆಂಗರ್ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಇತ್ಯರ್ಥ ವಾಗುವರೆಗೆ ಅಮಾನತಿನಲ್ಲಿರಿಸಿ ದೆಹಲಿ ಹೈಕೋರ್ಟ್ ಮಂಗಳವಾರ ಆದೇಶಿಸಿದೆ. ಸೆಂಗರ್‌ಗೆ ಷರತ್ತುಬದ್ಧ ಜಾಮೀನು ನೀಡಿದೆ. ಪ್ರಕರಣದ ಶಿಕ್ಷೆ ಅಮಾನತುಗೊಂಡಿದ್ದರೂ ಸಂತ್ರಸ್ತೆ ತಂದೆಯ ಕಸ್ಟಡಿ ಸಾವು ಪ್ರಕರಣದಲ್ಲಿ ವಿಧಿಸಲಾಗಿದ್ದ 10 ವರ್ಷ ಜೈಲು ಶಿಕ್ಷೆ ಸೆಂಗರ್ ಅನುಭವಿಸ ಬೇಕಾಗುತ್ತದೆ. 2017ರಲ್ಲಿ ಕೃತ್ಯ ನಡೆದಿತ್ತು.

ಉನ್ನಾವೊ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಜೊತೆ ವಕೀಲೆ ಯೋಗಿತಾ ಭಯಾನಾ ದೆಹಲಿಯ ಇಂಡಿಯಾಗೇಟ್ ಬಳಿ ಪ್ರತಿಭಟಿಸಿದರು – ಪಿಟಿಐ ಚಿತ್ರ

ರಾಹುಲ್ ಭೇಟಿ ಮಾಡಿದ ಸಂತ್ರಸ್ತೆ

ನವದೆಹಲಿ: ಉನ್ನಾವೊ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯು ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದಾರೆ.

'ದೆಹಲಿ ಹೈಕೋರ್ಟ್ ತೀರ್ಪು ವಿರುದ್ಧ ಪತಿಭಟಿಸಿದ ಸಂತ್ರಸ್ತೆಯನ್ನು ನಡೆಸಿಕೊಂಡ ರೀತಿ ಸೂಕ್ತವಾದದ್ದೇ' ಎಂದು ರಾಹುಲ್ ಪ್ರಶ್ನಿಸಿದ್ದಾರೆ.

'ಸಾಮೂಹಿಕ ಅತ್ಯಾಚಾರದ ಸಂತ್ರಸ್ತೆಯನ್ನು ಈ ರೀತಿ ನಡೆಸಿಕೊಳ್ಳುವುದು ಸರಿಯೇ? ನ್ಯಾಯದ ಪರವಾಗಿ ಧ್ವನಿ ಎತ್ತಿದ್ದು ಅವಳು ಮಾಡಿದ ತಪ್ಪೇ? ಸೆಂಗರ್ ಶಿಕ್ಷೆ ಅಮಾನತು ಮಾಡಿರುವುದು ನಿರಾಶದಾಯಕ ಮತ್ತು ನಾಚಿಗೇಡಿನ ಸಂಗತಿ' ಎಂದು ಹೇಳಿದ್ದಾರೆ. ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹೋರಾಡಲು ಅಗತ್ಯವಾದ ಉನ್ನತ ವಕೀಲರನ್ನು ನೇಮಿಸಿಕೊಳ್ಳಲು ಸಹಾಯ ಮಾಡುವಂತೆ ಸಂತ್ರಸ್ತೆ ಮತ್ತು ಅವರ ತಾಯಿ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದ್ದಾರೆ.

ಭದ್ರತಾ ಸಿಬ್ಬಂದಿ ದುರ್ವರ್ತನೆ: ಆರೋಪ

ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಸಲುವಾಗಿ ವಕೀಲರನ್ನು ಭೇಟಿ ಮಾಡಲು ಹೋಗುತ್ತಿದ್ದ ನಮ್ಮನ್ನು ಸಿಆರ್‌ಪಿಎಫ್ ಸಿಬ್ಬಂದಿ ತಡೆದಿದ್ದರು. ನಮ್ಮನ್ನು ಹಿಂದೆ ಕಳುಹಿಸಲು ಪ್ರಯತ್ನಿಸಿದರು. ನಾನು ತುಂಬಾ ಕಿರುಚಾಡಿದ ಬಳಿಕ ಅವಕಾಶ ನೀಡಿದರು ಎಂದು ಸಂತ್ರಸ್ತೆ ಆರೋಪಿಸಿದ್ದಾರೆ

'ಇಂಡಿಯಾಗೇಟ್ ಬಳಿ ಪ್ರತಿಭಟನೆ ಮಾಡುತ್ತಿದ್ದ ನನ್ನ ತಾಯಿಯನ್ನು ರಸ್ತೆಯಲ್ಲಿ ತಳ್ಳಿ ಹೋಗಿದ್ದಾರೆ' ಎಂದು ತಿಳಿಸಿದ್ದಾರೆ.

'ಘಟನೆಯಲ್ಲಿ ಸಂತ್ರಸ್ತೆಗೂ ಗಾಯಗಳಾಗಿವೆ' ಎಂದು ವಕೀಲರಾದ ಭಯನಾ ಆರೋಪಿಸಿದ್ದಾರೆ. ಈ ಕುರಿತ ವಿಡಿಯೊವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪ್ರತಿಭಟನಕಾರರನ್ನು ಮಂಗಳವಾರ ರಾತ್ರಿ ಇಂಡಿಯಾಗೇಟ್ ಬಳಿಯಿಂದ ಕರೆದುಕೊಂಡು ಹೋಗಿ, ಸಿಆರ್‌ಪಿಎಫ್‌ನ ಬಸ್‌ನಲ್ಲಿ ಕೂರಿಸಿದ್ದೇವೆ. ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಒಂದಾದ ಉದ್ಧವ್, ರಾಜ್ ಠಾಕ್ರೆ

ಮುಂಬೈ (ಪಿಟಿಐ): ಬೃಹನ್‌ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಚುನಾವಣೆಗೆ ಮುಂಚಿತವಾಗಿ ಶಿವಸೇನಾ (ಯುಬಿಟಿ) ಮತ್ತು ಮಹಾರಾಷ್ಟ್ರ ನವ ನಿರ್ಮಾಣ ಸೇನಾ (ಎಂಎನ್‌ಎಸ್) ಬುಧವಾರ ಮೈತ್ರಿ ಘೋಷಿಸಿವೆ. ಬಿಎಂಸಿಗೆ ಜನವರಿ 15ಕ್ಕೆ ಚುನಾವಣೆ ನಿಗದಿಯಾಗಿದೆ.

ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಅಧ್ಯಕ್ಷ ರಾಜ್ ಠಾಕ್ರೆ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಘೋಷಣೆ ಮಾಡಿದರು. 'ಎರಡೂ ಪಕ್ಷಗಳು ಒಟ್ಟಿಗೆ ಇರಲು ಒಗ್ಗೂಡಿವೆ, ಮರಾಠಿ ಜನರು ಮತ್ತು ಮಹಾರಾಷ್ಟ್ರಕ್ಕಾಗಿ ನಾವು ಒಂದಾಗಿದ್ದೇವೆ' ಎಂದು ಸೋದರ ಸಂಬಂಧಿಗಳು ಹೇಳಿದರು.

ಉದ್ಧವ್ ಠಾಕ್ರೆ, ರಾಜ್ ಠಾಕ್ರೆ ಜಂಟಿ ಸುದ್ದಿಗೋಷ್ಠಿ ನಡೆಸಿದರು –ಪಿಟಿಐ

'ಸಂಯುಕ್ತ ಮಹಾರಾಷ್ಟ್ರ ಚಳವಳಿಯಲ್ಲಿ ನನ್ನ ಅಜ್ಜ ಪ್ರಬೋಧಂಕರ್ ಠಾಕ್ರೆ ಮಹತ್ವದ ಪಾತ್ರ ವಹಿಸಿದ್ದರು. ನನ್ನ ತಂದೆ ಬಾಳಾಠಾಕ್ರೆ, ಚಿಕ್ಕಪ್ಪ ಶ್ರೀಕಾಂತ್ (ರಾಜ್ ಠಾಕ್ರೆ ತಂದೆ) ಅವರೂ ಮುಂಬೈ ಅನ್ನು ಮಹಾರಾಷ್ಟ್ರದ ಭಾಗವಾಗಿ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು' ಎಂದು ಉದ್ಧವ್ ಸ್ಮರಿಸಿದರು.

'ಮುಂಬೈನ ಮೇಯರ್ ಮರಾಠಿ ಜನರಾಗಿರುತ್ತಾರೆ, ನಮ್ಮವರಾಗಿರುತ್ತಾರೆ' ಎಂದು ರಾಜ್ ಠಾಕ್ರೆ ಹೇಳಿದರು.

ಆಯುರ್ವೇದ ವೈದ್ಯರಿಗೆ ಶಸ್ತ್ರಚಿಕಿತ್ಸೆಗೆ ಅನುಮತಿ

ಅಮರಾವತಿ (ಪಿಟಿಐ): ಸಮರ್ಪಕ ತರಬೇತಿ ಪಡೆದ ಸ್ನಾತಕೋತ್ತರ ಪದವಿ ಪೂರೈಸಿದ ಆಯುರ್ವೇದ ವೈದ್ಯರಿಗೆ ಸ್ವತಂತ್ರವಾಗಿ ಆಯ್ದ ಶಸ್ತ್ರಚಿಕಿತ್ಸೆಗಳನ್ನು ಕೈಗೊಳ್ಳಲು ಆಂಧ್ರಪ್ರದೇಶ ಸರ್ಕಾರ ಅನುಮತಿ ನೀಡಿದೆ.

'ಪ್ರಾಚೀನ ಭಾರತೀಯ ವೈದ್ಯಕೀಯ ಪದ್ಧತಿಯನ್ನು ಆಧುನಿಕ ವೈದ್ಯಕೀಯ ಪದ್ಧತಿಯೊಂದಿಗೆ ಸಂಯೋಜಿಸುವುದಕ್ಕಾಗಿ ಆಂಧ್ರಪ್ರದೇಶ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ' ಎಂದು ಸರ್ಕಾರ ಮಂಗಳವಾರ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸಂವಿಧಾನ ಬದಲಾವಣೆ ಅಸಾಧ್ಯ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

• ಚಂದ್ರಹಾಸ ಹಿರೇಮಳಲಿ

ಪ್ರಬಲ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಚನೆ ಮತ್ತು ಸ್ಥಾಪನೆಯೇ ನಮ್ಮ ಉತ್ಕೃಷ್ಟ ಸಂವಿಧಾನದ ಜೀವಾಳ. ಸಾರ್ವತ್ರಿಕ ಚುನಾವಣೆಗಳ ನಂತರ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವ ಪಕ್ಷ ಸಂಸತ್‌ನಲ್ಲಿ ಮೂರನೇ ಎರಡಕ್ಕಿಂತಲೂ ಅಧಿಕ ಬಹುಮತ ಹೊಂದಿದ್ದರೂ ಸಂವಿಧಾನದ ಮೂಲ ಆಶಯಗಳನ್ನು ಬದಲಿಸುವುದು ಅಸಾಧ್ಯ. ಸಂವಿಧಾನದ ಮೂಲ ಆಶಯಗಳನ್ನು ಬದಲಾವಣೆ ಮಾಡುವ ಅಧಿಕಾರ ದೇಶವನ್ನು ಆಳುವ ಯಾವುದೇ ಪಕ್ಷದ ಸರ್ಕಾರಕ್ಕೂ ಇಲ್ಲ. ಇದೇ ಸಂವಿಧಾನದ ಮೂಲ ತತ್ವ (ಸ್ವರೂಪ).

ನೆರೆಯ ರಾಷ್ಟ್ರ ಪಾಕಿಸ್ತಾನದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಮ್ಮೆ ಅವಲೋಕಿಸಿದರೆ ಭಾರತದ ಸಂವಿಧಾನದ ಮೂಲತತ್ವಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಪಾಕಿಸ್ತಾನದಲ್ಲೂ ಸಂಸದೀಯ ವ್ಯವಸ್ಥೆ ಮತ್ತು ದ್ವಿಸದನಗಳ ಶಾಸಕಾಂಗ ವ್ಯವಸ್ಥೆ ಇದ್ದರೂ ಅಲ್ಲಿನ ಸೇನಾಧಿಕಾರಿಗಳಾಗಿದ್ದ ಅಯೂಬ್ ಖಾನ್, ಯಾಹ್ಯಾ ಖಾನ್, ಜಿಯಾ-ಉಲ್-ಹಕ್, ಪರ್ವೇಜ್ ಮುಷರಫ್ ಮೊದಲಾದವರು ಚುನಾಯಿತವಾದ ಪ್ರಜಾಪ್ರಭುತ್ವ ಸರ್ಕಾರವನ್ನು ಕಿತ್ತೆಸೆದು ದೇಶದ ಆಡಳಿತ ನಡೆಸಿದ್ದಾರೆ. ಸೇನಾ ಹಸ್ತಕ್ಷೇಪದಂತಹ ಒಂದೇ ಒಂದು ಉದಾಹರಣೆ ಭಾರತದಲ್ಲಿ ಕಾಣಲು ಸಾಧ್ಯವಿಲ್ಲ. ನಮ್ಮ ಸಂವಿಧಾನದ ರೀತ್ಯ ಅದು ಎಂದಿಗೂ ಅಸಾಧ್ಯ. 1950ನೇ ಜನವರಿ 26ರಂದು ಸಂವಿಧಾನ ಜಾರಿಗೆ ಬಂದ ನಂತರ (1975–77ರ ತುರ್ತು ಪರಿಸ್ಥಿತಿ ಹೊರತುಪಡಿಸಿ) ಇಲ್ಲಿಯವರೆಗೂ ಜನರಿಂದ ಆಯ್ಕೆಯಾದ ಸರ್ಕಾರಗಳೇ ಆಡಳಿತ ನಡೆಸಿವೆ. ಲೋಕಸಭೆಗೆ ಒಂದು ಸಾರ್ವತ್ರಿಕ ಚುನಾವಣೆ ನಡೆದ ನಂತರ ಬಹುಮತ ಪಡೆದ ಪಕ್ಷ ಅಥವಾ ಪಕ್ಷಗಳ ಒಕ್ಕೂಟಗಳಿಗೆ ಸುಲಲಿತವಾಗಿ ಅಧಿಕಾರ ಹಸ್ತಾಂತರವಾಗಿದೆ. ದೇಶದ ಸಂಸದೀಯ ಪ್ರಜಾಪ್ರಭುತ್ವ ಗಟ್ಟಿಯಾಗುತ್ತಲೇ ಸಾಗಿದೆ.

ಸಂವಿಧಾನದ ಮೂಲತತತ್ವಗಳ ಪ್ರಕಾರ ದೇಶದ ಇತರ ಎಲ್ಲ ಕಾನೂನುಗಳಿಗಿಂತ ಸಂವಿಧಾನಕ್ಕೇ ಪರಮಾಧಿಕಾರ ಇದೆ. ದೇಶದ ಸಾರ್ವಭೌಮತೆಗೆ ಧಕ್ಕೆಯಾಗುವ ನಡವಳಿಕೆಗಳನ್ನು ಆಳುವ ಸರ್ಕಾರಗಳು, ಪ್ರಜೆಗಳು ಪ್ರದರ್ಶಿಸುವುದು ನಿಷಿದ್ಧ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರವೇ ಜಾರಿಗೆ ತಂದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸೇನೆಯಾಗಲಿ, ಸರ್ವಾಧಿಕಾರಿಗಳಾಗಲಿ ಬುಡಮೇಲು ಮಾಡಲು ಸಾಧ್ಯವೇ ಇಲ್ಲ. ಸ್ವತಂತ್ರ ಚುನಾವಣಾ ಆಯೋಗವು ಕಾಲಕಾಲಕ್ಕೆ ನಡೆಸುವ ಲೋಕಸಭಾ ಚುನಾವಣೆಗಳಲ್ಲಿ ಬಹುಮತ ಪಡೆದ ಪಕ್ಷ ಅಥವಾ ಪಕ್ಷಗಳ ಒಕ್ಕೂಟ ಅಧಿಕಾರಕ್ಕೆ ಬರುತ್ತವೆ. ಬಹುಮತ ಪಡೆದ ಪಕ್ಷಗಳ ಸಂಸದೀಯ ನಾಯಕರು ಪ್ರಧಾನಿಯಾಗಿ ಅಧಿಕಾರದ ಚಲಾಯಿಸುತ್ತಾರೆ. ಬಹುಮತ ಕಳೆದುಕೊಂಡ ಕ್ಷಣವೇ ಸರ್ಕಾರ ಪತನವಾಗುತ್ತದೆ. ಈ ಪ್ರಕ್ರಿಯೆ ಏಳು ದಶಕಗಳಿಂದ ಅತ್ಯಂತ ಸುಲಲಿತವಾಗಿ ಸಾಗುತ್ತಾ ಬಂದಿದೆ.

ಅಮೆರಿಕದಂತೆ ಸ್ವತಂತ್ರ್ಯ ರಾಜ್ಯಗಳ ಸಂಯೋಜನೆಯ ಒಕ್ಕೂಟ ವ್ಯವಸ್ಥೆ ಭಾರತದಲ್ಲಿ ಇಲ್ಲ. ಆದರೂ ಭಾಷೆ, ಆಡಳಿತ, ಸಮಾನ ಹಿತಾಸಕ್ತಿ ಪ್ರಾಂತ್ಯಗಳ ಆಧಾರದಲ್ಲಿ ರೂಪುಗೊಂಡ ರಾಜ್ಯಗಳನ್ನು ಒಳಗೊಂಡ ಪ್ರಬಲ ಒಕ್ಕೂಟ ವ್ಯವಸ್ಥೆಗೆ ಸಂವಿಧಾನ ಅವಕಾಶ ಮಾಡಿಕೊಟ್ಟಿದೆ. ರಾಷ್ಟ್ರದ ಸಾರ್ವಭೌಮತೆ ಕಾಪಾಡುವ ಪ್ರಬಲ ಕೇಂದ್ರ ಸರ್ಕಾರ, ಸ್ಥಳೀಯ ಆಡಳಿತದ ಸ್ವಾತಂತ್ರ್ಯವನ್ನು ಹೊಂದಿರುವ ರಾಜ್ಯ ಸರ್ಕಾರಗಳ ಮಧ್ಯೆ ವ್ಯವಸ್ಥಿತವಾಗಿ ಅಧಿಕಾರ ಹಂಚಿಕೆಯ ಸೂತ್ರ ಹೆಣೆಯಲಾಗಿದೆ. ಅದಕ್ಕಾಗಿ ಕೇಂದ್ರ, ರಾಜ್ಯಕ್ಕೆ ಪ್ರತ್ಯೇಕ ಪಟ್ಟಿ, ಎರಡೂ ಸೇರಿ ಸಮವರ್ತಿ ಪಟ್ಟಿ ಅಳವಡಿಸಲಾಗಿದೆ. ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ಕಾನೂನು ಮಾಡುವ ಅಂತಿಮ ಅಧಿಕಾರವನ್ನು ಕೇಂದ್ರಕ್ಕೇ ನೀಡಲಾಗಿದೆ.

ಬಹುಭಾಷೆ, ಧರ್ಮ, ಸಂಸ್ಕೃತಿ, ಆಚರಣೆಗಳ ದೇಶದಲ್ಲಿ ಏಕತೆ, ಸಮಾನತೆ, ಜಾತ್ಯತೀತ ಪರಿಕಲ್ಪನೆಗಳಿಗೆ ಒತ್ತು ನೀಡಲಾಗಿದೆ. ಅಧಿಕಾರ ಚಲಾಯಿಸುವಾಗ ಕಲ್ಯಾಣ ರಾಜ್ಯದ ಪರಿಕಲ್ಪನೆ ಸಾಕಾರಗೊಳಿಸಲು 'ರಾಜನೀತಿ ನಿರ್ದೇಶಕ ತತ್ವ'ಗಳನ್ನು ಅಳವಡಿಸಲಾಗಿದೆ. ಪ್ರಜೆಗಳ ಹಕ್ಕುಗಳ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಆರು ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಅದೇ ರೀತಿ ಪ್ರಜೆಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪಟ್ಟಿ ಮಾಡಲಾಗಿದೆ. ಧರ್ಮ ನಿರಪೇಕ್ಷತೆಯೂ ಸಂವಿಧಾನದ ಮೂಲ ಆಶಯ.

ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗದ ವ್ಯಾಪ್ತಿ, ಸ್ವರೂಪ, ಅಧಿಕಾರವನ್ನು ನಿರ್ದಿಷ್ಟವಾಗಿ ನಿಗದಿ ಮಾಡಲಾಗಿದೆ. ಪರಸ್ಪರ ಸಂಘರ್ಷಕ್ಕೆ ಅವಕಾಶ ಇಲ್ಲದಂತೆ ಸೌಹಾರ್ದ, ಸುಲಲಿತ ಕಾರ್ಯನಿರ್ವಹಣೆಯ ಮಿತಿ–ವ್ಯಾಪ್ತಿಗಳನ್ನು ಸ್ಪಷ್ಟಪಡಿಸಲಾಗಿದೆ. ಸಾಂವಿಧಾನಿಕ ಸಂಸ್ಥೆ, ಹುದ್ದೆಗಳನ್ನು ರದ್ದು ಮಾಡಲು ಸಾಧ್ಯವಾಗದಂತೆ ತಡೆಯಲಾಗಿದೆ. ಅದೇ ನಮ್ಮ ಸಂವಿಧಾನದ ಮೂಲತತ್ವಗಳ ವೈಶಿಷ್ಟ್ಯ ಮತ್ತು ಸಾಮರ್ಥ್ಯ. ❖

ಪ್ರಮುಖ ಮೂಲತತ್ವಗಳು

- ಸಂವಿಧಾನಕ್ಕೆ ಪರಮಾಧಿಕಾರ
- ಭಾರತದ ಸಾರ್ವಭೌಮತ್ವ
- ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ
- ಒಕ್ಕೂಟದ ಸ್ವರೂಪ, ಪ್ರಬಲ ಕೇಂದ್ರ
- ದೇಶದ ಐಕ್ಯತೆ ಮತ್ತು ಸಮಗ್ರತೆ
- ಧರ್ಮನಿರಪೇಕ್ಷತೆ, ಸಮಾಜವಾದ
- ಕಲ್ಯಾಣ ರಾಜ್ಯದ ಪರಿಕಲ್ಪನೆ
- ಸಾಮಾಜಿಕ ನ್ಯಾಯದ ಆದರ್ಶ
- ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ
- ನ್ಯಾಯಿಕ ಪುನರ್‌ಪರಿಶೀಲನೆ
- ಕಾನೂನಿನ ಮುಂದೆ ಸಮಾನತೆ
- ವ್ಯಕ್ತಿಯ ಘನತೆ, ಸ್ವಾತಂತ್ರ್ಯ
- ಕಾಲಬದ್ಧ ಚುನಾವಣಾ ವ್ಯವಸ್ಥೆ

ತಿದ್ದುಪಡಿ–ಬದಲಾವಣೆ

ಕಾಲ, ಅಗತ್ಯಕ್ಕೆ ಅನುಗುಣವಾಗಿ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿಗಳನ್ನು ಮಾಡುವ, ಕೆಲ ಅಂಶಗಳನ್ನು ಬದಲಿಸುವ–ಸೇರಿಸುವ ಅಧಿಕಾರವನ್ನು ಸಂಸತ್ ಹೊಂದಿದೆ.

ಭಾರತೀಯ ಸಂವಿಧಾನದ 368ನೇ ವಿಧಿಯ ಅನ್ವಯ ತಿದ್ದುಪಡಿಗಳಿಗೆ ಅವಕಾಶವಿದೆ. ಸಂಸತ್ತಿನ ಉಭಯ ಸದನಗಳು ಸರಳ ಬಹುಮತದಿಂದ ತಿದ್ದುಪಡಿ ಮಾಡಬಹುದು. ಹೆಚ್ಚಿನ ತಿದ್ದುಪಡಿಗಳಿಗೆ ವಿಶೇಷ ಬಹುಮತದ ಅಗತ್ಯವಿದೆ. ಸದನದ ಕನಿಷ್ಠ ಮೂರನೇ ಎರಡರಷ್ಟು ಸದಸ್ಯರು ಹಾಜರಿದ್ದು ಮತ ಚಲಾಯಿಸಬೇಕು. ಒಕ್ಕೂಟ ವ್ಯವಸ್ಥೆಯ ಕೆಲ ತಿದ್ದುಪಡಿಗಳಿಗೆ ಸಂಸತ್‌ನ ಮೂರನೇ ಎರಡರಷ್ಟು ಬಹುಮತದ ಜತೆಗೆ, ರಾಜ್ಯ ಶಾಸಕಾಂಗಗಳ ಅನುಮೋದನೆ ಅಗತ್ಯ.

ಸಂವಿಧಾನದ ಬದಲಾವಣೆ ಎಂದರೆ 'ಮೂಲ ತತ್ವಗಳ' ಬದಲಾವಣೆ. ಅಂತಹ ಅಧಿಕಾರ ಸಂಸತ್‌ಗೂ ಇಲ್ಲ. ಹಾಗಾಗಿ, ತಿದ್ದುಪಡಿ ಹಾಗೂ ಬದಲಾವಣೆ ಎನ್ನುವುದು ಎರಡು ಭಿನ್ನ ಪರಿಕಲ್ಪನೆಗಳು.

'ಸುಪ್ರೀಂ' ವ್ಯಾಖ್ಯಾನ

ಸಂವಿಧಾನದ ಯಾವುದೇ ಭಾಗ, ಅಧ್ಯಾಯ ಅಥವಾ ವಿಧಿಗಳಲ್ಲಿ ಅದರ ಮೂಲ ತತ್ವಗಳು ಯಾವುವು ಎಂಬ ವಿವರಣೆ ಇಲ್ಲ. ಸುಪ್ರೀಂಕೋರ್ಟ್ 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲತತ್ವಗಳನ್ನು ಹೆಕ್ಕಿ ಪಟ್ಟಿ ಮಾಡಿದೆ. ಸಂಸದೀಯ ಪ್ರಜಾಪ್ರಭುತ್ವ, ಜಾತ್ಯತೀತ, ಸಾಮಾಜಿಕ ನ್ಯಾಯ ಸೇರಿದಂತೆ ಯಾವುದೇ ಮೂಲ ತತ್ವಗಳನ್ನು ಬದಲಿಸುವುದು, ತಿದ್ದುಪಡಿ ಮಾಡುವಂತಿಲ್ಲ ಎಂದೂ ಸ್ಪಷ್ಟಪಡಿಸಿದೆ.

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

ಬಾಪೂಜಿ ವಿದ್ಯಾ ಸಂಸ್ಥೆ (ರಿ)
2ನೇ ಮುಖ್ಯ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ–577002

ಶಿವಗಣಾರಾಧನೆ ಮತ್ತು ನುಡಿನಮನ

ಐವತ್ತು ವರ್ಷಗಳಿಗೂ ಹೆಚ್ಚು ಕಾಲ ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ಅಮೃತ ಪುರುಷರು, ಶತಮಾನ ಶ್ರೇಷ್ಠರು, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಶಾಸಕರೂ ಆದ

ಲಿಂ. ಡಾ. ಶಾಮನೂರು ಶಿವಶಂಕರಪ್ಪ ಅವರು

ದಿ. 14.12.2025ರಂದು ನಮ್ಮೆಲ್ಲರನ್ನು ಅಗಲಿದ್ದು, ಅವರ ಶಿವಗಣಾರಾಧನೆ ಮತ್ತು ನುಡಿನಮನ ಕಾರ್ಯಕ್ರಮವನ್ನು ದಿ. 26.12.2025 ರ ಶುಕ್ರವಾರ ಬೆಳಿಗ್ಗೆ 10.15ಕ್ಕೆ ಹಮ್ಮಿಕೊಳ್ಳಲಾಗಿದೆ. ದಾವಣಗೆರೆಯ ಬಂಬೂಬಜಾರ್ ಮುಖ್ಯ ರಸ್ತೆಯಲ್ಲಿರುವ ಶ್ರೀ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿ ಕಾರ್ಯಕ್ರಮ ನೆರವೇರಲಿದ್ದು, ತಾವುಗಳೆಲ್ಲರು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿಸುತ್ತೇವೆ.

ಉಪಾಧ್ಯಕ್ಷರು, ಜಂಟಿ ಗೌರವ ಕಾರ್ಯದರ್ಶಿಗಳು, ಖಜಾಂಚಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಸಮಸ್ತ ಎಲ್ಲ ಅಂಗ ಸಂಸ್ಥೆಗಳ ನೌಕರ ವರ್ಗ, ದಾವಣಗೆರೆ

ಭಾವಪೂರ್ಣ ಗೌರವ ಶ್ರದ್ಧಾಂಜಲಿ ಸಲ್ಲಿಸುವವರು

ಶ್ರೀಮತಿ ಪ್ರೀತಿ ಬಕ್ಕೇಶ್ ಹಾಗೂ ಶ್ರೀ ಎಸ್.ಎಸ್. ಬಕ್ಕೇಶ್, ಆಶಿಕ್, ಅಕ್ಷತಾ, ಅದಿತ್
ಶ್ರೀಮತಿ ರೇಖಾ ಗಣೇಶ್ ಹಾಗೂ ಶ್ರೀ ಎಸ್.ಎಸ್. ಗಣೇಶ್, ಅಭಿಜಿತ್, ಆಂಚಲ್, ಅಖಿಲಾ
ಡಾ॥ ಪ್ರಭಾ ಮಲ್ಲಿಕಾರ್ಜುನ್ ಹಾಗೂ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಸಮರ್ಥ್, ಡಾ॥ ಶ್ರೇಷ್ಠಾ, ಶಿವ

ಪಂಚ ಪೀಠಾಧೀಶ್ವರರೂ ಸೇರಿದಂತೆ ನಾಡಿನ ಎಲ್ಲಾ ಮಠಾಧೀಶರು, ಹರ, ಗುರು, ಚರ ಮೂರ್ತಿಗಳು ದಿವ್ಯ ಸಾನ್ನಿಧ್ಯ ವಹಿಸುವರು

ಉದ್ಘಾಟನೆ: ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷರು, ಭಾರತ ರಾಷ್ಟ್ರೀಯ ಕಾಂಗ್ರೆಸ್
ಪುತ್ಥಳಿ ಅನಾವರಣ: ಮಾನ್ಯ ಶ್ರೀ ಸಿದ್ಧರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಸಾಕ್ಷ್ಯಚಿತ್ರ ಬಿಡುಗಡೆ: ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು, ಅಧ್ಯಕ್ಷರು, ಕೆ.ಪಿ.ಸಿ.ಸಿ.
ಅಧ್ಯಕ್ಷತೆ: ನ್ಯಾ. ಶಿವರಾಜ್ ಪಾಟೀಲ್ ನಿವೃತ್ತ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ

–: ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ :–
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಡಾ॥ ಪ್ರಭಾ ಮಲ್ಲಿಕಾರ್ಜುನ್, ಮಾನ್ಯ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ

ಕಿರು ಹೊತ್ತಿಗೆ ಬಿಡುಗಡೆ
ಶ್ರೀ ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿಗಳು, ಭಾರತ ಸರ್ಕಾರ

–: ವಂದನಾರ್ಪಣೆ :–
ಶ್ರೀ ಎಸ್.ಎಸ್. ಗಣೇಶ್, ಉದ್ಯಮಿಗಳು ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರು, ಅ.ಭಾ.ವೀ.ಲಿಂ. ಮಹಾಸಭಾ

ನುಡಿ ನಮನ
ಶ್ರೀ ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳು
ಶ್ರೀ ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ, ಎಐಸಿಸಿ
ಶ್ರೀ ಜಗದೀಶ್ ಶೆಟ್ಟರ್, ಸಂಸದರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ಹೆಚ್.ಡಿ.ಕುಮಾರಸ್ವಾಮಿ, ಮಾನ್ಯ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ಬಸವರಾಜ ಬೊಮ್ಮಾಯಿ, ಸಂಸದರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ವಿ.ಸೋಮಣ್ಣ, ಮಾನ್ಯ ಕೇಂದ್ರ ಸಚಿವರು, ಭಾರತ ಸರ್ಕಾರ
ಶ್ರೀ ಯು.ಟಿ.ಖಾದರ್, ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ
ಶ್ರೀ ರಣದೀಪ್ ಸುರ್ಜೇವಾಲಾ, ಮಾಜಿ ಮುಖ್ಯಮಂತ್ರಿಗಳು
ಶ್ರೀ ಈಶ್ವರ ಬಿ ಖಂಡ್ರೆ, ಸಚಿವರು, ಹಿರಿಯ ಉಪಾಧ್ಯಕ್ಷರು, ಅ.ಭಾ.ವೀ.ಲಿಂ.ಮ
ಶ್ರೀ ಎಂ.ಬಿ.ಪಾಟೀಲ್, ಸಚಿವರು, ಮಾಜಿ ಮುಖ್ಯಮಂತ್ರಿಗಳು

ರಾಜ್ಯದ ಎಲ್ಲಾ ಮಂತ್ರಿಗಳು, ಮಾಜಿ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ-ಮಂಡಳಿ ಅಧ್ಯಕ್ಷರು, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮುಖಂಡರುಗಳು ಹಾಗೂ ಎಲ್ಲಾ ಪಕ್ಷಗಳ ಮುಖಂಡರು ನುಡಿನಮನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಎಲ್ಲರಿಗೂ ತಲುಪಿಸಲಾಗಿದ್ದು, ತಲುಪದೆ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಯಾವಾತನು ತಾನು ಚೆನ್ನಾಗಿ ಬದುಕಿದ್ದೇನೆ ಎಂದು ಧೈರ್ಯಪಡಬಲ್ಲನೋ ಅವನು ಸಾವಿಗೆ ಅಂಜುವುದಿಲ್ಲ.

–ಶಿವರಾಮ ಕಾರಂತ

ಸಂಪಾದಕೀಯ

'ಅರಾವಳಿ ಉಳಿಸಿ' ಆಂದೋಲನ ಸರ್ಕಾರ ಜನದನಿ ಕೇಳಿಸಿಕೊಳ್ಳಲಿ

ಅರಾವಳಿ ಪರ್ವತಶ್ರೇಣಿಯ ಕುರಿತಾದ ಕೇಂದ್ರ ಪರಿಸರ ಸಚಿವಾಲಯದ ವ್ಯಾಖ್ಯೆಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿರುವುದು ರಾಜಸ್ಥಾನ ಮತ್ತು ಹರಿಯಾಣಗಳಲ್ಲಿ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿದೆ. ಗಣಿಗಾರಿಕೆ, ರಿಯಲ್ ಎಸ್ಟೇಟ್ ಸೇರಿದಂತೆ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಚಟುವಟಿಕೆಗಳು ಅರಾವಳಿ ಶ್ರೇಣಿಯ ಬಹುತೇಕ ಬೆಟ್ಟಗಳನ್ನು ಆಪೋಶನ ತೆಗೆದುಕೊಳ್ಳಬಹುದೆನ್ನುವ ಆತಂಕ ಪ್ರತಿಭಟನೆಗಳಿಗೆ ಕಾರಣವಾಗಿದೆ. ಪರಿಸರ ಸಚಿವಾಲಯದ ಸಮಿತಿ ಮಾಡಿರುವ ಶಿಫಾರಸಿನಂತೆ, ನೂರು ಮೀಟರ್ ಅಥವಾ ಇನ್ನೂ ಎತ್ತರದ ಭೂರಚನೆಗಳನ್ನಷ್ಟೇ ಅರಾವಳಿ ಶ್ರೇಣಿಯಲ್ಲಿನ ಸಂರಕ್ಷಿತ ಪ್ರದೇಶಗಳೆಂದು ಗುರುತಿಸಲಾಗುತ್ತದೆ. 1980ರ ಅರಣ್ಯ (ಸಂರಕ್ಷಣಾ) ಕಾಯ್ದೆ ಮತ್ತು ಅರಣ್ಯ ಸಂರಕ್ಷಣಾ ನಿಯಮಗಳ (2022) ತಿದ್ದುಪಡಿ, ನೂರು ಮೀಟರ್‌ಗೂ ಕಡಿಮೆ ಎತ್ತರದ ಬೆಟ್ಟಗಳಲ್ಲಿ ಗಣಿಗಾರಿಕೆಗೆ ಅವಕಾಶ ಕಲ್ಪಿಸಿದೆ. ಈ ಮಾನದಂಡದ ಅನ್ವಯ, 12,081 ಬೆಟ್ಟಗಳಲ್ಲಿ ಬರೀ 1,050 ಬೆಟ್ಟಗಳಷ್ಟೇ ಗಣಿಗಾರಿಕೆಯಿಂದ ರಕ್ಷಣೆ ಪಡೆಯಲಿವೆ. ರಾಜ್ಯಗಳಲ್ಲಿ ಹಬ್ಬಿಕೊಂಡಿರುವ ಅರಾವಳಿ ಶ್ರೇಣಿಯಲ್ಲಿ ಸುಮಾರು ಶೇ 90ರಷ್ಟು ಬೆಟ್ಟಗಳು 30ರಿಂದ 80 ಮೀಟರ್ ಎತ್ತರ ಹೊಂದಿವೆ. ಗುಜರಾತ್, ರಾಜಸ್ಥಾನ, ದೆಹಲಿ ಮತ್ತು ಹರಿಯಾಣಗಳಲ್ಲಿ ಹಬ್ಬಿಕೊಂಡಿರುವ ಬೆಟ್ಟಗಳು, ವಿಶ್ವದಲ್ಲೇ ಅತ್ಯಂತ ಹಳೆಯದಾದ ಪರ್ವತಶ್ರೇಣಿಗಳಲ್ಲೊಂದು ಎನ್ನುವ ಹಿರಿಮೆ ಹೊಂದಿವೆ. ಹಸುರು ಶ್ವಾಸಕೋಶಗಳೆಂದು ಗುರುತಿಸಲಾಗುವ ಪರ್ವತಶ್ರೇಣಿ, ಜೀವವೈವಿಧ್ಯದ ತೊಟ್ಟಿಲಾಗಿದೆ, ಜಲಸಂರಕ್ಷಣೆಯ ತಾಣವೂ ಆಗಿದೆ ಹಾಗೂ ಥಾರ್ ಮರುಭೂಮಿ ಹಬ್ಬಿಕೊಂಡಿರುವ ಪ್ರದೇಶ ಮರಳುಗಾಡು ಆಗದಿರುವಂತೆ ರಕ್ಷಿಸುತ್ತಿದೆ.

ವಿಶ್ವದ ಅತ್ಯಂತ ಹಳೆಯ ಪರ್ವತಶ್ರೇಣಿಗಳಲ್ಲಿ ಒಂದಾದ 'ಅರಾವಳಿ', ಸರ್ಕಾರದ ತಪ್ಪುನೀತಿಗಳಿಂದ ಅಪಾಯ ಎದುರಿಸುತ್ತಿದೆ; ಬೆಟ್ಟಸಾಲಿನ ಮೇಲೆ ಗಣಿಗಾರಿಕೆಯ ಕತ್ತಿ ತೂಗಾಡುತ್ತಿದೆ.

ಅರಾವಳಿ ಪರ್ವತಶ್ರೇಣಿಯ ಶೇ 0.19 ಪ್ರದೇಶವನ್ನಷ್ಟೇ ಗಣಿಗಾರಿಕೆಗೆ ಬಳಸಿಕೊಳ್ಳಲಾಗುವುದು ಹಾಗೂ ವಿಸ್ತೃತ ಅಧ್ಯಯನದ ನಂತರವಷ್ಟೇ ಗಣಿಗಾರಿಕೆಗೆ ಹೊಸ ಪರವಾನಗಿಗಳನ್ನು ನೀಡಲಾಗುವುದು ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ. ಆದರೆ, ಸಚಿವರ ಭರವಸೆ ಪರಿಸರ ಕಾರ್ಯಕರ್ತರ ಆತಂಕಗಳನ್ನು ಶಮನಗೊಳಿಸಿಲ್ಲ. ಮರುವ್ಯಾಖ್ಯಾನಕ್ಕೆ ಒಳಪಟ್ಟಿರುವ ಪ್ರದೇಶದಲ್ಲಿ ಗಣಿಗಾರಿಕೆ, ನಿರ್ಮಾಣ ಮತ್ತಿತರ ವಾಣಿಜ್ಯ ಚಟುವಟಿಕೆಗಳು ವ್ಯಾಪಕವಾಗಿ ನಡೆಯುವ ಆತಂಕ ಎದುರಾಗಿದೆ. ರಾಜಕಾರಣಿಗಳು ಹಾಗೂ ಅಧಿಕಾರಿಗಳ ಕೃಪಾಪೋಷಣೆಯಲ್ಲಿ ಈಗಾಗಲೇ ಅಕ್ರಮ ಗಣಿಗಾರಿಕೆ ಅರಾವಳಿ ಶ್ರೇಣಿಯಲ್ಲಿ ನಡೆಯುತ್ತಿದ್ದು, ಅದಕ್ಕೆ ಕಾನೂನು ಸಮ್ಮತಿ ಒದಗಿಸಿಕೊಡುವ ಪ್ರಯತ್ನಗಳು ನಡೆಯುತ್ತಿವೆ. ಅಕ್ರಮ ಗಣಿಗಾರಿಕೆಯಿಂದ ಕೆಲವೆಡೆ ಪರ್ವತಗಳು ಶಿಥಿಲವಾಗಿರುವುದು ಜನಜೀವನದ ಮೇಲೆ ಪ್ರಭಾವ ಬೀರಿದೆ. ಪರ್ವತಶ್ರೇಣಿಯನ್ನು ಅಪಮೌಲ್ಯಗೊಳಿಸುವ ಈ ಎಲ್ಲ ಪ್ರಯತ್ನಗಳ ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳು ಹೆಚ್ಚಾಗುತ್ತಿವೆ.

ಸುಪ್ರೀಂ ಕೋರ್ಟ್ ಈ ಮೊದಲು ಅರಾವಳಿ ಶ್ರೇಣಿಯ ಸಂರಕ್ಷಣೆಗೆ ಪೂರಕವಾದ ನಿರ್ದೇಶನಗಳನ್ನು ಹೊರಡಿಸಿತ್ತು. ಆ ಪ್ರದೇಶದಲ್ಲಿ ಪರಿಸರವನ್ನು ಗಾಸಿಗೊಳಿಸುವ ಯಾವುದೇ ಚಟುವಟಿಕೆಗಳಿಗೆ ಅನುಮತಿ ನೀಡದಂತೆ ಸರ್ಕಾರಗಳು ಮತ್ತು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿತ್ತು. ಈಗ ಬದಲಾದ ಸಂದರ್ಭದಲ್ಲಿ, ಪರಿಸರ ಸಚಿವಾಲಯದ ಸಮಿತಿಯ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಅರಾವಳಿ ಪರಿಸರಕ್ಕೆ ಸಂಬಂಧಿಸಿದ ವಾಸ್ತವ ಸ್ಥಿತಿಯನ್ನು ಸುಪ್ರೀಂ ಕೋರ್ಟ್‌ನಿಂದ ಮರೆಮಾಚಲಾಗಿದೆ ಎಂದು ಹೇಳಲಾಗುತ್ತಿದೆ. ಪರಿಸರ ಸಚಿವಾಲಯದ ಸಮಿತಿಯು 'ಫಾರೆಸ್ಟ್ ಸರ್ವೆ ಆಫ್ ಇಂಡಿಯಾ' ರೂಪಿಸಿದ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದೂ ಟೀಕೆಗಳಿಗೆ ಕಾರಣವಾಗಿದೆ. ಪರಿಸರ ಸಂರಕ್ಷಣೆಯ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವ ಬಗ್ಗೆ ಸರ್ಕಾರ ಮತ್ತು ರಾಜಕಾರಣಿಗಳನ್ನು ಕುರಿತು ಪರಿಸರ ಕಾರ್ಯಕರ್ತರು ಹಾಗೂ ಸಾರ್ವಜನಿಕರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. 'ಅರಾವಳಿ ಉಳಿಸಿ' ಆಂದೋಲನ ಜನಪ್ರಿಯ ಚಳವಳಿಯಾಗಿ ಬೆಳೆಯುತ್ತಿದೆ. ಜನಪರ ಚಳವಳಿಗಳನ್ನು ಪ್ರಜಾತಂತ್ರಾತ್ಮಕ ಸರ್ಕಾರ ಕಡೆಗಣಿಸಬಾರದು. ಒಂದೆಡೆ, ದಕ್ಷಿಣ ಭಾರತದ ಜೀವನಾಡಿಗಳೆಂತಿರುವ ಪಶ್ಚಿಮ ಘಟ್ಟಗಳನ್ನು ಅಭಿವೃದ್ಧಿ ಚಟುವಟಿಕೆಗಳ ಹೆಸರಿನಲ್ಲಿ ಶಿಥಿಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ'ಯ ಬಗ್ಗೆ ಕರ್ನಾಟಕದಲ್ಲಿ ಸ್ಥಳೀಯರ ವಿರೋಧ ವ್ಯಕ್ತವಾಗಿದೆ. ಪಶ್ಚಿಮ ಘಟ್ಟ ಅಥವಾ ಅರಾವಳಿ ಶ್ರೇಣಿಗೆ ಅಪಾಯ ತರುವ ಪ್ರಯತ್ನಗಳನ್ನು ಸ್ಥಳೀಯ ಸಮಸ್ಯೆಗಳೆಂದು ಭಾವಿಸದೆ, ದೇಶದ ಪರಿಸರಕ್ಕೆ ಒದಗಿರುವ ಗಂಭೀರ ಬಿಕ್ಕಟ್ಟೆಂದು ಭಾವಿಸಬೇಕಾಗಿದೆ. ಈ ಸೂಕ್ಷ್ಮಪ್ರದೇಶಗಳನ್ನು ಗಾಸಿಗೊಳಿಸುವ ಪ್ರಯತ್ನಗಳು ಪರಿಸರಕ್ಕೆ ಸರಿಪಡಿಸಲಾಗದ ಹಾನಿ ಉಂಟುಮಾಡುತ್ತವೆ ಎನ್ನುವುದನ್ನು ಸರ್ಕಾರಗಳು ಮರೆಯಬಾರದು.

ಚೂಟಿಡಿ

ಎಲ್ಲಿದೆ ರಕ್ತಸಂಬಂಧ?

ಇನ್ನೆಷ್ಟು ದಿನ ಈ ಜಾತ್ಯಾಂಧರ ಅಟ್ಟಹಾಸ? ಹೊಟ್ಟೆಯ ಮಗುವನ್ನೇ ಕೊಲ್ಲುವಷ್ಟು ದುಷ್ಟತನ ಇರುವುದಾದರೆ ಎಲ್ಲಿದೆ ಕರುಳು? ಎಲ್ಲಿದೆ ರಕ್ತಸಂಬಂಧ? ಇಲ್ಲಿರುವುದು ಕೇವಲ ಸನಾತನ ವ್ಯವಸ್ಥೆ ತುಂಬಿರುವ ಜಾತಿ ಪ್ರತಿಷ್ಠೆ ಮತ್ತು ಜಾತಿ ಭಯ ಮಾತ್ರ.

ಮೀನಾಕ್ಷಿ ಬಾಳಿ, ಲೇಖಕಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ' ಪೊಲೀಸರಿಗೆ ನೀಡಿರುವ ಆಯುಧ. ಇದನ್ನು ಜಾರಿ ಮಾಡಿದವರಿಗೆ ಪಾಪ ಸುತ್ತಿಕೊಳ್ಳುತ್ತದೆ. ಸಾಮಾನ್ಯ ಜನರ ಜೀವನದಲ್ಲಿ ಇಂತಹ ಹುಡುಗಾಟ ಒಳ್ಳೆಯದಲ್ಲ.

ವಿ.ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 25-12-2000

- **ವಿಶ್ವನಾಥನ್ ಆನಂದ್ ವಿಶ್ವ ಚಾಂಪಿಯನ್**

ಟೆಹರಾನ್, ಡಿ. 24– ಭಾರತದ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಫಿಡೆ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಅಂತಿಮ ಪಂದ್ಯದಲ್ಲಿ ಇಂದು ಸ್ಪೇನ್‌ನ ಅಲೆಕ್ಸಿ ಶಿರೋವ್ ಅವರನ್ನು ಸೋಲಿಸಿ ವಿಶ್ವ ಚಾಂಪಿಯನ್ ಪಟ್ಟಕ್ಕೇರಿದರು.

ಇದುವರೆಗೆ ರಷ್ಯಾದ ಪಾರುಪತ್ಯಕ್ಕೆ ಒಳಗಾಗಿದ್ದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪಟ್ಟಕ್ಕೇರುತ್ತಿರುವ ಏಷ್ಯಾದ ಮೊದಲ ಆಟಗಾರ ಎನ್ನುವ ಖ್ಯಾತಿಗೆ ಆನಂದ್ ಭಾಜನರಾದರು.

ಶಿರೋವ್ ಅವರನ್ನು ಸೋಲಿಸಿ, 3.5–0.5ರಲ್ಲಿ ಮುನ್ನಡೆ ಪಡೆದ ಆನಂದ್, ಎರಡು ಪಂದ್ಯ ಬಾಕಿ ಇರುವಂತೆಯೇ ಚಾಂಪಿಯನ್ ಆದರು.

- **ಪಾಕ್ ಜತೆ ಸಂಧಾನ: ಅಡ್ವಾಣಿ ಇಂಗಿತ**

ನವದೆಹಲಿ, ಡಿ. 24– ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ಹಿಜಬುಲ್ ಮುಜಾಹಿದೀನ್ ಸೇರಿ ಯಾವುದೇ ಉಗ್ರಗಾಮಿ ಸಂಘಟನೆ ಜತೆಗೆ ಕೇಂದ್ರ ಸರ್ಕಾರವು ಸಂಧಾನ ನಡೆಸುವ ಸಾಧ್ಯತೆ ಇದೆ ಎಂದು ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅಭಿಪ್ರಾಯಪಟ್ಟಿದ್ದಾರೆ.

ಕಾಶ್ಮೀರ ಕಣಿವೆಯಲ್ಲಿ ಭಾರತವು ಕದನ ವಿರಾಮ ವಿಸ್ತರಿಸಿದ ನಂತರದ ಅವಧಿಯಲ್ಲಿ ಪಾಕಿಸ್ತಾನದ ವರ್ತನೆ ಅಭ್ಯಸಿಸಿದ ನಂತರ, ಆ ದೇಶದ ಜತೆಗೂ ಸಂಧಾನ ನಡೆಸುವ ಸಾಧ್ಯತೆಗಳೂ ಇವೆ ಎಂದು ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 25-12-1950

- **'ಕನ್ನಡಿಗರು ಇತರ ಭಾಷೆಗಳ ಸಾಹಿತ್ಯವನ್ನು ಅರಿಯುವುದಗತ್ಯ'**

ಬೊಂಬಾಯಿ, ಡಿ. 24– ನಮ್ಮ ಭಾಷೆಯಲ್ಲದೆ ಇತರ ಭಾರತೀಯ ಭಾಷೆಗಳೆಲ್ಲದರ ಬಗ್ಗೆ ಜ್ಞಾನ ಪಡೆದಿರಬೇಕಾದುದು ನಮ್ಮ ವಿದ್ಯಾಭ್ಯಾಸದ ಭಾಗವಾಗಿರಬೇಕು. ಇದರಿಂದ ಮಾತ್ರ ಪ್ರತ್ಯೇಕತಾಭಾವಗಳನ್ನು, ಪ್ರಾಂತೀಯ ಮನೋಭಾವಗಳನ್ನು ತೊರೆದು ಸೌಹಾರ್ದ ಮನೋಭಾವ ಮತ್ತು ರಾಷ್ಟ್ರೀಯ ಸಂಘಟನೆಗಳನ್ನು ಪಡೆಯಲು ಸಾಧ್ಯ ಎಂದು ಕೇಂದ್ರದ ವಾರ್ತಾ ಸಚಿವ ರಂಗನಾಥ ರಾಮಚಂದ್ರ ದಿವಾಕರ ಅವರು, ಕನ್ನಡ ಸಾಹಿತ್ಯ ಸಮ್ಮೇಳನದ 34ನೇ ಅಧಿವೇಶನವನ್ನು ಉದ್ಘಾಟಿಸುತ್ತ ಈ ದಿನ ಇಲ್ಲಿ ಹೇಳಿದರು.

ಬೆಳ್ಳಿ ಹೊಳಪಲ್ಲಿ 'ಭೂಮಿ' ಕ್ರಾಂತಿ

ವಿಶ್ಲೇಷಣೆ

ಕುಮಾರ

> ರೈತರ ಭೂ ದಾಖಲೆಗಳನ್ನು ಗಣಕೀಕರಣಕ್ಕೆ ಒಳಪಡಿಸಿದ 'ಭೂಮಿ', ದೇಶಕ್ಕೇ ಮಾದರಿಯಾದ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆ. ಆಡಳಿತದ ಕೆಲವು ಕ್ಷೇತ್ರಗಳ ಮೇಲೆ 'ಭೂಮಿ' ಬೀರಿರುವ ಪ್ರಭಾವ ಮತ್ತು ತಂದಿರುವ ಬದಲಾವಣೆ ಅಪಾರ. ರೈತರ ಬದುಕಿಗೆ ಬೆಳ್ಳಿಗೆರೆಯಾದ 'ಭೂಮಿ'ಗೀಗ ಬೆಳ್ಳಿಹಬ್ಬ.

ಆಡಳಿತ ವ್ಯವಸ್ಥೆಯಲ್ಲಿ ಕಂದಾಯ ಇಲಾಖೆಗೆ 'ಮಾತೃ ಇಲಾಖೆ'ಯ ಗೌರವ. ಕಂದಾಯ ಇಲಾಖೆಯ ಕಾರ್ಯವೈಖರಿ ಎಲ್ಲರ ಜೀವನಚಕ್ರವನ್ನೂ ಆವರಿಸಿಕೊಂಡಿದೆ; ಹುಟ್ಟಿನಿಂದ ಅಂತ್ಯದವರೆಗೆ ಒಂದಲ್ಲಾ ಒಂದು ಕಾರಣಕ್ಕೆ ನಾಗರಿಕರು ಕಂದಾಯ ಇಲಾಖೆಯ ಸಂಪರ್ಕಕ್ಕೆ ಬರಲೇಬೇಕಾಗುತ್ತದೆ. 'ಭೂ' ಆಡಳಿತ ಮತ್ತು ಭೂ ದಾಖಲೆಗಳಿಗೆ ಸಂಬಂಧಿಸಿದಂತೆಯೂ ಕಂದಾಯ ಇಲಾಖೆಯ ವ್ಯಾಪ್ತಿ ವಿಸ್ತಾರವಾಗಿದೆ. ಕೃಷಿ ಆಧಾರಿತ ಅರ್ಥವ್ಯವಸ್ಥೆಯಲ್ಲಿ ಭೂದಾಖಲೆಗಳ ಪಾತ್ರ ಮಹತ್ವದ್ದು. ದಾಖಲೆಗಳ ಸುರಕ್ಷತೆಯು ರೈತರ ಹಾಗೂ ಜನಸಾಮಾನ್ಯರ ಸ್ಥಿತಿಗತಿಗಳ ಸುರಕ್ಷತೆಯೂ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಭೂ ದಾಖಲೆಗಳ ನಿಖರತೆ, ಗುಣಮಟ್ಟ ಮತ್ತು ರಕ್ಷಣೆ, ಭೂ ಮಾಲೀಕನ ಹಕ್ಕಿನ ರಕ್ಷಣೆಯೂ ಹೌದು.

ಕರ್ನಾಟಕ ಆಡಳಿತ ವ್ಯವಸ್ಥೆಯ ಇತಿಹಾಸದಲ್ಲಿ ಮಾತ್ರವಲ್ಲದೆ, ಇಡೀ ದೇಶದಲ್ಲೇ 'ಭೂಮಿ' ಒಂದು ಕ್ರಾಂತಿಕಾರಕ ಸುಧಾರಣಾ ಯೋಜನೆ. ಆರಂಭದ ಪುಟ್ಟ ಹೆಜ್ಜೆ ಇಂದು ಮಹಾ ಜಿಗಿತವಾಗಿದೆ; ಕಂದಾಯ ಇಲಾಖೆಯ ಸಮಗ್ರ ಸುಧಾರಣೆಗೆ ತಲಕಾವೇರಿಯಾಗಿದೆ. ಈ ಯೋಜನೆ ಇದೀಗ ಇಪ್ಪತ್ತೈದು ವರ್ಷಗಳ ಹಾದಿಯನ್ನು ಕ್ರಮಿಸಿದ್ದು ಸಾಧನೆಯ ಸಾರ್ಥಕತೆಯ ಸಂತಸದಲ್ಲಿದೆ; ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಅದ್ವಿತೀಯ ಸಾಧನೆಗಳಿಂದಾಗಿ ಕರ್ನಾಟಕವನ್ನು ಇಡೀ ದೇಶವೇ ಬೆರಗುಗಣ್ಣುಗಳಿಂದ ತಿರುಗಿ ನೋಡುವಂತೆ ಮಾಡಿದೆ.

2000ನೇ ಇಸವಿ 'ಭೂಮಿ' ಯೋಜನೆಗೆ ಅಡಿಪಾಯ ಹಾಕಿದ ವರ್ಷ. ಪ್ರಾರಂಭದ ತಾಂತ್ರಿಕ ಸವಾಲುಗಳು ಹಾಗೂ ಬಿಕ್ಕಟ್ಟುಗಳನ್ನು 'ಭೂಮಿ' ಯೋಜನೆ ಮೆಟ್ಟಿ ನಿಂತಿದೆ. ಜನಮನವನ್ನು ಮುಟ್ಟಿದೆ. ಜೊತೆಗೆ, ತಂತ್ರಜ್ಞಾನ ಆಧಾರಿತ ಇತರೆ ಯೋಜನೆಗಳನ್ನು ಜಾರಿಗೊಳಿಸಲೂ ಭೂಮಿ ಯೋಜನೆ ಮೆಟ್ಟಿಲಾಗಿದೆ. ಮಾಹಿತಿ ತಂತ್ರಜ್ಞಾನ ಆಧಾರಿತ ಇನ್ನೂ ಹಲವು ಯೋಜನೆಗಳಿಗೆ ತೊಟ್ಟಿಲಾಗಿದೆ.

'ಭೂಮಿ' ಯೋಜನೆ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಮತ್ತು ಆಸರೆಯಾಗಿರುವ ಯೋಜನೆಯಾಗಿದ್ದು, ಕೈಬರಹದ ಎಲ್ಲಾ ಪಹಣಿಗಳನ್ನು ಗಣಕೀಕರಣಗೊಳಿಸಿ, ಸಂರಕ್ಷಿಸಿ, ಪಾರದರ್ಶಕವಾಗಿಸಿ, ರೈತರ ಅಂಗೈಗೆ ವಿಳಂಬವಿಲ್ಲದೆ ತಲಪುವಂತೆ ಮಾಡಿದೆ. ಇಪ್ಪತ್ತೈದು ವರ್ಷಗಳ ಹಿಂದೆ ರೈತರು ಪಹಣಿಗಳನ್ನು ಪಡೆಯಲು ಸಾಕಷ್ಟು ಪಡಿಪಾಟಲು ಅನುಭವಿಸುತ್ತಿದ್ದರು. ಅನಗತ್ಯ ವಿಳಂಬ, ಭ್ರಷ್ಟಾಚಾರ, ವೃಥಾ ಅಲೆದಾಟ, ಕಿರುಕುಳ, ಹಸ್ತಕ್ಷೇಪ ಹೀಗೆ ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿದ್ದರು. ಗ್ರಾಮ ಲೆಕ್ಕಿಗರ ಹಿಂದೆ ಅಲೆದಾಡಿ ಪಹಣಿ ಪಡೆಯುವ ಸ್ಥಿತಿ ಇತ್ತು. ಇಂತಹ ಪರಿಸ್ಥಿತಿಗೆ ತಿಲಾಂಜಲಿ ಇಟ್ಟು, ರೈತರು ಮತ್ತು ಸಾರ್ವಜನಿಕರ ಸ್ನೇಹಿಯಾಗಿ 'ಭೂಮಿ' ವಿಕಸಿತಗೊಂಡಿದೆ.

ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಆರಂಭದಲ್ಲಿ ಯೋಜನೆಯನ್ನು ಸ್ವೀಕರಿಸುವ ಮನೋಭಾವ ಹಿಂಜರಿಕೆಯದಾಗಿತ್ತು. ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಸಾಂಪ್ರದಾಯಿಕ ವ್ಯವಸ್ಥೆಯಿಂದ ಹೊರಬರಲಾಗದ ಹಾಗೂ ಹೊಸ ಬದಲಾವಣೆಗೆ ಒಗ್ಗಿಕೊಳ್ಳದ ಸ್ಥಿತಿ ಇತ್ತು. ಅಂದು ಸುಮಾರು 9000 ಗ್ರಾಮ ಲೆಕ್ಕಾಧಿಕಾರಿಗಳು, 800 ಕಂದಾಯ ನಿರೀಕ್ಷಕರು ಹಾಗೂ 1000 ಕಂಪ್ಯೂಟರ್ ಆಪರೇಟರ್‌ಗಳಿಗೆ ತರಬೇತಿ ನೀಡಲಾಯಿತು. ಪ್ರತಿ ತಾಲ್ಲೂಕಿನಲ್ಲಿ 'ಭೂಮಿ ಕೇಂದ್ರ' ತೆರೆಯುವ ಮೂಲಕ ರಾಜ್ಯದಲ್ಲಿ 204 ಭೂಮಿ ಕೇಂದ್ರಗಳು ತಲೆ ಎತ್ತಲು ಸಾಧ್ಯವಾಯಿತು. ಈ ಮೂಲಕ ಬದಲಾವಣೆಯ ಪರ್ವವನ್ನು ಆರಂಭಿಸಿ, 3.45 ಕೋಟಿ ರೈತರ ಅಂದಾಜು 2.5 ಕೋಟಿ ಕೈಬರಹದ ಪಹಣಿಗಳನ್ನು ಗಣಕೀಕರಣಗೊಳಿಸಿದ್ದು ಕ್ರಾಂತಿಕಾರಕ ಹೆಜ್ಜೆಯಾಗಿದೆ.

ಆರಂಭದಲ್ಲಿ ಈ ವ್ಯವಸ್ಥೆಯನ್ನು ಒಪ್ಪದಿದ್ದವರೂ ನಂತರದಲ್ಲಿ ಅಪ್ಪಿಕೊಳ್ಳುವಂತೆ ಮಾಡಿರುವುದು ಈ ಯೋಜನೆಯ ಹೆಚ್ಚುಗಾರಿಕೆಯಾಗಿದೆ; ಕೈಬರಹದ 'ಆರ್‌ಟಿಸಿ'ಗಳನ್ನು ರದ್ದುಗೊಳಿಸಿ, ಗಣಕೀಕೃತ 'ಆರ್‌ಟಿಸಿ'ಗಳನ್ನು ಮಾನ್ಯತೆಗೊಳಿಸಿದ್ದು ಕ್ರಾಂತಿಕಾರಕ ಚಾರಿತ್ರಿಕ ಬದಲಾವಣೆಯಾಗಿದೆ. ಕಳೆದ 25 ವರ್ಷಗಳಲ್ಲಿ 'ಭೂಮಿ' ಯೋಜನೆಯಡಿ ಸರಿಸುಮಾರು 39.81 ಕೋಟಿಗೂ ಹೆಚ್ಚು ಪಹಣಿಗಳನ್ನು ರೈತರಿಗೆ ವಿತರಿಸಿರುವುದು ಅಸಾಮಾನ್ಯ ಸಾಧನೆ. ಆರಂಭದಲ್ಲಿ ಕೈಬರಹದ ಪಹಣಿಗಳನ್ನು ಗಣಕೀಕೃತಗೊಳಿಸಿ ರೈತರಿಗೆ ತಲಪಿಸುವ ಉದ್ದೇಶದಿಂದ ಆರಂಭವಾದ ಯೋಜನೆ ಕ್ರಮೇಣ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿ, ಪ್ರಸ್ತುತ ಹೆಮ್ಮರವಾಗಿ ನಿಂತಿದೆ.

ಇಂದು 'ಭೂಮಿ' ಯೋಜನೆ ಬರೀ ಗಣಕೀಕೃತ ಪಹಣಿಗಳನ್ನು ನೀಡುವುದಕ್ಕಷ್ಟೇ ಸೀಮಿತವಾಗದೆ, ಬಹುವಿಸ್ತಾರವಾದ ಆಯಾಮವನ್ನು ಪಡೆದುಕೊಂಡಿದೆ. ಕಾವೇರಿ, ಮೋಜಣಿ, ನಾಡಕಚೇರಿ, 11ಇ ನಕ್ಷೆ, ಬ್ಯಾಂಕ್ ಸಾಲ ಯೋಜನೆ, ಭೂ ಸ್ವಾಧೀನ, ಪೋಡಿ, ದರಕಾಸು ಪೋಡಿ, ಹಕ್ಕು ಬದಲಾವಣೆ, ಆರ್‌ಟಿಸಿ ತಿದ್ದುಪಡಿ, ಬೆಳೆ ಸಮೀಕ್ಷೆ, ಬೆಳೆ ಸಂರಕ್ಷಣೆ, ಬೆಳೆ ಕಟಾವು ಪ್ರಯೋಗ, ಸೇವಾಸಿಂಧು ಸಂಯೋಜನೆ, ದಿಶಾಂಕ್, ಇ–ಕೋರ್ಟ್, ಕಂದಾಯ ನ್ಯಾಯಾಲಯಗಳು, ಗಂಗಾ ಕಲ್ಯಾಣ, ಇ–ಸ್ವತ್ತು, ಕೃಷಿ ಇಲಾಖೆಯ ಪಿ.ಎಂ. ಕಿಸಾನ್ ಹೀಗೆ ಹತ್ತು ಹಲವು ಕವಲುಗಳಾಗಿ 'ಭೂಮಿ' ಯೋಜನೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

'ಭೂಮಿ' ಜಾರಿಗೆ ಬಂದ ಕೆಲವೇ ವರ್ಷಗಳಲ್ಲಿ ಮಹತ್ವದ ಬದಲಾವಣೆ ಮಾಡಲಾಯಿತು. ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು, ನಕಲಿ ಮತ್ತು ಮೋಸದ ನೋಂದಣಿಗೆ ತಿಲಾಂಜಲಿ ಇಡಲು 'ಕಾವೇರಿ' ತಂತ್ರಾಂಶವನ್ನು 'ಭೂಮಿ' ಯೋಜನೆಗೆ ಸಂಯೋಜನೆ ಮಾಡಲಾಯಿತು. ನೋಂದಣಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮಾಡಲು 'ಭೂಮಿ' ಆಸರೆಯಾಗಿದೆ. ಭೂಮಿ ಮತ್ತು ಕಾವೇರಿ ಸಂಯೋಜನೆಯಡಿ ಇಂದು ಯಾವುದೇ ಕ್ರಯದ ವ್ಯವಹಾರಗಳು ಅತ್ಯಂತ ಪಾರದರ್ಶಕ, ಸುಲಲಿತ ಹಾಗೂ ವಿಳಂಬವಿಲ್ಲದೆ ಆಗುತ್ತಿರುವುದನ್ನು ಗಮನಿಸಬಹುದಾಗಿದೆ. ಭೂಮಿ ಮತ್ತು ಕಾವೇರಿ ಸಂಯೋಜನೆಯು ಅತ್ಯಂತ ಪರಿಣಾಮಕಾರಿ ಮತ್ತು ರೈತಸ್ನೇಹಿ ಕ್ರಮವಾಗಿ ಗುರುತಿಸಿಕೊಂಡಿದೆ.

ಯಾವುದೇ ಭೂಮಿಯನ್ನು ಕ್ರಯ, ವಿಭಾಗ, ಭೂ ಪರಿವರ್ತನೆ, ಪಿತ್ರಾರ್ಜಿತ ಆಸ್ತಿ ವರ್ಗಾವಣೆ, ಋಣಭಾರ ಮುಂತಾದ ರೂಪಗಳಲ್ಲಿ ವರ್ಗಾವಣೆ ಮಾಡುವ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಪದ್ಧತಿಗೆ ಅಂತ್ಯ ಹಾಡಿ, ಹಕ್ಕು ಬದಲಾವಣೆಯನ್ನು ಪಾರದರ್ಶಕವಾಗಿ ನಡೆಸಲು 'ಭೂಮಿ' ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಸಾರ್ವಜನಿಕರಿಗೆ ನಿಗದಿತ ಸಮಯದಲ್ಲಿ ಹಕ್ಕು ಬದಲಾವಣೆ ಮಾಡಿ, ಹೆಸರುಗಳನ್ನು ಪಹಣಿಗಳಲ್ಲಿ ಅಡಕಗೊಳಿಸಿರುವುದು ಮಹತ್ವದ ಸುಧಾರಣೆಯಾಗಿದೆ.

2007ರಲ್ಲಿ ಮೋಜಣಿ ತಂತ್ರಾಂಶ ಅನುಷ್ಠಾನಗೊಳಿಸಲಾಯಿತು. ಮೋಜಣಿ ತಂತ್ರಾಂಶವನ್ನು 'ಭೂಮಿ' ಯೋಜನೆಗೆ ಸಂಯೋಜಿಸಿರುವುದು, ಕೆಲಸದಲ್ಲಿನ ಸ್ವೇಚ್ಛಾಚಾರ ಮತ್ತು ವಿಳಂಬಧೋರಣೆಗೆ ಪೂರ್ಣವಿರಾಮ ಹಾಕಿದೆ. ಈ ಮೂಲಕ, ಅಳತೆ ಕೆಲಸಗಳು ಹಾಗೂ ಸರ್ವೆ ಕಾರ್ಯಗಳನ್ನು ಪಾರದರ್ಶಕವಾಗಿ ನಿರ್ವಹಿಸಲು ಸಹಕಾರಿಯಾಗಿದೆ; ಸಾರ್ವಜನಿಕರು ಮತ್ತು ಆಡಳಿತ ವ್ಯವಸ್ಥೆಯ ನಡುವೆ ಇದ್ದ ಕಂದಕವನ್ನು ಕಡಿಮೆ ಮಾಡುವ ಮೂಲಕ ಗುಣಮಟ್ಟದ ಸೇವೆ ನೀಡಲಾಗುತ್ತಿದೆ.

ಕ್ರಯಕ್ಕೆ ಪಡೆಯುವ ಮತ್ತು ಕ್ರಯಕ್ಕೆ ನೀಡುವ ಇಬ್ಬರಿಗೂ ಗಡಿ ಗುರುತು ಮತ್ತು ವಿಸ್ತೀರ್ಣದ ನಿಖರತೆಯನ್ನು ತಿಳಿದುಕೊಂಡು, ನಂತರವೇ ಕ್ರಯದ ವ್ಯವಹಾರವನ್ನು ನಡೆಸಲು ಜಾರಿಗೆ ಬಂದ '11ಇ ನಕಾಶೆ' (ಪರಿವರ್ತನೆಪೂರ್ವ ನಕಾಶೆ) ಸಹ ದೇಶದಲ್ಲಿಯೇ ಮೊದಲನೆಯದು ಎಂದರೆ ತಪ್ಪಿಲ್ಲ. ಇದರಿಂದ ಗಡಿವಿವಾದ, ಜಮೀನು ವಿವಾದಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದನ್ನು ಗಮನಿಸಬಹುದು.

ಭೂಮಿ ಯೋಜನೆಯಡಿಯಲ್ಲಿ ಪರಿಹಾರ ತಂತ್ರಾಂಶದ ಮೂಲಕ 2016ರಿಂದಲೂ ಬೆಳೆ ಪರಿಹಾರವನ್ನು ಮಧ್ಯವರ್ತಿಗಳ ಸಹಾಯವಿಲ್ಲದೆ ರೈತರ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ. 2018ರಲ್ಲಿ ಸಾಲ ಮನ್ನಾ ಯೋಜನೆಯ ಸಂದರ್ಭದಲ್ಲಿ ಸುಮಾರು 20 ಲಕ್ಷ ರೈತರ ಸಾಲ ಮನ್ನಾ ಮಾಡಲು 'ಭೂಮಿ' ಸಹಕಾರಿಯಾಗಿರುತ್ತದೆ. ಕೃಷಿ ಇಲಾಖೆಯ 'FRUITS' ಮತ್ತು ಪಿ.ಎಂ. ಕಿಸಾನ್ ಯೋಜನೆಗೆ ಸಂಯೋಜನೆಗೊಳಿಸಿರುವುದರಿಂದ ರೈತರಿಗೆ ಸಿಗಬೇಕಾದ ಸವಲತ್ತುಗಳು ನೇರವಾಗಿ ದೊರಕುತ್ತಿವೆ. ಅಲ್ಲದೇ, ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಆಧಾರ್ ಸೀಡಿಂಗ್ ಮೂಲಕ ಸುಮಾರು 2.17 ಕೋಟಿ ರೈತರ ಪಹಣಿಗಳಿಗೆ ಆಧಾರ್ ಸಂಖ್ಯೆಯನ್ನು ಜೋಡಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

'ಭೂಮಿ'ಯ ಸಾಧನೆಯ ಹಾದಿಯಲ್ಲಿ ಗಣನೀಯ ಪ್ರಮಾಣದಲ್ಲಿ ಮಹತ್ತರ ಸುಧಾರಣೆಗಳು ಘಟಿಸಿವೆ. ಕಂದಾಯ ಇಲಾಖೆಯ ಸೇವೆಗಳನ್ನು ಪರಿಣಾಮಕಾರಿ ಮತ್ತು ಪಾರದರ್ಶಕವಾಗಿ ನೀಡುವಲ್ಲಿ ಯಶಸ್ಸಿನ ಫಲ ಸಿಕ್ಕಿದೆ; ಗ್ರಾಮೀಣ ಜನತೆಯೊಡನೆ ಆಡಳಿತ ವ್ಯವಸ್ಥೆ ಒಗ್ಗೂಡಿಕೊಂಡು ಸಮನ್ವಯ ಸಾಧಿಸಿದೆ. ಭೂಮಿಗೂ ರೈತರಿಗೂ ಇರುವ ಅವಿನಾಭಾವ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಮತ್ತು ಆಸ್ತಿ ಹಾಗೂ ಭಾವನೆಗಳನ್ನು ಸುರಕ್ಷಿತವಾಗಿಡಲು 'ಭೂಮಿ' ಸಹಕಾರಿಯಾಗಿದೆ. ಈ ಯೋಜನೆಯಿಂದಾಗಿ ಮಧ್ಯವರ್ತಿಗಳಿಗೆ ಅವಕಾಶ ಇಲ್ಲದಂತೆ ಆಗಿದೆ. ವಿವೇಚನಾಧಿಕಾರದ ದುರ್ಬಳಕೆಗೂ ಅವಕಾಶವಿಲ್ಲದಂತಾಗಿದೆ. ರೈತರು, ಭೂ ಮಾಲೀಕರು ಹಳ್ಳಿಯಿಂದ ತಾಲ್ಲೂಕು ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಿಂದ ಜಿಲ್ಲಾ ಕೇಂದ್ರಕ್ಕೆ ಅಲೆದಾಡುವ ಸ್ಥಿತಿಯೂ ಇಲ್ಲದಂತಾಗಿ, ದಾಖಲೆಗಳಿಗಾಗಿ ಕಂಬ ಸುತ್ತುವುದು ತಪ್ಪಿದೆ.

'ಭೂಮಿ' ಯೋಜನೆ ಪ್ರತಿಸ್ಪಂದನೆಯ ಆಡಳಿತಕ್ಕೆ ವೇದಿಕೆ ಒದಗಿಸುವ ಮೂಲಕ ಇಡೀ ಆಡಳಿತ ವ್ಯವಸ್ಥೆಗೆ ಆಮೂಲಾಗ್ರ ಪರಿವರ್ತನೆ ತಂದುಕೊಟ್ಟಿದೆ ಹಾಗೂ ಸಾಂಪ್ರದಾಯಿಕ ವ್ಯವಸ್ಥೆಗೆ ಬದಲಾಗಿ ಹೊಸ ಹೊಸ ಬದಲಾವಣೆಗಳಿಗೆ ತನ್ನನ್ನು ತೆರೆದುಕೊಂಡು ಜನಮನ್ನಣೆಗೆ ಪಾತ್ರವಾಗಿದೆ. ಆರಂಭದ ಉದ್ದೇಶಿತ ಆಶಯಗಳಿಗಷ್ಟೇ ಸೀಮಿತ ಗೊಳ್ಳದೆ, ಹೊಸಹೊಸ ಸುಧಾರಣಾ ಕ್ರಮಗಳನ್ನು ತನ್ನೊಟ್ಟಿಗೆ ಸಮ್ಮಿಳಿತಗೊಳಿಸಿಕೊಂಡಿದೆ, ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ.

ಲೇಖಕ: ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ

ವಾಚಕರ ವಾಣಿ

ಪಕ್ಷಪಾತದ ಜಾಹೀರಾತು ಕೊನೆಗೊಳ್ಳಲಿ

ಜಾಹೀರಾತುಗಳಲ್ಲಿ ಕರಿಯ ಮೈಬಣ್ಣದ ವ್ಯಕ್ತಿಗಳನ್ನು ಗ್ರಾಮೀಣರನ್ನಾಗಿ, ರೈತರನ್ನಾಗಿ, ಕೂಲಿಕಾರರನ್ನಾಗಿ, ನಗರಗಳ ಕಾರ್ಮಿಕರನ್ನಾಗಿ, ಬಡವರನ್ನಾಗಿ, ನಿರಕ್ಷರಿಗಳನ್ನಾಗಿ, ಅಲ್ಪಜ್ಞಾನಿಗಳನ್ನಾಗಿ ಬಿಂಬಿಸಲಾಗುತ್ತಿದೆ! ಇವರಿಗೆ ಬಿಳಿ ಮೈಬಣ್ಣದವರು ತಿಳಿಹೇಳುವ ಅಥವಾ ನೆರವು ನೀಡುವ ಜಾಹೀರಾತುಗಳಿಗೂ ಕೊರತೆಯಿಲ್ಲ! ಜಾಹೀರಾತುದಾರರ ಈ ನಡೆಯು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಗಳಿಂದ ಸರಿಯಲ್ಲ. ವರ್ಣಪಕ್ಷಪಾತಿ ಜಾಹೀರಾತುಗಳು ಎಳೆಯರ ಮನಗಳಲ್ಲಿ ಯಾವ ರೀತಿಯ ಅಭಿಪ್ರಾಯಗಳನ್ನು ಮೂಡಿಸುತ್ತವೆ ಎಂಬುದನ್ನೂ ಚಿಂತಿಸಬೇಕಾಗಿದೆ.

ಖಾಸಗಿ ಕಂಪನಿಗಳಾದರೋ ಜನಾಕರ್ಷಣೆಯ ನೆಪಗಳನ್ನು ಹೇಳಬಹುದು. ಬ್ಯಾಂಕುಗಳು, ಜೀವವಿಮಾ ಕಂಪನಿ ಮೊದಲಾದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಸರ್ಕಾರಿ ಜಾಹೀರಾತುಗಳೂ ಇದೇ ನಿಟ್ಟಿನಲ್ಲಿ ಸಾಗುತ್ತಿರುವುದು ವಿಪರ್ಯಾಸ. ಸರ್ಕಾರಿ ಯೋಜನೆಗಳ ಜಾಹೀರಾತುಗಳಲ್ಲಿ ಫಲಾನುಭವಿಗಳ ಚಿತ್ರಗಳನ್ನು ಬಳಸುವಾಗ ನಡೆಯುತ್ತಿರುವ ಈ ಚೋದ್ಯವು, ಮೇಲೆ ಹೇಳಿದಂಥ ಜನರು ಮಾತ್ರ ಸರ್ಕಾರಗಳ ವಿವಿಧ ಯೋಜನೆಗಳ ನೆರವು ಪಡೆಯುತ್ತಿದ್ದಾರೆ ಮತ್ತು ಅದರಿಂದಾಗಿಯೇ ಅವರು ಎರಡು ಹೊತ್ತು ಉಣ್ಣಲು ಸಾಧ್ಯವಾಗುತ್ತಿದೆ ಎಂದು ತಪ್ಪು ಕಲ್ಪನೆ ಮೂಡಿಸುವಂತಿದೆ! ಇದು ಆ ಜನರಿಗೆ ಎಸಗುತ್ತಿರುವ ದ್ರೋಹ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಎಸ್‌ಐಆರ್: ಮತದಾರರ ಹಿತಾಸಕ್ತಿ ರಕ್ಷಿಸಿ

ಚುನಾವಣಾ ಆಯೋಗವು ಹನ್ನೊಂದು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮತದಾರರ ಪಟ್ಟಿಯಿಂದ 3.67 ಕೋಟಿ ಹೆಸರುಗಳನ್ನು ಹೊರಹಾಕಿದೆ (ಪ್ರ.ವಾ., ಡಿ. 24). ಈಗ ಎಲ್ಲ ರಾಜಕೀಯ ಪಕ್ಷಗಳು, ವಿಶೇಷವಾಗಿ ವಿರೋಧ ಪಕ್ಷದವರು ಒಣ ಹೇಳಿಕೆಗಳ ರಾಜಕೀಯ ಬಿಟ್ಟು ಬೂತ್ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಮತದಾರರ ಹಿತಾಸಕ್ತಿಯನ್ನು ಕಾಪಾಡಬೇಕು.

ರವಿ ಯಲಿಗಾರ, ಮುನವಳ್ಳಿ

ಸಿನಿಮಾ ನಟರೇ, ಕಚ್ಚಾಟ ನಿಲ್ಲಿಸಿ...

ಅರವತ್ತು ಎಪ್ಪತ್ತರ ದಶಕದ ಸಿನಿಮಾರಂಗದಲ್ಲಿ ಕೌಟುಂಬಿಕ ವಾತಾವರಣ ಇತ್ತು. ಯಾವುದೇ ಸಿನಿಮಾ ಗೆದ್ದರೂ ಉದ್ಯಮದ ನಟ ನಟಿಯರೆಲ್ಲ ಸಂತೋಷಕೂಟದಲ್ಲಿ ಭಾಗಿಯಾಗುತ್ತಿದ್ದರು. ಈಗ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುತ್ತಿಲ್ಲ. ಚಿತ್ರ ನಟರ ಗುಂಪುಗಳ ನಡುವೆ ರಾಜಕೀಯ ಶುರುವಾಗಿದೆ. ನನ್ನ ಸಿನಿಮಾ ಮಾತ್ರ ಗೆಲ್ಲಬೇಕು ಎನ್ನುವ ಮನೋಭಾವ ಸರಿಯಲ್ಲ. ಸಿನಿಮಾ ಚೆನ್ನಾಗಿದ್ದರೆ ಗೆಲ್ಲುತ್ತದೆ. ಗುಂಪುಗಾರಿಕೆ ಬೇಡ. ಜನರಿಗೆ ವಿಮರ್ಶೆ ಮಾಡುವ ತಿಳಿವಳಿಕೆ ಬಂದಿದೆ. ಹೀಗೆ ಜಗಳ–ದ್ವೇಷ ಮಾಡಿ ಅಭಿಮಾನಿಗಳ ಮನಸ್ಸನ್ನು ನೋಯಿಸಬೇಡಿ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಬುಲ್ಡೋಜರ್ ಸಂಸ್ಕೃತಿ ಇಲ್ಲಿಗೂ ಬಂತೆ?

'ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ಹೋಬಳಿ ಕೋಗಿಲು ಬಂಡೆ ಬಳಿ ವಾಸಿಸುತ್ತಿದ್ದ ಕೂಲಿ ಕಾರ್ಮಿಕರ ಶೆಡ್‌ಗಳನ್ನು ಯಾವುದೇ ನೋಟಿಸ್ ನೀಡದೆ ರಾತ್ರಿ 3 ಗಂಟೆ ಸಮಯದಲ್ಲಿ ನಾಶಗೊಳಿಸಿದ ರೀತಿ ಕ್ರೂರ ಹಾಗೂ ಅಮಾನವೀಯ. ಈ ವಿಧ್ವಂಸಕ ಕೃತ್ಯ ಎಸಗಿದವರಿಗೆ ಉತ್ತರ ಪ್ರದೇಶದ ಬುಲ್ಡೋಜರ್ ಸಂಸ್ಕೃತಿ ಉತ್ತೇಜನವನ್ನು ನೀಡಿತೆ? ಶತ್ರುಗಳ ಮೇಲೆ ಎರಗಿದಂತೆ, ವಿದ್ಯಾರ್ಥಿಗಳು ತಮ್ಮ ಪುಸ್ತಕಗಳನ್ನು ತೆಗೆದುಕೊಳ್ಳಲೂ ಅವಕಾಶ ಕೊಡದೆ, 150 ಮನೆಗಳನ್ನು ನೆಲಸಮ ಮಾಡಿದ್ದಲ್ಲದೆ, 500ಕ್ಕೂ ಹೆಚ್ಚು ಕುಟುಂಬಗಳನ್ನು ಬೀದಿಪಾಲು ಮಾಡಿದ್ದು ಖಂಡನಾರ್ಹ. ಪೊಲೀಸ್ ಇಲಾಖೆ ಅಥವಾ ನ್ಯಾಯಾಂಗ ಇಲಾಖೆ ಸ್ವಯಂಪ್ರೇರಿತ ದೂರನ್ನು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು.

ರಾಜಕಾರಣಿಗಳು, ಸಿನಿಮಾ ನಟರು ಅಥವಾ ಶ್ರೀಮಂತರು ರಾಜಕಾಲುವೆಯನ್ನೋ, ಸರ್ಕಾರಿ ಭೂಮಿಯನ್ನೋ ಒತ್ತುವರಿ ಮಾಡಿಕೊಂಡಿರುವ ಉದಾಹರಣೆಗಳಿವೆ. ಅಂತಹವರನ್ನು ಎತ್ತಂಗಡಿ ಮಾಡಿದ ನಿದರ್ಶನಗಳಿಲ್ಲ. ಈ ಬಡಪಾಯಿಗಳು ದಾಖಲೆಗಳನ್ನು ಹೊಂದಿದ್ದರೂ ಸಹ ಅವರ ಮನೆಗಳನ್ನು ಕೆಡವಿ ಪರಿತಪಿಸುವಂತೆ ಮಾಡಿರುವುದು ಮನುಷ್ಯತ್ವದ ದೃಷ್ಟಿಯಲ್ಲಿ ಅಕ್ಷಮ್ಯ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಚಿತ್ರೋತ್ಸವದ ಸ್ಥಳ ಬದಲಾವಣೆ ಬೇಡ

ಹದಿನೇಳನೇ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ ಜ. 29ರಿಂದ ಪ್ರಾರಂಭವಾಗುತ್ತಿರುವುದು ಖುಷಿಯ ವಿಷಯ. ಆದರೆ, ಪ್ರದರ್ಶನದ ಸ್ಥಳವನ್ನು ಬದಲಾಯಿಸಿರುವುದು ನಿರಾಶೆ ತಂದಿತು. ನಿಯೋಜಿತ ಸ್ಥಳದ ಚಿತ್ರಮಂದಿರಗಳಲ್ಲಿ ಕಡಿಮೆ ಆಸನಗಳಿರುವುದರಿಂದ, ಸುಮಾರು ಆರು ನೂರು ಸಿನಿಮಾಸಕ್ತರು ಉತ್ಸವದಲ್ಲಿ ಭಾಗಿಯಾಗುವ ಅವಕಾಶದಿಂದ ವಂಚಿತರಾಗುತ್ತಾರೆ. ಈ ಹಿಂದಿನ ಸ್ಥಳಕ್ಕೆ ಮೆಟ್ರೋ ಸ್ಟೇಷನ್ ಹತ್ತಿರವಿದ್ದು ಸಾರ್ವಜನಿಕರಿಗೆ ಅನುಕೂಲಕರವಾಗಿತ್ತು. ಮೇಲಿನ ಎಲ್ಲಾ ಕಾರಣಗಳನ್ನು ಪರಿಗಣಿಸಿ, ಪ್ರದರ್ಶನ ಸ್ಥಳವನ್ನು ಬದಲಿಸುವ ನಿರ್ಧಾರವನ್ನು ಸರ್ಕಾರ ಕೈಬಿಡಲಿ.

ಚಂದ್ರಪ್ರಭ ಕಠಾರಿ, ಬೆಂಗಳೂರು

ಜಾತಿ ಹೆಸರಲ್ಲಿ ಕ್ರೌರ್ಯ: ಕಠಿಣ ಶಿಕ್ಷೆ ಅಗತ್ಯ

ಮನುಷ್ಯರು ಪರಸ್ಪರ ಕೊಂದುಕೊಳ್ಳುವ ಜಾತಿಕ್ರೌರ್ಯ ಜೀವಂತವಿದೆ ಎನ್ನುವುದಕ್ಕೆ ಹುಬ್ಬಳ್ಳಿ ಜಿಲ್ಲೆಯಲ್ಲಿ ನಡೆದಿರುವ ಗರ್ಭಿಣಿ ಹೆಣ್ಣುಮಗಳ ಹತ್ಯೆಯೇ ಸಾಕ್ಷಿ. ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿ ಮದುವೆಯಾದ ಕಾರಣಕ್ಕೆ ಹುಡುಗಿಯ ತಂದೆ ಹಾಗೂ ಕುಟುಂಬದವರು ಸೇರಿಕೊಂಡು ಮಾರಣಾಂತಿಕವಾಗಿ ಹಲ್ಲೆ ನಡೆಸಿ, ಗರ್ಭಿಣಿಯಾಗಿದ್ದ ಮನೆಮಗಳನ್ನೇ ಕೊಂದಿದ್ದಾರೆ. ಜಾತಿಯ ನಶೆಯಲ್ಲಿ ಅಪರಾಧವನ್ನು ಎಸಗುವ ದುಷ್ಟರನ್ನು ಸಂವಿಧಾನದ ಅಡಿಯಲ್ಲಿ ಕಠಿಣ ಶಿಕ್ಷೆಗೆ ಒಳಪಡಿಸಬೇಕಾದುದು ಅಗತ್ಯ.

ಪವನ್ ಜಯರಾಂ, ಚಾಮರಾಜನಗರ

ಚುರುಮುರಿ

ಹೆಸರಲ್ಲಿ ಎಲ್ಲ ಇದೆ!

• ಗುರು ಪಿ.ಎಸ್.

'ನೋಡಮ್ಮ, ಇನ್ಮೇಲೆ ನೀನು ನನ್ನನ್ನ ಹೆಸರು ಹಿಡಿದು ಕರೀಬೇಡ. ನಾನು ನನ್ನ ನೇಮ್ ಚೇಂಜ್ ಮಾಡ್ಕೊಬೇಕಂತಿದೀನಿ' ಎಂದು ಪೇಪರ್ ಓದುತ್ತಲೇ ಹೆಂಡತಿಗೆ ಹೇಳಿದೆ.

'ಅವೆಲ್ಲ ಸೆಲೆಬ್ರಿಟಿಗಳು, ಸಿನಿಮಾದವರಿಗೆ ಚೆಂದ. ಈ ವಯಸ್ಸಲ್ಲಿ ನಿಮಗ್ಯಾಕೆ ಹಿಡೀತು ಹೆಸರಿನ ಹುಚ್ಚು' ಎಂದು ನಕ್ಕಳು.

'ಏನ್ ಮಾಡಿದ್ರೂ ಜೀವನ ಆರಕ್ಕೇರತಿಲ್ಲ, ಮೂರಕ್ಕಿಳೀತಿಲ್ಲ. ಅದಕ್ಕೆ ನನ್ನ ಹೆಸರನ್ನೇ 'ಶ್ರೀಮಂತ' ಅಂತ ಚೇಂಜ್ ಮಾಡ್ಕೊಂಡ್ ಬಿಡ್ತೀನಿ'.

'ಹೂಂ, ನಾನು ಐಶ್ವರ್ಯಲಕ್ಷ್ಮಿ ಅಂತ ಮಾಡ್ಕೊಂಡ್ ಬಿಡ್ತೀನಿ, ಕುಬೇರರಾಗಿಬಿಡೋಣ. ಮೊದಲು, ಮಗಳ ಸ್ಕೂಲ್ ಫೀಸ್ ಕಟ್ಟೋಕೆ ದುಡ್ಡಿದೆಯಾ ನೋಡ್ಕೊಳ್ಳಿ' ಎಂದು ಮುಖಕ್ಕೆ ತಿವಿದಳು. ನೋವಿನಿಂದ, 'ಜಿ ರಾಮ್ ಜೈ, ಜಿ ರಾಮ್ ಜೈ' ಎಂದೆ.

'ಅದು, ಜಿ ರಾಮ್ ಜೈ ಅಲ್ಲ, ಜಿ ರಾಮ್ ಜಿ' ಎಂದು ಮತ್ತೆ ತಿವಿದಳು.

'ಮಗಳಿಗೆ ಸ್ಕೂಲ್ ಬಿಡಿಸಿ, ಅವಳ ಹೆಸರನ್ನ ವಿದ್ಯಾಸರಸ್ವತಿ ಅಂತ, ಮಗನ ಹೆಸರನ್ನು ವಿಕಸಿತಕುಮಾರ ಅಂತ ಚೇಂಜ್ ಮಾಡೋಣ, ಆಗಲಾದರೂ ನಾವು ಅಭಿವೃದ್ಧಿ ಕಾಣಬಹುದು'.

'ನೀವೇನ್ ತಿಳಿದು ಮಾತಾಡ್ತೀರೋ, ತಿಳಿಯದೇ ಮಾತಾಡ್ತೀರೋ, ಹೆಸರು ಬದಲಿಸಿದ ತಕ್ಷಣ ಉದ್ಧಾರ ಆಗಿಬಿಡ್ತೀವಾ?' ಎಂದ ಹೆಂಡತಿ, 'ಮನೆ ಸೋರ್ತಿದೆ, ರಿಪೇರಿ ಆದ್ರೂ ಮಾಡಿಸಿ' ಎಂದು ಆಜ್ಞಾಪಿಸಿದಳು.

'ನಮ್ ಮನೆ ಹೆಸರನ್ನೇ ಅಮೃತಗೃಹ ಎಂದಿಟ್ಟುಬಿಟ್ಟರೆ ಹೇಗೆ' ಎಂದೆ ನಗುತ್ತಾ.

ಆದರೆ, ಹೆಂಡತಿ ನಗಲಿಲ್ಲ!

'ಸರಿ, ಹೊಟ್ಟೆ ಹಸೀತಿದೆ. ಊಟ ಕೊಡು' ಎಂದು ಕೇಳುತ್ತಿದ್ದಂತೆ, ಅನ್ನ ರಸಂ, ಹಪ್ಪಳವಿದ್ದ ತಟ್ಟೆ ನನ್ನೆದುರು ಪ್ರತ್ಯಕ್ಷವಾಯಿತು.

'ಇದೇನೇ ನಾನ್ ವೆಜ್ ಮಾಡ್ತೀನಿ ಅಂತ, ಅನ್ನ ರಸಂ ಇಟ್ಟಿದ್ದೀಯ?'

'ಅದರ ಹೆಸರು ಅನ್ನ ರಸಂ ಅಲ್ಲ ರೀ, ಅದು ಮಟನ್ ಬಿರ್ಯಾನಿ. ಇನ್ನು ಇದು ಹಪ್ಪಳ ಅಲ್ಲ, ಫಿಶ್ ಫ್ರೈ!'.

ಸಂಗತ

ವೈಜ್ಞಾನಿಕ ಮನೋಭಾವ: ಹಿಮ್ಮುಖ ಚಲನೆ

ಜನರಿಗೆ ಸಮೀಪವಾಗುವ ಬದಲು ಜನಾರ್ದನನಿಗೆ ಸಮೀಪವಾಗುವ ನಡೆ ತಪ್ಪು ಸಂದೇಶ ಕೊಡುವಂತಹದ್ದು; ವೈಜ್ಞಾನಿಕ ಮನೋಭಾವಕ್ಕೆ ವಿರುದ್ಧವಾದುದು.

• ಈ. ಬಸವರಾಜು

ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವಲ್ಲಿ ಹಾಗೂ ಎಳೆಯ ತಲೆಮಾರಿಗೆ ವಿಜ್ಞಾನ–ತಂತ್ರಜ್ಞಾನದ ಬಗ್ಗೆ ಅರಿವು–ಆಸಕ್ತಿ ಮೂಡಿಸುವಲ್ಲಿ ದೇಶದ ಪ್ರತಿಷ್ಠಿತ ಸಂಸ್ಥೆ 'ಇಸ್ರೋ'ದ ಕೊಡುಗೆ ದೊಡ್ಡದು. ಆದರೆ, ಇತ್ತೀಚಿನ ಕೆಲವು ಬೆಳವಣಿಗೆಗಳು ಇಸ್ರೋದ ಖ್ಯಾತಿಗೆ ತಕ್ಕುದಾಗಿಲ್ಲ.

ವಿಕ್ರಂ ಸಾರಾಬಾಯಿ ಅವರು ತಮ್ಮ ಆಸಕ್ತಿ, ಬದ್ಧತೆ ಮತ್ತು ಪರಿಶ್ರಮದಿಂದ ಈ ಸಂಸ್ಥೆಯನ್ನು ಕಟ್ಟಿದರು. ನಂತರ ಸತೀಶ್ ಧವನ್ ಸೇರಿದಂತೆ ಅನೇಕ ಗಣ್ಯರು ಇಸ್ರೋ ಅಧ್ಯಕ್ಷರಾಗಿ ಸಂಸ್ಥೆಯನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ. ಕನ್ನಡಿಗರೇ ಆದ ಪ್ರೊ. ಯು.ಆರ್. ರಾವ್ ಅವರು ಇಸ್ರೋಗೆ ನೀಡಿದ ಕೊಡುಗೆ ಅನನ್ಯ. ದೇಶದ ಹಾಗೂ ನಾಗರಿಕರ ಅನೇಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ಇಸ್ರೋ ಪರಿಶ್ರಮ ಹಾಗೂ ಸಾಧನೆ ಅಪಾರ. ಆದರೆ, ಇತ್ತೀಚಿನ ಇಸ್ರೋ ಮುಖ್ಯಸ್ಥರ ನಡವಳಿಕೆ ಪ್ರಶ್ನೆಗಳಿಗೆ ಆಸ್ಪದವನ್ನು ಕಲ್ಪಿಸುವಂತಿದೆ.

ಯಾವುದಾದರೂ ಪ್ರಮುಖ ಯೋಜನೆಯನ್ನು ಕೈಗೆತ್ತಿಕೊಂಡಾಗ ಅದರ ಮಾದರಿಯೊಂದಿಗೆ ತಿರುಪತಿಗೆ ಭೇಟಿ ನೀಡಿ ಪೂಜೆ ಮಾಡಿಸುವುದು ಇತ್ತೀಚೆಗೆ ಅಭ್ಯಾಸವಾಗಿದೆ. ಇಸ್ರೋ ಅಧ್ಯಕ್ಷರಾಗಿದ್ದ ರಾಧಾಕೃಷ್ಣನ್, ಉಪಗ್ರಹ ಮಾದರಿಯೊಂದಿಗೆ ತಿರುಪತಿಗೆ ಹೋಗಿ ಪೂಜೆ ಮಾಡಿಸಿಕೊಂಡು ಬಂದಿದ್ದರು. ಅನೇಕರು ಆ ಅವೈಜ್ಞಾನಿಕ ನಡೆಯನ್ನು ಪ್ರಶ್ನಿಸಿದರೂ, ಮುಂದೆಯೂ ಪೂಜಾ ಪರಂಪರೆ ಮುಂದುವರಿಯಿತು. ಪ್ರಸ್ತುತ ಇಸ್ರೋ ಅಧ್ಯಕ್ಷರಾಗಿರುವ ಡಾ. ವಿ. ನಾರಾಯಣನ್ ಕೂಡ ಅದೇ ದಾರಿಯಲ್ಲಿ ನಡೆದಿದ್ದಾರೆ. 'ಬ್ಲೂಬರ್ಡ್ ಬ್ಲಾಕ್–2 ಸಂವಹನ ಉಪಗ್ರಹ'ದ ಉಡ್ಡಯನ ಯಶಸ್ವಿಯಾಗಲೆಂದು ಅವರು ತಿರುಪತಿ ತಿಮ್ಮಪ್ಪನ ಸನ್ನಿಧಾನಕ್ಕೆ ತೆರಳಿ ಪೂಜೆ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಉಪಗ್ರಹದ ಪ್ರತಿಕೃತಿಯನ್ನೂ ಕೊಂಡೊಯ್ದು ಪೂಜೆ ಸಲ್ಲಿಸಿರುವುದಾಗಿ ವರದಿಯಾಗಿದೆ.



ಒಂದು ಉಪಗ್ರಹವನ್ನು ಉಡ್ಡಯನ ಮಾಡಲು ಇಸ್ರೋದ ಸಾವಿರಾರು ವಿಜ್ಞಾನಿಗಳು ಹಾಗೂ ತಂತ್ರಜ್ಞರು ಕೆಲಸ ಮಾಡುತ್ತಾರೆ. ಅವರು ವಿಭಿನ್ನ ಭಾಷೆ, ಧರ್ಮಕ್ಕೆ ಸೇರಿದವರಾಗಿರುತ್ತಾರೆ ಮತ್ತು ತಮ್ಮದೇ ಆದ ನಂಬಿಕೆಗಳನ್ನು ಹೊಂದಿರುತ್ತಾರೆ. ಇಸ್ರೋದ ಒಂದು ಕಾರ್ಯಕ್ರಮ ಯಶಸ್ವಿಯಾಗುವುದರ ಹಿಂದೆ ಹಲವು ವಿಜ್ಞಾನಿಗಳು, ತಂತ್ರಜ್ಞರ ಪರಿಶ್ರಮ ಇರುತ್ತದೆ. ಯಶಸ್ವಿಯಾಗದಿದ್ದರೂ ಅದರ ಕಾರಣವನ್ನು ಹುಡುಕಿ ಮುಂದೆ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹೀಗಿರುವಾಗ, ಇಸ್ರೋ ಅಧ್ಯಕ್ಷರು ತಿಮ್ಮಪ್ಪನ ಸನ್ನಿಧಿಗೆ ಹೋಗಿ ಪೂಜೆ ಮಾಡಿಸುವುದು ಇಸ್ರೋದ ಅಸಂಖ್ಯ ತಂತ್ರಜ್ಞರ ಪರಿಶ್ರಮವನ್ನು ಪ್ರಶ್ನಿಸಿದಂತಾಗಿದೆ.

ಇಸ್ರೋದಂತಹ ಜಗತ್ ಪ್ರಸಿದ್ಧ ಸಂಸ್ಥೆಯ ಮುಖ್ಯಸ್ಥರು ಸಮಾಜಕ್ಕೆ ವೈಜ್ಞಾನಿಕ ಮನೋಭಾವದ ಸಂದೇಶ ನೀಡುವಂತೆ ನಡೆದುಕೊಳ್ಳಬೇಕು. ಇಸ್ರೋದ ನಿಯಮಗಳಲ್ಲಿ ತಿರುಪತಿಗೆ ಹೋಗಿ ಪೂಜಿಸಬೇಕೆಂಬ ಸೂಚನೆ ಇದೆಯೆ? ಇದಕ್ಕಾಗಿ ಅವರು ವ್ಯಯಿಸುವ ಸಮಯ, ಮಾಡುವ ವೆಚ್ಚವನ್ನು ಯಾರು ಭರಿಸುತ್ತಾರೆ? ಒಂದು ವೇಳೆ ಅವರೇ ಭರಿಸಿದರೂ ಇಸ್ರೋ ಮುಖ್ಯಸ್ಥರಾಗಿ ಅವರ ಈ ನಡೆ ಸರಿಯೇ? ಈ ಪ್ರಶ್ನೆಗಳ ಜೊತೆಗೆ, ಯೋಜನೆಯ ಯಶಸ್ಸಿಗೆ ವಿಜ್ಞಾನಿಗಳ ಪರಿಶ್ರಮ ಗುರ್ತಿಸಬೇಕೋ ಅಥವಾ ತಿಮ್ಮಪ್ಪನ ಕೃಪೆಯನ್ನೋ ಎನ್ನುವ ಪ್ರಶ್ನೆಯೂ ಎದುರಾಗುತ್ತದೆ.

ಈ ಮೊದಲು ಇಸ್ರೋದ ವಿಜ್ಞಾನಿಗಳು ಶಾಲೆ–ಕಾಲೇಜುಗಳಿಗೆ ತೆರಳಿ ಉಪನ್ಯಾಸ ನೀಡುತ್ತಾ ಇಸ್ರೋದ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿದ್ದರು. ಈಚೆಗೆ ಅಂಥ ಕಾರ್ಯಕ್ರಮಗಳು ವಿರಳವಾಗಿವೆ. ಇತ್ತೀಚೆಗೆ ಇಸ್ರೋ ವಿಜ್ಞಾನಿಗಳು ಜನರಿಂದ ದೂರವಾಗಿ ಜನಾರ್ದನನ ಕಡೆಗೆ ಮುಖ ಮಾಡಿರುವುದು ವಿಪರ್ಯಾಸ.

ಇಸ್ರೋ ಮುಖ್ಯಸ್ಥರಿಗೆ ಪ್ರೇರಣೆ ಎಂಬಂತೆ ಅನೇಕ ಘಟನೆಗಳೂ ನಡೆಯುತ್ತಿವೆ. ದೇಶದ ಪ್ರಧಾನಿಗಳು ನೂತನ ಸಂಸತ್ ಭವನದ ಉದ್ಘಾಟನೆಯಲ್ಲಿ ಧಾರ್ಮಿಕ ಪ್ರಕ್ರಿಯೆಗಳನ್ನು ನಡೆಸಿದರು. ಅನೇಕ ಸರ್ಕಾರಿ ಯೋಜನೆಗಳ ಉದ್ಘಾಟನೆಯಲ್ಲಿ, ಭೂಮಿ ಪೂಜೆಯ ಹೆಸರಿನಲ್ಲಿ ವಿಧಿವಿಧಾನಗಳು ನಡೆಯುತ್ತಿವೆ. ಜಲಾಶಯಗಳು ಭರ್ತಿಯಾದ ಕೂಡಲೇ ಮಂತ್ರಿ ಮಹೋದಯರು ಬಾಗಿನ ಅರ್ಪಿಸಿ ಪೂಜೆಗೈದು ಸಂಭ್ರಮಿಸುತ್ತಾರೆ. ಇದಕ್ಕೆಲ್ಲ ಸಾರ್ವಜನಿಕರ ಹಣ ಖರ್ಚಾಗುತ್ತಿದೆ.

ಸರ್ಕಾರಿ ಶಾಲೆ–ಕಾಲೇಜುಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ ದೇವರ ಫೋಟೋ ಇಟ್ಟು ಪೂಜಿಸುವುದುಂಟು. ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಕಟ್ಟಡ, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯ, ಆಟದ ಮೈದಾನ ಮತ್ತು ಆಟದ ಸಾಮಗ್ರಿಗಳು, ಅದನ್ನು ನಿರ್ವಹಿಸುವ ಸಿಬ್ಬಂದಿ ಇರಬೇಕಾದ್ದು ಅಪೇಕ್ಷಣೀಯ. ಆದರೆ ಅವುಗಳ ಕಡೆಗೆ ಸರ್ಕಾರದ ಗಮನ ನಿರಾಶಾದಾಯಕವಾಗಿದೆ. ಶಾಲೆಗಳಲ್ಲಿ ನಡೆಯುವ ಗಾಂಧಿ ಜಯಂತಿ, ಅಂಬೇಡ್ಕರ್ ಜಯಂತಿಗಳಿಗೆ ಒಂದು ಪ್ರೋಟೋಕಾಲ್ ಇದ್ದಂತಿಲ್ಲ. ತೆಂಗಿನಕಾಯಿ ಒಡೆದು, ಬಾಳೆಹಣ್ಣು ಇಟ್ಟು ಪೂಜಿಸುವುದೇ ಆಚರಣೆಯಾಗಿದೆ. ವೈಯಕ್ತಿಕ ನಂಬಿಕೆ ಹಾಗೂ ಸಾರ್ವಜನಿಕ ಕೆಲಸಗಳ ನಡುವೆ ಅಂತರವೇ ಇಲ್ಲದಂತಾಗಿದೆ. ನಾವು ಮಾಡುವ ಕೆಲಸವನ್ನು ಬದ್ಧತೆ, ಪ್ರಾಮಾಣಿಕತೆಯಿಂದ ಮಾಡಿದರೆ ಅದಕ್ಕಿಂತ ದೊಡ್ಡ ಪೂಜೆಯಿಲ್ಲ.

ಸಂವಿಧಾನದ 51ಎ(ಎಚ್) ಪ್ರಕಾರ, ವೈಜ್ಞಾನಿಕ ಮನೋಭಾವ ಬೆಳೆಸುವುದು ಭಾರತದ ನಾಗರಿಕರ ಕರ್ತವ್ಯ. ಇದಕ್ಕೆ ವಿರೋಧವಾಗಿ, ದೇಶದ ಅತ್ಯುನ್ನತ ವಿಜ್ಞಾನ ಸಂಸ್ಥೆಯ ಮುಖ್ಯಸ್ಥರು ನಡೆದುಕೊಳ್ಳಬಹುದೆ?

ಲೇಖಕ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಕಾರ್ಯದರ್ಶಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2025ರಲ್ಲಿ ಜಗತ್ತಿನ ಹಲವೆಡೆ ಯುದ್ಧಗಳು ಸದ್ದು ಮಾಡಿವೆ. ಕೆಲವು ದೇಶಗಳ ನಡುವೆ ಈ ಹಿಂದೆಯೇ ಆರಂಭವಾಗಿದ್ದ ಯುದ್ಧ ಈ ವರ್ಷವೂ ಮುಂದುವರಿದರೆ, ಮತ್ತೆ ಹಲವು ದೇಶಗಳ ನಡುವೆ ಹೊಸದಾಗಿ ಸಂಘರ್ಷಗಳೂ ನಡೆದಿವೆ. ಹೀಗಾಗಿ, ಸಾವು–ನೋವಿನ ಜೊತೆಗೆ ಲಕ್ಷಾಂತರ ಜನರು ನಿರಾಶ್ರಿತಗೊಂಡು ಇನ್ನಿಲ್ಲದ ಸಂಕಷ್ಟ ಎದುರಿಸಿದರು. ಭಾರತ ಕೂಡ ಈ ವರ್ಷ ಸೇನಾ ಸಂಘರ್ಷಕ್ಕೆ ಸಾಕ್ಷಿಯಾಯಿತು. ಪಾಕಿಸ್ತಾನದೊಂದಿಗೆ ದೊಡ್ಡ ಪ್ರಮಾಣದಲ್ಲಿಯೇ ನಾಲ್ಕು ದಿನಗಳವರೆಗೆ ಶಸ್ತ್ರಾಸ್ತ್ರ ಸಂಘರ್ಷ ನಡೆಸಿತು

ಜಗದಗಲ ಯುದ್ಧಗಳದ್ದೇ ಸದ್ದು

• ಭೀಮಸೇನ ಚಳಗೇರಿ, ನವೀನ್ ಕುಮಾರ್ ಎನ್.



ಇಸ್ರೇಲ್ ಹಮಾಸ್ ಕದನ

2023ರ ಅಕ್ಟೋಬರ್ 7ರಂದು ಇಸ್ರೇಲ್‌ನ ರೀಮ್ ನಗರದಲ್ಲಿ ಸೂಪರ್ ನೋವಾ ಸಂಗೀತ ಉತ್ಸವ ನಡೆಯುತ್ತಿದ್ದ ವೇಳೆ ಹಮಾಸ್ ಬಂಡುಕೋರರು ಏಕಾಏಕಿ ದಾಳಿ ನಡೆಸಿದ್ದರು. ಅಂದಿನಿಂದ ಆರಂಭಗೊಂಡ ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಕದನ ಈ ವರ್ಷಾರಂಭದಲ್ಲಿ ಇನ್ನಷ್ಟು ತೀವ್ರಗೊಂಡಿತಲ್ಲದೆ ಯುದ್ಧ ಬೇರೆ ರಾಷ್ಟ್ರಗಳಿಗೂ ವಿಸ್ತರಿಸಿತು. ಇರಾನ್–ಇಸ್ರೇಲ್ ನಡುವೆ 12 ದಿನಗಳ ಭಾರಿ ಯುದ್ಧವೇ ಏರ್ಪಟ್ಟಿತು. ಲೆಬನಾನ್, ಸಿರಿಯಾದಲ್ಲಿನ ಬಂಡುಕೋರ ಸಂಘಟನೆಗಳನ್ನು ಗುರಿಯಾಗಿಸಿಕೊಂಡೂ ಇಸ್ರೇಲ್ ದಾಳಿ ನಡೆಸಿತ್ತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ನವೆಂಬರ್‌ನಲ್ಲಿ ಕದನ ವಿರಾಮ ಮತ್ತು ಶಾಂತಿ ಒಪ್ಪಂದಕ್ಕೆ ಇಸ್ರೇಲ್ ನಾಯಕರು ಹಾಗೂ ಹಮಾಸ್ ಬಂಡಕೋರರು ಸಮ್ಮತಿಸಿದ್ದಾರೆ. ಸಂಘರ್ಷವು ತಾತ್ಕಾಲಿಕವಾಗಿ ಶಮನವಾಗುವ ಹೊತ್ತಿಗೆ ಇಡೀ ಗಾಜಾ ಪಟ್ಟಿ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಮುಚ್ಚಿ ಹೋಗಿತ್ತು. 70 ಸಾವಿರಕ್ಕೂ ಹೆಚ್ಚು ಜನರು ಪ್ರಾಣಕಳೆದುಕೊಂಡಿದ್ದರು. ಇವರಲ್ಲಿ 18 ಸಾವಿರದಷ್ಟು ಮಕ್ಕಳು. 21 ಲಕ್ಷ ಜನಸಂಖ್ಯೆ ಇರುವ ಗಾಜಾದಲ್ಲಿ 19 ಲಕ್ಷ ಜನರು ನಿರಾಶ್ರಿತರಾಗಿದ್ದರು.

ಮಂಡಿಯೂರಿದ ಪಾಕಿಸ್ತಾನ

ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ಭಯೋತ್ಪಾದಕರು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಏಪ್ರಿಲ್ 22ರಂದು 26 ಪ್ರವಾಸಿಗರನ್ನು ಹತ್ಯೆ ಮಾಡಿದ ಪೈಶಾಚಿಕ ಕೃತ್ಯಕ್ಕೆ ಪ್ರತೀಕಾರವಾಗಿ ಮೇ 7ರ ತಡರಾತ್ರಿ ಭಾರತೀಯ ಸೇನಾ ಪಡೆಗಳು ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ (ಪಿಒಕೆ) 9 ಉಗ್ರರ ನೆಲೆಗಳನ್ನು ಗುರಿಯಾಗಿಸಿ ನಡೆಸಿದ 'ಆಪರೇಷನ್ ಸಿಂಧೂರ' ಭಾರತ ಮತ್ತು ಪಾಕಿಸ್ತಾನದ ನಡುವೆ ಸೇನಾ ಸಂಘರ್ಷವನ್ನು ಹುಟ್ಟುಹಾಕಿತು. ನಾಲ್ಕು ದಿನಗಳ ಸಂಘರ್ಷದಲ್ಲಿ ಯುದ್ಧವಿಮಾನಗಳು, ಕ್ಷಿಪಣಿಗಳು, ಡ್ರೋನ್‌ಗಳು ವ್ಯಾಪಕವಾಗಿ ಬಳಕೆಯಾದವು. ಭಾರತ ಇದೇ ಮೊದಲ ಬಾರಿಗೆ ಬ್ರಹ್ಮೋಸ್ ಕ್ಷಿಪಣಿಯನ್ನು ಪ್ರಯೋಗಿಸಿ ಪಾಕಿಸ್ತಾನದ ಬಲವನ್ನೇ ಉಡುಗಿಸಿತು.

ಭಾರತದ ಮೇಲೆ ಚೀನಾ, ಟರ್ಕಿ ನಿರ್ಮಿತ ಕ್ಷಿಪಣಿಗಳು, ಡ್ರೋನ್‌ಗಳ ಮೂಲಕ ಬಾಂಬ್‌ಗಳ ಸುರಿಮಳೆಗೈದ ಪಾಕಿಸ್ತಾನದ ದಾಳಿಯನ್ನು ಭಾರತವು ಯಶಸ್ವಿಯಾಗಿ ಹಿಮ್ಮೆಟ್ಟಿಸಿತು. ಪಾಕ್ ದಾಳಿಯ ಸದ್ದಡಗಿಸಿದ್ದು ನಮ್ಮ ಸಮಗ್ರ ವಾಯು ರಕ್ಷಣಾ ವ್ಯವಸ್ಥೆ (ಇಂಟೆಗ್ರೇಟೆಡ್ ಏರ್ ಡಿಫೆನ್ಸ್ ಸಿಸ್ಟಮ್–ಐಎಡಿಡಬ್ಲ್ಯುಎಸ್). ಸ್ವದೇಶಿ ನಿರ್ಮಿತ ಆಕಾಶ್ ಕ್ಷಿಪಣಿ ವ್ಯವಸ್ಥೆ, ರಷ್ಯಾ ನಿರ್ಮಿತ ಎಸ್–400 ಕ್ಷಿಪಣಿ ವ್ಯವಸ್ಥೆ, ಇದರೊಂದಿಗೆ ದೇಶೀಯ ಆಕಾಶ್‌ತೀರ ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆ ಹಾಗೂ ಸಮಗ್ರ ವಾಯು ಕಮಾಂಡ್ ಮತ್ತು ನಿಯಂತ್ರಣ ವ್ಯವಸ್ಥೆಯು ರಕ್ಷಾ ಕವಚದಂತೆ ಕಾರ್ಯನಿರ್ವಹಿಸಿದ್ದವು. ಹೀಗಾಗಿ ನಮ್ಮಲ್ಲಿ ಹೆಚ್ಚು ಸಾವು ನೋವು ಸಂಭವಿಸಲಿಲ್ಲ.



ಭಾರತದ ಸೇನಾ ಪಡೆಗಳ ದಾಳಿಯನ್ನು ತಡೆಯಲು ಪಾಕಿಸ್ತಾನ ಸಂಪೂರ್ಣವಾಗಿ ವಿಫಲವಾಯಿತು. ಅದರ ಹಲವು ವಾಯುನೆಲೆಗಳು, ಸೇನಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಭಾರತ ನಡೆಸಿದ ದಾಳಿಗಳು ನಿಖರವಾಗಿ ಗುರಿ ತಲುಪಿ ಪಾಕಿಸ್ತಾನಕ್ಕೆ ಭಾರಿ ಪ್ರಮಾಣದ ಹಾನಿ ಉಂಟುಮಾಡಿದವು. ಮೇ 10ರಂದು ದಿಢೀರ್ ಕದನ ವಿರಾಮ ಘೋಷಣೆಯಾಯಿತು. ಪಾಕಿಸ್ತಾನವು ಕರೆ ಮಾಡಿ ಕದನ ವಿರಾಮದ ಪ್ರಸ್ತಾಪ ಮಾಡಿದ್ದರಿಂದ ತಾನು ಇದಕ್ಕೆ ಒಪ್ಪಿಕೊಂಡಿದ್ದಾಗಿ ಭಾರತ ಹೇಳಿತು.

ಈ ಯುದ್ಧವನ್ನು ತಾನು ನಿಲ್ಲಿಸಿದ್ದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಹಲವು ಬಾರಿ ಹೇಳಿಕೊಂಡರು. ಭಾರತ ಪ್ರತಿಬಾರಿಯೂ ಇದನ್ನು ತಿರಸ್ಕರಿಸಿತು. ಆಪರೇಷನ್ ಸಿಂಧೂರ ಮತ್ತು ನಂತರದ ಸೇನಾ ಸಂಘರ್ಷವು ಶತ್ರುವಿನ ಗುರಿಯೆಡೆಗೆ ನಿಖರವಾಗಿ ದಾಳಿ ನಡೆಸುವ ಭಾರತದ ಸಾಮರ್ಥ್ಯವನ್ನು ಜಗತ್ತಿನ ಮುಂದೆ ತೆರೆದಿಟ್ಟಿತು.

ಡ್ರೋನ್ ಬಳಕೆ ವ್ಯಾಪಕ

ಸೇನಾ ಸಮರದಲ್ಲಿ ಈ ವರ್ಷ ಡ್ರೋನ್‌ಗಳು ವ್ಯಾಪಕವಾಗಿ ಬಳಕೆಯಾದವು. ಮಾನವರಹಿತ ಡ್ರೋನ್‌ಗಳನ್ನೇ ಬಾಂಬ್‌ಗಳ ರೀತಿಯಲ್ಲಿ ಹಲವು ದೇಶಗಳು ಬಳಸಿದವು. ತಂತ್ರಜ್ಞಾನ ಆಧಾರಿತ, ಸ್ವಯಂ ಆಗಿ ಕಾರ್ಯನಿರ್ವಹಿಸಬಲ್ಲ ತಲುಪಬಲ್ಲ ಹಾಗೂ ನಿಗದಿತ ಗುರಿಗೆ ನಿಖರವಾಗಿ ದಾಳಿ ನಡೆಸಬಲ್ಲ ಡ್ರೋನ್ ಮತ್ತು ಕ್ಷಿಪಣಿಗಳ ಅಭಿವೃದ್ಧಿಯತ್ತ ಎಲ್ಲ ರಾಷ್ಟ್ರಗಳು ಗಮನಹರಿಸುವಂತೆ ಆಧುನಿಕ ರಣಾಂಗಣಗಳು ಮಾಡಿವೆ.

ಇಸ್ರೇಲ್ – ಇರಾನ್ ಸಂಘರ್ಷ

ಈ ವರ್ಷ ಜಾಗತಿಕವಾಗಿ ಗಮನಸೆಳೆದ ಮತ್ತೊಂದು ಯುದ್ಧವೆಂದರೆ ಜೂನ್ ತಿಂಗಳಲ್ಲಿ ವೈರಿರಾಷ್ಟ್ರಗಳಾದ ಇಸ್ರೇಲ್ ಮತ್ತು ಇರಾನ್ ನಡುವೆ 12 ದಿನಗಳ ನಡೆದಿದ್ದ ಸೇನಾ ಸಂಘರ್ಷ. ಎರಡೂ ರಾಷ್ಟ್ರಗಳು ಕ್ಷಿಪಣಿಗಳು, ಡ್ರೋನ್‌ಗಳ ಮೂಲಕ ಪರಸ್ಪರ ದಾಳಿ ನಡೆಸಿ ಇಡೀ ಜಗತ್ತನ್ನೇ ಆತಂಕಕ್ಕೆ ಕೆಡವಿದ್ದವು. ಜೂನ್ 12ರಂದು ಇರಾನಿನ ಪರಮಾಣು ವಿಜ್ಞಾನಿಗಳು, ಸೇನಾಧಿಕಾರಿಗಳು ಹಾಗೂ ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿದ ದಿಢೀರ್ ದಾಳಿಯು ಇರಾನ್ ಆಡಳಿತವನ್ನು ಕೆರಳಿಸಿತು. ಪ್ರತಿಯಾಗಿ ಅದು ಕ್ಷಿಪಣಿಗಳು ಹಾಗೂ ಡ್ರೋನ್‌ಗಳ ಮೂಲಕ ಇಸ್ರೇಲ್‌ನ ಮೇಲೆ ಬಾಂಬ್‌ಗಳ ಸುರಿಮಳೆಗೆರೆಯಿತು.

ಎರಡೂ ರಾಷ್ಟ್ರಗಳು ಸಂಘರ್ಷವನ್ನು ಕೊನೆಗಾಣಿಸಬೇಕು ಎಂದು ಹೇಳುತ್ತಲೇ ಬಂದಿದ್ದ ಅಮೆರಿಕವು ಜೂನ್ 22ರಂದು ಇರಾನ್‌ನ ಫೋರ್ಡೊ, ನಟಾನ್ಜ್ ಹಾಗೂ ಎಸ್ಫಹಾನ್‌ನಲ್ಲಿರುವ ಭೂಗತ ಪರಮಾಣು ಘಟಕಗಳನ್ನು ಗುರಿಯಾಗಿಸಿಕೊಂಡು ಬಿ2 ಬಾಂಬರ್ ವಿಮಾನಗಳ ಮೂಲಕ ದಾಳಿ ನಡೆಸಿತು. ಇದಕ್ಕೆ ಪ್ರತಿಯಾಗಿ ಜೂನ್ 23ರಂದು ಕತಾರ್‌ನ ಅಲ್ ಉದೈದ್‌ನಲ್ಲಿರುವ ಅಮೆರಿಕದ ವಾಯು ನೆಲೆಯ ಮೇಲೆ ಕ್ಷಿಪಣಿ ದಾಳಿ ನಡೆಸಿತು. ಅಮೆರಿಕದ ನಿರಂತರದ ಒತ್ತಡದ ನಡುವೆ ಮರುದಿನ ಇಸ್ರೇಲ್, ಇರಾನ್ ಕದನವಿರಾಮ ಘೋಷಿಸಿದವು.

ರಷ್ಯಾ–ಉಕ್ರೇನ್ ಸಮರ

2022ರ ಫೆಬ್ರುವರಿ 24ರಂದು ರಷ್ಯಾವು ಯುರೋಪಿನ ಪುಟ್ಟ ರಾಷ್ಟ್ರ ಉಕ್ರೇನ್ ಮೇಲೆ ದಾಳಿ ನಡೆಸುವುದರೊಂದಿಗೆ ಆರಂಭಗೊಂಡ ಎರಡೂ ರಾಷ್ಟ್ರಗಳ ಯುದ್ಧ ಇನ್ನೂ ನಿಂತಿಲ್ಲ. ಈ ವರ್ಷ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಯುದ್ಧವನ್ನು ಕೊನೆಗಾಣಿಸುವ ರಾಜತಾಂತ್ರಿಕ ಪ್ರಯತ್ನಗಳು ಆರಂಭಗೊಂಡವು. ಆದರೆ, ಅದಿನ್ನೂ ಫಲ ನೀಡಿಲ್ಲ. ಯುದ್ಧವನ್ನು ನಿಲ್ಲಿಸುವ ಒತ್ತಡ ತಂತ್ರವಾಗಿ ಟ್ರಂಪ್ ಅವರು ಉಕ್ರೇನ್‌ಗೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದಿಲ್ಲ ಎಂಬ ಘೋಷಣೆ ಮಾಡಿದರು. ಹಾಗಿದ್ದರೂ ಯುದ್ಧ ನಿಲ್ಲಲಿಲ್ಲ. 2025ರ ಅಂತ್ಯದ ಹೊತ್ತಿಗೆ ಈ ಯುದ್ಧವು ಅಪಾರ ಪ್ರಮಾಣದ ಆಸ್ತಿ ಹಾನಿಯೊಂದಿಗೆ 15 ಲಕ್ಷಕ್ಕೂ ಹೆಚ್ಚು ಜನರ ಪ್ರಾಣಕ್ಕೆ ಕುತ್ತು ತಂದಿದೆ.



ಇತರ ಸಂಘರ್ಷಗಳು

- ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಗಡಿ ವಿಚಾರವಾಗಿ ಈ ವರ್ಷ ಎರಡು ಬಾರಿ ಸೇನಾ ಸಂಘರ್ಷ ನಡೆಸಿವೆ. ಮೇ 28ರಂದು 'ಎಮರಾಲ್ಡ್ ಟ್ರಯಾಂಗಲ್' ಎಂಬ ಪ್ರದೇಶದಲ್ಲಿ ಎರಡೂ ಸೇನೆಗಳ ನಡುವೆ ಸಂಘರ್ಷ ನಡೆದಿತ್ತು. ಆ ಪ್ರದೇಶದ ಒಡೆತನದ ಬಗ್ಗೆ ಎರಡೂ ರಾಷ್ಟ್ರಗಳು ಹಕ್ಕು ಸಾಧಿಸುತ್ತಿವೆ. ಜುಲೈನಲ್ಲಿ ಪುನಃ ಐದು ದಿನ ತೀವ್ರ ಸಂಘರ್ಷ ನಡೆದಿತ್ತು. ಚೀನಾ, ಅಮೆರಿಕ, ಮಲೇಷ್ಯಾದ ಪ್ರಯತ್ನದಿಂದಾಗಿ ನಂತರ ಕದನ ವಿರಾಮ ಘೋಷಿಸಲಾಗಿತ್ತು. ಡಿಸೆಂಬರ್ 7ರಂದು ಮತ್ತೆ ಉಭಯ ದೇಶಗಳ ನಡುವೆ ಸಂಘರ್ಷ ಆರಂಭವಾಗಿದೆ. ಈ ವರ್ಷ 80ಕ್ಕೂ ಹೆಚ್ಚು ಜನರು ಮೃತಪಟ್ಟು, ಎಂಟು ಲಕ್ಷ ಜನರು ನಿರಾಶ್ರಿತರಾಗಿದ್ದಾರೆ
- ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಪಡೆಗಳ ನಡುವೆ ಅಕ್ಟೋಬರ್ ಮೊದಲ ವಾರ ಭಾರಿ ಸಂಘರ್ಷ ನಡೆದಿತ್ತು. ಅಫ್ಗನ್‌ನ 19 ಗಡಿ ಭದ್ರತಾ ಠಾಣೆಗಳು ಮತ್ತು 'ಭಯೋತ್ಪಾದಕರ ಅಡಗುತಾಣ'ಗಳನ್ನು ವಶಪಡಿಸಿಕೊಂಡಿದ್ದಾಗಿ ಪಾಕ್ ಸೇನೆ ಹೇಳಿತ್ತು. ತಾನು ನಡೆಸಿದ ಪ್ರತಿದಾಳಿಯಲ್ಲಿ ಪಾಕಿಸ್ತಾನದ 58 ಸೈನಿಕರು ಮೃತಪಟ್ಟಿದ್ದು, 30 ಮಂದಿ ಗಾಯಗೊಂಡಿದ್ದಾರೆ ಎಂದು ಅಫ್ಗಾನಿಸ್ತಾನ ಹೇಳಿಕೊಂಡಿತ್ತು.
- ಸುಡಾನ್‌ನಲ್ಲಿ 2023ರಿಂದ ಸೇನೆಯ ವಿರುದ್ಧ ಅರೆಸೇನಾ ಕ್ಷಿಪ್ರ ಕಾರ್ಯಪಡೆ (ಆರ್‌ಎಸ್‌ಎಫ್) ಸಶಸ್ತ್ರ ಹೋರಾಟ ನಡೆಸುತ್ತಿದೆ. ಈ ವರ್ಷ ಡಿಸೆಂಬರ್ ಮೊದಲ ವಾರದಲ್ಲಿ ಸುಡಾನ್‌ನ ಕೊರ್ಡೊಫಾನ್‌ನ ಶಿಶುವಿಹಾರ ಮತ್ತು ಇತರ ಸ್ಥಳಗಳ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ 63 ಮಕ್ಕಳು ಸೇರಿದಂತೆ 114 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ. ಅಕ್ಟೋಬರ್‌ನಲ್ಲಿ ನಿರಾಶ್ರಿತರ ಶಿಬಿರವೊಂದರ ಮೇಲೆ ನಡೆದ ದಾಳಿಯಲ್ಲಿ 60 ಮಂದಿ ಮೃತಪಟ್ಟಿದ್ದರು.

ಟ್ರಂಪ್ ಸುಂಕದ ಸುಳಿ

• ಎಸ್. ಸಂಪತ್, ಕೀರ್ತಿ ಕುಮಾರಿ ಎಂ.

ಹಳಸಿದ ದ್ವಿಪಕ್ಷೀಯ ಸಂಬಂಧ

'**ಅಮೆರಿಕವೇ** ಮೊದಲು, ಅಮೆರಿಕದ ವೈಭವವನ್ನು ಮರಳಿ ತರಬೇಕು, ವಿಶ್ವದ ದೊಡ್ಡಣ್ಣನ ಸ್ಥಾನದಲ್ಲಿಯೇ ಮುಂದುವರಿಯುವಂತೆ ಮಾಡಬೇಕು' ಎಂದು ಪಣತೊಟ್ಟಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವರ್ಷ ಜಾರಿಗೊಳಿಸಿದ ಹಲವು ನೀತಿಗಳು ಜಗತ್ತಿನ ಹಲವು ದೇಶಗಳ ಅರ್ಥವ್ಯವಸ್ಥೆಗೆ ಹೊಡೆತ ನೀಡಿವೆ. ಅಂತೆಯೇ ಭಾರತ ಮತ್ತು ಅದರ ಆರ್ಥಿಕತೆ ಮೇಲೂ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡಿವೆ.

ಟ್ರಂಪ್ ಅವರು ಈ ಹಿಂದೆ 2017ರಿಂದ 2021ರವರೆಗೂ ಅಧ್ಯಕ್ಷರಾಗಿದ್ದರು. ಅವರ ಮೊದಲ ಅವಧಿಯಲ್ಲಿ ಭಾರತಕ್ಕೆ ತೊಂದರೆಗಳಾಗಿರಲಿಲ್ಲ. ಭಾರತ-ಅಮೆರಿಕ ಸ್ನೇಹ ಸಂಬಂಧ ಉತ್ತಮವಾಗಿಯೇ ಮುಂದುವರಿದಿತ್ತು. ಆದರೆ ಟ್ರಂಪ್ ಅವರ ಎರಡನೇ ಅವಧಿ ಭಾರತವೂ ಸೇರಿದಂತೆ ಹಲವು ದೇಶಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದು, ಸುಂಕದ 'ಸುಳಿ'ಗೆ ಸಿಲುಕಿವೆ.

ಭಾರತದ ಸರಕುಗಳ ಆಮದು ಮೇಲೆ ಶೇ 25ರಷ್ಟು ಸುಂಕ ಹಾಗೂ ರಷ್ಯಾದಿಂದ ಭಾರತ ತೈಲ ಖರೀದಿಸುತ್ತಿರುವುದಕ್ಕೆ ದಂಡನೆಯಾಗಿ ಹೆಚ್ಚುವರಿಯಾಗಿ ಶೇ 25ರಷ್ಟು ಹೆಚ್ಚುವರಿ ಸುಂಕ ಸೇರಿದಂತೆ ಒಟ್ಟು ಶೇ 50ರಷ್ಟು ಸುಂಕವನ್ನು ಟ್ರಂಪ್ ಹೇರಿದ್ದಾರೆ. ಇದರಿಂದ ದೇಶದ ವ್ಯಾಪಾರ, ವಹಿವಾಟು, ಉದ್ಯೋಗ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ಸುಂಕ ಹೇರಿಕೆ ನಂತರ ಭಾರತದ ರಫ್ತಿನ ಪ್ರಮಾಣ ಶೇ 37ರಷ್ಟು ಕುಸಿತವಾಗಿದೆ.

ಗೆಳೆಯನ ಹೆಸರಲ್ಲಿ ಗುದ್ದು: 'ಭಾರತ ನನ್ನ ಅತ್ಯುತ್ತಮ ಸ್ನೇಹಿತ, ಪ್ರಧಾನಿ ಮೋದಿ ಅತ್ಯುತ್ತಮ ಗೆಳೆಯ' ಎಂದು ಪದೇ ಪದೇ ಹೇಳುತ್ತಲೇ ಟ್ರಂಪ್ ಅವರು ಭಾರತದ ಮೇಲೆ ಒಂದರ ಮೇಲೆ ಒಂದರಂತೆ ಪ್ರಹಾರಗಳನ್ನು ಮಾಡಿದರು.

'ಹೆಚ್ಚುವರಿ ಸುಂಕದ ಬೆದರಿಕೆ ಒಡ್ಡಿ ಭಾರತ- ಪಾಕ್ ಸೇನಾ ಸಂಘರ್ಷ ನಿಲ್ಲುವಂತೆ ಮಾಡಿ ಸಂಭಾವ್ಯ ಅಣ್ವಸ್ತ್ರ ಸಮರವನ್ನು ತಪ್ಪಿಸಿದ್ದು ನಾನೇ' ಎಂದು 60ಕ್ಕೂ ಹೆಚ್ಚು ಬಾರಿ ಹೇಳಿಕೊಂಡ ಟ್ರಂಪ್, ಪಾಕಿಸ್ತಾನ ಮತ್ತು ಅಲ್ಲಿನ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರಿಗೆ ಹತ್ತಿರವಾದರು. ತನ್ನ ಮಾತಿಗೆ ಭಾರತ ಬಗ್ಗದೇ ಇದ್ದಾಗ 'ಭಾರತದ್ದು ಸತ್ತ, ನಿರ್ಜೀವ ಆರ್ಥಿಕತೆ' ಎಂದೂ ಜರೆದು ಭಾರತದಿಂದ ಮತ್ತಷ್ಟು ದೂರವಾದರು.

ತೈಲ ಖರೀದಿ ನೆಪದಲ್ಲಿ ಮತ್ತಷ್ಟು ಪ್ರಹಾರ: ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿರುವುದನ್ನೇ ನೆಪವಾಗಿಸಿ ದೇಶದ ಮೇಲೆ ಮತ್ತಷ್ಟು ಕಿಡಿಕಾರಿದರು. ಉಕ್ರೇನ್- ರಷ್ಯಾ ನಡುವಿನ ಯುದ್ಧ ನಿಲ್ಲಿಸಲು ಹರಸಾಹಸ ಮಾಡುತ್ತಿರುವ ಅವರು, ರಷ್ಯಾಕ್ಕೆ ಯುದ್ಧ ಮುನ್ನಡೆಸಲು ಬೇಕಾದ ಆರ್ಥಿಕ ಸಂಪನ್ಮೂಲವನ್ನು ಭಾರತ ಒದಗಿಸುತ್ತಿದೆ ಎಂದು ಆರೋಪಿಸುತ್ತಲೇ ಬಂದರು. ನಿರ್ಬಂಧ ಹೇರಿರುವುದರ ಹೊರತಾಗಿಯೂ ಸ್ವತಃ ಅಮೆರಿಕವೇ ರಷ್ಯಾದಿಂದ ಯುರೇನಿಯಂ ಹಾಗೂ ಇನ್ನಿತರ ಅಪರೂಪದ ಲೋಹ, ಖನಿಜಗಳನ್ನು ಖರೀದಿ ಮಾಡುತ್ತಿದ್ದರೂ, ಯುರೋಪ್ ರಾಷ್ಟ್ರಗಳು ನೈಸರ್ಗಿಕ ಅನಿಲವನ್ನು ರಷ್ಯಾದಿಂದ ಆಮದು ಮಾಡುತ್ತಿದ್ದರೂ ಟ್ರಂಪ್ ಕಣ್ಣಿಗೆ ಬಿದ್ದಿದ್ದು ಭಾರತ ಖರೀದಿಸುತ್ತಿರುವ ತೈಲ ಮಾತ್ರ. ರಷ್ಯಾದ ಪ್ರಮುಖ ಕಚ್ಚಾತೈಲ ಉತ್ಪಾದನಾ ಕಂಪನಿಗಳಾದ 'ರೋಸ್ನೆಫ್ಟ್' ಮತ್ತು 'ಲುಕಾಯಿಲ್' ಮೇಲೆ ಅಮೆರಿಕ ನಿರ್ಬಂಧ ಹೇರಿತು. ಅಮೆರಿಕ ನಿರ್ಬಂಧದ ಪರಿಣಾಮ, ಭಾರತದ ಖಾಸಗಿ ಕಂಪನಿಗಳು ತೈಲ ಖರೀದಿಯನ್ನು ಕಡಿಮೆ ಮಾಡಿದವು.

ರಫ್ತಿಗೆ ತಟ್ಟಿದ ಬಿಸಿ: ವೇಗವಾಗಿ ಆರ್ಥಿಕ ಪ್ರಗತಿ ಸಾಧಿಸುತ್ತಿರುವ ಭಾರತಕ್ಕೆ ಟ್ರಂಪ್ ನೀತಿ ಸಣ್ಣ ಪ್ರಮಾಣದಲ್ಲಿ ಬಿಸಿ ಮುಟ್ಟಿಸಿದೆ. ಸುಂಕ ಹೇರಿಕೆ ಜಾರಿಯಾದ ಸಂದರ್ಭದಲ್ಲಿ ದೇಶದ ಷೇರು ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿ, ಹಲವು ಬಾರಿ ಏರಿಳಿತಗಳು ಸಂಭವಿಸಿದ್ದವು. ಆಗಸ್ಟ್ 26ರಂದು ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹5.41 ಲಕ್ಷ ಕೋಟಿಯಷ್ಟು ಕರಗಿತ್ತು.



ರಫ್ತು ಉದ್ಯಮಕ್ಕೆ ಹೊಡೆತ ಬಿದ್ದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ರಫ್ತಿನ ಪ್ರಮಾಣ ಈ ವರ್ಷ ಶೇ 37ರಷ್ಟು ಕಡಿಮೆಯಾಗಿದೆ. ಜವಳಿ, ವಜ್ರ, ಆಭರಣ, ಚರ್ಮ ಉತ್ಪನ್ನ, ಔಷಧ ಕ್ಷೇತ್ರಗಳು ಬಾಧಿತವಾಗಿವೆ. ಇದು ಉದ್ಯೋಗ ಕಡಿತ ಮತ್ತು ನಿರುದ್ಯೋಗ ಸಮಸ್ಯೆಗೂ ಕಾರಣವಾಗಿದೆ.

ಭಾರತಕ್ಕೆ ಇಕ್ಕಟ್ಟು

ಅಮೆರಿಕದ ಸುಂಕಕ್ಕೆ ಪ್ರತಿಯಾಗಿ ಅಲ್ಲಿನ ಉತ್ಪನ್ನಗಳ ಮೇಲೆ ಚೀನಾವು ಪ್ರತಿಸುಂಕ ಹೇರಿ ಟ್ರಂಪ್ ಆಡಳಿತದ ವಿರುದ್ಧ ಸುಂಕ ಸಮರ ನಡೆಸಿತು. ಆದರೆ, ಅಮೆರಿಕ, ರಷ್ಯಾ ಜತೆಗಿನ ಸಂಬಂಧವನ್ನು ಜಾಗರೂಕತೆಯಿಂದ ನಿರ್ವಹಿಸುತ್ತಿರುವ ಭಾರತವು ಅಂತಹ ಕ್ರಮಕ್ಕೆ ಮುಂದಾಗದೇ, ಕಾದು ನೋಡುವ ತಂತ್ರಕ್ಕೆ ಶರಣಾಯಿತು. ಇದೇ ಹೊತ್ತಿನಲ್ಲಿ ಚೀನಾ, ಬ್ರೆಜಿಲ್ ಸೇರಿದಂತೆ 'ಬ್ರಿಕ್ಸ್' ರಾಷ್ಟ್ರಗಳೊಂದಿಗಿನ ಸಂಬಂಧವನ್ನು ಇನ್ನಷ್ಟು ಬಲಪಡಿಸಲು ಯತ್ನಿಸಿತು. ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾತುಕತೆ ನಡೆಯುತ್ತಿದ್ದರೂ ಎರಡೂ ರಾಷ್ಟ್ರಗಳಿಗೆ ಅಂತಿಮ ತೀರ್ಮಾನಕ್ಕೆ ಬರಲು ಇನ್ನೂ ಸಾಧ್ಯವಾಗಿಲ್ಲ.

ರಷ್ಯಾ ಅಧ್ಯಕ್ಷ ಪುಟಿನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಪ್ರಧಾನಿ ಮೋದಿ

ಪರ್ಯಾಯ ದಾರಿ ಹುಡುಕಾಟ

ಅಮೆರಿಕದ ಸುಂಕ ನೀತಿ ನ್ಯಾಯಸಮ್ಮತವಾಗಿಲ್ಲ. ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿ ಮತ್ತು ಮಾರುಕಟ್ಟೆ ಅಗತ್ಯಗಳನ್ನು ಪೂರೈಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಭಾರತ ಪ್ರತಿಕ್ರಿಯಿಸಿತ್ತು.

'ಭಾರತವು ತನ್ನ ರೈತರು, ಮೀನುಗಾರರು ಮತ್ತು ಹೈನುಗಾರರ ಹಿತಾಸಕ್ತಿಯೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದರು. ಅಲ್ಲದೆ ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವ ಮೂಲಕ 'ಸ್ವದೇಶಿ ತತ್ವ'ವನ್ನು ಅಳವಡಿಸಿಕೊಳ್ಳುವಂತೆ ಅವರು ಕರೆ ನೀಡಿದ್ದರು.

ಟ್ರಂಪ್ ಸುಂಕ ನೀತಿಯಿಂದ ಬಾಧಿತವಾದ ಜವಳಿ, ಚರ್ಮೋದ್ಯಮ, ವಜ್ರ ಮತ್ತು ಆಭರಣ, ಎಂಜಿನಿಯರಿಂಗ್ ಉತ್ಪನ್ನಗಳು ಹಾಗೂ ಸಾಗರೋತ್ಪನ್ನಗಳ ರಫ್ತುದಾರರಿಗೆ ಪ್ರೋತ್ಸಾಹ ನೀಡಲು ಕೇಂದ್ರ ಸರ್ಕಾರ ₹45,060 ಕೋಟಿ ಮೊತ್ತದ ಹೊಸ ಯೋಜನೆಗಳನ್ನು ಪ್ರಕಟಿಸಿತು.

ಟ್ರಂಪ್ ಸುಂಕ ನೀತಿಯ ಪ್ರಹಾರದಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿ ಭಾರತ–ಬ್ರಿಟನ್, ಭಾರತ– ಒಮಾನ್, ಭಾರತ– ನ್ಯೂಜಿಲೆಂಡ್ ನಡುವೆ ಮುಕ್ತ ವ್ಯಾಪಾರ ಒಪ್ಪಂದಗಳು ಏರ್ಪಟ್ಟಿವೆ. ಭಾರತ– ಇಥಿಯೋಪಿಯಾ ಸೇರಿದಂತೆ ಹಲವು ದೇಶಗಳ ಜತೆ ವಿವಿಧ ಒಡಂಬಡಿಕೆಗಳು ನಡೆದಿವೆ. ಭಾರತ- ಚೀನಾ ಸಂಬಂಧ ಕೊಂಚ ಸುಧಾರಿಸಿದೆ. ಭಾರತ- ಅಮೆರಿಕ ನಡುವೆ ವ್ಯಾಪರ ಒಪ್ಪಂದದ ಕುರಿತು ಮಾತುಕತೆಗಳು ನಡೆಯುತ್ತಿವೆ. ಡಿಸೆಂಬರ್‌ನಲ್ಲಿ ಭಾರತ–ರಷ್ಯಾ ವಾರ್ಷಿಕ ಶೃಂಗಸಭೆಯೂ ನಡೆದಿದ್ದು, ಸಂಬಂಧ ಗಟ್ಟಿಯಾಗಿದೆ ಎಂಬ ಸಂದೇಶವನ್ನು ಸಾರಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಶಿಖರವೊಂದರಲ್ಲಿ ಸಾಧು ಒಬ್ಬರು ಹಿಮದ ನಡುವೆ ಸಮಾಧಿ ಸ್ಥಿತಿಯಲ್ಲಿ ಕುಳಿತು ಧ್ಯಾನ ಮಾಡುತ್ತಿರುವ ವಿಡಿಯೊ ತುಣುಕನ್ನು 'ಎಕ್ಸ್', 'ಇನ್‌ಸ್ಟಾಗ್ರಾಂ'ನಲ್ಲಿ ಹಂಚಿಕೊಳ್ಳಲಾಗುತ್ತಿದೆ. ಸನ್ಯಾಸಿಯವರ ಪೂರ್ಣ ದೇಹ ಹಿಮದಲ್ಲಿ ಮುಚ್ಚಿಹೋಗಿದ್ದು, ರುಂಡದ ಭಾಗ ಮಾತ್ರ ಕಾಣುತ್ತಿದೆ. ವಸೀಂ ಅಹ್ಮದ್ ಎಂಬ ಬಳಕೆದಾರ 'ಎಕ್ಸ್'ನಲ್ಲಿ ಇದೇ 21ರಂದು ಈ ವಿಡಿಯೊವನ್ನು ಪೋಸ್ಟ್ ಮಾಡಿ, ಇದು ನಿಜವೇ ಎಂದು ಪ್ರಶ್ನಿಸಿದ್ದಾರೆ. ಇದು ನಿಜವಲ್ಲ.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದ ಮೂಲಕ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿದ್ದು ಕಂಡು ಬಂತು. ಮತ್ತಷ್ಟು ಪರಿಶೀಲನೆ ನಡೆಸಿದಾಗ ಡಿ.17ರಂದೇ ಇನ್‌ಸ್ಟಾಗ್ರಾಂನಲ್ಲಿ ಈ ವಿಡಿಯೊ ಪೋಸ್ಟ್ ಮಾಡಲಾಗಿದೆ. 'mrmahadevshorts1' ಎಂಬ ಖಾತೆಯಲ್ಲಿ ಈ ವಿಡಿಯೊ ಪೋಸ್ಟ್ ಮಾಡಲಾಗಿದೆ. ಆ ಖಾತೆಯನ್ನು ಪರಿಶೀಲನೆ ನಡೆಸಿದಾಗ, ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿದ ವಿಡಿಯೊಗಳನ್ನು ಆಗಾಗ ಪೋಸ್ಟ್ ಮಾಡಿರುವುದು ಗಮನಕ್ಕೆ ಬಂತು. ಮುಂದಿನ ಹಂತವಾಗಿ ವಿಡಿಯೊವನ್ನು ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್ ಬಳಸಿಕೊಂಡು ಪರಿಶೀಲನೆಗೆ ಒಳಪಡಿಸಿದಾಗ ವಿಡಿಯೊವನ್ನು ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿರುವುದು ದೃಢಪಟ್ಟಿತು. ಸಾಮಾಜಿಕ ಜಾಲತಾಣಗಳಲ್ಲಿ ಜನರನ್ನು ತಪ್ಪುದಾರಿಗೆ ಎಳೆಯಲು ಎಐ ಡೀಪ್‌ಫೇಕ್ ವಿಡಿಯೊವನ್ನು ನಿಜವಾದ ವಿಡಿಯೊ ಎಂದು ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕರುಣೆಯ ಪಾಠ

ನುಡಿ ಬೆಳಗು

ಪಿ.ಚಂದ್ರಿಕಾ

ಅದೊಂದು ಸಂಜೆ, ಒಗೆದ ಬಟ್ಟೆಗಳ ಗಂಟನ್ನು ಬೆನ್ನ ಮೇಲೆ ಹೊತ್ತ ಕಪ್ಪು ವರ್ಣೀಯ ತಾಯಿ ತನ್ನ ಪುಟ್ಟ ಮಗಳ ಕೈ ಹಿಡಿದು ನಡೆಯುತ್ತಿದ್ದಳು. ಮಗಳಿಗೆ ತೀರದ ಉತ್ಸಾಹ. ತಾಯಿಯನ್ನು ಇದೇನು, ಅದೇನು ಎಂದು ಕಂಡದ್ದೆಲ್ಲದರ ಬಗ್ಗೆ ಕೇಳುತ್ತಲೇ ಇದ್ದಳು. ಹೆಗಲ ಮೇಲಿನ ಭಾರವನ್ನು ಹಗುರಾಗಿಸುವಂತೆ ತಾಯಿ ಸಹನೆಯಿಂದ ಎಲ್ಲಕ್ಕೂ ಉತ್ತರಿಸುತ್ತಿದ್ದಳು. ಹೀಗೆ ಮಾತಾಡುತ್ತಾ ಅವರಿಬ್ಬರು ಬಂದು ನಿಂತಿದ್ದು ದೊಡ್ಡದೊಂದು ಬಂಗಲೆಯ ಮುಂದೆ. ತಾಯಿ ಮಗಳನ್ನು ಹೊರಗೆ ಜಗುಲಿಯ ಬಳಿ ನಿಲ್ಲಿಸಿ ಬಟ್ಟೆಯನ್ನು ಕೊಡಲು ಒಳಗೆ ಹೋದಳು. ಕುತೂಹಲದಿಂದ ಮಗಳು ಮನೆಯೊಳಗೆ ಬಗ್ಗಿ ನೋಡುವಾಗ ಹೊಂಬಣ್ಣದ ಕೂದಲಿನ ಚಂದದ ಪುಟ್ಟ ಹುಡುಗಿ ಪುಸ್ತಕವನ್ನು ಓದುತ್ತಿರುವುದು ಕಂಡಿತು. ಯಾರೋ ಕರೆದ ಕಾರಣ ಆ ಹುಡುಗಿ ಒಳಗೆ ಹೋದಳು. ಹೊರಗೆ ನಿಂತಿದ್ದ ಕಪ್ಪು ವರ್ಣೀಯ ಹುಡುಗಿಗೆ ಆಸೆ ಶುರುವಾಯಿತು- ಆ ಪುಸ್ತಕವನ್ನು ಒಮ್ಮೆಯಾದರೂ ಮುಟ್ಟಬೇಕೆಂದು.

ಕಪ್ಪು ವರ್ಣೀಯ ಹುಡುಗಿ ಮನೆಯ ಒಳಬಂದವಳೇ ಪುಸ್ತಕದ ರಟ್ಟನ್ನು ಸವರಿದಳು. ಆನಂದ ಅವಳ ಮುಖದಲ್ಲಿ ತೇಲಿತು. ಮೈಮರೆತು ಪುಸ್ತಕದ ಪುಟಗಳನ್ನು ತಿರುವಲಾರಂಭಿಸಿದಾಗ ಅಲ್ಲಿಗೆ ಬಂದ ಹೊಂಬಣ್ಣದ ಕೂದಲಿನ ಹುಡುಗಿ ಅತ್ಯಂತ ಕೋಪದಿಂದ ಕಪ್ಪು ವರ್ಣೀಯ ಹುಡುಗಿಯ ಕೈಲಿದ್ದ ಪುಸ್ತಕವನ್ನು ಕಸಿದುಕೊಳ್ಳುತ್ತಾ, 'ನಿನ್ನ ಚರ್ಮದ ಬಣ್ಣ ನೋಡಿಕೊಂಡಿದ್ದೀಯಾ? ಅದು ಎಷ್ಟು ಕಡುಗಪ್ಪಾಗಿದೆ. ನಿನ್ನ ಕೈಗಳಿಂದ ಮುಟ್ಟಿದರೆ ಈ ಪುಸ್ತಕಕ್ಕೂ ನಿನ್ನದೇ ಬಣ್ಣ ತಾಕಿ ನಾನು ಓದಲಾಗುವುದೆ?' ಎಂದು ಬೈದಳು. ಕಪ್ಪು ವರ್ಣೀಯ ಹುಡುಗಿ ತನ್ನ ಕೈಗಳನ್ನು ತಿಕ್ಕಿ ತೋರಿಸುತ್ತಾ, 'ನೋಡು ನನ್ನ ಬಣ್ಣ ಯಾವುದಕ್ಕೂ ಅಂಟಲಾರದು' ಎಂದಳು. ಆ ಮಾತುಗಳಿಗೆ ಕೋಪಗೊಂಡ ಆ ಹೊಂಬಣ್ಣದ ಕೂದಲ ಹುಡುಗಿ ಕಪ್ಪು ವರ್ಣೀಯ ಹುಡುಗಿಯನ್ನು ಮನೆಯಿಂದ ಹೊರಗೆ ತಳ್ಳುತ್ತಾ, 'ನಿಮ್ಮಂಥವರಿಗೆ ಓದು ವಿದ್ಯೆ ಬೇರೆ ಕೇಡು; ಕಪ್ಪು ಕುರೂಪಿ. ಎಲ್ಲಿರಬೇಕೋ ಅಲ್ಲಿರು' ಎಂದು ಬೈದು, ಒಳಗೆ ಹೋದಳು.

ಅಳುತ್ತಿದ್ದ ಹುಡುಗಿಯು ಮನೆಯಿಂದ ಹೊರಬಂದ ತಾಯಿಯನ್ನು ಕೇಳಿದಳು, 'ಅಮ್ಮಾ ನಾನು ಯಾಕೆ ಪುಸ್ತಕ ಮುಟ್ಟಬಾರದು? ನನ್ನ ಮೈ ಕಪ್ಪಾಗಿರುವುದು ನನ್ನ ತಪ್ಪಾ? ನಮ್ಮಂಥವರು ಓದಬಾರದಾ?' ಅವಳೆಲ್ಲಾ ಪ್ರಶ್ನೆಗೆ ಉತ್ತರಿಸುತ್ತಿದ್ದ ತಾಯಿ ಸುಮ್ಮನಿದ್ದಳು. ಅವಳ ಕಣ್ಣುಗಳಲ್ಲಿ ಧಾರಾಕಾರ ನೀರು ಹರಿಯುತ್ತಿತ್ತು. ಆ ಪುಟ್ಟ ಹುಡುಗಿಗೆ ಗೊತ್ತಾಯಿತು, ತನ್ನ ತಾಯಿಗೆ ನೋವಾಗಿದೆ ಎಂದು. ತಾಯಿಯ ಕಣ್ಣೀರನ್ನು ಒರೆಸುತ್ತಾ, 'ಯೋಚಿಸಬೇಡ. ಅಕ್ಷರವೂ ಕಪ್ಪು, ನಾನೂ ಕಪ್ಪು. ನಾವಿಬ್ಬರೂ ಸ್ನೇಹಿತರಾಗುತ್ತೇವೆ ನೋಡುತ್ತಿರು' ಎಂದಳು. 'ನಾನೂ ದೊಡ್ಡ ಪುಸ್ತಕಗಳನ್ನು ಓದುವಂತಾಗಬೇಕು' ಎಂದು ದೇವರಲ್ಲಿ ದಿನವೂ ಬೇಡಿಕೊಂಡಳು.

ಜಗತ್ತು ಕಡೆಗಣಿಸಿದ ಆ ಹುಡುಗಿಯೇ ಮೇರಿ ಮೆಕ್‌ಲಿಯಾಡ್ ಬೆಥೂನೆ. ತನ್ನ ಜೀವಮಾನವಿಡೀ ಕಪ್ಪು ವರ್ಣೀಯರು ಮಾತ್ರವಲ್ಲ ಮಾನವ ಜನಾಂಗದ ಉನ್ನತಿಗಾಗಿ ದುಡಿದಳು. ಸಮಾನತಾ ವಿರೋಧಿಗಳ ಜೊತೆ ಸೆಣಸಿದಳು. ರಾಜಕೀಯವಾಗಿ ಜನರನ್ನು ಪ್ರೇರೇಪಿಸಿದಳು. ಅಮೆರಿಕದ ಪರವಾಗಿ ವಿಶ್ವಸಂಸ್ಥೆಯಲ್ಲಿ ಶಾಂತಿ ರಾಯಭಾರಿಯಾದಳು. ಯಾವ ಬಿಳಿಯ ಮಕ್ಕಳು ಅವಳ ಕೈಯಿಂದ ಪುಸ್ತಕವನ್ನು ಕಸಿದರೋ, ಅದೇ ಅಮೆರಿಕದ ನೆಲದಲ್ಲಿ ಜೀವ ತೇಯ್ದು ತನ್ನದೇ ಹೆಸರಿನ ಅತ್ಯಂತ ಸುಪ್ರಸಿದ್ಧ 'ಬೆಥೂನೆ ಕುಕ್‌ಮನ್' ಕಾಲೇಜನ್ನು ಕಟ್ಟಿ ಜ್ಞಾನದ ಬೆಳಕನ್ನು ಹರಡಿದಳು.

ಪುಸ್ತಕ ಕಸಿದ ಕ್ರೂರ ಕೈಗಳಿಗೂ ಕರುಣೆಯ ಪಾಠ ಹೇಳಿದ ಬೆಥೂನೆಯಂಥಾ ಹೆಣ್ಣುಮಕ್ಕಳು ನಮ್ಮ ಮನೆ ಮನೆಗಳಲ್ಲೂ ಹುಟ್ಟಲಿ- ಅವಕಾಶಗಳು ತಪ್ಪಿಹೋಗದಿರಲು, ಪ್ರೀತಿಯ ಪಾಠ ಹೇಳಲು. ❖

ಗುಂಡಣ್ಣ



ಪದಬಂಧ 6264

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜಸಭೆಗೆ ಸಂಬಂಧಿಸಿದ ವ್ಯಕ್ತಿ (4)
3.ಕಾಡಿನ ಮಧ್ಯಭಾಗವಿದು (4)
5.ವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು (3)
6.ವಾರದಲ್ಲಿ ಧರಿಸಿರುವ ಯಜ್ಞೋಪವೀತ (4)
8.ದೊಡ್ಡ ಗಾತ್ರದ ಜಲಚರ (4)
10.ಮಧುರವಾದ ಧ್ವನಿ (4)
12.ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
13.ಮುಂಗುಸಿ ಇಲ್ಲಿದೆ (3)
16.ಓಡುತ್ತಾ ಹೋಗಿ ಸುದ್ದಿಯನ್ನು ಮುಟ್ಟಿಸುವವನು (4)
17.ಇಂದ್ರಿಯಗಳನ್ನು ಜಯಿಸಿದವನು (4)

ಮೇಲಿಂದ ಕೆಳಕ್ಕೆ

1.ಆ ರಸ್ತೆಯಲ್ಲಿಯೇ ಮೂಡಿದ ಪ್ರೀತಿಯನ್ನು ಹುಡುಕಿ! (2)
2.ಕರಲ್ಲಿರುವ ಚಿನ್ನ (4)
3.ಉಗುರಿನಿಂದಾದ ಗಾಯ (4)
4.ಜಗತ್ತು ಇಲ್ಲಿ ಕಾಣುತ್ತಿದೆ (2)
7.ಉಪಯೋಗಕ್ಕೆ ಬಾರದುದು (3)
9.ಒಣಗಿದ ಕೊಬ್ಬರಿ (3)
11.ವರವನ್ನು ಪಡೆದಿರುವ ಬೇಡ (4)
12.ಗಂಜಿಯಿರುವ ಒಂದು ಬೀಜ (4)
14.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
15.ಸಂಗೀತ ಹಾಗೂ ನೃತ್ಯಗಳಲ್ಲಿಯ ಗತಿ (2)



6263ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸ್ವದೇಶಾಭಿಮಾನ 4.ಸಹಾಯ
5.ಶಿವಪುರ 8.ಲಾಲಿ
9.ರಂಗತಾಲೀಮು 10.ಪ್ರತಿ
13.ಖಡ್ಗಧಾರೆ 14.ರಥಾಂಗ
15.ಮನೋವಿಶ್ಲೇಷಣೆ

ಮೇಲಿಂದ ಕೆಳಕ್ಕೆ:

1.ಸ್ವಯಂವರ 2.ನಸರಿ
3.ಜಯಶಾಲಿ 6.ರಣಾಂಗಣ
7.ವಲೀಮುಖ 10.ಪ್ರಕರಣ
11.ಸುಧಾರಣೆ 12.ಆಗಮ

ಸುಡೊಕು 6648

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		3		6				2
							5	
	1	2		5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

6647ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ಡಿಸೆಂಬರ್ 2025 ಗುರುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು, ತಿಥಿ: ಪೌಷ ಶುಕ್ಲ ಪಂಚಮಿ ಗಂ 13-43, **ನಕ್ಷತ್ರ:** ಧನಿಷ್ಠ ಗಂ 8-19, **ಯೋಗ:** ವಜ್ರ ಗಂ. 15-14 ಕರಣ: ಬಾಲವ ಗಂ. 13-43 ನಂತರ ಕೌಲವ ಗಂ 25-48 ಧನು ಮಾಸದ 10 ನೇ ದಿನ. **ಮಳೆ ನಕ್ಷತ್ರ:** ಮೂಲ 3 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-54, **ಸೂರ್ಯಾಸ್ತ:** 06-07, **ಮುಸ್ಲಿಂ ದಿನಾಂಕ:** 05 ರಜಬ್, **ದಿನ ವಿಶೇಷ:** ಕ್ರಿಸ್ಮಸ್, **ಅದೃಷ್ಟ ಸಂಖ್ಯೆ:** 3, 5

ಮೇಷ: ಸದಾಕಾಲ ಕಾರ್ಯಪ್ರವೃತ್ತರಾಗಿ, ಸರಿಯಾದ ದಾರಿಯಲ್ಲಿ ದುಡಿಯುವ ನಿಮಗೆ ಈ ದಿನ ಉತ್ತಮ ಫಲಗಳು ಅನುಭವಕ್ಕೆ ಬರಲಿವೆ. ಕುಟುಂಬ ಸದಸ್ಯರ ಆರೋಗ್ಯದ ಬಗೆಗಿನ ಚಿಂತೆ ತಪ್ಪಿದ್ದಲ್ಲ.

ವೃಷಭ: ನಿಮ್ಮ ಕೋಪದ ಮೇಲೆ ನಿಯಂತ್ರಣವಿಲ್ಲದಿದ್ದರೆ, ಸಹೋದರರು ಮತ್ತು ಸ್ನೇಹಿತರು ಎದುರಾಳಿಗಳಾಗುವರು. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳು ಮೇಲುಗೈ ಸಾಧಿಸುವುದರಿಂದಾಗಿ ಗೌರವ ಸಿಗುವುದು.

ಮಿಥುನ: ದಾನ, ಧರ್ಮ, ಪರೋಪಕಾರಗಳಲ್ಲಿ ಆಸಕ್ತಿ ಮೂಡಿ ಉಪಕಾರ ಮಾಡುವುದರಿಂದ ಪುಣ್ಯ ಸಂಪಾದನೆಯಾಗುತ್ತದೆ. ದೈವಬಲ ನಿಮ್ಮ ಮೇಲಿದ್ದು ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ಸಾಗಲಿದೆ.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಂಪರ್ಕ ಉಪಕಾರಕ್ಕಿಂತ ಹೆಚ್ಚು ತೊಂದರೆಗೆ ದಾರಿ ಮಾಡಿಕೊಡುವುದು. ಸಂಶೋಧನಾ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮುನ್ನಡೆ. ಅಲಂಕಾರಿಕ ವಸ್ತುಗಳಿಗೆ ಹಣ ವಿನಿಯೋಗಿಸುವಿರಿ.

ಸಿಂಹ: ಕಾರ್ಯ ನಿಮಿತ್ತವಾಗಿ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನ ಇರಲಿ. ನಿಮ್ಮಲ್ಲಿ ಯಾವುದನ್ನೇ ಆಗಲಿ ಸಾಧಿಸಿ ತೋರಿಸುವ ಶಕ್ತಿ ಸಾಮರ್ಥ್ಯವಿದೆ.

ಕನ್ಯಾ: ಗಿಡಮೂಲಿಕೆಗಳ ಬಳಕೆಯಿಂದ ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡು ಬಂದು ದೈನಂದಿನ ಚಟುವಟಿಕೆಗಳಲ್ಲಿ ಪಾಲುಗೊಳ್ಳುವಿರಿ. ಅಧಿಕ ಜವಾಬ್ದಾರಿಯ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ.

ತುಲಾ: ಇತರರ ಸಹಾಯವನ್ನು ಅಪೇಕ್ಷಿಸುವಂತಹ ಜನರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು. ವಿವಾಹದ ವಿಚಾರವಾಗಿ ಶುಭವಾಗುವ ಲಕ್ಷಣವಿದೆ. ವೃತ್ತಿ ಜೀವನದಲ್ಲಿ ಯಶಸ್ಸು ಕಾಣುವಿರಿ.

ವೃಶ್ಚಿಕ: ಮೀನುಗಾರರು ಉದ್ಯೋಗ ನಿಮಿತ್ತ ಸಮುದ್ರಯಾನ ಮಾಡುವಾಗ ಜಾಗರೂಕತೆ ವಹಿಸಬೇಕಾಗುತ್ತದೆ. ನಿಮ್ಮ ಕನಸುಗಳಿಗೆ ಪುನಃ ಜೀವ ಬಂದಂತೆ ಆಗಲಿದೆ. ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲವಾಗಲಿದೆ.

ಧನು: ರಾಜಕೀಯ ರಂಗವನ್ನು ಪ್ರವೇಶಿಸುವ ಇಚ್ಛೆಯನ್ನು ನಿಮ್ಮ ಸ್ನೇಹಿತರಲ್ಲಿ ವ್ಯಕ್ತಪಡಿಸಿ ಸಲಹೆ ಪಡೆದುಕೊಳ್ಳಿ. ಯಾವುದೇ ವಿಚಾರಗಳಿಗೂ ಚಿಂತಿಸುವ ಅಗತ್ಯವಿಲ್ಲದ್ದರಿಂದ ಮನಸ್ಸು ನಿರಾಳಗೊಳ್ಳುವುದು.

ಮಕರ: ಕುಟುಂಬ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಈ ದಿನ ಇನ್ನಷ್ಟು ಉತ್ತಮಗೊಳ್ಳುವುದು. ಸಕ್ರಿಯ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪುವುವು. ಗೋ ಸೇವೆಯಿಂದ ಶುಭ.

ಕುಂಭ: ಅರಣ್ಯ ಸುತ್ತಾಡುವ ಹವ್ಯಾಸ ಹೊಂದಿರುವವರು ಜಾಗ್ರತೆವಹಿಸುವುದು ಅವಶ್ಯಕವಾಗಿರುತ್ತದೆ. ನಿಮ್ಮ ಸಹೋದ್ಯೋಗಿಗಳಿಂದ ಮಾರ್ಗದರ್ಶನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಮೀನ: ವಿದ್ಯುತ್ ಕಂಟ್ರ್ಯಾಕ್ಟರ್‌ಗೆ ಲಾಭದಾಯಕವಾದಂತಹ ಕಾಮಗಾರಿಗಳು ದೊರೆಯಲಿದೆ. ನೆರೆಯವರ ಸಹಾಯ ಕೇಳುವ ಸಂದರ್ಭ ಬರಲಿದೆ. ನಿಮ್ಮ ವಾಸಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವವಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಶ್ರೀ ಜಿ. ಎಂ. ನಾಗರಾಜ್
ಜನನ: 23-04-1951 ಮರಣ: 23-12-2017
ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪ ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಶ್ರೀಮತಿ ಎಂ. ಮಹಾಲಕ್ಷ್ಮೀ

52ನೇ ವರ್ಷದ ಪುಣ್ಯಸ್ಮರಣೆ

ಬಿ. ಹುಚ್ಚಯ್ಯನವರು
ಸ್ಕೂಲ್ ಮಾಸ್ಟರ್,
ಹನುಮಂತೇಗೌಡನ ಪಾಳ್ಯ, ನೆಲಮಂಗಲ
ನಿಮ್ಮ ಚಿರಸ್ಮರಣೆಯೊಂದಿಗೆ
ಕುಟುಂಬ ಸದಸ್ಯರು

CONNECT

ಲಕ್ಷ್ಮಿ ಎ
ಮಿಸೆಸ್ ಇಂಡಿಯಾ ಸೂಪ್ರಾ ನ್ಯಾಷನಲ್ 2025
ಗೋವಾ, ಡಿಸೆಂಬರ್ 2, 2025ರಂದು ನಡೆದ ಮಿಸೆಸ್ ಇಂಡಿಯಾ ಸೂಪ್ರಾ ನ್ಯಾಷನಲ್ 2025 ಸ್ಪರ್ಧೆಯಲ್ಲಿ, ಶ್ರೀ ಆನಂದ್ ಸಿ ನಿವೃತ್ತ ಪೊಲೀಸ್ ಸಬ್ ಇನ್ಸೆಕ್ಟರ್ ಹಾಗೂ ಶ್ರೀಮತಿ ಲಲಿತ ಎಚ್.ಡಿ ಅವರ ಪುತ್ರಿ ಲಕ್ಷ್ಮಿ ಎ ಅವರು ಮಿಸೆಸ್ ಕರ್ನಾಟಕ ಇಂಡಿಯಾ ಸೂಪ್ರಾ ನ್ಯಾಷನಲ್ 2025 ಹಾಗೂ ಮಿಸೆಸ್ ಹ್ಯೂಮನಿಟೇರಿಯನ್ ಕ್ವೀನ್ ಆಫ್ ಇಂಡಿಯಾ ಸೂಪ್ರಾ ನ್ಯಾಷನಲ್ 2025 ಎಂಬ ಎರಡು ಪ್ರತಿಷ್ಠಿತ ಪಟ್ಟಗಳನ್ನು ಗೆದ್ದು ಕರ್ನಾಟಕಕ್ಕೆ ಹೆಮ್ಮೆ ತಂದಿದ್ದಾರೆ. 2024ರಲ್ಲಿ ಮಿಸೆಸ್ ಕಾಂಜೆನಿಯಾಲಿಟಿ ಹೋಗ್‌ಸ್ಟಾರ್ ಇಂಡಿಯಾ ಪಟ್ಟವನ್ನು ಸಹ ಗೆದ್ದಿದ್ದರು.
ಸಹಯೋಗಗಳು ಹಾಗೂ ವೃತ್ತಿಪರ ಕಾರ್ಯಕ್ರಮಗಳಿಗಾಗಿ ಸಂಪರ್ಕಿಸಿ: milansmitha@gmail.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ವ್ಯಾಪಾರ
Business Offers
Distributors
ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಕೆಲಸ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಸ್ಥಳ: ಶೇಷಾದ್ರಿಪುರಂ ಬೆಂಗಳೂರು ದೂರವಾಣಿ ಸಂಖ್ಯೆ: 9019626612.

ಉದ್ಯೋಗಾವಕಾಶ
General
ಬೆಂಗಳೂರಿನಲ್ಲಿ ಭಾರತದ ನಂ. 1 ಕ್ಯಾಶ್ ಲಾಜಿಸ್ಟಿಕ್ಸ್ ಕಂಪನಿಗೆ
ಬೆಂಗಳೂರು ನಗರ: ಕೂಡ್ಲು ಗೇಟ್, ರಾಜಾಜಿನಗರ, HBR ಲೇಔಟ್ ಶಾಖೆಗಳಿಗೆ
ATM ಆಪರೇಟರ್‌ಗಳು
ಬೇಕಾಗಿದ್ದಾರೆ.
ಅರ್ಹತೆ: 10 ನೇ ತರಗತಿ ಪಾಸ್ / +2 ಪಾಸ್ / ಪದವಿ / ಡಿಪ್ಲೊಮಾ
ಸಂಬಳ + ಭತ್ಯೆ
ರೂ. 18,000 ರಿಂದ 25,000
18 ರಿಂದ 40 ವರ್ಷದೊಳಗಿನ
ಪುರುಷರು ಮಾತ್ರ ಅರ್ಜಿ ಸಲ್ಲಿಸಿ
ವಾಕ್-ಇನ್ ಸಂದರ್ಶನ:
ಸೋಮವಾರದಿಂದ ಶನಿವಾರ ಬೆ. 10 ರಿಂದ ಸಂಜೆ 5 ರವರೆಗೆ.
ಸ್ಥಳ: ಬೆಂಗಳೂರು ನಗರ:
ಹೊಂಗಸಂದ್ರ: 8217081781/6362423007
ರಾಜಾಜಿನಗರ: 8928003550/8088551482
HBR ಲೇಔಟ್: 8792056380/8762730620

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

ವೈಯಕ್ತಿಕ
Change of Name
I, C.PRASANTHA Kumar S/o late N.K. Chandra Prakash aged about 39 Years residing at Post office Road Nangali village, Byrakur Hobli, Mulbagal Taluk, Kolar District. Have changed my name to C.Prashanth Kumar vide affidavit dated 24.12.2025 before Notary B Nagaraja Mulbagal. Henceforth I shall be called as C.Prashanth Kumar only

I, GANESH R/O H. No 17-4-121, Agriculture Colony, Mannhalli Road, Bidar Karnataka 585403 have changed my name from Ganesh to Ganesh Machkure for all purposes Affidavit No. IN-KA28477896196052X dated 19/12/2025

ಪ್ರವಾಸ
Travel
11 ದಿನಗಳ ಗುಜರಾತ್ ರನ್ನಆಫ್ ಕಚ್. 12ದಿನಗಳ ಮಧ್ಯಪ್ರದೇಶ. 7 ದಿನಗಳ ಕಾಶಿಯಾತ್ರೆ ಅಯೋಧ್ಯ. 10 ದಿನಗಳ ನೇಪಾಳ,ಮುಕ್ತಿನಾಥ್. ಸಂಪರ್ಕಿಸಿ. ನಂದಿ ಹಾಲಿಡೇಸ್ 9740228186 9035513332

ಷೇರುಪೇಟೆ ವಹಿವಾಟು


ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 26,177
ಇಂದಿನ ಅಂತ್ಯ: 26,142
ದಿನದ ಕನಿಷ್ಠ: 26,123
35

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹705
	12 ಕ್ಕೆ	₹96
ಮೈಸೂರು:	100 ಕ್ಕೆ	₹706

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹356-761
ದ್ವಿತಳಿ (ಬಿ.ವಿ) ₹288-925

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹179.50
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ ₹162.50

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹26,600
ಎಸಿ ₹14,840
ಆರ್‌ಪಿ ₹16,500
ಆರ್‌ಸಿ ₹9,350

ಎರಡು ಕಂಪನಿಗಳಿಗೆ ನಿರಾಕ್ಷೇಪಣಾ ಪತ್ರ

ನಾಗರಿಕ ವಿಮಾನಯಾನ ಸೇವೆ ಆರಂಭಿಸಲು ಕೇಂದ್ರದಿಂದ ಅನುಮತಿ

ನವದೆಹಲಿ (ಪಿಟಿಐ): ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಎರಡು ವಿಮಾನಯಾನ ಕಂಪನಿಗಳಿಗೆ ಸೇವೆ ಆರಂಭಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಿದೆ. ಅಲ್ ಹಿಂದ್ ಏರ್ ಮತ್ತು ಫ್ಲೈಎಕ್ಸ್‌ಪ್ರೆಸ್ ನಿರಾಕ್ಷೇಪಣಾ ಪತ್ರವನ್ನು ಪಡೆದಿರುವ ಕಂಪನಿಗಳು.

ಇವೆರಡು ಕಂಪನಿಗಳಲ್ಲದೆ ಉತ್ತರ ಪ್ರದೇಶ ಮೂಲದ ಶಂಖ ಏರ್ 2026ರಲ್ಲಿ ಸೇವೆ ಆರಂಭಿಸುವ ನಿರೀಕ್ಷೆ ಇದೆ. ಈ ಕಂಪನಿಯು ಸಚಿವಾಲಯದಿಂದ ನಿರಾಕ್ಷೇಪಣಾ ಪತ್ರವನ್ನು ಈಗಾಗಲೇ ಪಡೆದಿದೆ. ಅಲ್ ಹಿಂದ್ ಏರ್ ಕಂಪನಿಯ ಮಾಲೀಕತ್ವವನ್ನು ಕೇರಳ ಮೂಲದ ಅಲ್‌ಹಿಂದ್ ಸಮೂಹ ಹೊಂದಿದೆ.

ದೇಶದಲ್ಲಿ ವಿಮಾನಯಾನ ಸೇವೆಗಳನ್ನು ಒದಗಿಸುವ ಕಂಪನಿಗಳ ಸಂಖ್ಯೆಯು ಇನ್ನಷ್ಟಾಗಬೇಕು ಎಂಬುದು ನಾಗರಿಕ ವಿಮಾನಯಾನ ಸಚಿವಾಲಯದ ಬಯಕೆ. ಜಗತ್ತಿನಲ್ಲಿ ಅತಿಹೆಚ್ಚು ವೇಗದಲ್ಲಿ ಬೆಳವಣಿಗೆ ಕಾಣುತ್ತಿರುವ ದೇಶಿ ನಾಗರಿಕ ವಿಮಾನಯಾನ ಮಾರುಕಟ್ಟೆಗಳಲ್ಲಿ ಭಾರತವೂ ಸೇರಿದೆ.

ದೇಶದಲ್ಲಿ ಈಗ ಒಂಬತ್ತು ಕಂಪನಿಗಳು ವಿಮಾನಯಾನ ಸೇವೆ ಒದಗಿಸುತ್ತಿವೆ. 'ಫ್ಲೈ ಬಿಗ್' ಹೆಸರಿನ ಪ್ರಾದೇಶಿಕ ವಿಮಾನಯಾನ ಕಂಪನಿಯು ಅಕ್ಟೋಬರ್‌ನಿಂದ ತನ್ನ ಕಾರ್ಯಾಚರಣೆಗಳನ್ನು ಅಮಾನತಿನಲ್ಲಿ ಇರಿಸಿದೆ.

ಇಂಡಿಗೊ ಮತ್ತು ಏರ್ ಇಂಡಿಯಾ ಸಮೂಹ (ಏರ್ ಇಂಡಿಯಾ ಹಾಗೂ ಏರ್ ಇಂಡಿಯಾ ಎಕ್ಸ್‌ಪ್ರೆಸ್) ಒಟ್ಟಾಗಿ ದೇಶದ ಮಾರುಕಟ್ಟೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚಿನ ಪಾಲು ಹೊಂದಿವೆ. ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಮಾರುಕಟ್ಟೆಯಲ್ಲಿ ಎರಡೇ ಕಂಪನಿಗಳು ಅಧಿಪತ್ಯ ಹೊಂದಿವೆ ಎಂಬ ಕಳವಳವು ಈ ತಿಂಗಳ ಆರಂಭದಲ್ಲಿ ತೀವ್ರವಾಗಿ ವ್ಯಕ್ತವಾಗಿತ್ತು.

ಶೇ 65ಕ್ಕಿಂತ ಹೆಚ್ಚಿನ ಮಾರುಕಟ್ಟೆ ಪಾಲು ಹೊಂದಿರುವ ಇಂಡಿಗೊ ಕಂಪನಿಯ ಕಾರ್ಯಾಚರಣೆಯಲ್ಲಿನ ಅಡಚಣೆಗಳಿಂದ ಭಾರಿ ಸಂಖ್ಯೆಯ ಪ್ರಯಾಣಿಕರಿಗೆ ಸಮಸ್ಯೆ ಎದುರಾಗಿತ್ತು. ಇದು ಈ ಪ್ರಮಾಣದ ಕಳವಳಕ್ಕೆ ದಾರಿ ಮಾಡಿಕೊಟ್ಟಿತ್ತು.

'ಕಳೆದ ಒಂದು ವಾರದಲ್ಲಿ ನಾನು ಹೊಸ ವಿಮಾನಯಾನ ಕಂಪನಿಗಳ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದೇನೆ. ಶಂಖ ಏರ್, ಅಲ್ ಹಿಂದ್ ಏರ್ ಮತ್ತು ಫ್ಲೈಎಕ್ಸ್‌ಪ್ರೆಸ್ ಕಂಪನಿಗಳು ಗಗನಕ್ಕೆ ನೆಗೆಯುವ ಆಕಾಂಕ್ಷೆಯನ್ನು ಹೊಂದಿವೆ. ಶಂಖ ಏರ್ ಕಂಪನಿಗೆ ಸಚಿವಾಲಯದ ನಿರಾಕ್ಷೇಪಣಾ ಪತ್ರ ಈಗಾಗಲೇ ದೊರೆತಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ ನಾಯ್ಡು ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಉಡಾನ್ ಯೋಜನೆಯು ಸಣ್ಣ ಕಂಪನಿಗಳಾದ ಸ್ಟಾರ್ ಏರ್, ಇಂಡಿಯಾ ಒನ್ ಏರ್ ಮತ್ತು ಫ್ಲೈ91 ಕಂಪನಿಗಳಿಗೆ ಪ್ರಾದೇಶಿಕ ಸಂಪರ್ಕ ಕಲ್ಪಿಸುವ ವಿಚಾರದಲ್ಲಿ ಮುಖ್ಯ ಪಾತ್ರ ವಹಿಸಲು ನೆರವಾಗಿದೆ ಎಂದು ನಾಯ್ಡು ಹೇಳಿದ್ದಾರೆ.

ಕಳೆದ ಕೆಲವು ವರ್ಷಗಳಲ್ಲಿ ಗೋ ಫಸ್ಟ್ ಮತ್ತು ಜೆಟ್ ಏರ್‌ವೇಸ್ ಸಾಲದ ಸುಳಿಗೆ ಸಿಲುಕಿ ಕಾರ್ಯಾಚರಣೆ ಸ್ಥಗಿತಗೊಳಿಸಿವೆ.

2026ರಲ್ಲಿ ಶಂಖ ಏರ್ ಕಾರ್ಯಾಚರಣೆ ಆರಂಭ?

ನವದೆಹಲಿ (ಪಿಟಿಐ): ಶಂಖ ಏರ್ ವಿಮಾನಯಾನ ಕಂಪನಿಯು 2026ರ ಮೊದಲ ತ್ರೈಮಾಸಿಕದಲ್ಲಿ ಸೇವೆ ಆರಂಭಿಸುವ ನಿರೀಕ್ಷೆ ಇದೆ.

ಬುಧವಾರ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಶಂಖ ಏವಿಯೇಷನ್ ಕಂಪನಿಯು, ತನ್ನ ವಿಮಾನಗಳು ಈಗ ತಾಂತ್ರಿಕ ಪರಿಶೀಲನೆಯ ಹಂತದಲ್ಲಿವೆ ಎಂದು ತಿಳಿಸಿದೆ.

ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ ನಾಯ್ಡು ಅವರನ್ನು ಸೋಮವಾರ ಭೇಟಿ ಮಾಡಿರುವ ಶಂಖ ಏವಿಯೇಷನ್ ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶರವಣ್ ಕುಮಾರ್ ವಿಶ್ವಕರ್ಮ ಅವರು ಕಂಪನಿಯ ಯೋಜನೆಗಳ ಬಗ್ಗೆ ವಿವರಣೆ ನೀಡಿದ್ದಾರೆ.

ಮುಂದಿನ ಎರಡು ಅಥವಾ ಮೂರು ವರ್ಷಗಳಲ್ಲಿ ಕಂಪನಿಯು ಗರಿಷ್ಠ 25 ವಿಮಾನಗಳನ್ನು ಹೊಂದುವ ಗುರಿಯನ್ನು ಇಟ್ಟುಕೊಂಡಿದೆ.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಹೊಳಲ್ಕೆರೆ	ಇತರ	20000-30000
	ರಾಶಿ	51899-55600
ಹೊನ್ನಾಳಿ	ಇಡಿ	24400-27200
	ರಾಶಿ	55119-55119
	ಸಿಪ್ಪೆಗೋಟು	10000-10000
ಕುಮಟಾ	ಚಾಲಿ	42389-47101
	ಚಿಪ್ಪು	27029-35029
	ಕೋಕ	12089-30009
	ಫ್ಯಾಕ್ಟರಿ	9099-24829
	ಹೊಸಚಾಲಿ	33869-39129
ಪುತ್ತೂರು	ಕೋಕ	20000-35000
	ಹೊಸತು	26000-41500
	ಹಳತು	40000-53000
ಸುಳ್ಯ	ಕೋಕ	18000-30000
	ಹೊಸತು	30500-41500
ಶಿವಮೊಗ್ಗ	ಸರಕು/ಹಸ	73629-83700
	ಬೆಟ್ಟೆ	56100-65801
	ರಾಶಿಇಡಿ	45000-56096
	ಗೊರಬಲು	19000-40899

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27,000-27,500
ದಾವಣಗೆರೆ	₹11,800-11,800

ಈರುಳ್ಳಿ ಧಾರಣೆ
(ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1400-2800
ಮಧ್ಯಮ	₹1000-1400
ಸಣ್ಣ	₹200-1000

ಮುಂಬೈ ಧಾರಣೆ (ಶೇಂಗಾ)
24-12-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,35,500 (1,35,600)
ಬೆಳ್ಳಿ ಕೆ.ಜಿಗೆ	2,18,000 (2,12,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈಂಡ್)	₹1570 (1570)
ಸೋಯಾ (ರಿಫೈಂಡ್)	₹1275 (1270)
ಸೂರ್ಯಕಾಂತಿ (ರಿಫೈಂಡ್)	₹1485 (1485)
ಪಾಮೋಲಿನ್	₹1245 (1245)

ಟ್ರಂಪ್ ಆದೇಶ ಎತ್ತಿ ಹಿಡಿದ ಫೆಡರಲ್ ನ್ಯಾಯಾಲಯ

ವಾಷಿಂಗ್ಟನ್ (ಎಎಫ್‌ಪಿ): ಎಚ್-1ಬಿ ವೀಸಾಕ್ಕಾಗಿ 1ಲಕ್ಷ ಡಾಲರ್ ಶುಲ್ಕ ಪಾವತಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿದ್ದ ಆದೇಶವನ್ನು ಫೆಡರಲ್ ನ್ಯಾಯಾಲಯವು ಎತ್ತಿ ಹಿಡಿದಿದೆ.

ಈ ಹಿಂದಿನ ಪ್ರಕ್ರಿಯೆಯು, ಅಮೆರಿಕದ ವಹಿವಾಟು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಾಕಷ್ಟು ಹೊಡೆತ ನೀಡುತ್ತಿತ್ತು ಎಂಬ ಸರ್ಕಾರದ ವಾದಕ್ಕೆ ಮನ್ನಣೆಯನ್ನು ನೀಡಿದೆ.

'ದೇಶದ ಆರ್ಥಿಕ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿನ ಸಮಸ್ಯೆಯ ಪರಿಹಾರಕ್ಕಾಗಿ ತೀರ್ಮಾನ ತೆಗೆದುಕೊಳ್ಳಲು ಅಮೆರಿಕದ ಅಧ್ಯಕ್ಷರು ಶಾಸನಬದ್ಧ ಅಧಿಕಾರವನ್ನು ಹೊಂದಿದ್ದಾರೆ' ಎಂದು ಜಿಲ್ಲಾ ನ್ಯಾಯಾಧೀಶ ಬೆರಿಲ್ ಹೋವೆಲ್ ಅವರು 56 ಪುಟಗಳ ತೀರ್ಪಿನಲ್ಲಿ ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ.

ಸುದ್ದಿ 2 ನಿಮಿಷ

ಚೆಕ್ ತ್ವರಿತ ವಿಲೇವಾರಿ: ಅನುಷ್ಠಾನ ಮುಂದೂಡಿಕೆ

ಮುಂಬೈ/ಬೆಂಗಳೂರು: ಚೆಕ್‌ಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಎರಡನೆಯ ಹಂತದ ಅನುಷ್ಠಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದೂಡಿದೆ. ತಮ್ಮ ಕಾರ್ಯಾಚರಣೆಯನ್ನು ಇನ್ನಷ್ಟು ಸುಧಾರಿಸಿಕೊಳ್ಳಲು ಬ್ಯಾಂಕ್‌ಗಳಿಗೆ ಅವಕಾಶ ನೀಡುವ ಉದ್ದೇಶದಿಂದ ಆರ್‌ಬಿಐ ಈ ಕ್ರಮ ಕೈಗೊಂಡಿದೆ.

ಎರಡನೆಯ ಹಂತವನ್ನು ಬ್ಯಾಂಕ್‌ಗಳು ಜನವರಿ 3ರಿಂದ ಅನುಷ್ಠಾನಕ್ಕೆ ತರಬೇಕಿತ್ತು. ಆದರೆ ಅಕ್ಟೋಬರ್ 4ರಿಂದ ಜಾರಿಗೆ ಬಂದ ಮೊದಲ ಹಂತದ ಅನುಷ್ಠಾನದಲ್ಲಿಯೇ ಕೆಲವು ಸಮಸ್ಯೆಗಳು ತಲೆದೋರಿದ್ದವು.

'ಮುಂದಿನ ಸೂಚನೆ ಬರುವವರೆಗೆ ಎರಡನೆಯ ಹಂತದ ಅನುಷ್ಠಾನವನ್ನು ಮುಂದಕ್ಕೆ ಹಾಕಲಾಗಿದೆ. ಬ್ಯಾಂಕ್‌ಗಳಿಗೆ ತಮ್ಮ ಕಾರ್ಯಾಚರಣೆಗಳನ್ನು ಸುಧಾರಿಸಿಕೊಳ್ಳಲು ಅವಕಾಶ ನೀಡಲು ಹೀಗೆ ಮಾಡಲಾಗಿದೆ' ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ಮೊದಲ ಹಂತದ ಅನುಷ್ಠಾನ ಶುರುವಾಗಿ ತಿಂಗಳು ಕಳೆದ ನಂತರವೂ ಚೆಕ್ ತ್ವರಿತವಾಗಿ ವಿಲೇವಾರಿ ಆಗುವ ಸೌಲಭ್ಯ ಸರಿಯಾಗಿ ಲಭ್ಯವಾಗುತ್ತಿರಲಿಲ್ಲ. ವ್ಯವಸ್ಥೆಯಲ್ಲಿ ದೋಷಗಳು ನಿವಾರಣೆ ಆಗಿರಲಿಲ್ಲ.

'ಚೆಕ್ ಸಲ್ಲಿಸಿ ಹಲವು ದಿನಗಳು ಕಳೆದರೂ ಹಣದ ವರ್ಗಾವಣೆ ಆಗದಿರುವ ನಿದರ್ಶನಗಳು ಇವೆ. ಈ ರೀತಿ ಆಗಿರುವುದಕ್ಕೆ ತಾಂತ್ರಿಕ ದೋಷ ಕಾರಣ ಎಂದು ಬ್ಯಾಂಕಿಂಗ್ ವ್ಯವಸ್ಥೆಯ ಪ್ರತಿನಿಧಿಗಳು ಹೇಳುತ್ತಿದ್ದಾರೆ' ಎಂಬ ದೂರುಗಳು ನವೆಂಬರ್ ಮೊದಲ ವಾರದಲ್ಲಿ ಇದ್ದವು.

'ಅಂತರ್‌ಬ್ಯಾಂಕ್ ವಹಿವಾಟು ಅನುಮೋದನೆಯಲ್ಲಿ ಸಮಸ್ಯೆ ಆಗುತ್ತಿದೆ. ₹10 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಚೆಕ್‌ಗಳನ್ನು ಮಾನ್ಯ ಮಾಡುವಲ್ಲಿ ಸಮಸ್ಯೆ ಇದೆ. ಆದರೆ ಅದಕ್ಕಿಂತ ಕಡಿಮೆ ಮೊತ್ತದ ಚೆಕ್‌ಗಳನ್ನು ಮಾನ್ಯ ಮಾಡುವ ಕೆಲಸವು ಬೇಗನೆ ಆಗುತ್ತಿದೆ' ಎಂದು ಆಗ ಸರ್ಕಾರಿ ಬ್ಯಾಂಕ್ ಒಂದರ ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂದು ಷರತ್ತಿನೊಂದಿಗೆ 'ಪ್ರಜಾವಾಣಿ'ಗೆ ತಿಳಿಸಿದ್ದರು.

ಡಿಸೆಂಬರ್ ತ್ರೈಮಾಸಿಕದಲ್ಲಿ ಮನೆ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಮನೆಗಳ ಮಾರಾಟ ಪ್ರಮಾಣವು ದೇಶದ ಪ್ರಮುಖ 9 ನಗರಗಳಲ್ಲಿ ಶೇಕಡ 16ರಷ್ಟು ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ರಿಯಲ್ ಎಸ್ಟೇಟ್ ದತ್ತಾಂಶ ವಿಶ್ಲೇಷಣಾ ಕಂಪನಿ ಪ್ರಾಪ್‌ಈಕ್ವಿಟಿ ಹೇಳಿದೆ.

ಬೇಡಿಕೆ ಕಡಿಮೆ ಆಗಿರುವುದು ಹಾಗೂ ಹೊಸ ಮನೆಗಳ ನಿರ್ಮಾಣವು ಕಡಿಮೆ ಆಗಿರುವುದು ಮಾರಾಟ ಇಳಿಕೆಗೆ ಕಾರಣ ಎಂದು ಅದು ಹೇಳಿದೆ.

2021ರ ಜುಲೈ-ಸೆಪ್ಟೆಂಬರ್ ಅವಧಿಯ ನಂತರ ಇದು ಅತ್ಯಂತ ಕಡಿಮೆ ಪ್ರಮಾಣದ ಮಾರಾಟ ಆಗಲಿದೆ ಎಂದು ಕೂಡ ಹೇಳಿದೆ.

ಈ ವರ್ಷದ ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ 9 ಪ್ರಮುಖ ನಗರಗಳಲ್ಲಿ ಮನೆಗಳ ಮಾರಾಟವು 98,019ಕ್ಕೆ ಇಳಿದಿದೆ. ಇದು ಕಳೆದ ವರ್ಷದ ಇದೇ ಅವಧಿಯಲ್ಲಿ 1.16 ಲಕ್ಷದಷ್ಟಿತ್ತು ಎಂದು ಪ್ರಾಪ್‌ಈಕ್ವಿಟಿ ತಿಳಿಸಿದೆ.

ಹೌಸ್ ಆಫ್ ಲಾರ್ಡ್ಸ್: ಭಾರತ ಮೂಲದ ನಾಲ್ವರಿಗೆ ಸ್ಥಾನ

ಲಂಡನ್ (ಪಿಟಿಐ): ಪ್ರಸಿದ್ಧ ಐವಿಎಫ್ ವೈದ್ಯೆ, 'ಕ್ರಿಯೇಟ್ ಫರ್ಟಿಲಿಟಿ'ಯ ಸಂಸ್ಥಾಪಕಿ ಪ್ರೊ. ಗೀತಾ ನರಗುಂದ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಭಾರತ ಮೂಲದ ನಾಲ್ವರು ಬ್ರಿಟನ್‌ನ 'ಹೌಸ್ ಆಫ್ ಲಾರ್ಡ್ಸ್'ನಲ್ಲಿ ಸ್ಥಾನ ಪಡೆದಿದ್ದಾರೆ.

ಗೀತಾ ಅವರ ಜತೆಗೆ, 'ಎಐ ಪಾಲಿಸಿ ಲ್ಯಾಬ್ಸ್'ನ ಸಂಸ್ಥಾಪಕ ಉದಯ್ ನಾಗರಾಜು, ಇಂಗ್ಲೆಂಡ್‌ನ ವೆಸ್ಟ್ ಮಿಡ್‌ಲ್ಯಾಂಡ್‌ನಲ್ಲಿ ಯುರೋಪಿಯನ್ ಪಾರ್ಲಿಮೆಂಟ್‌ನ ಮಾಜಿ ಸದಸ್ಯೆ ನೀನಾ ಗಿಲ್, ವಾಯವ್ಯ ಲಂಡನ್‌ನ ಬ್ರೆಂಟ್ ಕೌನ್ಸಿಲರ್ ಶಮಾ ಟ್ಯಾಟ್ಲರ್ ಅವರನ್ನು ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಲೇಬರ್ ಪಕ್ಷದ ವತಿಯಿಂದ ನಾಮನಿರ್ದೇಶನ ಮಾಡಿದ್ದಾರೆ.

ಈ ತಿಂಗಳ ಆರಂಭದಲ್ಲಿ ಕಿಂಗ್ ಚಾರ್ಲ್ಸ್-3 ಅವರು ಬ್ರಿಟನ್ ಸಂಸತ್ತಿನ ಮೇಲ್ಮನೆಗೆ ಈ ನಾಲ್ವರನ್ನು ನೇಮಕ ಮಾಡಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಪ್ರೊ. ಗೀತಾ ನರಗುಂದ ಅವರು ಶೈಕ್ಷಣಿಕ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದು, ಲಿಂಗ ಸಮಾನತೆಯ ಪ್ರಚಾರಕಿಯೂ ಆಗಿದ್ದಾರೆ. 2025ರ ಜುಲೈವರೆಗೆ ಕ್ರಿಯೇಟ್ ಫರ್ಟಿಲಿಟಿಯ ವೈದ್ಯಕೀಯ ನಿರ್ದೇಶಕಿಯಾಗಿದ್ದರು. ಅವರು ಹೆಲ್ತ್ ಈಕ್ವಾಲಿಟಿ ಫೌಂಡೇಷನ್‌ನ ಸ್ಥಾಪಕಿ ಮತ್ತು ಟ್ರಸ್ಟಿ. ಅಲ್ಲದೆ ಆರೋಗ್ಯ ಅಸಮಾನತೆಗಳನ್ನು ಹೋಗಲಾಡಿಸಲು ಮತ್ತು ಜಾಗತಿಕವಾಗಿ ಸಂತಾನೋತ್ಪತ್ತಿ ಆಯ್ಕೆಗಳು ಹಾಗೂ ಆರೈಕೆ ಕ್ಷೇತ್ರವನ್ನು ಸುಧಾರಿಸಲು ಶ್ರಮಿಸಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಲೇಬರ್ ಪಕ್ಷದ 25 ನಾಮನಿರ್ದೇಶನಗಳಲ್ಲಿ ಭಾರತೀಯ ಮೂಲದ ನಾಲ್ವರು ಸ್ಥಾನ ಪಡೆದಿದ್ದಾರೆ.

'ಏರ್ ಪ್ಯೂರಿಫೈರ್ ಮೇಲಿನ ಜಿಎಸ್‌ಟಿ ತಗ್ಗಿಸಿ'

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಹದಗೆಟ್ಟಿರುವುದರಿಂದ ಏರ್ ಪ್ಯೂರಿಫೈರ್‌ಗಳ ಮೇಲಿನ ಜಿಎಸ್‌ಟಿಯನ್ನು ತಗ್ಗಿಸುವ ಅಥವಾ ತೆಗೆದುಹಾಕುವ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳುವಂತೆ ಜಿಎಸ್‌ಟಿ ಮಂಡಳಿಗೆ ದೆಹಲಿ ಹೈಕೋರ್ಟ್ ಬುಧವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೇಲಾ ಅವರ ನೇತೃತ್ವದ ನ್ಯಾಯಪೀಠವು, ರಜಾಪೀಠದ ಎದುರು ಡಿಸೆಂಬರ್ 26ರಂದು ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಿತು.

ಮಂಡಳಿಯು ಯಾವಾಗ ಸಭೆ ಸೇರಿ ಈ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎನ್ನುವುದನ್ನು ತಿಳಿಸುವಂತೆ ನ್ಯಾಯಪೀಠ ಹೇಳಿತು.

'ಜಿಎಸ್‌ಟಿ ಮಂಡಳಿಯು ರೂಪುರೇಷೆ ಮತ್ತು ಸಂರಚನೆಯ ಬಗ್ಗೆ ನಮಗೆ ಅರಿವಿದೆ. ಆದರೆ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟ ಕುಸಿದಿರುವುದನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಆದಷ್ಟು ಶೀಘ್ರವಾಗಿ ಮಂಡಳಿಯು ಸಭೆ ಸೇರುವ ಅಗತ್ಯವಿದೆ' ಎಂದು ಹೇಳಿತು. ಬಳಿಕ ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಏರ್ ಪ್ಯೂರಿಫೈರ್‌ಗಳನ್ನು 'ವೈದ್ಯಕೀಯ ಸಲಕರಣೆ'ಗಳೆಂದು ವರ್ಗೀಕರಿಸಲು ಮತ್ತು ಜಿಎಸ್‌ಟಿಯನ್ನು ತಗ್ಗಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಕೋರ್ಟ್ ವಿಚಾರಣೆ ನಡೆಸಿತು. ಸದ್ಯ ಏರ್ ಪ್ಯೂರಿಫೈರ್‌ಗಳಿಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ.

ಅಧಿಕಾರಿಗಳ ವಿರುದ್ಧ ಅಸಮಾಧಾನ

ಏರ್ ಪ್ಯೂರಿಫೈರ್‌ಗಳ ಮೇಲಿನ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ನ್ಯಾಯಾಲಯವು ಅಸಮಾಧಾನ ವ್ಯಕ್ತಪಡಿಸಿತು.

ಒಂದಿಷ್ಟು ಅವಧಿಯವರೆಗೆ ತಾತ್ಕಾಲಿಕವಾಗಿ ತೆರಿಗೆ ವಿನಾಯಿತಿ ನೀಡಬಹುದೇ ಎಂಬ ಬಗ್ಗೆ ಅಧಿಕಾರಿಗಳಿಂದ ಸಲಹೆ ಪಡೆಯಿರಿ ಎಂದು ಕೇಂದ್ರದ ಪರ ವಕೀಲರಿಗೆ ತಿಳಿಸಿತು.

'ಪ್ರತಿಯೊಬ್ಬರ ನಾಗರಿಕರಿಗೂ ಶುದ್ಧ ಗಾಳಿ ಬೇಕು. ಅಧಿಕಾರಿಗಳಿಂದ ಅದನ್ನು ನೀಡಲು ಸಾಧ್ಯವಿಲ್ಲ. ಕನಿಷ್ಠ ಏರ್ ಪ್ಯೂರಿಫೈರ್‌ಗಳನ್ನಾದರೂ ನೀಡಿ' ಎಂದು ತರಾಟೆಗೆ ತೆಗೆದುಕೊಂಡಿತು.

ಅರ್ಜಿದಾರರ ಪರ ವಕೀಲ ಕಪಿಲ್ ಮದನ್ ಅವರು, 'ವಾಯು ಮಾಲಿನ್ಯದಿಂದ ಉಂಟಾದ ತುರ್ತು ಬಿಕ್ಕಟ್ಟಿನ ಸಂದರ್ಭದಲ್ಲೂ ಏರ್ ಪ್ಯೂರಿಫೈರ್‌ಗಳನ್ನು ಐಷಾರಾಮಿ ವಸ್ತುಗಳಂತೆ ಪರಿಗಣಿಸುವುದು ಸರಿಯಲ್ಲ' ಎಂದು ಹೇಳಿದರು.

ಬೆತ್ಲೆಹೇಮಿನ ಮಂಗಳಶ್ರೀರಾತ್ರಿ

• ಸಿ. ಮರಿಜೋಸೆಫ್

ಆ ರಾತ್ರಿ ಬೆಳದಿಂಗಳಲ್ಲದಿದ್ದರೂ, ಆಕಾಶವೇ ಒಂದು ದಿವ್ಯ ವೇದಿಕೆಯಂತೆ ಕಂಗೊಳಿಸುತ್ತಿತ್ತು. ನಕ್ಷತ್ರಗಳ ಹರಿವಿನ ಹಾಲುಹಾದಿ ಇಸ್ರೇಲಿನ ಮರಳು ದಿಬ್ಬಗಳ ಮೇಲೆ, ಕಣಿವೆಗಳಲ್ಲಿ ಹರಡಿದ್ದ ಹಳ್ಳಿಗಾಡಿನ ಮೇಲೆ ಬೆಳ್ಳಿಯ ಕಿರಣಗಳನ್ನು ಸೂಸಿತ್ತು. ಸಾಮಾನ್ಯ ದಿನಗಳಲ್ಲಿ ಅತಿಥಿಗಳನ್ನೇ ಕಾಣದ ಬೆತ್ಲೆಹೆಂ ಎಂಬ ಕುಗ್ರಾಮ — ಆ ದಿನ ಮಾತ್ರ ಜೀವಂತ ಸಮುದ್ರದಂತೆ ಭೋರ್ಗರೆಯುತ್ತಿತ್ತು. ಜನಗಣತಿಯ ನೆಪದಲ್ಲಿ ಎಲ್ಲರೂ ತಂತಮ್ಮ ಪೂರ್ವಜರ ನೆಲೆಗೆ ಮರಳಿದ್ದರಿಂದ, ದಾರಿಯಿಕ್ಕೆಲವೂ ಹಳೆಯ ಮುಖಗಳ ಮಿಲನ, ನಗು, ಸಂಭ್ರಮ, ಹಬ್ಬದ ಗದ್ದಲ. ಎಷ್ಟೋ ವರ್ಷಗಳ ನಂತರ ಹುಟ್ಟೂರಿಗೆ ಬಂದಿದ್ದರಿಂದ ಎಲ್ಲರೂ ಮುದಗೊಂಡಿದ್ದರು.

ಈ ನಡುವೆ, ತಾವು ಬದುಕು ಕಟ್ಟಿಕೊಂಡಿದ್ದ ತೊಂಬತ್ತು ಕಿಲೋಮೀಟರ್ ದೂರದ 'ನಜರೆತ್' ಎಂಬ ಪಟ್ಟಣದಿಂದ ಬಂದು ದಣಿದಿದ್ದ ತುಂಬುಗರ್ಭಿಣಿ ಮರಿಯಾ ಮತ್ತು ಜೋಸೆಫ್ — ಕತ್ತೆಯ ಮೇಲೆ ನಡೆಸಿದ ಕಷ್ಟಯಾತ್ರೆಯ ನಂತರ — ಛತ್ರದ ಬಾಗಿಲು ತಟ್ಟಿದರು. ತುಂಬು ಗರ್ಭಿಣಿಯಾದ ಮರಿಯಳ ಸ್ಥಿತಿ ಎಲ್ಲರ ಕಣ್ಣಿಗೂ ಕಾಣುತ್ತಿತ್ತು. ಆದರೂ ಕೊಠಡಿಗಳೆಲ್ಲ ತುಂಬಿದ್ದವು. ಛತ್ರದ ಮಾಲಿಕನಿಗೋ ಇದ್ದ ಅತಿಥಿಗಳನ್ನು ನೋಡಿಕೊಳ್ಳುವುದೇ ಸಾಕುಸಾಕಾಗಿತ್ತು. ಪವಿತ್ರ ಬೈಬಲ್‌ನಲ್ಲಿ ಹೇಳುವಂತೆ 'ಛತ್ರದಲ್ಲಿ ಅವರಿಗೆ ಸ್ಥಳ ದೊರೆಯಲಿಲ್ಲ'.

ತಾಯಿಯ ಗರ್ಭದಲ್ಲಿರುವಾಗಲೇ ಯೇಸುವು 'ಸತ್ರದಲ್ಲಿ ನೇಮದಿಂದಿ ರಲಿಕೆಡೆಯಿಂತು' ಎಂಬ ನೆಲದ ನಿಯಮಕ್ಕೆ ತಲೆಬಾಗಿದ. ಆ ದಂಪತಿಗೆ ಆ ರಾತ್ರಿ ದೊರೆತ ಏಕೈಕ ಆಶ್ರಯ — ದನದಕೊಟ್ಟಿಗೆ.

ಮಧ್ಯರಾತ್ರಿ ನಿಶ್ಶಬ್ದದಲ್ಲಿ ಜಗತ್ತನ್ನೇ ಬದಲಿಸುವ ಕ್ಷಣ ಜನಿಸಿತು — ಶಕಪುರುಷ ಯೇಸು ಜನಿಸಿದ. ಹಸುಕರುಗಳ ನಡುವೆ ಚಿಗುರು ಹುಲ್ಲಿನ ಮೃದುವಾದ ಮೆತ್ತೆಯ ಗೋದಲಿಯಲ್ಲಿ ಯೇಸು ಪವಡಿಸಿದಾಗ ಮೋಹನರಾಗ ಮಾತ್ರವಲ್ಲ, ಸ್ವರ್ಗಕಿನ್ನರರ ದಿವ್ಯಗಾನವೇ ಆ ಕೊಟ್ಟಿಗೆಯ ಸುತ್ತ ಹರಡಿತು. ಆಕಾಶದಲ್ಲಿ ತೇಜಸ್ವಿಯಾದ ನಕ್ಷತ್ರವೊಂದು ಮಿನುಗಿ ಬುವಿಯತ್ತ ದಾರಿ ತೋರಿಸಿತು. ಔತಣಕೂಟಗಳಲ್ಲಿ 'ಮಜಾ' ಮಾಡುತ್ತಿದ್ದವರಿಗೆ ಹಸುಕಂದನ ಅಳುವಾಗಲೀ ದೇವಗಾನವಾಗಲೀ, ಏನೂ ಕೇಳಿಸಲಿಲ್ಲ; ಆದರೆ ಬಯಲಿನಲ್ಲಿ ಕುರಿಗಳನ್ನು ಕಾಯುತ್ತಿದ್ದ ಸೂರಿಲ್ಲದ ಕುರುಬರಿಗೆ ಮಾತ್ರ ಸುವಾಸಿತ ತಂಬೆಲರು ಕುಳಿರ್ಗಾಳಿಯ ಆಲಾಪದೊಂದಿಗೆ ಆ ದೇವಗಾನ ಕೇಳಿಸಿತು. 'ಮಹೋನ್ನತದಲ್ಲಿ ದೇವರಿಗೆ ಮಹಿಮೆ, ಬುವಿಯಲ್ಲಿ ಒಳ್ಳೆಯ ಮನಸ್ಸಿನವರಿಗೆ ಶಾಂತಿ' ಎಂಬ ಘೋಷಣೆ ಮೈಮನಗಳನ್ನು ಪುಳಕಗೊಳಿಸಿತು.

ಇಂದು ಕ್ರಿಸ್‌ಮಸ್ ಹಬ್ಬ

ಅಷ್ಟೇ ಅಲ್ಲ; ದೂರದ ಪೂರ್ವ ದೇಶದಲ್ಲಿದ್ದ ಖಗೋಳಜ್ಞಾನಿಗಳೂ ಆ ಮಿನುಗುವ ನಕ್ಷತ್ರದ ಸಂದೇಶವನ್ನು ಓದಿ ಅರ್ಥೈಸಿ ನಿಬ್ಬೆರಗಾದರು. ಕೂಡಲೇ ಅವರು ಗಣಿತ ಲೆಕ್ಕಿಸಿ, ನಿಖರ ದಿಕ್ಕು ಹಿಡಿದು, ಜಗದೋದ್ಧಾರಕನನ್ನು ಗೌರವಿಸಲು ಪಯಣ ಹೊರಟರು. ಅವರ ಒಂಟೆಗಳು ಮರಳ ಮೇಲೆ ಹೆಜ್ಜೆ ಹಾಕುತ್ತ, ಒಂದು ಹೊಸ ಯುಗದ ಉದಯವನ್ನು ಸಾರುತ್ತಿದ್ದವು.

ಇಂದು ನಮ್ಮ ಮನೆಗಳಲ್ಲಿ ಕಟ್ಟುವ ಕೊಟ್ಟಿಗೆಗಳು — ಹಸು, ಕರು, ಕುರಿಮರಿ, ಗೋದಲಿಯ ಮೇಲೆ ಯೇಸು ಮಲಗಿರುವ ದೃಶ್ಯ — ಇವೆಲ್ಲವೂ ಸಾವಿರಾರು ವರ್ಷಗಳ ಹಿಂದಿನ ಆ ಅಮೃತರಾತ್ರಿಯ ಮರುನಿರ್ಮಾಣ. ಕುರುಬರ ಮೊಗದ ವಿಸ್ಮಯ, ಮರಿಯಳ ಸ್ನಿಗ್ಧ ನಗು, ಜ್ಯೋತಿಷಿಗಳ ದೀರ್ಘಯಾನ — ಎಲ್ಲವೂ ಮನೆಯ ಜಗುಲಿಗಳಲ್ಲಿ ಪುನಃ ಜೀವಂತವಾಗುತ್ತವೆ. ನಾವು ಕಟ್ಟುವ ಕೊಟ್ಟಿಗೆಯಲ್ಲಿ ನವಿರಾಗಿ ನಿರ್ಮಿಸುವ ಪ್ರತಿ ದೃಶ್ಯವೂ ಆ ಪವಿತ್ರರಾತ್ರಿಯ ನೆನಪೇ ಆಗಿದೆ.

ಬೆತ್ಲೆಹೇಮಿನ ಆ ರಾತ್ರಿಯು ಒಂದು ಕಥನವಲ್ಲ — ಮನುಜಪ್ರೀತಿಯ ವಿಶ್ವಶಾಂತಿಯ ಹೊಂಬೆಳಕಿನ ಹುಟ್ಟು. ಮತ್ತು ಆ ಬೆಳಕು ವಿಶ್ವಮಾನವನ ರೂಪದಲ್ಲಿ ಇಂದಿಗೂ ಜಗತ್ತನ್ನು ಬೆಳಗಿಸುತ್ತಲೇ ಇದೆ. ವಿಶ್ವದ ಮಹಾಮಹಿಮರು ಮಹಾತ್ಮರು ಆ ಬೆಳಕಿನತ್ತಲೇ ಜಗತ್ತನ್ನು ಮುನ್ನಡೆಸುತ್ತಿದ್ದಾರೆ. ಕ್ರಿಸ್ತಜಯಂತಿಯ ಈ ಶುಭಸಂದರ್ಭದಲ್ಲಿ ಧರೆಯಲ್ಲಿ ಯುದ್ಧಗಳು ದ್ವೇಷಗಳು ಅಳಿದು ಶಾಂತಿ ನೆಲೆಸಲೆಂದು, ಸೂರಿಲ್ಲದವರಿಗೆ ಸೂರು ದೊರೆಯಲೆಂದು ಹಾರೈಸೋಣ. ❖

ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್ ಇಂದಿನಿಂದ

ವಿಶ್ವಾಸ ಪಡೆಯಲು ಗುಕೇಶ್‌ಗೆ ಅವಕಾಶ

ದೋಹಾ (ಪಿಟಿಐ): ವಿಶ್ವ ಚಾಂಪಿಯನ್ ಅವರು ಗುರುವಾರ ದೋಹಾದಲ್ಲಿ ಆರಂಭವಾಗುವ ಫಿಡೆ ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಸಾಧನೆ ತೋರುವ ಮೂಲಕ ವರ್ಷವನ್ನು ಯಶಸ್ವಿಯಾಗಿ ಮುಗಿಸುವ ಅವಕಾಶ ಹೊಂದಿದ್ದಾರೆ. ಮಹಿಳಾ ವಿಭಾಗದಲ್ಲಿ ಕೋನೇರು ಹಂಪಿ ಪ್ರಶಸ್ತಿ ಉಳಿಸಿಕೊಳ್ಳುವ ಗುರಿಯಲ್ಲಿದ್ದಾರೆ.

ವರ್ಷಾಂತ್ಯದ ಈ ಪ್ರಮುಖ ಟೂರ್ನಿಯಲ್ಲಿ ಪ್ರಮುಖ ಆಟಗಾರರು ಭಾಗವಹಿಸುತ್ತಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್, ಅಮೆರಿಕದ ಫ್ಯಾಬಿಯಾನೊ ಕರುವಾನ, ವೆಸ್ಲಿ ಸೊ, ರಷ್ಯಾದ ಇಯಾನ್ ನಿಪೊಮ್‌ಮನಿಷಿ, ಭಾರತದ ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ನಿಹಾಲ್ ಸರೀನ್ ಅವರು ಓಪನ್ ವಿಭಾಗದಲ್ಲಿ ಕಣದಲ್ಲಿರುವ ಖ್ಯಾತನಾಮರು.

2023ರಲ್ಲಿ ಡಿಂಗ್ ಲಿರೆನ್ ಅವರನ್ನು ಸೋಲಿಸಿ ವಿಶ್ವ ಚಾಂಪಿಯನ್ ಆಗಿದ್ದ ಡಿ.ಗುಕೇಶ್ ಈ ವರ್ಷ ಅಷ್ಟೇನೂ ಗಮನ ಸೆಳೆದಿಲ್ಲ. ಪ್ರಜ್ಞಾನಂದ ಈ ಬಾರಿ ಅತಿ ಹೆಚ್ಚು ಯಶಸ್ಸು ಪಡೆದಿದ್ದಾರೆ.

ಭಾರತದ ಗ್ರ್ಯಾನ್‌ಮಾಸ್ಟರ್ ಗುಕೇಶ್ ಡಿ. ಪಿಟಿಐ ಚಿತ್ರ

ಮುಂದಿನ ವರ್ಷ ವಿಶ್ವ ಚಾಂಪಿಯನ್‌ಷಿಪ್ ನಿಗದಿಯಾಗಿದ್ದು, ಈ ಮಹತ್ವದ ಸ್ಪರ್ಧೆಗೆ ಆತ್ಮವಿಶ್ವಾಸ ಗಳಿಸುವ ದೃಷ್ಟಿಯಿಂದ ಗುಕೇಶ್ ಅವರಿಗೆ ಇದು ಮಹತ್ವದ ಟೂರ್ನಿ. ಗೋವಾದಲ್ಲಿ ಇತ್ತೀಚಿನ ವಿಶ್ವಕಪ್‌ನಲ್ಲಿ ಬೇಗ ಹೊರಬಿದ್ದು, ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುವ ಅವಕಾಶ ಕಳೆದುಕೊಂಡ 22 ವರ್ಷ ವಯಸ್ಸಿನ ಅರ್ಜುನ್ ಇರಿಗೇಶಿ ಅವರಿಗೂ ಇದು ಸ್ಫೂರ್ತಿ ಪಡೆದುಕೊಳ್ಳಲು ಅವಕಾಶ.

ಓಪನ್ ವಿಭಾಗದಲ್ಲಿ ಭಾರತದ 29 ಮಂದಿ ಕಣದಲ್ಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ವಿಶ್ವ ಕಪ್ ವಿಜೇತೆ ದಿವ್ಯಾ ದೇಶಮುಖ್ ಸೇರಿದಂತೆ 13 ಮಂದಿ ಪೈಪೋಟಿಯಲ್ಲಿದ್ದಾರೆ.

ಕಾರ್ಲ್‌ಸನ್ ಅವರು ಓಪನ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ – ಎರಡೂ ಟೂರ್ನಿಗಳಲ್ಲಿ (2881) ಅಗ್ರಶ್ರೇಯಾಂಕ ಪಡೆದಿದ್ದಾರೆ.

'ಬೂಮ್ರಾ, ಪಂತ್ ಕ್ಷಮೆ ಕೇಳಿದ್ದರು'

ಜೋಹಾನೆಸ್‌ಬರ್ಗ್ (ಪಿಟಿಐ): ಇತ್ತೀಚಿನ ಭಾರತ ಪ್ರವಾಸದ ವೇಳೆ ಅಭಿರುಚಿಹೀನ ಹೇಳಿಕೆ ನೀಡಿದ್ದಕ್ಕೆ ಜಸ್‌ಪ್ರೀತ್ ಬೂಮ್ರಾ ಮತ್ತು ರಿಷಭ್ ಪಂತ್ ತಮ್ಮ ಬಳಿ ಕ್ಷಮೆ ಕೇಳಿದ್ದರು ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಅವರು ಬಹಿರಂಗಪಡಿಸಿದ್ದಾರೆ. ಇದೇ ವೇಳೆ ತಂಡದ ಕೋಚ್ ಶುಕ್ರಿ ಕೊನ್ರಾಡ್ ಅವರು 'ಗ್ರೊವೆಲ್' ಪದ ಬಳಸಿದ್ದು ಸರಿಯಿರಲಿಲ್ಲ ಎಂದೂ ಬವುಮಾ ಹೇಳಿದ್ದಾರೆ.

ಒಂದೆರಡು ಹೇಳಿಕೆಗಳನ್ನು ಬಿಟ್ಟರೆ, ಸುಮಾರು ಒಂದೂವರೆ ತಿಂಗಳ ಸರಣಿಯು ಶಾಂತಿಯುತವಾಗಿ ನಡೆದಿತ್ತು. 25 ವರ್ಷಗಳ ನಂತರ ದಕ್ಷಿಣ ಆಫ್ರಿಕಾ ತಂಡವು ಭಾರತದಲ್ಲಿ ಟೆಸ್ಟ್ ಸರಣಿ ಜಯಿಸಿತ್ತು. ಆದರೆ ಭಾರತ ತಂಡವು ಏಕದಿನ ಮತ್ತು ಟಿ20 ಸರಣಿಯನ್ನು ಗೆದ್ದುಕೊಂಡಿತ್ತು.

ಮೊದಲ ಟೆಸ್ಟ್ ಪಂದ್ಯದ ವೇಳೆ ಈ ಬೂಮ್ರಾ ಮತ್ತು ಪಂತ್ ಅವರು ಬವುಮಾ ಅವರನ್ನು ಹಿಂದಿಯಲ್ಲಿ 'ಬೌನಾ' (ಕುಳ್ಳ) ಎಂದಿದ್ದರು.

'ಅವರಿಬ್ಬರು (ಪಂತ್ ಮತ್ತು ಬೂಮ್ರಾ) ಅವರ ಭಾಷೆಯಲ್ಲಿ ನನ್ನ ಬಗ್ಗೆ ಏನೊ ಹೇಳಿದ್ದರು. ದಿನದಾಟದ ಕೊನೆಗೆ ಇಬ್ಬರೂ ಬಂದು ಕ್ಷಮೆ ಕೇಳಿದರು. ಅವರು ಏನು ಅಂದಿದ್ದರು ಎಂದು ನನಗೆ ಗೊತ್ತಾಗಲಿಲ್ಲ. ದಿನದಾಟದ ನಂತರ ತಂಡದ ಮಾಧ್ಯಮ ಮ್ಯಾನೇಜರ್ ಬಳಿ ಅದೇನೆಂದು ಕೇಳಿ ತಿಳಿದುಕೊಂಡೆ' ಎಂದು ಬವುಮಾ ಹೇಳಿದ್ದಾರೆ.

ತೆಂಬಾ ಬವುಮಾ

ಈ ಹಿಂದೆ ಇಂಗ್ಲೆಂಡ್ ತಂಡದ ಟೋನಿ ಗ್ರೆಗ್ ಅವರು 1976ರಲ್ಲಿ ವೆಸ್ಟ್ ಇಂಡೀಸ್ ತಂಡದ ಎದುರು ಸರಣಿಯ ವೇಳೆ ಬಳಸಿದ 'ಕುಪ್ರಸಿದ್ಧ' ಗ್ರೊವೆಲ್ ಪದವನ್ನು ಕೊನ್ರಾಡ್ ಅವರು ಎರಡನೇ ಟೆಸ್ಟ್ ವೇಳೆ ಭಾರತ ತಂಡವ ವಿರುದ್ಧ ಬಳಸಿದ್ದರು. 'ಭಾರತ ತಂಡವನ್ನು ಅಡಿಯಾಳಾಗಿ ಮಾಡಲು ನಾವು ಬಯಸಿದ್ದೇವೆ' ಎಂದಿದ್ದರು. ಕೊನ್ರಾಡ್ ನಂತರ ಕ್ಷಮೆ ಕೇಳಿದ್ದರು. ಅವರು ಪದ ಪ್ರಯೋಗ ಮಾಡುವಾಗ ಎಚ್ಚರಿಕೆ ವಹಿಸಬೇಕಿತ್ತು ಎಂದು ಬವುಮಾ ಹೇಳಿದರು.

ಸುದೀಪ್

ಸುದೀಪ್ ನಟನೆಯ 'ಮಾರ್ಕ್' ಇಂದು (ಡಿ.25) ತೆರೆ ಕಂಡಿದೆ. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಬಗ್ಗೆ ಸುದೀಪ್ ಮಾತನಾಡಿದ್ದಾರೆ.

ಚಿತ್ರದ ಕಥೆಗೇ ಮಾರ್ಕ್

• ಅಭಿಲಾಷ್ ಪಿ.ಎಸ್.

• **ಕೆಲವು ತಿಂಗಳುಗಳಲ್ಲೇ ಈ ಸಿನಿಮಾ ಪೂರ್ಣಗೊಂಡಿದೆ...**

ಹೌದು. ಇದೊಂದು ಸವಾಲಿನ ಪಯಣವಾಗಿತ್ತು. ಪರೀಕ್ಷೆಯಂತೆ ಒಂದು ನಿಮಿಷವೂ ವ್ಯರ್ಥ ಮಾಡದೆ ಹೆಜ್ಜೆ ಇಟ್ಟಿದ್ದೆವು. ಸಿನಿಮಾದ ಗುಣಮಟ್ಟವನ್ನು ಕಾಪಾಡಿಕೊಳ್ಳುವುದೇ ಒತ್ತಡವಾಗಿತ್ತು. 120 ದಿನಗಳಲ್ಲಿ 107 ದಿನ ಈ ಸಿನಿಮಾಗಾಗಿ ಕೆಲಸ ಮಾಡಿದ್ದೆವು. ಇಷ್ಟು ಒತ್ತಡದಲ್ಲಿ ಕೆಲಸ ಮಾಡುವಾಗ ದೈಹಿಕವಾಗಿ, ಮಾನಸಿಕವಾಗಿ ಕುಗ್ಗುವುದು ಸಾಮಾನ್ಯ. ಹೀಗಾದಾಗ ಸಭೆ ನಡೆಸಿ ಉದ್ದೇಶವನ್ನು ನೆನಪಿಸಿದೆ. ಇದಾದ ಬಳಿಕ ಹಗಲು ರಾತ್ರಿ ಶೂಟಿಂಗ್ ನಡೆಯಿತು. ಇದು ಒಬ್ಬ ಸುದೀಪ್‌ನಿಂದ ಸಾಧ್ಯವಾಗಿದ್ದಲ್ಲ. ಇಷ್ಟೇ ಸಮಯದಲ್ಲಿ ಸಿನಿಮಾ ಮುಗಿಸಬೇಕು ಎನ್ನುವ ಒತ್ತಡ ಯಾರಿಂದಲೂ ಇರಲಿಲ್ಲ. ಅದು ನಮಗೆ ನಾವೇ ಹಾಕಿಕೊಂಡ ಗಡುವು ಆಗಿತ್ತು. ಇದಕ್ಕೆ ನಿರ್ಮಾಣ ಸಂಸ್ಥೆಯೂ ಜೊತೆಯಾಯಿತು. ಸೆನ್ಸಾರ್ ಆದ ಬಳಿಕ ಸಣ್ಣಪುಟ್ಟ ಕಟ್‌ಗಳನ್ನು ಹೇಳಿರುತ್ತಾರೆ. ಅದನ್ನು ಸರಿಪಡಿಸಬೇಕಾದರೆ ಒಂದು ಹರಿವು ಕಡಿತವಾಗುತ್ತದೆ. ಬ್ಯಾಗ್ರೌಂಡ್ ಸ್ಕೋರ್ ಕೂಡಾ ಬದಲಾಯಿಸಬೇಕಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಕಾನ್ಫರೆನ್ಸ್ ಕರೆಗಳಲ್ಲೇ ಮಾಡುತ್ತಿರಬೇಕಾದರೆ ಒಂದು ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಕೆಲಸ ಮಾಡಿದಂಥ ಅನುಭವವಾಗಿತ್ತು.

• **ಈ ಸಿನಿಮಾಗೆ ವಿಜಯ್ ಕಾರ್ತಿಕೇಯ ತಯಾರಿ ಹೇಗಿತ್ತು?**

'ಮ್ಯಾಕ್ಸ್' ಬಿಡುಗಡೆಗೂ ಮುನ್ನ ವಿಜಯ್ ಕಾರ್ತಿಕೇಯ ಅವರಿಗೆ ಕನ್ನಡದ ಬಗ್ಗೆ, ಕನ್ನಡದ ಪ್ರೇಕ್ಷಕರ ಬಗ್ಗೆ ಗೊತ್ತಿರಲಿಲ್ಲ. ಆದರೆ 'ಮ್ಯಾಕ್ಸ್' ಬಿಡುಗಡೆ ಬಳಿಕ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ವಿಜಯ್ ಪ್ರೇಕ್ಷಕರೊಂದಿಗೆ ಕುಳಿತು ಸಿನಿಮಾ ನೋಡಿದ್ದಾರೆ. ಇದರಿಂದ ಹಲವು ಪಾಠ ಕಲಿತಿದ್ದಾರೆ. ಇಷ್ಟೆಲ್ಲಾ ತಿಳಿದುಕೊಂಡು ತಮಿಳುನಾಡಿಗೆ ಹೋಗಿ ಮರಳಿ ಕನ್ನಡಕ್ಕೇ ಬಂದರು. 'ಮ್ಯಾಕ್ಸ್'ಗಿಂತ ಚೆನ್ನಾಗಿ ಹೋಂವರ್ಕ್ ಮಾಡಿಕೊಂಡೇ 'ಮಾರ್ಕ್' ತೆಗೆದುಕೊಂಡು ಬಂದಿದ್ದರು. ನಟ, ನಿರ್ದೇಶಕನಾಗಿ ಅವರೊಂದಿಗೆ ಹಲವು ವಿಷಯಗಳ ಬಗ್ಗೆ ಚರ್ಚಿಸಿ ಕೆಲವು ಸಲಹೆ ನೀಡಿದ್ದೇನಷ್ಟೇ.

• **ಈ ವೇಗದಲ್ಲಿ ಸಿನಿಮಾ ಮಾಡಿದರೆ ಆಗುವ ಲಾಭವೇನು?**

ಎಲ್ಲಾ ಸಿನಿಮಾಗಳನ್ನು ಇಷ್ಟು ವೇಗದಲ್ಲಿ ಮಾಡಲು ಸಾಧ್ಯವಿಲ್ಲ. ಕೆಲವು ಸಿನಿಮಾಗಳನ್ನು ಮಾಡಬಹುದು. ಈ ವೇಗದಲ್ಲಿ ಸಿನಿಮಾ ಮಾಡಿದರೆ ಸುಮಾರು ₹7–8 ಕೋಟಿ ಬಡ್ಡಿ ಉಳಿಯುತ್ತದೆ. ಇದುವೇ ಮೊದಲ ಲಾಭವಲ್ಲವೇ? ಆರು ತಿಂಗಳಲ್ಲೇ ನಿರ್ಮಾಪಕರು ಹಾಕಿದ ಹಣ ಕೈಸೇರುತ್ತದೆ. ಅದಕ್ಕಿಂತ ಹೆಚ್ಚಾಗಿ ಒಂದು ಸಿನಿಮಾ ಪೂರ್ಣಗೊಳಿಸಿ, ಹೊಸ ಹೆಜ್ಜೆ ಇಡಲು ಅನುಕೂಲ. ಇದಾಗದೇ ಹೋದರೆ ಒಂದು ಪ್ರಾಜೆಕ್ಟ್‌ನಲ್ಲೇ ಹಲವು ವರ್ಷ ಸಿಲುಕಿಕೊಳ್ಳುತ್ತೇವೆ. ಹಾಗೆಂದು, 'ಬಿಲ್ಲ ರಂಗ ಬಾಷಾ'ವನ್ನು ಆರು ತಿಂಗಳಲ್ಲೇ ಪೂರ್ಣಗೊಳಿಸುವ ಪ್ರಯತ್ನವನ್ನೂ ಮಾಡಲು ಸಾಧ್ಯವಿಲ್ಲ. ಇದರಲ್ಲಿನ ಒಂದೊಂದು ಪಾತ್ರದ ಮೇಕಪ್‌ಗೇ ಒಂದೆರಡು ಗಂಟೆ ಬೇಕು. ಶೇಕಡ 80ರಷ್ಟು ಸಿನಿಮಾಗಳನ್ನು 'ಮಾರ್ಕ್' ವೇಗದಲ್ಲೇ ಮಾಡಬಹುದು.

• **ಏಕಾಏಕಿ ಈ ಸಿನಿಮಾ ಕೈಗೆತ್ತಿಕೊಳ್ಳಲು ಕಾರಣ...**

ಈ ವರ್ಷ 'ಬಿಲ್ಲ ರಂಗ ಬಾಷಾ' ಬರಲು ಸಾಧ್ಯವೇ ಇಲ್ಲ ಎಂದು ಗೊತ್ತಾದಾಗ, ವರ್ಷವೊಂದನ್ನು ಕಳೆದುಕೊಳ್ಳಲು ನನಗೆ ಇಷ್ಟವಿರಲಿಲ್ಲ. ಚಿತ್ರರಂಗಕ್ಕೂ ನನ್ನದೊಂದು ಸಿನಿಮಾ ಬೇಕಿತ್ತು. ಹಾಗೆಯೇ ವೈಯಕ್ತಿಕವಾಗಿಯೂ ನನ್ನದೊಂದು ಸಿನಿಮಾ ಬರಬೇಕು ಎಂದಿತ್ತು. ಆ ಸಂದರ್ಭದಲ್ಲಿ ತಲೆಗೆ ಬಂದಿದ್ದೇ ವಿಜಯ್. ಏಕೆಂದರೆ 'ಮಾರ್ಕ್' ಎಳೆ ಮೊದಲೇ ಹೇಳಿದ್ದರು. ಇದು ನನಗೆ ಇಷ್ಟವಾಗಿತ್ತು. ಈ ನಡುವೆ ನಮ್ಮದೇ ನಿರ್ದೇಶಕರಿಗೂ ಕರೆ ಮಾಡಿದ್ದೆ. ಆದರೆ ಅವರ ಸಿನಿಮಾಗಳೇ ಇನ್ನೂ ಪೂರ್ತಿಯಾಗಿರಲಿಲ್ಲ, ಕಥೆಯೂ ಅಪೂರ್ಣವಾಗಿತ್ತು. ವಿಜಯ್ ತಕ್ಷಣದಲ್ಲೇ ಸ್ಪಂದಿಸಿದರು. ಈ ಸಿನಿಮಾದ ಕಥೆಯೇ ಹೆಚ್ಚಿನ ಮಾರ್ಕ್(ಅಂಕ) ಪಡೆಯಲಿದೆ. ಸರಳವಾಗಿರುವ ಕಥೆಯನ್ನು ಮೇಕಿಂಗ್‌ನಲ್ಲಿ ಎತ್ತಿಹಿಡಿಯಲಾಗಿದೆ. ಈ ಸಿನಿಮಾದ ಮಾಸ್ ಪಾತ್ರವು ಮಾಸ್‌ನಲ್ಲೇ ಅಂತ್ಯ ಕಾಣದೆ ಒಂದು ಆಶ್ಚರ್ಯಕರವಾದ ಭಾವನಾತ್ಮಕ ದೃಶ್ಯದೊಂದಿಗೆ ಮನಸ್ಸಿಗೆ ಹತ್ತಿರವಾಗಲಿದೆ.

• **'ಮ್ಯಾಕ್ಸ್', 'ಮಾರ್ಕ್' ಯೂನಿವರ್ಸ್ ಇದೆಯೇ?**

ಮಾಡಲು ಸಾಧ್ಯವಿದೆ. ಆದರೆ ನಾನು ಮಾಡುವುದಿಲ್ಲ. ಒಂದು ಸಿನಿಮಾ ಓಡಿದಾಗ ಸೀಕ್ವೆನ್ಸ್‌ನ ಸಾಧ್ಯತೆಯ ಬಗ್ಗೆ ಅಲೋಚಿಸುತ್ತೇವೆ. ಆದರೆ ಬರೆಯಲು ಕುಳಿತಾಗಲೇ ಆಗುವುದಿಲ್ಲ ಎಂದು ತಿಳಿಯುತ್ತದೆ. 'ಮ್ಯಾಕ್ಸ್' ಮತ್ತು 'ಮಾರ್ಕ್'ನ ಪಾತ್ರಗಳ ಗುಣಲಕ್ಷಣಗಳಲ್ಲೇ ಬಹಳ ವ್ಯತ್ಯಾಸವಿದೆ. ಇದೊಂದು ಎಂಟರ್‌ಟೇನ್ಮೆಂಟ್ ಪ್ಯಾಕೇಜ್. ಎಲ್ಲಾ ಅಂಶಗಳಲ್ಲೂ 'ಮ್ಯಾಕ್ಸ್'ಗಿಂತ ಮೂರು ಪಟ್ಟು ದೊಡ್ಡ ಸಿನಿಮಾ.

• **ಮುಂದಿನ ಸಿನಿಮಾ ಯಾವುದು?**

ಸುಕುಮಾರ್ ತಂಡದ ತೆಲುಗಿನ ನಿರ್ದೇಶಕರೊಬ್ಬರ ಒಂದು ರೊಮ್ಯಾಂಟಿಕ್–ಕಾಮಿಡಿ ಕಥಾಹಂದರದ ಸಿನಿಮಾ ಕೈಗೆತ್ತಿಕೊಂಡಿದ್ದೇನೆ. ಕನ್ನಡದ ನಿರ್ಮಾಪಕರೇ ಈ ಸಿನಿಮಾ ಮಾಡಲಿದ್ದು, 2026ರ ಮಧ್ಯದಲ್ಲಿ ರಿಲೀಸ್ ಆಗಲಿದೆ. ಈ ಜಾನರ್‌ನ ಸಿನಿಮಾ ನನ್ನ ಆಸಕ್ತಿಯದ್ದು. ಹೀರೋಯಿನ್ ಯಾಕೆ ಇರಲ್ಲ ಎನ್ನುವ ಪ್ರಶ್ನೆಗೂ ಈ ಸಿನಿಮಾವೇ ಉತ್ತರ! 'ಬಿಲ್ಲ ರಂಗ ಬಾಷಾ' 2026ರ ವರ್ಷಾಂತ್ಯಕ್ಕೆ ಬರಬಹುದು. ಪ್ರೇಮ್ ಜೊತೆಗೆ ಒಂದು ಸಿನಿಮಾದ ಚರ್ಚೆ ನಡೆಯುತ್ತಿದೆ. ಇದು ದೊಡ್ಡ ಬಜೆಟ್‌ನ ಪೌರಾಣಿಕ ಜಾನರ್‌ನ ಸಿನಿಮಾ. ಅನೂಪ್ ಭಂಡಾರಿ ಜೊತೆಗೂ ಸಿನಿಮಾವೊಂದರ ಚರ್ಚೆ ನಡೆಯುತ್ತಿದೆ.

• **'ಮಾರ್ಕ್'ಗೂ ನಾಯಕಿ ಏಕಿಲ್ಲ?**

ಸಿನಿಮಾದಲ್ಲಿ ನಾಯಕಿಯನ್ನು ಇಟ್ಟಿಲ್ಲ. ಏಕೆಂದರೆ ಕಥೆಯೊಳಗೆ ನಾಯಕಿ ಇರಬೇಕೆಂದರೆ ಅದಕ್ಕೊಂದು ಬಲವಾದ ಕಾರಣವಿರಬೇಕು. ನನ್ನ ನಾಯಕಿ ಸಿನಿಮಾದೊಳಗೆ ಕೇವಲ ಪ್ರಾಪರ್ಟಿ ಅಥವಾ ಒಂದು ಹಾಡಿಗೆ ಸೀಮಿತವಾಗಬಾರದು. ಕಥೆಗೆ ಅವಶ್ಯಕತೆ ಇಲ್ಲದೇ ಇರುವ ಕಾರಣ ಹಾಸ್ಯವನ್ನೂ ಇಟ್ಟಿಲ್ಲ.

• **'ಮಾರ್ಕ್' ಎಲ್ಲೆಲ್ಲಿ ತೆರೆ ಕಾಣಲಿದೆ?**

ಸದ್ಯ ಕನ್ನಡ ಮತ್ತು ತಮಿಳಿನಲ್ಲಷ್ಟೇ ಸಿನಿಮಾ ಬರಲಿದೆ. ಸಮಯ ಕಮ್ಮಿ ಇದ್ದ ಕಾರಣ ತೆಲುಗು, ಹಿಂದಿಯಲ್ಲಿ ಪ್ರಚಾರ ಮಾಡಲಿಲ್ಲ. ಇವುಗಳ ಪ್ರಿಂಟ್ ಸಿದ್ಧವಿದೆ. ಇನ್ನೆರಡು ವಾರ ಬಿಟ್ಟು ಅಲ್ಲಿ ಬಿಡುಗಡೆ ಮಾಡುವ ಯೋಚನೆಯಲ್ಲಿದ್ದೇವೆ. ತಮಿಳಿನಲ್ಲೂ ನಾನೇ ಡಬ್ ಮಾಡಿದ್ದೇನೆ.

• **ನಿಮಗೆ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಮಕ್ಕಳು ಅಭಿಮಾನಿಗಳಾಗಿದ್ದಾರೆ. ಅವರಿಗೆ ಮಾಸ್ ಜಾನರ್‌ನ 'ಮಾರ್ಕ್' ಹಿಡಿಸಲಿದೆಯೇ?**

ಅವರು ಇಷ್ಟಪಟ್ಟಿದ್ದೇ ನನ್ನ ರಗಡ್ ಪಾತ್ರಗಳನ್ನು, ದಾಡಿ ಮೀಸೆ, ಸಿಗರೇಟ್ ಅನ್ನು. ಹುಡುಗಿಯರನ್ನು ನಂಬಿಕೊಂಡು 'ಮುಸ್ಸಂಜೆ ಮಾತು' ಮಾಡಿದ್ದೆ. ಇದು ಸಾಫ್ಟ್ ಆಗಿ ಓಡಿತ್ತು. ರಫ್ ಲುಕ್‌ನಲ್ಲಿದ್ದ ನನ್ನ ಸಿನಿಮಾಗಳು ಬಾಕ್ಸ್ ಆಫೀಸ್ ಹಿಟ್ ಆಗಿವೆ. ❖

'ಶಿವರಾಜ್‌ಕುಮಾರ್ ನಮ್ಮ ಆಸ್ತಿ'

'ಶಿವಣ್ಣ ನಮಗೆ ಬೇಕು. ನಮ್ಮ ಆಸ್ತಿ ಅವರು. ಒಬ್ಬರು ಹಿರಿಯರಾಗಿ ಅವರ ಇರುವಿಕೆಯು ಪ್ರಸ್ತುತ ಚಿತ್ರರಂಗಕ್ಕೆ ಅಗತ್ಯ. ನಟನಾಗಿಯೂ ಅವರು ಮತ್ತಷ್ಟು ಭಿನ್ನ ಪಾತ್ರಗಳನ್ನು ಮಾಡಬೇಕಿದೆ. ಅವರೇನು ಎನ್ನುವುದನ್ನು ಹೇಳಲು '45' ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಬರುವ ಒಂದು ಝಲಕ್ ಸಾಲದೇ? ಡಿ.25ಕ್ಕೆ ಎರಡು ಕನ್ನಡ ಸಿನಿಮಾಗಳು ಬರುತ್ತಿವೆ ಎನ್ನುವುದರ ಬಗ್ಗೆ ಖುಷಿಪಡಬೇಕು. ಇಲ್ಲವಾದರೆ ಇದೇ ರಜಾ ದಿನಗಳಲ್ಲಿ ಪರಭಾಷಾ ಸಿನಿಮಾಗಳು ಲಗ್ಗೆ ಇಟ್ಟು ಲೂಟಿ ಮಾಡುವುದಿಲ್ಲವೇ? ಇದು ಯಾವುದೇ ಘರ್ಷಣೆಯಲ್ಲ. ಜುಲೈ 5ರಂದೇ 'ಮಾರ್ಕ್' ಡಿ.25ಕ್ಕೆ ಎಂದು ಘೋಷಿಸಿದ್ದೆ. ಇದನ್ನಿಟ್ಟುಕೊಂಡೇ ಹೆಜ್ಜೆ ಇಟ್ಟಿದ್ದೆವು. ಅರ್ಜುನ್ ಜನ್ಯ ಅವರು '45' ಕಥೆಯನ್ನು ಮೊದಲು ಹೇಳಿದ್ದೇ ನನಗೆ. ಈ ಸಿನಿಮಾ ನೋಡಲು ಕಾತುರದಿಂದಿದ್ದೇನೆ' ಎನ್ನುತ್ತಾರೆ ಸುದೀಪ್.

> ಪ್ರಿಯಾ ಅವರು 'ಮಾರ್ಕ್' ವಿತರಣೆಯಲ್ಲಿ ಕೈಜೋಡಿಸಿದ್ದಾರೆ. ಇದು ಅವರದ್ದೇ ಹಣ. ಪ್ರಿಯಾಗೆ ಅವರದ್ದೇ ವಹಿವಾಟು ಇದೆ. ವಿತರಣೆಯ ಕ್ಷೇತ್ರವನ್ನು ಅವಲೋಕಿಸುವ ಆಸಕ್ತಿಯೂ ಅವರಿಗಿದೆ. ಬೇರೆ ಸಿನಿಮಾಗಳನ್ನೂ ಅವರು ಮುಂದೆ ವಿತರಣೆ ಮಾಡಲಿದ್ದಾರೆ.
> –**ಸುದೀಪ್**, ನಟ

'ಸರ್ಕಾರದಿಂದ ಸಹಾಯ ಕೇಳಿದ್ದೇವೆ'

'ತಕ್ಷಣದಲ್ಲೇ ಪೈರಸಿ ಲಿಂಕ್‌ಗಳನ್ನು ತೆಗೆಯಲು ತಂಡ ಸಿದ್ಧಪಡಿಸಿದ್ದೇವೆ. ಲಿಂಕ್‌ಗಳು ಜನರಿಗೆ ತಲುಪುವುದನ್ನು ಶೇಕಡ 80ರಷ್ಟು ತಡೆಯುತ್ತೇವೆ. ಯಾವ ಕಲಾವಿದರ ಬಗ್ಗೆಯೂ ನಾನು ತಪ್ಪಾಗಿ ಮಾತನಾಡಿಲ್ಲ. 'ಮಾರ್ಕ್' ಪೈರಸಿ ಮಾಡುತ್ತಿರುವುದು ದುಡ್ಡು ಮಾಡುವುದಕ್ಕಲ್ಲ, ಸಿನಿಮಾವನ್ನು ಹಾಳು ಮಾಡುವುದಕ್ಕೆ ಎಂದು ನನಗೆ ಗೊತ್ತಾಗುತ್ತದೆ. ನಾನು ಹುಬ್ಬಳ್ಳಿಗೆ ಹೋಗಿದ್ದು ಸಂಭ್ರಮಿಸುವುದಕ್ಕೆ. ಆದರೆ ಸಂಭ್ರಮ ನಿಲ್ಲಿಸಿ ನಾನು ನೇರವಾಗಿ ಮಾತನಾಡಿದೆ. ಕೇಳಿಸಿಕೊಳ್ಳಬೇಕಾದವರು ಕೇಳಿಕೊಂಡರು. ಅಭಿಮಾನಿಗಳೊಂದಿಗೆ ಕಳೆಯಬೇಕಿದ್ದ ಒಂದು ಅದ್ಭುತ ಸಂಜೆಯನ್ನು ಕಳೆದುಕೊಂಡೆ. ಆವೇಶದಲ್ಲಿ ಮಾತನಾಡುವವನು ನಾನಲ್ಲ. ಈ ಹಿಂದೆ ದರ್ಶನ್ ಬಗ್ಗೆ ಕೇಳಿದಾಗಲೂ ಕೆಟ್ಟದಾಗಿ ಮಾತನಾಡಿಲ್ಲ. ದರ್ಶನ್ ಬಗ್ಗೆ ಗೌರವವಿದೆ. ಕೆಲವು ಆಗುಹೋಗುಗಳ ಬಗ್ಗೆ ನೋವಿದೆ. ನಟರಾಗಿ ನಾವಿಬ್ಬರೂ ಕಿತ್ತಾಡಲೇ ಇಲ್ಲ. ನಮ್ಮಿಬ್ಬರ ನಡುವೆ ಸಾವಿರ ಇರಬಹುದು. ಅದು ನಮ್ಮಿಬ್ಬರದು. ಪರದೆಯಿಂದ ಇಳಿದು ಕೆಳಗೆ ನಡೆಯುತ್ತಿರುವ ಗಲಾಟೆಗಳಿಗೆ ಹೋಗಕೂಡದು. ಕಥೆ ಹೇಳಿ ಮನೆಗೆ ಹೋಗುವುದಷ್ಟೇ ನಮ್ಮ ಕೆಲಸ' ಎಂದರು ಸುದೀಪ್.

'ನಾನು ಯಾರಿಗೆ ಹೇಳಿದ್ದು ಎಂದು ಸ್ಪಷ್ಟನೆ ಕೊಟ್ಟಾಗಿದೆ. ಪೈರಸಿ ತಡೆಯಲು ನಾವೇನು ಮಾಡುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ಇದರಲ್ಲಿ ನಾವು ಯಶಸ್ವಿಯಾದರೆ ಒಂದು ಪೈರಸಿ ತಂಡವನ್ನು ಶೇಕಡ 80ರಷ್ಟು ನಿಯಂತ್ರಿಸಲಿದ್ದೇವೆ. ಇದಕ್ಕೆ ಸರ್ಕಾರದಿಂದ ಸಹಾಯವನ್ನು ಕೇಳಿದ್ದೇವೆ' ಎನ್ನುತ್ತಾರೆ.

ಉಪೇಂದ್ರ, ರಾಜ್ ಬಿ.ಶೆಟ್ಟಿ, ಶಿವರಾಜ್‌ಕುಮಾರ್

45 ಇಂದು ತೆರೆಗೆ

ಅರ್ಜುನ್ ಜನ್ಯ ನಿರ್ದೇಶನದ ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ನಟಿಸಿರುವ '45' ಸಿನಿಮಾ ಇಂದು (ಡಿ.25) ತೆರೆಕಂಡಿದೆ.

ಸಿನಿಮಾದಲ್ಲಿ ಸಾಫ್ಟ್‌ವೇರ್ ಉದ್ಯೋಗಿ 'ವಿನಯ್' ಎಂಬ ಪಾತ್ರದಲ್ಲಿ ರಾಜ್, 'ರಾಯಪ್ಪ'ನಾಗಿ ಉಪೇಂದ್ರ, 'ಶಿವಪ್ಪ'ನಾಗಿ ಶಿವರಾಜ್‌ಕುಮಾರ್ ಕಾಣಿಸಿಕೊಂಡಿದ್ದಾರೆ. ಸಾವು–ಬದುಕಿನ ನಡುವಿನ ಕಥೆ ಹೊತ್ತ ಈ ಸಿನಿಮಾವನ್ನು ಎಂ.ರಮೇಶ್ ರೆಡ್ಡಿ ಅವರು ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ನಿರ್ಮಿಸಿದ್ದಾರೆ.

'ಟ್ರೇಲರ್‌ಗೆ ಎಲ್ಲಾ ಕಡೆಗಳಿಂದಲೂ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಹಾಡಿಗೂ ಜನರು ಮನ ಸೋತಿದ್ದಾರೆ. ಶಿವರಾಜಕುಮಾರ್ ಅವರಿಗೆ ವಿಶೇಷ ಧನ್ಯವಾದ ಹೇಳಬೇಕು. ಅವರಿಗೆ ಆರೋಗ್ಯದ ಸಮಸ್ಯೆ ಇದ್ದರೂ ಚಿತ್ರಕ್ಕೆ ತೊಂದರೆಯಾಗಬಾರದು ಎಂದು ತಮ್ಮ ಕೆಲಸಗಳನ್ನು ಪೂರೈಸಿ ಚಿಕಿತ್ಸೆಗಾಗಿ ವಿದೇಶಕ್ಕೆ ತೆರಳಿದ್ದರು. ಅರ್ಜುನ್ ಜನ್ಯ ಅವರು ಮೂರು ವರ್ಷಗಳಿಂದ ಚಿತ್ರಕ್ಕಾಗಿ ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ಅವರ ಶ್ರಮ ಸಾರ್ಥಕ ಆಗಿದೆ. ಸಿನಿಮಾವನ್ನು ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕೇರಳದಲ್ಲೂ ಜನಪ್ರಿಯ ಸಂಸ್ಥೆಗಳು ವಿತರಣೆ ಮಾಡುತ್ತಿವೆ. ಉತ್ತರ ಭಾರತದಲ್ಲಿ ಜೀ ಸ್ಟುಡಿಯೊಸ್ ವಿತರಣೆ ಮಾಡುತ್ತಿದೆ' ಎಂದಿದ್ದಾರೆ ನಿರ್ಮಾಪಕ ರಮೇಶ್ ರೆಡ್ಡಿ.

ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಅವರ ಅಭಿಮಾನಿಯಾಗಿ ಅರ್ಜುನ್ ಜನ್ಯ ಅವರು ಈ ಸಿನಿಮಾ ನಿರ್ದೇಶಿಸಿದ್ದಾರೆ. ಇದು 45 ದಿನಗಳಲ್ಲಿ ನಡೆಯುವ ಕಥೆಯಾದ ಕಾರಣ ಸಿನಿಮಾಗೆ ಹೀಗೆ ಶೀರ್ಷಿಕೆ ಇಡಲಾಗಿದೆ. ಚಿತ್ರಕ್ಕೆ ಸತ್ಯ ಹೆಗಡೆ ಛಾಯಾ ಚಿತ್ರಗ್ರಹಣವಿದೆ.

ಈಗಾಗಲೇ 'ಜೀ' ಸಂಸ್ಥೆಯು ಸಿನಿಮಾದ ಡಿಜಿಟಲ್ ಹಾಗೂ ಸ್ಯಾಟಲೈಟ್ ಹಕ್ಕುಗಳನ್ನು ಖರೀದಿಸಿದೆ. ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಕರ್ನಾಟಕದಾದ್ಯಂತ ವಿತರಣೆ ಮಾಡಲಿದೆ. ಬುಧವಾರದಿಂದಲೇ (ಡಿ.24) ಚಿತ್ರದ ಪ್ರೀಮಿಯರ್ ಪ್ರದರ್ಶನಗಳು ಕರ್ನಾಟಕದಾದ್ಯಂತ ನಡೆದಿವೆ. ಬೆಂಗಳೂರಿನಲ್ಲೇ 40ಕ್ಕೂ ಅಧಿಕ ಪ್ರದರ್ಶನಗಳು ಹೌಸ್‌ಫುಲ್ ಆಗಿತ್ತು. ❖

ತ್ರಿವೇಣಿ ಕೆಂಪೇಗೌಡ ಸರ್ಕಲ್ DOLBY DIGITAL 7.1 4K DIGITAL SCRABBLE 4ಆಟ
ಕಾಮಾಕ್ಷಿಪಾಳ್ಯ: VICTORY CINEMA
ಮಾಗಡಿರಸ್ತೆ: ಅಂಜನ್
ಲಾಲ್‌ಬಾಗ್‌ರಸ್ತೆ: URVASHI
ಎಂ.ಜಿ.ರಸ್ತೆ: Swagath SHANKARNAG MG ROAD
ರಾಜಾಜಿನಗರ: ನವರಂಗ್
ಮಾರತಹಳ್ಳಿ: ವಿನಾಯಕ
ಜೆ.ಪಿ.ನಗರ: ಸಿದ್ದಲಿಂಗೇಶ್ವರ
ಆವಲಹಳ್ಳಿ: ವೆಂಕಟೇಶ್ವರ
ಪೀಣ್ಯ: ಭಾರತಿ
ಕಮಲಾನಗರ: ವೀರಭದ್ರೇಶ್ವರ
ಸುಂಕದಕಟ್ಟೆ: ಮೋಹನ್
ಸೇವಾನಗರ: ಮುಕುಂದ
ತಾವರೆಕೆರೆ: ಬಾಲಾಜಿ
ಸಂಜಯನಗರ: ವೈಭವ್
ಬನಶಂಕರಿ: ಕಾಮಾಕ್ಯ
ಕೋಣನಕುಂಟೆ: ಮಾನಸ
ಹೊಂಗಸಂದ್ರ: ಬೃಂದಾ
ಉಲ್ಲಾಳ: ವಜ್ರೇಶ್ವರಿ
ಉತ್ತರಹಳ್ಳಿ: ವೈಷ್ಣವಿ ವೈಭವಿ
ಮಾಗಡಿರಸ್ತೆ: ಪ್ರಸನ್ನ
ಗರುಡಾಚಾರ್‌ಪಾಳ್ಯ: ವಿಜಯಲಕ್ಷ್ಮೀ
ಟಿ.ಸಿ.ಪಾಳ್ಯ: ವಿಸಿನಿಮಾಸ್
ಜೆ.ಪಿ.ನಗರ: ರೇಣುಕಾಪ್ರಸನ್ನ
ಸರ್ಜಾಪುರ: RAVI
ಗೊಲ್ಲರಹಟ್ಟಿ: ವೆಂಕಟೇಶ್ವರ
ಮಲ್ಲೇಶ್ವರಂ: ಸವಿತಾ
ಅಗರ: ತಿರುಮಲ
ಕಾಡುಗೋಡಿ: ಶ್ರೀನಿವಾಸ
ಕದಿರೇನಹಳ್ಳಿ: ಮಹದೇಶ್ವರ
ಕೆ.ಆರ್.ಪುರಂ: ವೆಂಕಟೇಶ್ವರ
ಆರ್.ಟಿ.ನಗರ: ರಾಧಾಕೃಷ್ಣ
ಬೊಮ್ಮನಹಳ್ಳಿ: ಕೃಷ್ಣ
ಸುಲ್ತಾನ್‌ಪಾಳ್ಯ: ಪುಷ್ಪಾಂಜಲಿ
ಗೌಡನಪಾಳ್ಯ: ಶ್ರೀನಿವಾಸ
ಗೊಟ್ಟಿಗೆರೆ: ಲಕ್ಷ್ಮೀ
ದೊಮ್ಮಸಂದ್ರ: ಬಾಲಾಜಿ
ಲಗ್ಗೆರೆ: ಆಕಾಶ್
ಮಲ್ಲೇಶ್ವರಂ: Savitha
ಕೋಣನಪ್ಪನಅಗ್ರಹಾರ: ವೆಂಕಟೇಶ್ವರ
ಯಶವಂತಪುರ: ಗೋವರ್ಧನ್
ವಿದ್ಯಾಪೀಠ: ಚಂದ್ರೋದಯ
ಹರಿನಗರ: ವಿನಾಯಕ
ಮಲ್ಲತ್ತಹಳ್ಳಿ: ವಿ.ಆರ್.ಸಿನಿಮಾಸ್
ಯಲಹಂಕ: ಪ್ರಕಾಶ್
ಚಿಕ್ಕಬಾಣಾವರ: ಅಶೋಕ
ಬಂಗಾರಪೇಟೆ: ಬಾಲಚಂದರ್
ಅತ್ತಿಬೆಲೆ: ಗೌರಿಶಂಕರ
ನೆಲಮಂಗಲ: ರೂಪ
PVR·INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD | VEGACITY
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | GRAND | INNOVATION | INNOVATION BTM | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MARATHALLI
KINO CINEMAS SEEGEHALLI
MOVIETIME RR NAGAR
new Fangled MG ROAD
ತುಮಕೂರು: ಮಾರುತಿ, PVR·INOX
ಕುಣಿಗಲ್: ಆಕಾಶ್
ರಾಮನಗರ: ಶ್ರೀರಾಮ
ಚನ್ನಪಟ್ಟಣ: ಲಕ್ಷ್ಮೀ
ಕನಕಪುರ: ಅರ್ಕಾವತಿ
ತಿಪಟೂರು: ಗಣೇಶ್
ಮಾಗಡಿ: ಬಾಲಾಜಿ
ಹಾರೋಹಳ್ಳಿ: ವಿನಾಯಕ
ಆನೇಕಲ್: ಲಕ್ಷ್ಮೀನರಸಿಂಹ
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ: ಬಾಲಾಜಿ
ಮಾಲೂರು: ಬಾಲಾಜಿ
ವಿಜಿಪುರ: ಗೌರಿಶಂಕರ
ಸಿರಾ: ಭಾಗ್ಯಲಕ್ಷ್ಮೀ
ಗೌರಿಬಿದನೂರು: ಅಭಿಲಾಷ
ಶಿಡ್ಲಘಟ್ಟ: ವೆಂಕಟೇಶ್ವರ
ತುರುವೆಕೆರೆ: ಪೂರ್ಣಿಮಾ
ಮೈಸೂರು: ವುಡ್‌ಲ್ಯಾಂಡ್ಸ್, ರಾಜ್‌ಕಮಲ್, DRC CINEMAS, PVR·INOX GARUDA | FORUM SATYAM | CENTRO, VISION CINEMAS
ಮಂಡ್ಯ: ಸಂಜಯ್
ಹಾಸನ: ಸಹ್ಯಾದ್ರಿ
ಚಾಮರಾಜನಗರ: ಭ್ರಮರಾಂಬ
ಕೊಳ್ಳೆಗಾಲ: ಶಾಂತಿ
ಮಳವಳ್ಳಿ: ರಾಜರಾಜೇಶ್ವರಿ
ಮದ್ದೂರು: ಸಂಜಯ್
ನಾಗಮಂಗಲ: ವೆಂಕಟೇಶ್ವರ
ಪಿರಿಯಾಪಟ್ಟಣ: ಶಾರದ
ಪಾಂಡವಪುರ: ಕೋಕಿಲ
ಹುಣಸೂರು: ಲೀಲಾ
ಶನಿವಾರಸಂತೆ: ಯಶಸ್ವಿನಿ
ಗೋಣಿಕೊಪ್ಪ: ಸಿನಿಪ್ಲೆಕ್ಸ್
ಬನ್ನೂರು: ರತ್ನಮಹಲ್
ಸಿದ್ದಾಪುರ: ವುಡ್‌ಲ್ಯಾಂಡ್ಸ್
ಶ್ರೀರಂಗಪಟ್ಟಣ: ಶ್ರೀದೇವಿ
ಬೇಲೂರು: ರೇಣುಕಾ
ಸಕಲೇಶಪುರ: ತೇಜಸ್ವಿನಿ
ಸುಂಟಿಕೊಪ್ಪ: ಗಣೇಶ
ಸಾತನೂರು: ವೆಂಕಟೇಶ್ವರ
ಕೆ.ಎಂ.ದೊಡ್ಡಿ: ಸುಮಾ
ದಾವಣಗೆರೆ: ಅಶೋಕ
ಚಿತ್ರದುರ್ಗ: ಪ್ರಸನ್ನ
ಬಳ್ಳಾರಿ: ನಟರಾಜ
ಹೊಸಪೇಟೆ: ಮೀರ್‌ಆಲಂ
ಸಿರುಗುಪ್ಪ: ಬಾಲಾಜಿ
ಕಂಪ್ಲಿ: ಚಂದ್ರಕಲಾ
ಸಂಡೂರು: ಶ್ರೀನಿವಾಸ
ಹುಬ್ಬಳ್ಳಿ: ಸುಧಾ, LAXMI CITY PRIDE, cinépolis
ಧಾರವಾಡ: ಪದ್ಮ, PVR·INOX
ಗದಗ: ಕೃಷ್ಣ
ಬೆಳಗಾವಿ: ಪ್ರಕಾಶ್, PVR·INOX, KAPEEL CINEMA, Bharath Cinemas
ಬಿಜಾಪುರ: ಡ್ರೀಮ್‌ಲ್ಯಾಂಡ್
ರಾಣೇಬೆನ್ನೂರು: ಶಿವಶಕ್ತಿ
ಮುಧೋಳ: ಸೂರ್ಯವಂಶಿ
ಲಕ್ಷ್ಮೇಶ್ವರ: ಕೃಷ್ಣ
ಮಹಾಲಿಂಗಪುರ: ಮಾರುತಿ
ರಬಕವಿ: ಶ್ರೀನಿವಾಸ
ಜಮಖಂಡಿ: ಶ್ರೀನಿವಾಸ
ಬಾಗಲಕೋಟೆ: ವಾಸವಿ
ಗೋಕಾಕ್: ಲಕ್ಷ್ಮೀ
ಅಥಣಿ: ದುರ್ಗಾಲಕ್ಷ್ಮೀ
ಹಾರೂಗೇರಿ: ಚಂದ್ರಮ
ಬಾದಾಮಿ: ಮಹಾಕೂಟೇಶ್ವರ
ಗುಳೇದಗುಡ್ಡ: ಅಂಕಿತ
ಬೀಳಗಿ: ಶ್ರೀನಿವಾಸ
ತಾಳಿಕೋಟೆ: ಮಹಾವೀರ್
ರಾಮದುರ್ಗ: ವೆಂಕಟೇಶ್
ಇಂಡಿ: ಮಹಾವೀರ್
ಹೊನ್ನಾವರ: ಪದ್ಮಾಂಜಲಿ
ಸಿಂಧಗಿ: ಪ್ರಶಾಂತ್
ಬ್ಯಾಡಗಿ: ಶೋಭಾ
ರೋಣ: ಮಲ್ಲಿಕಾರ್ಜುನ
ಕಲಬುರ್ಗಿ: PVR·INOX, MIRAJ
ಗಂಗಾವತಿ: MOHIUDDIN TALKIES
ಕೊಪ್ಪಳ: ಶಾರದ
ಲಿಂಗಸೂರು: ಎಂಪೈರ್
ಮಾನ್ವಿ: ಅರ್ಪಣ
ಕರಟಗಿ: ಪದ್ಮಾವತಿ
ಕನಕಗಿರಿ: ನಂದಿ
ಸಿಂಧನೂರು: ಶರಣಬಸವೇಶ್ವರ
ದೇವದುರ್ಗ: ಭಾರತ್
ಕುಷ್ಟಗಿ: ಬಸವರಾಜ್
ಶಿಕಾರಿಪುರ: ಕಿರಣ್
ಶಿವಮೊಗ್ಗ: Bharath Cinemas
ಭದ್ರಾವತಿ: ವೀರಭದ್ರೇಶ್ವರ
ಚಿಕ್ಕಮಗಳೂರು: ಶ್ರೀಲೇಖಾ
ತೀರ್ಥಹಳ್ಳಿ: ವೆಂಕಟೇಶ್ವರ
ಸಾಗರ: ಶ್ರೀ
ಆನವೇರಿ: ಶ್ರೀದೇವಿ
ಬಾಳೆಹೊನ್ನೂರು: ಸುದರ್ಶಿನಿ
ಮಂಗಳೂರು: SP CINEMAS, PVR·INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ: ಅಲಂಕಾರ್, Bharath Cinemas
ಕಾರ್ಕಳ: ರಾಧಿಕ
ಮಣಿಪಾಲ: PVR·INOX, cinépolis
ಕುಂದಾಪುರ: Bharath Cinemas
ಪಡುಬಿದ್ರೆ: Bharath Cinemas
ಪುತ್ತೂರು: Bharath Cinemas
ಹಾಗೂ ರಾಜ್ಯಾದ್ಯಂತ

ಬೆಂಗಳೂರು: ಸಂತೋಷ್
VEERESH CINEMAS
ಕಾಮಾಕ್ಷಿಪಾಳ್ಯ: VICTORY CINEMA
ಮಾಗಡಿರಸ್ತೆ: ಅಂಜನ್
ಲಾಲ್‌ಬಾಗ್‌ರಸ್ತೆ: URVASHI
ರಾಜಾಜಿನಗರ: ನವರಂಗ್
ಸೇವಾನಗರ: ಮುಕುಂದ
ಜೆ.ಪಿ.ನಗರ: ಸಿದ್ದೇಶ್ವರ
ಕೆಂಗೇರಿ: ರಾಬಿನ್, ವೆಂಕಟೇಶ್ವರ
ಮಲ್ಲೇಶ್ವರ: Sampige
ಯಶವಂತಪುರ: ಗೋವರ್ಧನ್
ಪದ್ಮನಾಭನಗರ: SRINIVASA 4K
ಅವಲಹಳ್ಳಿ: ವೆಂಕಟೇಶ್ವರ
ರಾಜ್‌ಗೋಪಾಲ್‌ನಗರ: ಮಾರುತಿ
ಕದಿರೇನಹಳ್ಳಿ: ಮಹದೇಶ್ವರ
ಮಾರತಹಳ್ಳಿ: ವಿನಾಯಕ
ಮಡಿವಾಳ: ಸಂಧ್ಯಾ
ಹೊಂಗಸಂದ್ರ: ಬೃಂದಾ
ಕೋಣನಕುಂಟೆ: ಮಾನಸ
ಗರುಡಾಚಾರ್‌ಪಾಳ್ಯ: ವಿಸಿನಿಮಾಸ್
ಕೋಣನಪ್ಪನಅಗ್ರಹಾರ: ವೆಂಕಟೇಶ್ವರ
ಬೊಮ್ಮನಹಳ್ಳಿ: ಕೃಷ್ಣ
ಅಗರ: ತಿರುಮಲ
ಕಾಡುಗೋಡಿ: ಶ್ರೀನಿವಾಸ
ವಿದ್ಯಾಪೀಠ: ಚಂದ್ರೋದಯ
ಸರ್ಜಾಪುರ: RAVI
ಆರ್.ಟಿ.ನಗರ: ರಾಧಾಕೃಷ್ಣ
ಕೆ.ಆರ್.ಪುರಂ: ವೆಂಕಟೇಶ್ವರ
ದೊಮ್ಮಸಂದ್ರ: ಬಾಲಾಜಿ
ಗೊಟ್ಟಿಗೆರೆ: ಲಕ್ಷ್ಮೀ
ಕೊಡಿಗೆಹಳ್ಳಿ: ರಾಜ್‌ಮುರಳಿ
ಗೊಲ್ಲರಹಟ್ಟಿ: ವೆಂಕಟೇಶ್ವರ
ಯಲಹಂಕ: ಗಣೇಶ್
ರಾಮಮೂರ್ತಿನಗರ: ಲಕ್ಷ್ಮೀ
ಸುಲ್ತಾನ್‌ಪಾಳ್ಯ: ಪುಷ್ಪಾಂಜಲಿ
ವರ್ತೂರು: ವಿನಾಯಕ
ಕಚ್ಚಾರೇಕನಹಳ್ಳಿ: ಅಮೃತ್
ಜೆ.ಸಿ.ರಸ್ತೆ: ಪೂರ್ಣಿಮಾ
ಬಿ.ಎನ್.ಪುರ: ಪುಷ್ಪಾಂಜಲಿ
ಚಿಕ್ಕಬಾಣಾವರ: ಅಶೋಕ
ಹೆಸರಘಟ್ಟ: ಎಸ್.ಎಲ್.ಎನ್
ಸಿಂಗಾಪುರಲೇಔಟ್: ವೈನಿಧಿ
ಮತ್ತಿಕೆರೆ: ಮುರಳಿಗೋಕುಲ
ಜಿಗಣಿ: ನಂದೀಶ್ವರ
ಅತ್ತಿಬೆಲೆ: ಗೌರಿಶಂಕರ್
ಚಿಕ್ಕಲ್ಲಸಂದ್ರ: ಬಾಲಾಜಿ
ಹೊಸೂರು: ಗ್ರ್ಯಾಂಡ್‌ಸಿನಿಮಾಸ್, ಲಕ್ಷ್ಮೀಸಿನಿಮಾಸ್
PVR·INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD | VEGACITY
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | GRAND | INNOVATION | INNOVATION BTM | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MARATHALLI
V CINEMAS TC PALYA
KINO CINEMAS SEEGEHALLI
ವೈಷ್ಣವಿ ವೈಭವಿ
MOVIETIME RR NAGAR
new Fangled MG ROAD
Swagath SHANKARNAG MG ROAD
ತುಮಕೂರು: KRG ಜೈಭಾರತ್, PVR·INOX
ಕೋಲಾರ: ನಾರಾಯಣಿ
ದೊಡ್ಡಬಳ್ಳಾಪುರ: KRG ಸೌಂದರ್ಯಮಹಲ್, ರಾಜ್‌ಕಮಲ್
ರಾಮನಗರ: ಶಾನ್
ತಿಪಟೂರು: ತ್ರಿಮೂರ್ತಿ, ಲಕ್ಷ್ಮೀ
ಚಿಕ್ಕಬಳ್ಳಾಪುರ: ವಾಣಿ
ಚಿಂತಾಮಣಿ: ಆದರ್ಶ
ಕನಕಪುರ: ವಾಣಿ
ಕುಣಿಗಲ್: ಪದ್ಮ
ಚನ್ನಪಟ್ಟಣ: ಶಿವಾನಂದ
ಬಿಡದಿ: ದೀಪಕ್
ಮಾಗಡಿ: ಬಾಲಾಜಿ
ಮಾಲೂರು: ಬೆನಕ
ಆನೇಕಲ್: ಅನ್ನಪೂರ್ಣೇಶ್ವರಿ
ಬಂಗಾರಪೇಟೆ: ವಿಜಯ
ಮಧುಗಿರಿ: ಶಾಂತಲಾ
ವಿಜಯಪುರ: ಸಂಗಮೇಶ್ವರ
ಪಾವಗಡ: ಶ್ರೀನಿವಾಸಪ್ರಸನ್ನ
ಸಿರಾ: ಸಪ್ತಗಿರಿ
ತುರುವೆಕೆರೆ: ಕೃಷ್ಣ
ಕೆ.ಜಿ.ಎಫ್: ಒಲಂಪಿಯಾ
ಕೊರಟಗೆರೆ: ಶಿವಗಂಗಾ
ಹೆಚ್.ಕ್ರಾಸ್: ವೆಂಕಟೇಶ್ವರ
ಚಿಕ್ಕನಾಯಕನಹಳ್ಳಿ: ಶ್ರೀನಿವಾಸ
ಮೈಸೂರು: ಸಂಗಮ್, ಪದ್ಮ, DRC CINEMAS, PVR·INOX GARUDA | FORUM SATYAM | CENTRO, VISION CINEMAS
ಮಂಡ್ಯ: ಗುರುಶ್ರೀ
ಹಾಸನ: ಶ್ರೀಗುರು
ಚಾಮರಾಜನಗರ: ಸಿದ್ಧಾರ್ಥ
ಕೊಳ್ಳೆಗಾಲ: ಶ್ರೀನಿವಾಸ
ಚನ್ನರಾಯಪಟ್ಟಣ: ಧನಲಕ್ಷ್ಮೀ
ಹೊಳೆನರಸೀಪುರ: ಎಸ್.ಎಲ್.ಎನ್
ಪಾಂಡವಪುರ: ಲಕ್ಷ್ಮೀ
ಮಳವಳ್ಳಿ: ಮಹಾಲಕ್ಷ್ಮೀ
ಮದ್ದೂರು: ಮಹಾವೀರ್
ಕೆ.ಆರ್.ನಗರ: ಗೌರಿಶಂಕರ
ಗುಂಡ್ಲುಪೇಟೆ: ಸೂರ್ಯ
ಕೆ.ಆರ್.ಪೇಟೆ: ಬಸವೇಶ್ವರ
ನಂಜನಗೂಡು: ಶ್ರೀವತ್ಸ
ಬನ್ನೂರು: ಸೋಮೇಶ್ವರ
ಟಿ.ನರಸೀಪುರ: ವಿಜಯಭಗವಾನ್
ನಾಗಮಂಗಲ: ವೆಂಕಟೇಶ್ವರ
ಅರಸೀಕೆರೆ: ಸಾಧನ
ಕೆ.ಎಂ.ದೊಡ್ಡಿ: ಮಾರುತಿ
ಪಿರಿಯಾಪಟ್ಟಣ: ಮಹದೇಶ್ವರ
ಬೆಳ್ಳೂರುಕ್ರಾಸ್: ಮಾರುತಿ
ಯಳಂದೂರು: ಮಹದೇಶ್ವರ
ಬೇಲೂರು: ರೇಣುಕಾ
ಬಾಬುರಾಯನಕೊಪ್ಪಲು: ಭಾರತಿ
ಸಕಲೇಶಪುರ: ಮಾರುತಿ
ಹುಲ್ಲಹಳ್ಳಿ: ವಿನಾಯಕ
ಸಾಲಿಗ್ರಾಮ: ಪದ್ಮಾಂಬ
ಹಲಗೂರು: ರವಿ
ಅರಕೆರೆ: ಮಂಜುನಾಥ
ರಾಮಪುರ: ಶ್ರೀವೀರಭದ್ರೇಶ್ವರ
ಸರಗೂರು: ಶಂಕರ್
ಬೆಳಕವಾಡಿ: ಬೀರೇಶ್ವರ
ಮಾಧಲ್: ಚೆನ್ನಬಸವೇಶ್ವರ
ಶಿವಮೊಗ್ಗ: ಮಲ್ಲಿಕಾರ್ಜುನ, Bharath Cinemas
ಚಿಕ್ಕಮಗಳೂರು: ನಾಗಲಕ್ಷ್ಮೀ
ಭದ್ರಾವತಿ: ಸತ್ಯ
ಕಡೂರು: ವಿಜಯಲಕ್ಷ್ಮೀ
ಶಿಕಾರಿಪುರ: ಮಾಲತೇಶ್
ತೀರ್ಥಹಳ್ಳಿ: ವಿನಾಯಕ
ಸಾಗರ: ಶ್ರೀ
ಚನ್ನಗಿರಿ: ಲಕ್ಷ್ಮೀ
ಕೊಪ್ಪ: ಜೆ.ಎಂ.ಜೆ
ತರೀಕೆರೆ: ವಿನಾಯಕ
ಬಾಳೆಹೊನ್ನೂರು: ಸುದರ್ಶಿನಿ
ಆನವಟ್ಟಿ: ರೇಣುಕಾ
ದಾವಣಗೆರೆ: ತ್ರಿಶೂಲ್, ತ್ರಿನೇತ್ರಾ, MOVIETIME
ಚಿತ್ರದುರ್ಗ: ಬಸವೇಶ್ವರ
ಬಳ್ಳಾರಿ: MOVIETIME
ಹೊಸಪೇಟೆ: ಬಾಲ
ಹಿರಿಯೂರು: ನಂಜುಂಡೇಶ್ವರ
ಹರಿಹರ: ಜಯಶ್ರೀ
ಹಗರಿಬೊಮ್ಮನಹಳ್ಳಿ: ಶ್ರೀಕೊಟ್ಟೂರೇಶ್ವರ
ಚಳ್ಳಕೆರೆ: ರಾಮಕೃಷ್ಣ
ಜಗಳೂರು: ನಟರಾಜ
ಕಂಪ್ಲಿ: ಭಾರತ್
ಹೂವಿನಹಡಗಲಿ: ಶಂಕರ್
ತೋರಣಗಲ್ಲು: ವಿಜಯಲಕ್ಷ್ಮೀ
ಕುರುಗೋಡು: ಎಸ್.ಎಲ್.ವಿ
ಪರಶುರಾಮಪುರ: ಸಾಗರ್
ಚಿಕ್ಕಜಾಜೂರು: ಮಾರುತಿ
ಚಿಕ್ಕಜೋಗಿಹಳ್ಳಿ: ಕೃಷ್ಣ
ಹುಬ್ಬಳ್ಳಿ: ಅಪ್ಸರಾ, LAXMI CITY PRIDE, cinépolis
ಧಾರವಾಡ: ಸಂಗಮ್, PVR·INOX
ವಿಜಯಪುರ: ಅಪ್ಸರಾ, ಲಕ್ಷ್ಮೀ
ಬೆಳಗಾವಿ: ಚಿತ್ರಾ, ನರ್ತಕಿ, PVR·INOX, KAPEEL CINEMA, Bharath Cinemas
ಗದಗ: ಮಹಾಲಕ್ಷ್ಮೀ
ರಾಣೇಬೆನ್ನೂರು: ಶಕ್ತಿ, ಶಂಕರ್, SMART MOVIZ A/C CINEMA
ಬಾಗಲಕೋಟೆ: ಶಕ್ತಿ, SMART MOVIZ A/C CINEMA
ಸಿಂಧಗಿ: ವಿನಾಯಕ
ಲಕ್ಷ್ಮೇಶ್ವರ: ರವಿ
ಹಾವೇರಿ: ಸರಸ್ವತಿ, SMART MOVIZ A/C CINEMA
ಗೋಕಾಕ್: ಆನಂದ್
ತಾಳಿಕೋಟೆ: ಅಮೀರ್
ಬನಹಟ್ಟಿ: ವೈಭವ್
ಮುಧೋಳ: ಸೂರ್ಯವಂಶಿ, ಸುಭಾಷಿಣಿ
ಜಮಖಂಡಿ: ಸುವರ್ಣ
ಅಥಣಿ: ದುರ್ಗಾಲಕ್ಷ್ಮೀ
ಶಿಗ್ಗಾಂವ್: ರಾಜಶ್ರೀ
ಹೊನ್ನಾವರ: ಪುಷ್ಪಾಂಜಲಿ
ಬಾದಾಮಿ: ಕುಮಾರೇಶ್ವರ
ಮುದ್ದೇಬಿಹಾಳ: ಗಿರಿಜಾಶಂಕರ್
ಬಸವನಬಾಗೇವಾಡಿ: ಸತ್ಯನಾರಾಯಣ
ಗಜೇಂದ್ರಗಡ: ಅಲಂಕಾರ್
ಸಂಕೇಶ್ವರ: ಸಾಯಿನಾಥ್
ಬೈಲಹೊಂಗಲ: ಸಂಗಮ್
ಹಳಿಯಾಳ: ಬಸವರಾಜ್
ಅಣ್ಣಿಗೇರಿ: ಜನತಾ
ಹಾರೂಗೇರಿ: ಚಂದ್ರಮ
ರಾಯಭಾಗ: ದತ್ತ
ರಾಮದುರ್ಗ: ಶ್ರೀನಿವಾಸ
ಹಿರೇಕೆರೂರು: ಮಂಜುನಾಥ
ಉಗಾರ: ದುರ್ಗಾಲಕ್ಷ್ಮೀ
ನಿಡಗುಂದಿ: ಯಲಗೂರೇಶ್ವರ
ಯಾದವಾಡ: ಬಸವೇಶ್ವರ
ರೋಣ: ರೇಣುಕಾ
ಹೊಸರಿತ್ತಿ: ಕೃಷ್ಣ
ಚಿಕ್ಕೇರೂರು: ಪವನ್
ಶಿರಾಳಿ: ವೆಂಕಟೇಶ್ವರ
ಅಂಕೋಲ: ಮಯೂರ
ಶಿರಸಿ: ನಟರಾಜ
ಅಮೀನಗಡ: ಲಕ್ಷ್ಮೀ
ನಾಲತವಾಡ: ರಘುವೀರ್
ಮುಂಡರಗಿ: CHHOTU MAHARAJ
ಕಾರವಾರ: MIRAJ
ನಿಪ್ಪಾಣಿ: ಮ್ಯಾಗ್ನಮ್‌ಸಿನಿಮಾಸ್
ಕಲಬುರ್ಗಿ: ತ್ರಿವೇಣಿ, PVR·INOX, MIRAJ, SHETTY CINEMAS
ಗಂಗಾವತಿ: ಕನಕದುರ್ಗ
ಕೊಪ್ಪಳ: ಲಕ್ಷ್ಮೀ
ರಾಯಚೂರು: ಪೂರ್ಣಿಮಾ, MIRAJ
ಬೀದರ್: ಸಪ್ನಮಹಲ್
ಶಹಪುರ: ಭವಾನಿ
ಮಾನ್ವಿ: ಮಲ್ಲಿಕಾರ್ಜುನ
ಸಿಂಧನೂರು: ಮಂಜುನಾಥ
ಕುಷ್ಟಗಿ: ಮಾರುತಿ
ಕರಟಗಿ: ಲಕ್ಷ್ಮೀ
ದೇವದುರ್ಗ: ಆನಂದ್
ಮಸ್ಕಿ: ಶರಣಬಸವೇಶ್ವರ
ಭಾಲ್ಕಿ: ಸಂಗಮೇಶ್ವರ
ಶಿರವಾರ: ಶಿವಮಾತಾ
ಕನಕಗಿರಿ: ರಾಧಿಕ
ಯಲಬುರ್ಗಾ: ಪ್ರವೀಣ್
ಜಾಲಹಳ್ಳಿ: ರಾಮೇಶ್ವರ
ಮಂಗಳೂರು: ಮಂಜುನಾಥ
ಶ್ರೀರಾಮನಗರ: ಲಕ್ಷ್ಮೀ
ಮಂಗಳೂರು: ರೂಪವಾಣಿ, PVR·INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ: ಕಲ್ಪನ, Bharath Cinemas
ಮಣಿಪಾಲ: PVR·INOX, cinépolis
ಕುಂದಾಪುರ: Bharath Cinemas
ಕಾರ್ಕಳ: ಪ್ಲಾನೆಟ್
ಬೈಂದೂರು: ಶಂಕರ್
ಬೆಳ್ತಂಗಡಿ: ಭರತ್
ಪಡುಬಿದ್ರೆ: Bharath Cinemas
ಪುತ್ತೂರು: Bharath Cinemas
ದೇರಳಕಟ್ಟೆ: Bharath Cinemas
ಹಾಗೂ ರಾಜ್ಯಾದ್ಯಂತ

ಇಶಾನ್ ಶತಕ ಭರ್ಜರಿ; ಕರ್ನಾಟಕ ಜಯಭೇರಿ

ವಿಜಯ್ ಹಜಾರೆ ಟ್ರೋಫಿ: ದಾಖಲೆ ಮೊತ್ತ ಬೆನ್ನಟ್ಟಿ ಗೆದ್ದ ಮಯಂಕ್ ಪಡೆ

ಅಹಮದಾಬಾದ್ (ಪಿಟಿಐ): ದೇವದತ್ತ ಪಡಿಕ್ಕಲ್ ಅವರ 147 ರನ್‌ಗಳ ಅಮೋಘ ಶತಕದ ಆಟದ ಎದುರು ಜಾರ್ಖಂಡ್ ತಂಡದ ಇಶಾನ್ ಕಿಶನ್ ಅವರ ಮಿಂಚಿನ ಶತಕದ ಆಟ (39 ಎಸೆತಗಳಲ್ಲಿ 125) ಮಸುಕಾಯಿತು. ಸೇರಿಗೆ ಸವ್ವಾಸೇರು ಎನ್ನುವಂತೆ ಜಾರ್ಖಂಡ್ ತಂಡದ ಭಾರಿ ಮೊತ್ತವನ್ನು ಬೆನ್ನಟ್ಟುವಲ್ಲಿ ಯಶಸ್ವಿಯಾದ ಹಾಲಿ ಚಾಂಪಿಯನ್ ಕರ್ನಾಟಕ ತಂಡ, ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಬುಧವಾರ 5 ವಿಕೆಟ್‌ಗಳಿಂದ ಗೆದ್ದು ಭರ್ಜರಿ ಆರಂಭ ಮಾಡಿತು.

ಇದು ವಿಜಯ್ ಹಜಾರೆ ಟ್ರೋಫಿಯಲ್ಲಿ 'ದಾಖಲೆ ಚೇಸ್' ಎನಿಸಿತು. ಸರ್ದಾರ್ ಪಟೇಲ್ 'ಬಿ' ಕ್ರೀಡಾಂಗಣದಲ್ಲಿ ರನ್‌ಹೊಳೆ ಕಂಡ ಎಲೀಟ್ 'ಎ' ಗುಂಪಿನ ಈ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಜಾರ್ಖಂಡ್ 9 ವಿಕೆಟ್‌ಗೆ 412 ರನ್‌ಗಳ ಭಾರಿ ಮೊತ್ತ ಕಲೆಹಾಕಿತು. ಆದರೆ ಕರ್ನಾಟಕ ಇನ್ನೂ 15 ಎಸೆತಗಳು ಬಾಕಿಯಿರುವಂತೆ 5 ವಿಕೆಟ್‌ಗೆ 413 ರನ್ ಹೊಡೆದು ಗೆಲುವು ಆಚರಿಸಿತು. ಆರಂಭ ಆಟಗಾರ ಪಡಿಕ್ಕಲ್ ಅವರಿಗೆ ಇತರ ಬ್ಯಾಟರ್‌ಗಳು ಬೆಂಬಲ ನೀಡಿದರು.

ನಾಲ್ಕು ದಿನಗಳ ಹಿಂದಷ್ಟೇ ಟಿ20 ವಿಶ್ವಕಪ್ ಆಡುವ ಭಾರತ ತಂಡಕ್ಕೆ ಆಯ್ಕೆಯಾದ ಸಂಭ್ರಮದಲ್ಲಿರುವ ವಿಕೆಟ್‌ಕೀಪರ್ ಇಶಾನ್ ಕಿಶನ್ ಏಳು ಬೌಂಡರಿ, 14 ಸಿಕ್ಸರ್‌ಗಳನ್ನು ಸಿಡಿಸಿದರು.

ಆರಂಭ ಆಟಗಾರ ಶಿಖರ್ ಮೋಹನ್ (44), ವಿರಾಟ್ ಸಿಂಗ್ (88, 68ಎ, 4x8, 6x4) ಮತ್ತು ಕುಮಾರ್ ಕುಶಾಗ್ರ (63, 47ಎ, 4x3, 6x5) ಅವರು

ಇಶಾನ್ ಕಿಶನ್

ಜಾರ್ಖಂಡ್ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಹೀಗಾಗಿ ಆ ತಂಡ 38 ಓವರುಗಳಲ್ಲಿ 4 ವಿಕೆಟ್‌ಗೆ 239 ರನ್ ಗಳಿಸಿ ಉತ್ತಮ ಸ್ಥಿತಿಗೆ ತಲುಪಿತು. ವಿರಾಟ್ ಸಿಂಗ್ ಮತ್ತು ಕುಶಾಗ್ರ ನಾಲ್ಕನೇ ವಿಕೆಟ್‌ಗೆ 129 ರನ್ ಸೇರಿಸಿದರು. ಇದರಿಂದ ಇಶಾನ್ ಕಿಶನ್ ಅವರಿಗೆ ಪರಾಕ್ರಮ ಮೆರೆಯಲು ಸಾಧ್ಯವಾಯಿತು. ಅವರು ಕಟ್, ಪುಲ್, ಡ್ರೈವ್‌ಗಳ ಮೂಲಕ ಚೆಂಡನ್ನು ಕ್ರೀಡಾಂಗಣದ ಮೂಲೆಮೂಲೆಗೆ ಅಟ್ಟಿದರು. ಇದರಿಂದ ತಂಡ ಸುಲಭವಾಗಿ 400ರ ಗಡಿ ದಾಟಿತು. ಕರ್ನಾಟಕದ ಪರ ವೇಗಿ ಅಭಿಲಾಷ್ ಶೆಟ್ಟಿ 72 ರನ್ನಿಗೆ 4 ವಿಕೆಟ್ ಪಡೆದರು.

ಈ ದೊಡ್ಡ ಮೊತ್ತದೆದುರು ಕರ್ನಾಟಕ ಧೃತಿಗೆಡಲಿಲ್ಲ. ನಾಯಕ ಮಯಂಕ್ ಅಗರವಾಲ್ (54, 34ಎ, 4x10) ಮತ್ತು ದೇವದತ್ತ ಪಡಿಕ್ಕಲ್ ಅವರು ಕೇವಲ 11.5 ಓವರುಗಳಲ್ಲಿ 114 ರನ್ ಸೇರಿಸಿ, ಕರ್ನಾಟಕ ತಂಡಕ್ಕೆ ಅಗತ್ಯವಾಗಿದ್ದ ಅಮೋಘ ಆರಂಭ ಒದಗಿಸಿದರು.

ನಂತರ ಮಧ್ಯಮ ಕ್ರಮಾಂಕದ ಆಟಗಾರರಾದ ಕರುಣ್ ನಾಯರ್ (29), ಆರ್.ಸ್ಮರಣ್ (25), ಕೃಷ್ಣನ್ ಶ್ರೀಜಿತ್ (38) ಅವರೂ ಉಪಯುಕ್ತ ಕೊಡುಗೆ ನೀಡಿದರು. 118 ಎಸೆತಗಳ ಇನಿಂಗ್ಸ್‌ನಲ್ಲಿ ಹತ್ತು ಬೌಂಡರಿ, ಏಳು ಸಿಕ್ಸರ್‌ಗಳನ್ನು ಬಾರಿಸಿದ ದೇವದತ್ತ 41ನೇ ಓವರಿನಲ್ಲಿ ನಿರ್ಗಮಿಸಿದರು. ಆಗ ತಂಡದ ಮೊತ್ತ 5 ವಿಕೆಟ್‌ಗೆ 325.

ಈ ಹಂತದಲ್ಲಿ ಅಭಿನವ್ ಮನೋಹರ್ (ಔಟಾಗದೇ 56, 32ಎ) ಮತ್ತು ಧ್ರುವ್ ಪ್ರಭಾಕರ್ (ಔಟಾಗದೇ 40, 22 ಎಸೆತ) ಅವರು ಮುರಿಯದ ಆರನೇ ವಿಕೆಟ್‌ಗೆ ಕೇವಲ 41 ಎಸೆತಗಳಲ್ಲಿ 88 ರನ್‌ಗಳ ಬಿರುಸಿನ ಜೊತೆಯಾಟ ಆಡಿದರು. ತಂಡ ಇನ್ನೂ 2.3 ಓವರುಗಳು ಇರುವಾಗಲೇ ಗುರಿತಲುಪಿತು.

ದೇವದತ್ತ ಪಡಿಕ್ಕಲ್ ಶತಕ ಸಂಭ್ರಮ 'ಎಕ್ಸ್' ಚಿತ್ರ

14 ವರ್ಷ ಹಳೆಯ ದಾಖಲೆ ಪತನ

ಕರ್ನಾಟಕ 413 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ದಾಟಿದ್ದು ವಿಜಯ್ ಹಜಾರೆ ಟ್ರೋಫಿಯಲ್ಲಿ ದಾಖಲೆ ಎನಿಸಿತು. ಈ ಹಿಂದೆ 2011–12ರಲ್ಲಿ ಬೆಂಗಳೂರಿನ ಆರ್‌ಎಸ್‌ಐ ಮೈದಾನದಲ್ಲಿ ಗೋವಾ ವಿರುದ್ಧ ಆಂಧ್ರ ತಂಡವು 384 ರನ್ ಬೆನ್ನಟ್ಟಿ ಜಯಗಳಿಸಿದ್ದು ಈವರೆಗಿನ ದಾಖಲೆಯಾಗಿತ್ತು.

ಸ್ಕೋರ್ ಕಾರ್ಡ್

ಜಾರ್ಖಂಡ್: 50 ಓವರುಗಳಲ್ಲಿ 9ಕ್ಕೆ 412

ಶಿಖರ್ ಮೋಹನ್ ಬಿ ಅಭಿಲಾಷ್ 44 (79ಎ, 4x7)
ಉತ್ಕರ್ಷ್ ಸಿ ಮನೋಹರ್ ಬಿ ಪಾಟೀಲ್ 8 (8ಎ, 4x1)
ಶುಭ್ ಶರ್ಮಾ ಬಿ ಶ್ರೇಯಸ್ 15 (37ಎ, 4x2)
ವಿರಾಟ್ ಸಿಂಗ್ ಸಿ ಅಭಿಲಾಷ್ ಬಿ ಪಾಟೀಲ್ 88 (68ಎ, 4x8, 6x4)
ಕುಶಾಗ್ರ ಸಿ ನಾಯರ್ ಬಿ ಗೋಪಾಲ್ 63 (47ಎ, 4x3, 6x5)
ಇಶಾನ್ ಸಿ ಮಯಂಕ್ ಬಿ ಧ್ರುವ್ 125 (39ಎ, 4x7, 6x14)
ಅನುಕೂಲ್ ಸಿ ಮನೋಹರ್ ಬಿ ಅಭಿಲಾಷ್ 13 (12ಎ, 6x1)
ರಾಬಿನ್ ಮಿಂಜ್ ಬಿ ಅಭಿಲಾಷ್ 8 (7ಎ)
ವಿಕಾಶ್ ಸಿ ಪಡಿಕ್ಕಲ್ ಬಿ ಅಭಿಲಾಷ್ 0 (1ಎ)
ಸುಶಾಂತ್ ಔಟಾಗದೇ 1 (1ಎ)
ಸೌರಭ್ ಔಟಾಗದೇ 0 (2ಎ)
ಇತರೆ: 47 (ಬೈ 6, ಲೆಗ್‌ಬೈ 4, ನೋಬಾಲ್ 1, ವೈಡ್ 36)
ವಿಕೆಟ್ ಪತನ: 1–20 (ಉತ್ಕರ್ಷ್ ಸಿಂಗ್, 3.1), 2–72 (ಶುಭ್ ಶರ್ಮಾ, 15.5), 3–110 (ಶಿಖರ್ ಮೋಹನ್, 23.3), 4–239 (ಕುಮಾರ್ ಕುಶಾಗ್ರ, 37.6), 5–289 (ವಿರಾಟ್ ಸಿಂಗ್, 42.1), 6–382 (ಅನುಕೂಲ್ ರಾಯ್, 47.3), 7–408 (ಇಶಾನ್ ಕಿಶನ್, 48.6), 8–410 (ರಾಬಿನ್ ಮಿಂಜ್, 49.2), 9–411 (ವಿಕಾಶ್ ಸಿಂಗ್, 49.4).
ಬೌಲಿಂಗ್: ಅಭಿಲಾಷ್ ಶೆಟ್ಟಿ 10–1–72–4; ವಿದ್ಯಾಧರ ಪಾಟೀಲ್ 10–0–66–2; ವೈಶಾಖ್ ವಿಜಯಕುಮಾರ್ 10–0–81–0; ಶ್ರೇಯಸ್ ಗೋಪಾಲ್ 10–0–79–2; ಧ್ರುವ್ ಪ್ರಭಾಕರ್ 7–0–74–1; ಕರುಣ್ ನಾಯರ್ 3–0–30–0.

ಕರ್ನಾಟಕ: 47.3 ಓವರುಗಳಲ್ಲಿ 5ಕ್ಕೆ 413

ಮಯಂಕ್ ಸಿ ಮೋಹನ್ ಬಿ ಸೌರಭ್ 54 (34ಎ, 4x10)
ಪಡಿಕ್ಕಲ್ ಸಿ ಉತ್ಕರ್ಷ್ ಬಿ ಸೌರಭ್ 147 (118, 4x10, 6x7)
ಕರುಣ್ ಸಿ ಸಬ್ (ರಾಜನ್‌ದೀಪ್) ಬಿ ಉತ್ಕರ್ಷ್ 29 (27ಎ, 4x4)
ಸ್ಮರಣ್ ಸಿ ಶುಭ್ ಬಿ ಉತ್ಕರ್ಷ್ 27 (21ಎ, 4x1, 6x1)
ಶ್ರೀಜಿತ್ ಬಿ ಮಿಶ್ರಾ 38 (32ಎ, 4x5)
ಮನೋಹರ್ ಔಟಾಗದೇ 56 (32ಎ, 4x8, 6x1)
ಧ್ರುವ್ ಔಟಾಗದೇ 40 (22ಎ, 4x6, 6x1)
ಇತರೆ: 22 (ಲೆಗ್‌ಬೈ 3, ನೋಬಾಲ್ 1, ವೈಡ್ 18)
ವಿಕೆಟ್ ಪತನ: 1–114 (ಮಯಂಕ್ ಅಗರವಾಲ್, 11.5), 2–181 (ಕರುಣ್ ನಾಯರ್, 21.3), 3–226 (ರವಿಚಂದ್ರನ್ ಸ್ಮರಣ್, 27.4), 4–287 (ಕೃಷ್ಣನ್ ಶ್ರೀಜಿತ್, 35.6), 5–325 (ದೇವದತ್ತ ಪಡಿಕ್ಕಲ್, 40.4).
ಬೌಲಿಂಗ್: ವಿಕಾಶ್ ಸಿಂಗ್ 7–0–85–2; ಸೌರಭ್ ಶೇಖರ್ 8–0–81–2; ಸುಶಾಂತ್ ಮಿಶ್ರಾ 8–0–75–1; ಶುಭ್ ಶರ್ಮಾ 4.3–0–37–0; ಅನುಕೂಲ್ ರಾಯ್ 10–0–61–0; ಉತ್ಕರ್ಷ್ ಸಿಂಗ್ 10–0–71–2.



ಎಲ್ಲರಿಗೂ ಕ್ರಿಸ್ಮಸ್ ಹಬ್ಬದ ಶುಭಾಶಯಗಳು!

ರೋಹಿತ್ ಅಬ್ಬರ; ಮುಂಬೈ ಶುಭಾರಂಭ

ಜೈಪುರ (ಪಿಟಿಐ): ಎಂದಿನ ಶೈಲಿಯಲ್ಲಿ ಅಧಿಕಾರಯುತವಾಗಿ ಆಡಿದ ರೋಹಿತ್ ಶರ್ಮಾ ಅವರ 93 ಎಸೆತಗಳಲ್ಲಿ 155 ರನ್ ಬಾರಿಸಿದರು. ಹೀಗಾಗಿ ಮುಂಬೈ ತಂಡ 'ಸಿ' ಗುಂಪಿನ ಪಂದ್ಯದಲ್ಲಿ ಬುಧವಾರ ಸಿಕ್ಕಿಂ ತಂಡವನ್ನು 19.3 ಓವರುಗಳಿರುವಂತೆ ಎಂಟು ವಿಕೆಟ್‌ಗಳಿಂದ ನಿರಾಯಾಸವಾಗಿ ಸೋಲಿಸಿತು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯಕ್ಕೆ ಉಚಿತ ಪ್ರವೇಶವಿದ್ದು, 20,000 ಅಭಿಮಾನಿಗಳು 'ಹಿಟ್‌ಮ್ಯಾನ್' ಆಟವನ್ನು ಸವಿದರು. ಇದು ರೋಹಿತ್ ಅವರಿಗೆ ಲಿಸ್ಟ್ 'ಎ'ನಲ್ಲಿ 37ನೇ ಶತಕ. ಅವರ ಆಟದಲ್ಲಿ 18 ಬೌಂಡರಿ, 9 ಸಿಕ್ಸರ್‌ಗಳಿದ್ದವು.

ಪ್ರೇಕ್ಷಕರನ್ನು ರಂಜಿಸಿದ ಅವರು ಪುಲ್, ಡ್ರೈವ್ ಹೊಡೆತಗಳನ್ನು ಹೇರಳವಾಗಿ ಪ್ರಯೋಗಿಸಿದರು.

ಸ್ಕೋರುಗಳು: ಸಿಕ್ಕಿಂ: 50 ಓವರುಗಳಲ್ಲಿ 7ಕ್ಕೆ 236 (ಸಾಯಿ ಸಾತ್ವಿಕ್ 34, ಆಶಿಶ್ ಥಾಪಾ 79, ಕ್ರಾಂತಿಕುಮಾರ್ 34; ಶಾರ್ದೂಲ್ ಠಾಕೂರ್ 19ಕ್ಕೆ2); ಮುಂಬೈ: 30.3 ಓವರುಗಳಲ್ಲಿ 2ಕ್ಕೆ 237 (ಅಂಕ್ರಿಷ್ ರಘುವಂಶಿ 38, ರೋಹಿತ್ ಶರ್ಮಾ 155, ಮುಶೀರ್ ಖಾನ್ ಔಟಾಗದೇ 27). ಪಂದ್ಯದ ಆಟಗಾರ: ರೋಹಿತ್ ಶರ್ಮಾ

ಫಲ ನೀಡದ ಸ್ವಸ್ತಿಕ್ ದ್ವಿಶತಕ; ಒಡಿಶಾ ವಿರುದ್ಧ ಗೆದ್ದ ಸೌರಾಷ್ಟ್ರ

ಬೆಂಗಳೂರು: ಆರಂಭ ಆಟಗಾರ ಸ್ವಸ್ತಿಕ್ ಸಮಲ್ ಅವರು ದ್ವಿಶತಕ (212, 169ಎ, 4x21, 6x8) ಬಾರಿಸಿದರೂ ಒಡಿಶಾ ತಂಡ ಗೆಲ್ಲಲಾಗಲಿಲ್ಲ. ವಿಜಯ್ ಹಜಾರೆ ಟ್ರೋಫಿ 'ಡಿ' ಗುಂಪಿನ ಪಂದ್ಯದಲ್ಲಿ ಸೌರಾಷ್ಟ್ರ ತಂಡವು ಬ್ಯಾಟರ್‌ಗಳ ಸಂಘಟಿತ ಆಟದಿಂದ ಒಡಿಶಾ ವಿರುದ್ಧ ಐದು ವಿಕೆಟ್‌ಗಳ ಗೆಲುವು ಸಾಧಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಒಡಿಶಾ 50 ಓವರುಗಳಲ್ಲಿ 6 ವಿಕೆಟ್‌ಗೆ 345 ರನ್ ಹೊಡೆಯಿತು. ಸಮ್ಮರ್ ಗಜ್ಜರ್ ಅಜೇಯ 132 ರನ್‌ಗಳ (118ಎ, 4x12, 6x3) ನೆರವಿನಿಂದ ಸೌರಾಷ್ಟ್ರ 48.5 ಓವರುಗಳಲ್ಲಿ 5 ವಿಕೆಟ್‌ಗೆ 347 ರನ್ ಹೊಡೆದು ಸಂಭ್ರಮಿಸಿತು. ವಿಶ್ವರಾಜ್ ಜಡೇಜ (50, 41ಎ), ಪ್ರೇರಕ್ ಮಂಕಡ್ (47, 42ಎ), ಚಿರಾಗ್ ಜಾನಿ (86, 55ಎ, 4x10, 6x2) ಅವರು ಉಪಯುಕ್ತ ಕಾಣಿಕೆ ನೀಡಿದರು.

ಆಂಧ್ರ ಪ್ರದೇಶ ವಿರುದ್ಧ ದೆಹಲಿ ತಂಡಕ್ಕೆ 4 ವಿಕೆಟ್‌ಗಳ ಜಯ • ಫಲ ನೀಡದ ರಿಕಿ ಭುಯ್ ಶತಕ

ವಿರಾಟ್ ಶತಕವೂ ಅಭಿಮಾನಿಗಳ ತವಕವೂ

• ಗಿರೀಶ ದೊಡ್ಡಮನಿ

ಬೆಂಗಳೂರು: ಬುಧವಾರ ಬೆಳಿಗ್ಗೆ ಎಂಟು ಗಂಟೆಯಾದರೂ ಚಳಿ ಸರಿದಿರಲಿಲ್ಲ. ಕಾವು ಹೆಚ್ಚಿಸಿಕೊಳ್ಳುವ ಭರದಲ್ಲಿದ್ದ ಬಿಸಿಲಿನ ಕಿರಣಗಳಲ್ಲಿ ಮಂಜಿನ ಹನಿಗಳು ಮಿನುಗಿ ಮರೆಯಾಗುತ್ತಿದ್ದವು. ಆದರೆ ಬೆಂಗಳೂರು ಹೊರವಲಯದ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮುಂದೆ ಜಮಾಯಿಸಿದ್ದ ಜನರಿಗೆ ಪ್ರಕೃತಿಯ ಈ ಚೆನ್ನಾಟದತ್ತ ಗಮನವಿರಲಿಲ್ಲ. ಅವರ ಚಿತ್ತವೆಲ್ಲ ತಮ್ಮ ನೆಚ್ಚಿನ ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿಯತ್ತಲೇ ಇತ್ತು.

ದೆಹಲಿ ತಂಡದ ಆಟಗಾರರು ಇದ್ದ ಬಸ್ ಬರುತ್ತಿದ್ದಂತೆಯೇ ಕೊಹ್ಲಿ..ಕೊಹ್ಲಿ.. ಆರ್‌ಸಿಬಿ..ಆರ್‌ಸಿಬಿ ಎಂದು ಜನರು ಕೂಗಿದರು. ಮುಖ್ಯದ್ವಾರದಿಂದ ಬಸ್ ಒಳಗೆ ಸಾಗಿತು. ಬೃಹತ್ ಗೇಟ್ ಮುಚ್ಚಿತು. ಸಂಸ್ಥೆಯ ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ಅಲ್ಲಿ ಸೇರಿದ್ದ ಜನರನ್ನು ಚದುರಿಸುವತ್ತ ಗಮನ ಹರಿಸಿದರು. ಆದರೆ ಅಭಿಮಾನಿಗಳ ಉತ್ಸಾಹಕ್ಕೆ ಕಡಿವಾಣ ಹಾಕಲು ಸಾಧ್ಯವೇ?

ಶ್ರೇಷ್ಠತಾ ಕೇಂದ್ರದ ಎರಡನೇ ಮೈದಾನದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ

ದೆಹಲಿ ತಂಡದ ನಿತೀಶ್ ರಾಣಾ ಮತ್ತು ವಿರಾಟ್ ಕೊಹ್ಲಿ ಚಿತ್ರ: ಪ್ರಶಾಂತ್ ಎಚ್.ಜಿ

ಮೊದಲ ಪಂದ್ಯದಲ್ಲಿ ದೆಹಲಿ ಮತ್ತು ಆಂಧ್ರ ತಂಡಗಳ ಪೈಪೋಟಿಯನ್ನು ನೋಡುವ ಎಲ್ಲ ಪ್ರಯತ್ನಗಳನ್ನೂ ಜನರು ಮಾಡಿದರು. ಮೈದಾನದ ಸುತ್ತ ಇರುವ ಎತ್ತರದ ಕಂಪೌಂಡ್ ಹಿಂದೆ ನಿಂತು ಇಣುಕಿದರು. ರಸ್ತೆ ಬದಿ ನಿಂತ ಲಾರಿ, ಮರಗಳನ್ನು ಹತ್ತಿ ಕೊಹ್ಲಿಯನ್ನು ನೋಡುವ ಸಾಹಸ ಮಾಡಿದರು.

ಇದೆಲ್ಲದರ ನಡುವೆ ವಿರಾಟ್ ಚೆಂದದ ಶತಕ ದಾಖಲಿಸಿದರು. ಲಿಸ್ಟ್ ಎ ಕ್ರಿಕೆಟ್‌ನಲ್ಲಿ 16 ಸಾವಿರ ರನ್‌ಗಳ ಗಡಿ ದಾಟಿದರು. ದೆಹಲಿ 37.4 ಓವರ್‌ಗಳಲ್ಲಿ 6ಕ್ಕೆ300ರನ್ ಗಳಿಸಿ 4 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ದೆಹಲಿ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆದರೆ ರಿಕಿ ಭುಯ್ (122; 105ಎ, 4X11, 6X7) ಅಬ್ಬರದ ಶತಕ ಬಾರಿಸಿದರು. ಇದರ ನಡುವೆಯೂ ದೆಹಲಿ ಬೌಲರ್ ಸಿಮರ್‌ಜೀತ್ ಸಿಂಗ್ ಐದು ವಿಕೆಟ್ ಗಳಿಸಿ ಪಂದ್ಯಶ್ರೇಷ್ಠರಾದರು. ಅದರಿಂದಾಗಿ ಆಂಧ್ರ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 298 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದೆಹಲಿ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ನಿತೀಶ್ ಕುಮಾರ್ ರೆಡ್ಡಿ ಆಘಾತ ನೀಡಿದರು. ಮೂರನೇ ಎಸೆತದಲ್ಲಿಯೇ ಅರ್ಪಿತ್ ರಾಣಾ ವಿಕೆಟ್ ಪಡೆದರು. ಆಗ ಕ್ರೀಸ್‌ಗೆ ಬಂದ ವಿರಾಟ್ ತಾವೆದುರಿಸಿದ ಮೂರನೇ ಎಸೆತವನ್ನು ನೇರ ಬೌಂಡರಿಗೆರೆ ದಾಟಿಸಿದರು. ಇನ್ನೊಂದು ಬದಿಯಲ್ಲಿ ಪ್ರಿಯಾಂಶ್ ಕೂಡ ಬೀಸಾಟವಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಪ್ರಿಯಾಂಶ್ ಮತ್ತು ಕೊಹ್ಲಿ 113 ರನ್ ಸೇರಿಸಿದರು. ಪ್ರಿಯಾಂಶ್ ವಿಕೆಟ್ ಗಳಿಸಿದ ಕೆ.ಎಸ್. ರಾಜು ಜೊತೆಯಾಟವನ್ನು ಮುರಿದರು.

ಆದರೆ ಕೊಹ್ಲಿಗೆ ಆಂಧ್ರ ಫೀಲ್ಡರ್‌ಗಳು ಮೂರು ಕ್ಯಾಚ್‌ಗಳನ್ನು ಕೈಚೆಲ್ಲಿ ಜೀವದಾನ ನೀಡಿದರು. ಕಟ್, ಸ್ಟ್ರೇಟ್ ಡ್ರೈವ್, ಪುಲ್‌ಗಳ ಸೊಗಸಾದ ಆಟ ತೋರಿದ ಕೊಹ್ಲಿ ಬಿರುಬಿಸಿಲಿನಲ್ಲಿ 83 ಎಸೆತಗಳಲ್ಲಿ ಶತಕ ಹೊಡೆದರು. 97 ರನ್ ಗಳಿಸಿದಾಗಲೂ ಅವರಿಗೆ ಒಂದು ಜೀವದಾನ ಲಭಿಸಿತ್ತು. ನಂತರದ ಎಸೆತವನ್ನು ಅಂಪೈರ್ ತಲೆ ಮೇಲಿಂದ ಬೌಂಡರಿಗಟ್ಟಿದ ಅವರು ಶತಕ ಗಳಿಸಿದರು. ದೆಹಲಿ ಆಟಗಾರರು ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಕಾಂಪೌಂಡ್ ಹೊರಗಿನಿಂದ ಇಣುಕುನೋಟ ಬೀರುತ್ತಿದ್ದವರ ಚಪ್ಪಾಳೆ ಸದ್ದು ಕೂಡ ಸೇರಿಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಈ ಪಂದ್ಯಕ್ಕೆ ಸುರಕ್ಷತೆಯ ದೃಷ್ಟಿಯಿಂದ ರಾಜ್ಯ ಸರ್ಕಾರ ಅನುಮತಿ ನೀಡಿರಲಿಲ್ಲ. ಆದ್ದರಿಂದ ಮಂಗಳವಾರ ಮಧ್ಯಾಹ್ನ ಈ ಪಂದ್ಯವನ್ನು ಬಿಸಿಸಿಐ ಸಿಒಇಗೆ ಸ್ಥಳಾಂತರಿಸಲು ನಿರ್ಧರಿಸಲಾಗಿತ್ತು. ಸಂಜೆ ಪಂದ್ಯ ಮುಗಿದ ನಂತರ ಕೊಹ್ಲಿ ಪಯಣಿಸುವ ಬಸ್ ನೋಡಲು ಗೇಟ್ ಮುಂದೆ ಜನರ ದಂಡು ಸೇರಿತ್ತು. ಸಾಮಾಜಿಕ ಜಾಲತಾಣಗಳಲ್ಲಿಯೂ ಕೊಹ್ಲಿ ಅಭಿಮಾನಿಗಳ ಭರಾಟೆ ಜೋರಾಗಿತ್ತು.

ಸಂಕ್ಷಿಪ್ತ ಸ್ಕೋರು: ಆಂಧ್ರ ಪ್ರದೇಶ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 298 (ರಶೀದ್ 31, ರಿಕಿ ಭುಯ್ 122, ಸಿಮರ್‌ಜೀತ್ ಸಿಂಗ್ 54ಕ್ಕೆ5, ಪ್ರಿನ್ಸ್ ಯಾದವ್ 50ಕ್ಕೆ3) ದೆಹಲಿ: 37.4 ಓವರ್‌ಗಳಲ್ಲಿ 6ಕ್ಕೆ300 (ಪ್ರಿಯಾಂಶ್ ಆರ್ಯ 74, ವಿರಾಟ್ ಕೊಹ್ಲಿ 131, ನಿತೀಶ್ ರಾಣಾ 77, ಪಿವಿಎಸ್‌ಎನ್ ರಾಜು 74ಕ್ಕೆ2, ಹೇಮಂತ್ ರೆಡ್ಡಿ 6ಕ್ಕೆ2).

ಆರ್ಯಸಿನ್ಹ್ ಶತಕ; ರಾಜ್ಯ ಉತ್ತಮ ಮೊತ್ತ

ಬೆಂಗಳೂರು: ಆರ್ಯಸಿನ್ಹ್ ಎನ್. ಚಾವ್ಡಾ ಅವರ ಶತಕ, ಶ್ಯಮಂತಕ್ ಅನಿರುದ್ಧ್ ಮತ್ತು ಆದಿತ್ಯ ಝಾ ಅವರ ಅರ್ಧಶತಕಗಳ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಆಂಧ್ರಪ್ರದೇಶ ವಿರುದ್ಧದ ಪಂದ್ಯದಲ್ಲಿ ಬುಧವಾರ 131.5 ಓವರ್‌ಗಳಲ್ಲಿ 9 ವಿಕೆಟ್‌ಗೆ 473 ರನ್ ಗಳಿಸಿ, ಡಿಕ್ಲೇರ್ ಮಾಡಿಕೊಂಡಿತು.

ಛತ್ತೀಸಗಢದ ಭಿಲಾಯಿಯಲ್ಲಿ ನಡೆಯುತ್ತಿರುವ ಡಿ ಗುಂಪಿನ ಪಂದ್ಯದಲ್ಲಿ 5 ವಿಕೆಟ್‌ಗೆ 262 ರನ್ ಗಳೊಂದಿಗೆ ಆಟ ಮುಂದುವರಿಸಿದ ರಾಜ್ಯ ತಂಡಕ್ಕೆ ಶ್ಯಮಂತಕ್ (92) ಹಾಗೂ ಆರ್ಯಸಿನ್ಹ್ (119) ಆಸರೆಯಾದರು. ಕೆಳ ಕ್ರಮಾಂಕದ ಆಟಗಾರ ಆದಿತ್ಯ ಅವರು ಔಟಾಗದೇ 65 ರನ್ ಗಳಿಸಿದರು.

ಇನಿಂಗ್ಸ್ ಆರಂಭಿಸಿದ ಆಂಧ್ರ ಪ್ರದೇಶ ತಂಡವು ಆರಂಭದಲ್ಲಿಯೇ ಎರಡು ವಿಕೆಟ್ ಕಳೆದುಕೊಂಡಿತು. ಆದರೆ, ಟಿ. ಹರ್ಷ ಸಾಯಿ ಸಾತ್ವಿಕ್ (ಔಟಾಗದೇ 84) ಹಾಗೂ ಭಾನು ಶ್ರೀ ಹರ್ಷ (ಔಟಾಗದೇ 88) ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 165 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 131.5 ಓವರ್‌ಗಳಲ್ಲಿ 9 ವಿಕೆಟ್‌ಗೆ 473 (ಆರ್ಯಸಿನ್ಹ್ ಎನ್. ಚಾವ್ಡಾ 119, ಶ್ಯಮಂತಕ್ ಅನಿರುದ್ಧ್ 92, ಆದಿತ್ಯ ಝಾ ಔಟಾಗದೇ 65; ಯಲಮಂಚಿಲಿ ಲಲಿತ್ 53ಕ್ಕೆ3, ಕೆ.ಗೌತಮ್ ಆರ್ಯ 146ಕ್ಕೆ3). ಆಂಧ್ರ ಪ್ರದೇಶ: 48 ಓವರ್‌ಗಳಲ್ಲಿ 2 ವಿಕೆಟ್‌ಗೆ 189 (ಟಿ.ಹರ್ಷ ಸಾಯಿ ಸಾತ್ವಿಕ್ ಔಟಾಗದೇ 84, ಭಾನು ಶ್ರೀ ಹರ್ಷ ಔಟಾಗದೇ 88; ಸಮರ್ಥ್ ಎಂ. ಕುಲಕರ್ಣಿ 25ಕ್ಕೆ1).

ಆ್ಯಷಸ್ ಸರಣಿ: ಜೋಫ್ರಾ ಅಲಭ್ಯ

ಮೆಲ್ಬರ್ನ್ (ಎಪಿ): ಇಂಗ್ಲೆಂಡ್ ತಂಡದ ವೇಗದ ಬೌಲರ್ ಜೋಫ್ರಾ ಆರ್ಚರ್ ಅವರು ಪಕ್ಕೆಲುಬಿನ ನೋವಿನಿಂದಾಗಿ ಆ್ಯಷಸ್ ಸರಣಿಯ ಉಳಿದ ಎರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ ಎಂದು ತಂಡದ ಸಿಬ್ಬಂದಿ ದೃಢಪಡಿಸಿದ್ದಾರೆ.

ಸುಮಾರು ನಾಲ್ಕು ವರ್ಷಗಳಿಂದ ಒಂದಲ್ಲ, ಒಂದು ಕಾರಣದಿಂದ ಫಿಟ್ನೆಸ್ ಸಮಸ್ಯೆ ಎದುರಿಸುತ್ತಾ ಬಂದಿದ್ದಾರೆ. ಭಾರತ ಎದುರು ಪುನರಾಗಮನ ಮಾಡಿದ್ದ ನಂತರ, 30 ವರ್ಷದ ವೇಗಿ ಉತ್ತಮ ಲಯದಲ್ಲಿದ್ದರು. ಮೊದಲ ಮೂರು ಟೆಸ್ಟ್‌ಗಳಲ್ಲಿ 9 ವಿಕೆಟ್‌ಗಳನ್ನು ಪಡೆದಿದ್ದರು. ಮೂರನೇ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್ ಪಡೆದಿದ್ದ ಅವರು, 51 ರನ್ ಗಳಿಸಿದ್ದರು.

ಜೋಫ್ರಾ ಬದಲು, ಗಸ್ ಅಟ್ಕಿನ್ಸನ್ ಅವರು ಇಂಗ್ಲೆಂಡ್ ತಂಡದ 11ರಲ್ಲಿ ಸ್ಥಾನ ಪಡೆದಿದ್ದಾರೆ. ಓಲಿ ಪೋಪ್ ಬದಲು ಜೇಕಬ್ ಬೆಥೆಲ್ ಆಡಲಿದ್ದಾರೆ. ನಾಲ್ಕನೇ ಟೆಸ್ಟ್ ಮೆಲ್ಬರ್ನ್‌ನಲ್ಲಿ ಇದೇ ಶುಕ್ರವಾರ ಆರಂಭವಾಗಲಿದೆ. ಕೊನೆಯ ಟೆಸ್ಟ್ ಜನವರಿ 4ರಂದು ಸಿಡ್ನಿಯಲ್ಲಿ ಶುರುವಾಗಲಿದೆ.

ಗಢವಾಲ್ ಯುನೈಟೆಡ್‌ಗೆ ಎರಡನೇ ಜಯ

ಕೋಲ್ಕತ್ತ (ಪಿಟಿಐ): ಗಢವಾಲ್ ಯುನೈಟೆಡ್ ತಂಡವು, ಭಾರತ ಮಹಿಳಾ ಲೀಗ್‌ನಲ್ಲಿ (ಐಡಬ್ಲ್ಯುಎಲ್) ಬುಧವಾರ ಬೆಂಗಳೂರಿನ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ತಂಡವನ್ನು 1–0 ಗೋಲಿನಿಂದ ಸೋಲಿಸಿತು.

ಲಿಂಗ್ದೀಕಿಮ್ (79ನೇ ನಿಮಿಷ) ಅವರು ನಿರ್ಣಾಯಕ ಗೋಲು ಗಳಿಸಿದರು. ಈ ಎರಡನೇ ಗೆಲುವಿನೊಡನೆ ಗಢವಾಲ್ ತಂಡ ಪಾಯಿಂಟ್ ಪಟ್ಟಿಯಲ್ಲಿ 6 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನಕ್ಕೇರಿತು. ನೀತಾ ಫುಟ್‌ಬಾಲ್ ಅಕಾಡೆಮಿ ಎರಡನೇ ಸ್ಥಾನದಲ್ಲಿದೆ.

ಶ್ರೀಭೂಮಿ ತಂಡ ಕಲ್ಯಾಣಿಯಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಗೋಕುಲಂ ಕೇರಳ ಎಫ್‌ಸಿ ತಂಡವನ್ನು 4–0 ಗೋಲುಗಳಿಂದ ಸೋಲಿಸಿತು.